ಚೆನ್ನವೀರ ಕಣವಿ

ಅವಿನಾಭಾವ



[illegible]

[illegible]

– [illegible]

೨೧-೧-೨೦೧೪

ಅವಿನಾಭಾವ

ಚೆನ್ನವೀರ ಕಣವಿ

ಪ್ರಕಾಶಕರು
ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ
ಜಿ-೨, ವಿ.ವಿ. ಹಾಸ್ಟೆಲ್ ಕಾಂಪ್ಲೆಕ್ಸ್, ಸೇಡಂ ರಸ್ತೆ, ಗುಲಬರ್ಗಾ-೫೮೫ ೧೦೫
ಕನ್ನಡನಾಡು ಪ್ರಕಾಶನ

AVINABHAVA : A collection of articles
Written by: **Chennaveera Kanavi**
Published by Kannada Nadu Lekhakara Mattu Odugara Sahakara Sangha Niyamita Gulbarga, Kannadanadu Prakashana.

First Impression : 2014
Pages : vi + 218 = 224
© : Author
Price : ₹ 175/-
Copies : 1000
Used Paper : 70 GSM N.S. Maplitho

ಅವಿನಾಭಾವ
ಲೇಖಕರು : **ಚೆನ್ನವೀರ ಕಣವಿ**
ಪ್ರಕಾಶಕರು : **ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ**
ಗುಲಬರ್ಗಾ
ಕನ್ನಡನಾಡು ಪ್ರಕಾಶನ

ಪ್ರಥಮ ಮುದ್ರಣ : ೨೦೧೪
ಪುಟಗಳು : vi + ೨೧೮ = ೨೨೪
ಹಕ್ಕುಗಳು : ಲೇಖಕರವು
ಬೆಲೆ : ₹ ೧೭೫/-
ಪ್ರತಿಗಳು : ೧೦೦೦
ಬಳಸಿದ ಕಾಗದ : ೭೦ ಜಿಎಸ್ಎಂ ಎನ್ಎಸ್ ಮ್ಯಾಪ್‌ಲಿಥೊ

ಮುಖಪುಟ ವಿನ್ಯಾಸ : **ಜಿ. ಅರುಣ್‌ಕುಮಾರ್**

ಮುದ್ರಣ
ಇಳಾ ಮುದ್ರಣ
ಬೆಂಗಳೂರು - ೫೬೦ ೦೨೬
ದೂರವಾಣಿ : ೨೬೭೫೭೧೫೯

ಅರಿಕೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನನ್ನ 'ಸಮಗ್ರ ಗದ್ಯ' ಎರಡು ಸಂಪುಟಗಳನ್ನು ಪ್ರಕಟಿಸಿದ ನಂತರ ನನ್ನ ಇನ್ನೊಂದು ಗದ್ಯಕೃತಿ ಇಷ್ಟು ಬೇಗ ಬರಬಹುದೆಂದು ನಾನು ಎಣಿಸಿರಲಿಲ್ಲ.

ಗುಲಬರ್ಗಾದ ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಅಪ್ಪಾರಾವ್ ಅಕ್ಕೋಣಿಯವರು ಕನ್ನಡನಾಡು ಪ್ರಕಾಶನವನ್ನು ಕಳೆದ ಐದು ವರುಷಗಳಿಂದ ಸಹಕಾರದ ತಳಹದಿಯ ಮೇಲೆ, ಅತ್ಯಂತ ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿರುವುದು ಅತ್ಯಂತ ಪ್ರಶಂಸನೀಯ. ಕೇರಳದ 'ಸಾಹಿತ್ಯ ಪ್ರವರ್ತಕ ಸಂಘ'ದ ಮಾದರಿಯಲ್ಲಿ ಇಂಥದೊಂದು ಪ್ರಕಾಶನವನ್ನು ಪ್ರಾರಂಭಿಸಲು ಬಹಳ ವರ್ಷಗಳ ಹಿಂದೆ ಶ್ರೀ ಸಿದ್ಧಯ್ಯ ಪುರಾಣಿಕರು ಪ್ರಯತ್ನಿಸಿದ್ದರಾದರೂ ಫಲಕಾರಿಯಾಗಿರಲಿಲ್ಲ. ಈ ದಿಸೆಯಲ್ಲಿ ಶ್ರೀ ಅಕ್ಕೋಣಿಯವರು ಯಶಸ್ವಿಯಾಗಿರುವುದು ನಿಜಕ್ಕೂ ಅಭಿನಂದನೀಯ. ಅವರ ಒತ್ತಾಯವಿರದಿದ್ದರೆ ನನ್ನ ಪ್ರಸ್ತುತ ಕೃತಿ ಹೀಗೆ ರೂಪುಗೊಳ್ಳುತ್ತಿರಲಿಲ್ಲ. ಅದಕ್ಕಾಗಿ ಅವರಿಗೆ ತುಂಬ ಆಭಾರಿಯಾಗಿದ್ದೇನೆ.

ಡಾ. ಗಿರಡ್ಡಿ ಗೋವಿಂದರಾಜ ಅವರು ಬೆನ್ನುಡಿಯನ್ನು ಬರೆದುಕೊಟ್ಟಿದ್ದಲದೆ ಪುಸ್ತಕದ ಕೊನೆಯ ಕರಡಚ್ಚನ್ನು ತಾವಾಗಿ ತಿದ್ದಿ ಸರಿಪಡಿಸಿದ್ದಾರೆ. ಅವರಿಗೆ ಸ್ನೇಹಪೂರ್ವಕ ಕೃತಜ್ಞತೆಗಳು.

ಈ ಸಂಗ್ರಹದಲ್ಲಿ ಎರಡು ಭಾಗಗಳಿದ್ದು ಮೊದಲನೆಯ ಭಾಗದ ಹೆಚ್ಚಿನ ಲೇಖನಗಳು ಅಭಿನಂದನ ಗ್ರಂಥಗಳಿಗೆ ಬರೆದವುಗಳಾದ್ದರಿಂದ ಈ ಭಾಗವನ್ನು 'ಅಭಿನಂದನೆ'ಯೆಂದೇ ಕರೆಯಲಾಗಿದೆ. ಎರಡನೆಯ ಭಾಗ ಭಾಷಣಗಳನ್ನು, ಕೃತಿಗಳ ಅವಲೋಕನ ಇತ್ಯಾದಿ ಲೇಖನಗಳನ್ನು ಒಳಗೊಂಡು ಗಮನ, ಅಥವಾ ಪರಿಶೀಲನೆ ಎಂಬರ್ಥದಲ್ಲಿ 'ಅವಗಾಹನೆ'ಯಾಗಿದೆ. ಎರಡೂ ಭಾಗದ ಲೇಖನಗಳಿಗೆ ಅವಿನಾಭಾವ ಸಂಬಂಧವಿರುವುದರಿಂದ ಪುಸ್ತಕದ ಶೀರ್ಷಿಕೆಯನ್ನು 'ಅವಿನಾಭಾವ'ವೆಂದೇ ಇಡಲಾಗಿದೆ.

ಈ ಲೇಖನಗಳಿಗೆ ಪ್ರೀತಿಯಿಂದ ಪ್ರೇರಕಶಕ್ತಿಯಾಗಿ ನಿಂತ ವ್ಯಕ್ತಿಗಳು ಹಾಗೂ ಸಂಘ-ಸಂಸ್ಥೆಗಳು ಅನೇಕ. ಅವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಚೆನ್ನವೀರಕಣವಿ

ಧಾರವಾಡ

೧೫-೭-೨೦೧೪

ಪ್ರಕಾಶಕರ ನುಡಿ

ಕನ್ನಡ ನಾಡು ಲೇಖಕರ ಮತ್ತು ಓದುಗರ ಸಂಘ ೬ ವರ್ಷಗಳ ಕಾಲಾವಧಿಯನ್ನು ಯಶಸ್ವಿಯಾಗಿ ಮುಗಿಸಿ, ಸಾರಸ್ವತ ಲೋಕಕ್ಕೆ ೬೦ ಮೌಲಿಕ ವೈವಿಧ್ಯಮಯ ಪುಸ್ತಕಗಳನ್ನು ನೀಡಿರುವುದು ಅತ್ಯಂತ ಸಂತೋಷ ಮತ್ತು ಹೆಮ್ಮೆಯ ಸಂಗತಿಯಾಗಿದೆ.

ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ಸಹಕಾರಿ ಕ್ಷೇತ್ರದಲ್ಲಿ ರಾಜ್ಯದಲ್ಲಿ ಏಕಮೇವ ವಿಶಿಷ್ಟ ನೋಂದಾಯಿತ ಸಹಕಾರಿ ಸಂಘವಾಗಿದ್ದು, ಪುಸ್ತಕ ಸಂಸ್ಕೃತಿಯನ್ನು ಬೆಳೆಸುವದು, ಯುವಕರಲ್ಲಿ ಓದುವ ಹವ್ಯಾಸವನ್ನು ಹೆಚ್ಚಿಸುವದು, ಉದಯೋನ್ಮುಖ ಮತ್ತು ಇತರ ಲೇಖಕರಿಗೆ ಪ್ರೋತ್ಸಾಹಿಸುವದು, ಓದುಗರಿಗೆ ಒಳ್ಳೆಯ ಗುಣಮಟ್ಟದ ಪುಸ್ತಕಗಳನ್ನು ಒದಗಿಸುವದು ಇದರ ಮುಖ್ಯ ಧ್ಯೇಯೋದ್ದೇಶಗಳಾಗಿವೆ.

ಸಂಘ ಪ್ರಕಟಿಸಿದ ದೃಷ್ಟಿ, ಕೊರವಂಜಿ, ಪುಟಾಣಿ ಪ್ರಾಸಗಳು, ಮೊಗ್ಗು ಅರಳುವಾಗ, ಬಹುರೂಪಿ-ಎಚ್ಚೆಮ್ಮ ನಾಯಕ ಪುಸ್ತಕಗಳಿಗೆ ಪ್ರಶಸ್ತಿ ಬಂದಿರುವದು ಮತ್ತು ೨೦೦೮, ೨೦೦೯ ಮತ್ತು ೨೦೧೦ರಲ್ಲಿ ಪ್ರಕಟವಾದ ಪುಸ್ತಕಗಳ ಎಲ್ಲ ಪ್ರತಿಗಳು ಮಾರಾಟ ವಾಗಿರುವದು ವಿಶೇಷವಾಗಿದೆ. "ಸಾವಯವ ಕೃಷಿ" ಪುಸ್ತಕ ೨ನೇ ಮುದ್ರಣವಾಗಿರುವದು ಸಂಘದ ಯಶಸ್ಸಿಗೆ ಸಾಕ್ಷಿಯಾಗಿದೆ.

೨೦೧೧ರಲ್ಲಿ ಪ್ರಕಟವಾದ ಬೇರೆ ಬೇರೆ ಪ್ರಕಾಶನಗಳಿಂದ ಪ್ರಕಟಿತ, ಈ ಭಾಗದ ಲೇಖಕರ ಕೃತಿಗಳಿಗೆ ಪ್ರಶಸ್ತಿ ನೀಡುವುದನ್ನು ಪ್ರಾರಂಭಿಸಲಾಗಿದ್ದು, ೫ ಜನ ಲೇಖಕರಿಗೆ ಪ್ರಶಸ್ತಿ ನೀಡಲಾಗಿದೆ. ಯುವಕರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಲು ಕಾಲೇಜು ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ರೂಪಿಸಲಾಗಿದೆ. ಈಗ ಗುಣಮಟ್ಟ ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರತಿವರ್ಷ ೧೦ ಕೃತಿಗಳನ್ನು ಮಾತ್ರ ಪ್ರಕಟಿಸಲು ಯೋಜಿಸಲಾಗಿದೆ.

'ಅವಿನಾಭಾವ' ಲೇಖನಗಳ ಸಂಕಲನವನ್ನು ನಮ್ಮ ಸಂಸ್ಥೆಯಿಂದ ಪ್ರಕಟಿಸಲು ಅನುಮತಿ ನೀಡಿದ ಖ್ಯಾತ ಸಾಹಿತಿ ನಾಡೋಜ ಡಾ. ಚೆನ್ನವೀರ ಕಣವಿಯವರಿಗೆ ಮತ್ತು ಅಂದವಾಗಿ ಮುದ್ರಿಸಿದ ಇಳಾಮುದ್ರಣದ ಶ್ರೀ ಗುರುಮೂರ್ತಿ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ನಮ್ಮ ತುಂಬು ಹೃದಯದ ಧನ್ಯವಾದಗಳು.

ಅಪ್ಪಾರಾವ ಅಕ್ಕೋಣಿ

ಅಧ್ಯಕ್ಷರು

ಪರಿವಿಡಿ

ಭಾಗ – ೧

ಭಾಗ – ೨

ಭಾಗ : ೧

ಅಭಿನಂದನೆ

(ವ್ಯಕ್ತಿ ವೈಶಿಷ್ಟ್ಯ)

ಪ್ರೊ. ಸ.ಸ. ಮಾಳವಾಡ: ಜನ್ಮಶತಾಬ್ದಿ ಸ್ಮರಣೆ

"ಪ್ರೊ. ಮಾಳವಾಡರ ಹೆಸರಿನಲ್ಲಿ ಎಸ್.ಎಸ್. ಇದೆ. ಆದರೆ ಅವರು ನೀವು ಹೇಳಿದ್ದಕ್ಕೆಲ್ಲ 'ಯಸ್, ಯಸ್' ಎಂದು ಗೋಣು ಹಾಕುವವರಲ್ಲ" ಪ್ರೊ. ಮಾಳವಾಡರ ಷಷ್ಠಿಪೂರ್ತಿ ಸಮಾರಂಭದ ಸಂದರ್ಭದಲ್ಲಿ (೧೩-೧೨-೧೯೭೦) ವರಕವಿ ಡಾ. ದ.ರಾ. ಬೇಂದ್ರೆಯವರು ಈ ಮಾತನ್ನು ಎತ್ತಿ ಹೇಳಿದ್ದರು. ಮಾಳವಾಡರನ್ನು ಚೆನ್ನಾಗಿ ಬಲ್ಲ ಯಾರಿಗೂ ಈ ಮಾತಿನ ಸತ್ಯ ಗೋಚರಿಸದೆ ಇರದು. ಯಾವುದೇ ವಿಷಯದ ಬಗ್ಗೆ ಭಾವೋದ್ರೇಕಕ್ಕೆ ಒಳಗಾಗದೆ, ಅದನ್ನು ವೈಚಾರಿಕ ಒರೆಗಲ್ಲಿಗೆ ಹಚ್ಚಿನೋಡುವ ಚಿಕಿತ್ಸಕ ದೃಷ್ಟಿ ಅವರ ವ್ಯಕ್ತಿ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತಿತ್ತು. ಅವರ ಈ ನಿಲುವು ಸ್ವಪ್ರತಿಷ್ಠೆಯಿಂದ ಕೂಡಿರದೆ ಸತ್ಯ ಶೋಧನೆಯ ದೃಷ್ಟಿಯಿಂದ ಪ್ರೇರಿತವಾಗಿರುತ್ತಿತ್ತು ಎಂಬುದನ್ನು ಮರೆಯುವಂತಿಲ್ಲ.

ಕರ್ನಾಟಕ ಕಾಲೇಜಿನಲ್ಲಿ ನಾನು ನೇರವಾಗಿ ಪ್ರೊ. ಮಾಳವಾಡರ ವಿದ್ಯಾರ್ಥಿಯಾಗುವ ಪೂರ್ವದಲ್ಲಿಯೇ ಅಂದರೆ, ಹಾಯ್‌ಸ್ಕೂಲ್ ವಿದ್ಯಾರ್ಥಿ ಯಾಗಿದ್ದಾಗಲೇ ಅವರ ಪ್ರಭಾವಕ್ಕೆ ಒಳಗಾಗಿದ್ದೆ. ನಾನು ಮುರುಘಾಮಠದ ಪ್ರಸಾದ ನಿಲಯದಲ್ಲಿದ್ದಾಗ ಪ್ರೊ. ಶಿ.ಶಿ. ಬಸವನಾಳ ಹಾಗೂ ರೆವರೆಂಡ್ ಚನ್ನಪ್ಪ ಉತ್ತಂಗಿಯವರ ಜೊತೆಗೆ ಪ್ರೊ. ಮಾಳವಾಡರೂ ಆಗಾಗ ಬಂದು ಉಪನ್ಯಾಸವೀಯುತ್ತಿದ್ದರು. ಹಾಗೆಯೇ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಇನ್ನಿತರ ನಾಡಹಬ್ಬದಂತಹ ಸಾರ್ವಜನಿಕ ವೇದಿಕೆಗಳಲ್ಲಿ ಅವರ ಭಾಷಣಗಳನ್ನು ಕೇಳಿ ಕನ್ನಡ ನಾಡು-ನುಡಿಯ ಬಗ್ಗೆ ಆಸ್ಥೆಯನ್ನೂ ಅಭಿಮಾನವನ್ನೂ ತಾಳಿದವರಲ್ಲಿ ನಾನೂ ಒಬ್ಬ. ಕರ್ನಾಟಕ ಕಾಲೇಜಿನ ಐದಾರು ವರ್ಷಗಳ (೧೯೪೬-೧೯೫೨) ವಿದ್ಯಾರ್ಥಿ ಜೀವನದ ಅವಧಿ ಯಂತೂ ನಮ್ಮ ಓದು, ಬರವಣಿಗೆ, ಕರ್ನಾಟಕ ಸಂಘದ ಚಟುವಟಿಕೆಗಳು -

ಎಲ್ಲದಕ್ಕೂ ಒಂದು ಉತ್ಕರ್ಷದ ಕಾಲವಾಗಿತ್ತು. ಇದಕ್ಕೆಲ್ಲ ಪ್ರೊ. ಮಾಳವಾಡರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣರಾಗಿದ್ದರೆಂದು ಬೇರೆ ಹೇಳಬೇಕಿಲ್ಲ. ಪರೋಕ್ಷವಾಗಿ ಎಂದು ಯಾಕೆ ಹೇಳಿದೆನೆಂದರೆ, ನಮಗೆ ಗೊತ್ತಾಗದ ಹಾಗೆಯೇ ಎಷ್ಟೋ ಬಗೆಯಲ್ಲಿ ಅವರು ನಮ್ಮ ಬೆಳವಣಿಗೆಗೆ ಕಾರಣರಾಗಿದ್ದರು. ಆಡದೆ ಮಾಡುವದು ಅವರ ಸ್ವಭಾವವೇ ಆಗಿತ್ತು. ಇನ್ನೊಬ್ಬ ಕನ್ನಡ ಅಧ್ಯಾಪಕರಾಗಿದ್ದ ಪ್ರೊ. ಎಸ್.ಆರ್. ಮಳಗಿಯವರು ಅನೇಕ ವಿಷಯಗಳಲ್ಲಿ ಅವರಿಗೆ ಸಹಾಯಕರಾಗಿರುತ್ತಿದ್ದರು. ವೈಯಕ್ತಿಕವಾಗಿ 'ಭಾವಜೀವಿ' ಎನಿಸಿಕೊಂಡ ನನ್ನಲ್ಲಿ ಪ್ರೊ. ಮಾಳವಾಡರು ತಮ್ಮ ನಡೆ–ನುಡಿಗಳಿಂದ ವೈಚಾರಿಕತೆಯನ್ನೂ ವಿಮರ್ಶಾಪ್ರಜ್ಞೆಯನ್ನೂ ಹುಟ್ಟುಹಾಕಿದರು. ನನ್ನ ಪ್ರಥಮ ಗದ್ಯಕೃತಿ 'ಸಾಹಿತ್ಯ ಚಿಂತನ'ಕ್ಕೆ (೧೯೬೭) ವಿಮರ್ಶಾತ್ಮಕ ಮುನ್ನುಡಿ ಬರೆದು ಪ್ರೋತ್ಸಾಹಿಸಿದರು.

ಕಾಲೇಜಿನ ಕನ್ನಡ ವಿಭಾಗವನ್ನು ಹೊರತುಪಡಿಸಿಯೂ ಪ್ರೊ. ಮಾಳವಾಡರಿಂದ ಅಕರ್ಷಿತರಾದ ವಿದ್ಯಾರ್ಥಿಗಳು ಹಾಗೂ ಲೇಖಕರು ಕಾಲೇಜಿನ ಒಳಗೂ ಹೊರಗೂ ಅನೇಕರಿದ್ದರು. ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಯಾಗಿದ್ದ ಡಾ. ಜಿ.ಎಸ್. ಆಮೂರ ಅವರು ಅಂದಿನ ಸಂದರ್ಭವನ್ನು ಹೀಗೆ ನೆನೆದುಕೊಳ್ಳುತ್ತಾರೆ: "ಕಾಲೇಜಿನ ಕನ್ನಡ ಚಟುವಟಿಕೆಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ನನಗೆ ಆ ವರ್ಷದ ಕರ್ನಾಟಕ ನಿಬಂಧ ಬಹುಮಾನ ಶಿವರಾಮಕಾರಂತರ ಕೃತಿಗಳ ಅಧ್ಯಯನಕ್ಕಾಗಿ ದೊರೆಯಿತು. ನನಗಾಗಿ ಪ್ರಬಂಧ ಸ್ಪರ್ಧೆಯ ಕೊನೆಯ ದಿನಾಂಕವನ್ನು ಪ್ರೊ. ಮಾಳವಾಡರು ವಿಸ್ತರಿಸಿದ್ದಕ್ಕಾಗಿ ಇದು ಸಾಧ್ಯವಾಯಿತು... ೧೯೮೫ರಲ್ಲಿ ನಾನು ಧಾರವಾಡಕ್ಕೆ ಮರಳಿ ಬಂದಾಗ ಪ್ರೊ. ಮಾಳವಾಡರು ಸಾರ್ವಜನಿಕ ಜೀವನದಿಂದ ಹಿಂದೆ ಸರಿದು ಅಧ್ಯಾತ್ಮ ಚಿಂತನೆಯಲ್ಲಿ ತೊಡಗಿದ್ದರು. ... ಯಾವುದೋ ಕಾರಣಕ್ಕಾಗಿ ಅವರನ್ನು ಕಂಡಾಗ ತಮ್ಮ ಪುಸ್ತಕಗಳ ಪ್ರತಿಗಳನ್ನು ನನ್ನೆದುರಿಗಿಟ್ಟು ಆಯ್ಕೆಯ ಸ್ವಾತಂತ್ರ್ಯವನ್ನು ನನಗೆಯೇ ನೀಡಿದರು. ಅವರ ಪ್ರವಾಸ ಗ್ರಂಥಗಳನ್ನು ಹಾಗೂ ಆತ್ಮಚರಿತ್ರೆಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ಬರಹದಲ್ಲಿಯ ಸಂಯಮ ಹಾಗೂ ವಿವೇಕವಾದ ಸರಳ ಸಂವಹನಶೈಲಿ – ಇವು ಅವರ ಬರಹಗಳಲ್ಲಿ ಅನುಕರಣೀಯ ಗುಣಗಳು."

೧೯೩೭ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡಂದಿನಿಂದ ಮುಂದಿನ ಅರ್ಧಶತಮಾನಕ್ಕೂ ಮಿಕ್ಕ ಅವಧಿಯಲ್ಲಿ ಧಾರವಾಡದ ಸಾಹಿತ್ಯಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಹಾಗೆಯೇ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿ ಈ ಬಗೆಯ ಆತ್ಮಗೌರವ ಹಾಗೂ ತತ್ವನಿಷ್ಠೆಗೆ ಪ್ರಥಮ ಪ್ರಾಶಸ್ತ್ಯವಿತ್ತು. ಪ್ರೊ. ಮಾಳವಾಡರಂತೆ ಬಾಳಿದವರು ವಿರಳವೆಂದೇ ಹೇಳಬೇಕು. ಅಚ್ಚುಕಟ್ಟಾದ ಜೀವನಕ್ರಮ, ಪ್ರತಿಯೊಂದು ಕೆಲಸದಲ್ಲಿ ಶಿಸ್ತು, ಓರಣ, ಗಾಂಭೀರ್ಯವನ್ನು ಬಿಟ್ಟುಕೊಡದ ಸ್ನೇಹ ಸೌಹಾರ್ದತೆ, ಕಾರ್ಯದಕ್ಷತೆ, ನ್ಯಾಯ ನಿಷ್ಠುರ ನಡವಳಿಕೆ, ಮೌನದ ಅಂತರ್ಮುಖತೆ, ನಿರ್ದಿಷ್ಟವಾದ ಚೊಕ್ಕ ಬರವಣಿಗೆ ಇವು ಅವರ ವ್ಯಕ್ತಿತ್ವದ ಅಷ್ಟ ಪೈಲುಗಳೆನ್ನಬಹುದು.

ವಿದ್ಯಾರ್ಥಿ ದಸೆಯಲ್ಲಿಯೇ ಇವರ ಕನ್ನಡ ಪ್ರೇಮ ಹಾಗೂ ಉತ್ಸಾಹವನ್ನು ಗಮನಿಸಿದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು ಇವರನ್ನು ಮೆಚ್ಚಿಕೊಂಡು ಕರ್ನಾಟಕ ಇತಿಹಾಸ ಮಂಡಳದ ಸದಸ್ಯನಾಗಿ ಮಾಡಿಕೊಂಡದ್ದಲ್ಲದೆ ತಮ್ಮ ರಾಯಭಾರಿಯಾಗಿ ಇವರನ್ನು ಆರಿಸಿಕೊಂಡರು. ಅವರು ಆಗ ನವಜೀವನ ಗ್ರಂಥಮಾಲೆಯ ಪರವಾಗಿ ವಿಚಾರ ಸಾಹಿತ್ಯವನ್ನು ಪ್ರಕಟಿಸುತ್ತಿದ್ದರು. ಆ ಪುಸ್ತಕಗಳ ಪ್ರಚಾರಕ್ಕೆಂದು ಮಾಳವಾಡರು ಅವರ ಅಪೇಕ್ಷೆಯಂತೆ ಕೊಲ್ಲಾಪುರ, ಸಾಂಗಲಿ, ಪುಣೆ, ಮುಂಬಯಿಗಳ ಪ್ರವಾಸ ಕೈಗೊಂಡು ಸಾಧ್ಯವಿದ್ದಷ್ಟು ನೆರವಾದರು.

ಈಗಿನ ಗದಗ ಜಿಲ್ಲೆಯ ಮೆಣಸಿಗಿಯಲ್ಲಿ ೧೯೧೦, ನವೆಂಬರ್ ೧೪ರಂದು ಜನಿಸಿದ ಸಂಗಪ್ಪ – ಸಂಗನ ಬಸಪ್ಪ–ಮಾಳವಾಡ ಗೋವನಕೊಪ್ಪದಲ್ಲಿ ಪ್ರಾಥಮಿಕ ಶಿಕ್ಷಣವನ್ನೂ, ಗುಳೇದಗುಡ್ಡ, ಬಾಗಲಕೋಟೆ, ವಿಜಾಪುರಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪೂರೈಸಿ, ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಉಚ್ಚ ಶಿಕ್ಷಣ ಪಡೆದು, ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವಿಯೊಡನೆ ಕನ್ನಡ ಐಚ್ಛಿಕದಲ್ಲಿ ಪ್ರಥಮ ಸ್ಥಾನ ಪಡೆದು ೧೯೩೬ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ಮರುವರ್ಷವೇ ಶಾಂತಾದೇವಿಯವರೊಡನೆ ಮದುವೆಯೂ ಆಯಿತು. ಮುಂದೆ ಮೂರುವರೆ ದಶಕಗಳ ಕಾಲ ಪ್ರಾಧ್ಯಾಪಕರಾಗಿ, ಕಾಲೇಜಿನ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ ೧೯೭೦ರಲ್ಲಿ ನಿವೃತ್ತರಾದರು.

ಬಿ.ಎ. ಪರೀಕ್ಷೆಗೆ ಅವರು ಓದಿದ್ದು ಚರಿತ್ರೆ ಮತ್ತು ಅರ್ಥಶಾಸ್ತ್ರ, ಎಂ.ಎ. ಪರೀಕ್ಷೆಗೆ ಕನ್ನಡವನ್ನು ಪ್ರಮುಖ ಐಚ್ಛಿಕವಾಗಿ ಆರಿಸಿಕೊಳ್ಳುವ ಅವಕಾಶ ಆಗ ಕರ್ನಾಟಕ ಕಾಲೇಜಿನಲ್ಲಿರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಕೊಲ್ಲಾಪುರ ರಾಜಾರಾಮ ಕಾಲೇಜಿನಲ್ಲಿ ಹೆಸರು ಹಚ್ಚಿಸಿ ಪ್ರೊ. ಕೆ.ಜಿ. ಕುಂದಣಗಾರ ಅವರ ಶಿಷ್ಯರಾಗುವ ಭಾಗ್ಯಪಡೆದುಕೊಂಡರು. ಅಲ್ಲಿಯ ಚಿತ್ರದುರ್ಗ ಮಠದ ವಸತಿ ಸೌಕರ್ಯ ಲಭ್ಯವಾಯಿತು. ಚಿತ್ರದುರ್ಗ ಮಠದ ವಿದ್ಯಾರ್ಥಿನಿಲಯ ರೂಪುಗೊಳ್ಳುವುದಕ್ಕೆ ಆಗಿನ ಸಂಸ್ಥಾನಿಕರಾದ ಛತ್ರಪತಿ ಶಾಹು ಮಹಾರಾಜರ ಪ್ರೋತ್ಸಾಹವೂ ಕಾರಣವಾಗಿತ್ತು. ಬ್ರಾಹ್ಮಣೇತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ, ನೆರವು ಒದಗಿಸುವ ಧೋರಣೆಯೂ ಅವರದಾಗಿತ್ತು. ಕೊಲ್ಲಾಪುರದ ಜನ ಪ್ರೊ. ಕುಂದಣಗಾರರನ್ನು "ಅಣ್ಣಾ" ಎಂದು ಗೌರವಪೂರ್ವಕ ಸಂಬೋಧಿಸುತ್ತಿದ್ದುದನ್ನೂ ಪ್ರಸಿದ್ಧ ಮರಾಠಿ ಲೇಖಕರಾದ ವಿ.ಸ. ಖಾಂಡೇಕರ ಕುಂದಣಗಾರರ ಮನೆಗೆ ಆಗಾಗ ಬರುತ್ತಿದ್ದುದನ್ನೂ ಪ್ರೊ. ಮಾಳವಾಡರು ತಮ್ಮ ಆತ್ಮಕಥೆಯಲ್ಲಿ ನೆನೆಸಿಕೊಂಡಿದ್ದಾರೆ. ಕನ್ನಡದ ಸ್ಥಾನಮಾನದ ವಿಷಯದಲ್ಲಿ ಮಾಳವಾಡರಿಗಿದ್ದ ಕಳಕಳಿಗೆ ಇಲ್ಲೊಂದು ನಿದರ್ಶನವಿದೆ: ಕನ್ನಡದಲ್ಲಿ ಬರೆದ ವಿಳಾಸಗಳ ಪತ್ರಗಳನ್ನು ಹಂಚುವದು ಸಾಧ್ಯವಿಲ್ಲವೆಂದೂ, ಮರಾಠಿಯಲ್ಲಿ ಅಥವಾ ಇಂಗ್ಲಿಷಿನಲ್ಲಿದ್ದರೆ ಸಾಧ್ಯವೆಂದೂ ಅಲ್ಲಿಯ ಪೋಸ್ಟ್ ಮಾಸ್ಟರ ಪರಿಪತ್ರ ಹೊರಡಿಸಿದಾಗ, ಮಾಳವಾಡರು ಕೊಲ್ಲಾಪುರದ

ಕನ್ನಡಿಗರನ್ನು ಸಂಘಟಿಸಿ, ಈ ಅನ್ಯಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ, ಪರಿಪತ್ರವನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾದರು.

ಅವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಕರ್ನಾಟಕ ಸಂಘಕ್ಕೆ ಮತ್ತು ನಾಡಹಬ್ಬಕ್ಕೆ ಬರುತ್ತಿದ್ದ ನಾಡಿನ ವಿವಿಧ ಪ್ರದೇಶಗಳ ಸಾಹಿತಿಗಳ ಸಂಪರ್ಕ ಅವರಿಗೆ ಒದಗಿತು. ಅಂದಿನ ದಿನಗಳನ್ನು ನೆನೆಪಿಸಿಕೊಳ್ಳುತ್ತ ಅವರು ಬರೆದಿದ್ದಾರೆ. "ಅಸಾಧಾರಣ ಮೇಧಾವಿ ಪಂಡಿತ ತಾರಾನಾಥರು ತಮ್ಮ ಅಸಾಮಾನ್ಯ ವ್ಯಕ್ತಿತ್ವದಿಂದ, ಉಜ್ವಲ ಭಾಷಣದಿಂದ ನಮ್ಮ ಮೇಲೆ ಪ್ರಭಾವ ಬೀರಿದರು. ಅತ್ಯಂತ ಸ್ವಾರಸ್ಯಕರವಾದ ಪ್ರವಚನದ ಮೂಲಕ ಕನ್ನಡದ ಬಗೆಗೆ ಅಭಿಮಾನ ಪ್ರಚೋದಿಸುತ್ತಿದ್ದ ಕೀರ್ತನ ಕೇಸರಿ ಶಿವಮೂರ್ತಿ ಶಾಸ್ತ್ರಿಗಳು ನಮ್ಮನ್ನು ಆಕರ್ಷಿಸಿದರು. ೧೯೩೦ರಲ್ಲಿ ಆರ್. ವ್ಹಿ. ಜಹಗೀರದಾರರು ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರ ಬಳಿ ಬರುತ್ತಿದ್ದ ಹಿರಿಯ ಸಾಹಿತಿಗಳ ಪರಿಚಯ ನನಗೆ ಸಾಧ್ಯವಾಯಿತು. ಅಂತಹವರಲ್ಲಿ ಶಿವರಾಮ ಕಾರಂತ, ವಿ.ಸೀ., ಅ.ನ.ಕೃ. ಮೊದಲಾದವರಿದ್ದರು. ನಾನು ಸೀನಿಯರ್ ಬಿ.ಎ. ವರ್ಗಕ್ಕೆ ಬರುವ ಹೊತ್ತಿಗೆ ಗೆಳೆಯರ ಗುಂಪಿನ ಕೆಲವರೊಂದಿಗೆ ಸಲಿಗೆಯುಂಟಾಗಿತ್ತು." ೧೯೩೩ರಲ್ಲಿ ಬಿ.ಎ. ಪರೀಕ್ಷೆಗೆ ಕುಳಿತ ಮೇಲೆ ಧಾರವಾಡದ ಕರ್ನಾಟಕ ಸಾಹಿತ್ಯ ಮಂದಿರದ ಟಿ.ಡಿ. ಶಿವಲಿಂಗಯ್ಯನವರ ಅಪೇಕ್ಷೆಯ ಮೇರೆಗೆ ಮಾಳವಾಡರು ಬೆಂಗಳೂರಿಗೆ ಹೋಗಿ ಮಧುರಚೆನ್ನರ 'ನನ್ನ ನಲ್ಲ' ಕವನ ಸಂಗ್ರಹವನ್ನು ಮುದ್ರಿಸಿಕೊಂಡು ಬಂದ ಸಂಗತಿ ಇಲ್ಲಿ ಗಮನಾರ್ಹವಾಗಿದೆ. ಅದೇ ವರುಷ ಹುಬ್ಬಳ್ಳಿಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆ.ವಿ. ಪುಟ್ಟಪ್ಪನವರು ಕವಿಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಭಾಷಣ ಮಾಳವಾಡರಿಗೆ ಸ್ಫೂರ್ತಿದಾಯಕ ವಾಗಿತ್ತು. ಅವರನ್ನು ಪರಿಚಯಿಸಿಕೊಳ್ಳಬೇಕೆನ್ನುವ ಉತ್ಸಾಹ ಮಾತ್ರ ಫಲಕಾರಿಯಾಗಲಿಲ್ಲ. ಆ ದಿಸೆಯಲ್ಲಿ ಅವರು ಮುಂದಿನ ಮೂರುನಾಲ್ಕು ವರ್ಷ ಕಾಯಬೇಕಾಯಿತು. ಆಮೇಲೆ ಕೊನೆಯವರೆಗೂ ಕುವೆಂಪು ಅವರ ಆತ್ಮೀಯ ಸ್ನೇಹಿತರಲ್ಲಿ ಒಬ್ಬರಾದರು. ಹಳೆಯ ಮೈಸೂರು ಮತ್ತು ಉತ್ತರ ಕರ್ನಾಟಕಕ್ಕೆ ಮೊದಲಿನಿಂದಲೂ ಅವರು ಸ್ನೇಹ ಸೇತುವೆಯಾಗಿದ್ದರು.

ಒಂದು ಕಾಲಕ್ಕೆ ಕನ್ನಡದ ಗಾಳಿ ಕೂಡ ಆಡದ, ಅನ್ಯಭಾಷೆಗಳ ಅಧ್ಯಾಪಕರ ಅಟ್ಟಹಾಸಕ್ಕೊಳಗಾದ ಧಾರವಾಡದ ಈ ಸರಕಾರಿ ಬೃಹತ್ ಕಾಲೇಜು ಬರಬರುತ್ತ ಕನ್ನಡ ಸಾಹಿತ್ಯ-ಸಂಸ್ಕೃತಿಯ ಭದ್ರಕೋಟೆಯಾಗುವಂತೆ ಶ್ರಮಿಸಿದವರಲ್ಲಿ ಆರ್.ವ್ಹಿ. ಜಹಗೀರದಾರ (ಶ್ರೀರಂಗ) ಹಾಗೂ ಮಾಳವಾಡರು ಅಗ್ರಗಣ್ಯರೆನ್ನಬಹುದು. ಡಾ. ಡಿ.ಸಿ. ಪಾವಟೆ ಯವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಸಂದರ್ಭದಲ್ಲಿ, ಪ್ರೊ. ವಿ.ಕೃ. ಗೋಕಾಕರು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದುದರಿಂದ ಧಾರವಾಡದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮಹತ್ವ ಇನ್ನಷ್ಟು ಉಜ್ವಲಗೊಂಡು ರಾಷ್ಟ್ರವ್ಯಾಪಿಯಾಯಿತು. ಕಾಲೇಜಿನಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ವಿವಿಧ ಕಾರ್ಯರಂಗದಲ್ಲಿ ಈ ಮೊದಲೇ ಪ್ರವೇಶಿಸಿದ್ದ ಮಾಳವಾಡರಿಗೂ ಇದು ಅತ್ಯಂತ ಕ್ರಿಯಾಶೀಲ ದಶಕವಾಗಿತ್ತು.

೧೯೫೫ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ' ಗ್ರಂಥದಿಂದ ಪ್ರಾರಂಭವಾದ ಮಾಳವಾಡರ ಸಾಹಿತ್ಯಸೃಷ್ಟಿ ವಿಮರ್ಶೆ, ಸಂಶೋಧನೆ, ಸಂಪಾದನೆ, ಜೀವನಚರಿತ್ರೆ, ಅಧ್ಯಾತ್ಮ ಸಾಹಿತ್ಯ, ಪ್ರವಾಸ ಸಾಹಿತ್ಯ, ವಿಚಾರ ಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಕೊಡಮಾಡಿದೆ. ೧೯೩೮–೩೯ರಷ್ಟು ಹಿಂದೆಯೇ ಅವರು ಮಾಡಿದ ಇನ್ನೊಂದು ಮಹತ್ವದ ಕಾರ್ಯವೆಂದರೆ, ಕನ್ನಡ ಗದ್ಯವು ಬೆಳೆದು ಬಂದ ಬಗೆಯನ್ನು ಗದ್ಯಶೈಲಿಯ ವಿವಿಧ ಸೊಬಗನ್ನು ತೋರಿಸಿಕೊಡುವ ದೃಷ್ಟಿಯಿಂದ 'ಗದ್ಯಮಾಲೆ' ಎಂಬ ಮೂರು ಸಂಕಲನಗಳನ್ನು ಸಿದ್ಧಗೊಳಿಸಲು ನಿರ್ಧರಿಸಿ, 'ಕನ್ನಡ ಗದ್ಯಮಾಲೆ–೧' ಅನ್ನು ಪ್ರಕಟಿಸಿದಾಗ ಅದು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತ ಸಂಕಲನವೆಂದು ಪರಿಗಣಿತವಾಗಿ, ಬೇರೆ ಬೇರೆ ಆಡಳಿತಕ್ಕೊಳಪಟ್ಟ ಕನ್ನಡ ಪ್ರದೇಶಗಳಲ್ಲಿ ಅದನ್ನು ಪಠ್ಯಗ್ರಂಥವೆಂದು ಬಹುಕಾಲ ಬಳಸಲಾಯಿತು.

ವಿಶ್ರಾಂತ ಜೀವನದಲ್ಲಿ ಪ್ರೊ. ಮಾಳವಾಡರು ತಮ್ಮ ಅನೇಕ ಪುಸ್ತಕಗಳನ್ನು ತಾವೇ ಪ್ರಕಟಿಸಿದರು. ಈ ಉದ್ದೇಶಕ್ಕಾಗಿಯೇ 'ಸಾಹಿತ್ಯನಿಧಿ' ಎಂಬುದನ್ನು ಸ್ಥಾಪಿಸಿದರು. 'ಜಯಪ್ರಕಾಶ' ಎಂಬುದು ಶ್ರೀಮತಿ ಶಾಂತಾದೇವಿ ಮಾಳವಾಡರು ನಡೆಸಿಕೊಂಡುಬಂದ ಪ್ರಕಾಶನ. ಈ ಪ್ರಕಾಶನದ ಐದಾರು ಗ್ರಂಥಗಳಿಗೆ ತಮ್ಮ ಪ್ರೀತಿಯ ಶಿಷ್ಯರಿಂದಲೇ ಮುನ್ನುಡಿ ಬರೆಯಿಸಿ ತಮ್ಮ ಶಿಷ್ಯ ವಾತ್ಸಲ್ಯವನ್ನು ಪ್ರಕಟಿಸಿದ್ದುಂಟು. ಇವುಗಳಲ್ಲಿ ನನ್ನ ಪಾಲಿಗೆ ಬಂದದ್ದು ವ್ಯಕ್ತಿ ಚಿತ್ರಗಳನ್ನೂ ವೈಚಾರಿಕ ಪ್ರಬಂಧಗಳನ್ನೂ ಒಳಗೊಂಡ ಅವರ ಕೃತಿ 'ಕಾಲವಾಹಿನಿ' (೧೯೬೮). ಈ ಅವಧಿಯಲ್ಲಿ ಅವರು ಕೈಗೊಂಡ ಒಂದು ಮಹತ್ವದ ಬರವಣಿಗೆಯೆಂದರೆ ಅವರ ಆತ್ಮಚರಿತ್ರೆ 'ದಾರಿ ಸಾಗಿದೆ'. ಅದರ ಮೊದಲ ಭಾಗ 'ಹಳ್ಳಿಯ ಹುಡುಗ' (೧೯೮೦) ಹದಿನಾರು ವಯಸ್ಸಿನ ಅವಧಿಯ ನಿರೂಪಣೆ. ಆರು ಭಾಗಗಳನ್ನೊಳಗೊಂಡ, ಸುಮಾರು ಎಂಟುನೂರು ಪುಟಗಳ ಈ ಕೃತಿ ಪೂರ್ತಿಗೊಳ್ಳುವ ಕೊನೆಯ ಹಂತದಲ್ಲಿದ್ದಾಗಲೇ ಮಾಳವಾಡರು ಕಾಲವಶರಾದರು (೩೦–೦೮–೧೯೮೭) ಕೊನೆಯ ನೂರೈವತ್ತು ಪುಟಗಳಷ್ಟನ್ನು ಅವರ ದಿನಚರಿ, ಟಿಪ್ಪಣಿಗಳು ಹಾಗೂ ಫೈಲುಗಳ ಆಧಾರದಿಂದ ಶ್ರೀಮತಿ ಶಾಂತಾದೇವಿಯವರು ಕೃತಿಯ ಸಾತತ್ಯಕ್ಕೆ ಭಂಗ ಬರದಂತೆ ಬರೆದು ಪೂರೈಸಿದರು. ಪ್ರೊ. ಮಾಳವಾಡರ ಎಂಬತ್ತನೆಯ ಹುಟ್ಟುಹಬ್ಬದಂದು, ೧೯೮೯ರಲ್ಲಿ ಇದರ ಬಿಡುಗಡೆಯಾಯಿತು. (ಈ ಆತ್ಮಚರಿತ್ರೆ ಸುಮಾರು ಅರವತ್ತು ವರ್ಷಗಳ ಅವಧಿಯ ಕರ್ನಾಟಕದ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಜನಜೀವನಗಳ ಚರಿತ್ರೆಯೂ ಆಗಿದೆ.)

ಇದರ ಬರವಣಿಗೆಯ ಕಾರ್ಯ ಅವರ ದಾಂಪತ್ಯಯೋಗಕ್ಕೆ ಒಂದು ಉತ್ತಮ ಸಂಕೇತವೆಂದು ಹೇಳಬಹುದು. "ಪ್ರೊ. ಮಾಳವಾಡರ ಬಗ್ಗೆ ಎಷ್ಟೇ ಹೇಳಿದರೂ ಬರೆದರೂ ಶಾಂತಕ್ಕನವರ ಉಲ್ಲೇಖವಿಲ್ಲದೆ ಅದು ಪೂರ್ಣವಾಗಲಾರದು. ಅವರಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಯೋಚಿಸುವದೂ ಆಗದ ಮಾತು" ಎಂಬ ಹಾ.ಮಾ. ನಾಯಕರ ಮಾತು ನೂರಕ್ಕೆ ನೂರರಷ್ಟು ಸತ್ಯ. ಶಾಲೆಯಲ್ಲಿ ಕಲಿತದ್ದು ಹೆಚ್ಚಲ್ಲವಾದರೂ

ಪ್ರೊ. ಮಾಳವಾಡರ ಪ್ರೋತ್ಸಾಹದಿಂದ ಓದು–ಬರೆಹವನ್ನು ರೂಢಿಸಿಕೊಂಡು, ಮನೆಯಲ್ಲಿಯೇ ಹಿಂದಿಯನ್ನೂ ತಕ್ಕಮಟ್ಟಿಗೆ ಇಂಗ್ಲಿಷನ್ನೂ ಕಲಿತು ಕನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಸಿಸಿದರು. ಸೃಜನಶೀಲ ಲೇಖಕಿಯಾಗಿ ಕಥೆ, ಕಾದಂಬರಿ, ಶರಣ ಸಾಹಿತ್ಯ, ಜೀವನಚರಿತ್ರೆಗಳನ್ನಲ್ಲದೆ, ಗೃಹಾಲಂಕಾರ, ಪಾಕಶಾಸ್ತ್ರ ಇವೇ ಮೊದಲಾದ ವಿಷಯಗಳನ್ನು ಕುರಿತು ಮೂವತ್ತಕ್ಕೂ ಮಿಕ್ಕ ಕೃತಿಗಳನ್ನು ರಚಿಸಿ ಮಾದರಿ ಎನಿಸಿದರು. ಸಾಹಿತ್ಯ ಸೃಷ್ಟಿ ಅವರ ವ್ಯಕ್ತಿತ್ವದ ಒಂದು ಮಜಲಾದರೆ, ಮಹಿಳೆಯರ ಸಂಘಟನೆ, ಅಕ್ಕನ ಬಳಗ, ಮಹಿಳಾ ಮಂಡಲ, ಲೇಖಕಿಯರ ಸಂಘ ಮೊದಲಾದವುಗಳಿಗೆ ಸಂಬಂಧಿಸಿದ ಸಾರ್ವಜನಿಕ ಸೇವೆ ಮತ್ತೊಂದು ಮಹತ್ವದ ಮಜಲು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳ ಗೌರವಕ್ಕೆ ಅವರು ಪಾತ್ರರಾದರು. ಬಾಗಲಕೋಟೆಯಲ್ಲಿ ನಡೆದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಜನಮನ್ನಣೆ ಪಡೆದದ್ದು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಒಂದು ಚರಿತ್ರಾರ್ಹ ಘಟನೆ ಎನ್ನಬಹುದು. ಇದನ್ನು ಅವರ ದಾಂಪತ್ಯಯೋಗಕ್ಕೆ ಸಂದ ಗೌರವವೆಂದೂ ಭಾವಿಸಬಹುದು. ಶಾಂತಾದೇವಿಯವರಿಗೆ ಎಂಟು ಸಲ ಗರ್ಭಪಾತವಾಗಿ ಅನುಭವಿಸಿದ ನೋವನ್ನೂ ಇಲ್ಲಿ ನೆನೆಯಬಹುದು. ಅವರ ಚಿಕಿತ್ಸೆಯನ್ನು ಕೈಗೊಂಡ ಕುಟುಂಬದ ಡಾಕ್ಟರರು ``Mrs. Malwad's case is a problem of Medical Science'' ಎಂದು ಹೇಳಿದ್ದರು. ಆ ಹೇಳಿಕೆ ಕೊನೆಗೂ ನಿಜವಾಗಿಯೆ ಪರಿಣಮಿಸಿತು.

ಪ್ರೊ. ಮಾಳವಾಡರ ಸೇವೆ ಎಂದೂ ಅಧ್ಯಾಪನಕ್ಕಷ್ಟೇ ಸೀಮಿತವಾಗಿರದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಗೌರವ ನಿರ್ದೇಶಕತ್ವ, ವಿದ್ಯಾರ್ಥಿ ಕಲ್ಯಾಣಾಧಿಕಾರಿ, ಪ್ರಾಚಾರ್ಯ, ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದ ಸ್ಥಾಪಕ ನಿರ್ದೇಶಕ – ಇತ್ಯಾದಿಗಳೂ ಅವರ ಅನುಭವದ ಲಾಭವನ್ನು ಪಡೆದಿವೆ. ಮುಂಬಯಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿ, ಕನ್ನಡ ಅಭ್ಯಾಸ ನಿಯಾಮಕ ಮಂಡಳ, ವಿಶ್ವವಿದ್ಯಾಲಯದ ಸೆನೇಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ – ಇವೇ ಮೊದಲಾದವುಗಳ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಕರ್ನಾಟಕ ಏಕೀಕರಣ, ಧಾರವಾಡ ಆಕಾಶವಾಣಿ ಕೇಂದ್ರ, ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿಯೂ ಅವರು ಯಾವಾಗಲೂ ಮುಂಚೂಣಿಯಲ್ಲಿದ್ದರು. ೧೯೪೬ರಲ್ಲಿ ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಬಿ.ಜಿ. ಖೇರ್ ಅವರನ್ನು ಭೆಟ್ಟಿಯಾಗಿ ಮನವಿ ಸಲ್ಲಿಸಿದ 'ಕರ್ನಾಟಕ ವಿದ್ಯಾಪೀಠ ಸಮಿತಿ'ಯ ಕಾರ್ಯದರ್ಶಿಯಾಗಿದ್ದ ಮಾಳವಾಡರು ಅದೇ ಸಂದರ್ಭದಲ್ಲಿ ರಚಿಸಿದ್ದ 'ಕರ್ನಾಟಕ ವಿಶ್ವವಿದ್ಯಾಲಯ' ಎಂಬ ಪುಸ್ತಿಕೆ ಮಹತ್ವದ ಅಂಶಗಳನ್ನು ಒಳಗೊಂಡಿದ್ದಿತು. ಕನ್ನಡ ಸಾಹಿತ್ಯ ಪರಿಷತ್ತು ಅವರ ಸಲಹೆಗಳಿಗೆ ಮನ್ನಣೆ ನೀಡುತ್ತಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘವಂತೂ ಅವರ ಸಾಂಸ್ಕೃತಿಕ ಚಟುವಟಿಕೆಗಳ ಆಡುಂಬೊಲವಾಗಿದ್ದಿತು. ಅಖಿಲ ಭಾರತ ಪಿ.ಈ.ಎನ್.ಕೇಂದ್ರ ಹಾಗೂ ಪ್ರಾಚ್ಯವಿದ್ಯಾ

ಪರಿಷತ್ತುಗಳು ಭಾರತದ ಇತರ ಪ್ರಾಂತಗಳ ಲೇಖಕರ, ವಿದ್ವಾಂಸರ ಸ್ನೇಹವನ್ನೂ ಆಯಾ ಭಾಷಾ ಸಾಹಿತ್ಯಗಳ ಪರಿಚಯವನ್ನೂ ಇವರಿಗೆ ಒದಗಿಸಿದವು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಥಮ ಸಮಿತಿಯ ಸದಸ್ಯರಾಗಿದ್ದರು. ಭಾರತೀಯ ಜ್ಞಾನಪೀಠದ ಪ್ರಥಮ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿಯೂ ಅವರು ಕಾರ್ಯಗೈದರು – ಇವೆಲ್ಲವುಗಳ ಚಟುವಟಿಕೆಗಳಲ್ಲಿ ಅವರು ತೋರಿಸುತ್ತಿದ್ದ ಆಸ್ಥೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸ್ಥಾಪನೆಯ ಆರೂನೂರು ವರ್ಷಗಳ ಸ್ಮಾರಕೋತ್ಸವದ ಸಾಹಿತ್ಯೋತ್ಸವ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯಕ್ರಮ ನಿರ್ವಹಿಸಿದ್ದು ಅವರಿಗೆ ಹೆಚ್ಚಿನ ತೃಪ್ತಿಯನ್ನು ತಂದುಕೊಟ್ಟಿದ್ದಿತು. ಅಂದು ಬಿ.ಎಂ.ಶ್ರೀ.ಯವರು ಆ ಸಮಾರಂಭದಲ್ಲಿ ತಮ್ಮ 'ಕನ್ನಡ ತಾಯ್ ನೋಟ' ಕವಿತೆಯನ್ನು ಭಾವಪೂರ್ಣವಾಗಿ ವಾಚನಮಾಡಿ ಸಭಿಕರಲ್ಲಿ ರೋಮಾಂಚನವನ್ನುಂಟು ಮಾಡಿದ್ದನ್ನು 'ದಾರಿ ಸಾಗಿದೆ' ಕೃತಿಯಲ್ಲಿ ಸಂಭ್ರಮದಿಂದ ಉಲ್ಲೇಖಿಸಿದ್ದಾರೆ. ಇಂಥ ಅನೇಕ ಘಟನೆಗಳನ್ನು, ಸನ್ನಿವೇಶಗಳನ್ನು ಅವರ ಆತ್ಮಚರಿತ್ರೆ ಒಳಗೊಂಡಿದ್ದು, ಕನ್ನಡ ಲೇಖಕರ ಅಂದಿನ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವ ಇನ್ನೊಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಮಾಳವಾಡರು ಹಾಯಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಗಳಗನಾಥರ ಕಾದಂಬರಿಗಳನ್ನೋದಿ ತಮ್ಮ ವಾಚನಾಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರನ್ನು ನೋಡಿರದಿದ್ದರೂ ಅವರ ಬಗ್ಗೆ ಪೂಜ್ಯ ಭಾವನೆ ತಾಳಿದ್ದರು. ಒಂದು ದಿನ ಮಾಳವಾಡರು ಕಾಲೇಜಿನ ಕೆಲಸ ಪೂರೈಸಿ ಮನೆಗೆ ವಿಶ್ರಾಂತಿಗೆಂದು ತೆರಳಿದ ಸಂದರ್ಭದಲ್ಲಿ ಬಡಕಲು ದೇಹ, ಮಾಸಿದ ಬಟ್ಟೆ, ಬೆಳೆದ ಗಡ್ಡ, ದೈನ್ಯ ಮುಖಮುದ್ರೆಯುಳ್ಳ ಮುದುಕರೊಬ್ಬರು ಭಾರವಾದ ಗಂಟನ್ನು ತಲೆಯ ಮೇಲೆ ಹೊತ್ತುಕೊಂಡು ಅವರ ಮನೆಯ ಬಾಗಿಲಿಗೆ ಬಂದರು. ಅವರೇ ಗಳಗನಾಥರೆಂದು ತಿಳಿದಾಗ ಅವರಿಗೆ ಆಶ್ಚರ್ಯದೊಂದಿಗೆ ವ್ಯಥೆಯೂ ಆಯಿತು. ಪತ್ರಿಕೆ, ಪುಸ್ತಕ ಪ್ರಕಟಣೆಗಳಿಂದಾಗಿ ಮಾಡಿದ ಸಾಲವನ್ನು ತೀರಿಸಲೆಂದು ಈಗ ಗಳಗನಾಥರು ಪುಸ್ತಕಗಳ ಮೂಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮನೆಮನೆಗೆ ಹೋಗಿ ಪುಸ್ತಕ ಮಾರಾಟ ಮಾಡಲು ತೊಡಗಿದ್ದರು. ಅವರನ್ನು ಉಪಚರಿಸಿ, ಕಾಲೇಜಿನ ಲೈಬ್ರರಿಗಾಗಿ ಹಾಗೂ ಸ್ವಂತಕ್ಕಾಗಿ ಕೆಲವು ಪುಸ್ತಕಗಳನ್ನು ಕೊಳ್ಳುವ ಮೂಲಕ ತಮಗೆ ಸಾಧ್ಯವಿದ್ದ ನೆರವನ್ನು ಆ ಹಿರಿಯ ಸಾಹಿತಿಗೆ ಒದಗಿಸಿದ ಸಂತಸ ಮಾಳವಾಡರಿಗಾದದ್ದು ಸಹಜವೇ ಆಗಿದೆ.

೧೯೫೦ರಲ್ಲಿ ಧಾರವಾಡ ಬಾನುಲಿ ಕೇಂದ್ರ ಪ್ರಾರಂಭವಾದಾಗ ಕೇಂದ್ರದ ನಿಯೋಜಿತ ಮುಖ್ಯಾಧಿಕಾರಿ ಎನ್.ಡಿ. ವಾಕನೀಸ್ ಮರಾಠಿ ಭಾಷಿಕರಾಗಿದ್ದು ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ಮಾಳವಾಡರೊಂದಿಗೆ ನಿಕಟವರ್ತಿಯಾಗಿ ಕಾರ್ಯಕ್ರಮಗಳ ಸಂಯೋಜನೆಯಲ್ಲಿ ಅವರ ಸಲಹೆಗಳನ್ನು ಪದೇ ಪದೇ ಪಡೆದುಕೊಳ್ಳುತ್ತಿದ್ದರು.

ನಂತರದ ವರ್ಷಗಳಲ್ಲಿ, ಸಾರ್ವಜನಿಕ ಸಾಹಿತ್ಯ ವಲಯದಲ್ಲಿ ಕಳಕಳಿಯ ಸೇವಾ ಭಾವನೆ ಹಿಂದಾಗಿ ರಾಜಕೀಯ ವ್ಯಾಪಾರಿ ಮನೋಭಾವ ಪ್ರಬಲವಾಗತೊಡಗಿದ್ದನ್ನು ಕಂಡು ಮಾಳವಾಡರು ಅವುಗಳಿಂದ ದೂರವಿರತೊಡಗಿದರು. ಇದಕ್ಕೊಂದು ಪ್ರಬಲ ಕಾರಣವೂ ಇತ್ತು. ೧೯೫೮ರಿಂದ ೧೯೬೮ರ ವರೆಗೆ ಮಾಳವಾಡರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯರಾಗಿದ್ದರು. ಇದಕ್ಕೆ ಪೂರ್ವದಲ್ಲಿಯೇ ಮಾಸ್ತಿಯವರ 'ಚೆನ್ನಬಸವನಾಯಕ' ಕಾದಂಬರಿ ಭಾರತದ ಇತರ ಭಾಷೆಗಳಿಗೆ ಭಾಷಾಂತರಕ್ಕೆ 'ಸೂಚಿತ'ವಾಗಿತ್ತು. ಆ ಸೂಚನೆಯು ಸಾರ್ವಜನಿಕರಲ್ಲಿ ತೀವ್ರವಾದ ವಿವಾದಕ್ಕೆ ಆಸ್ಪದವಾಗಿತ್ತು. ಪ್ರಮುಖ ಐತಿಹಾಸಿಕ ಆಧಾರಗಳಿಗೆ ಅದು ಅನುಗುಣವಾಗಿಲ್ಲ ಎಂಬ ಕಾರಣದಿಂದ ವಿರೋಧ ವ್ಯಕ್ತವಾಗಿತ್ತು. ('ದಾರಿ ಸಾಗಿದೆ' ಆತ್ಮಚರಿತ್ರೆಯಲ್ಲಿ ಈ ಬಗ್ಗೆ ಇಪ್ಪತ್ತು ಪುಟಗಳ ಬರವಣಿಗೆಯನ್ನು ಇವರು ಮುಕ್ತ ಮನಸ್ಸಿನಿಂದ ಪ್ರತಿಪಾದಿಸಿದ್ದಾರೆ.) 'ಸುಹೃದ್ಭಾವ ಬೆಳೆಯುವದೆಂಬ ಭರವಸೆ'ಯಿಂದ ಮೂಡಿಬಂದ ಸಮತೋಲನ ದೃಷ್ಟಿ, ಸಭ್ಯ ನುಡಿಗಳ ತಮ್ಮ ಸಂಯುಕ್ತ ಪ್ರಕಟಣೆ – ಕರ್ನಾಟಕದ ವಿವಿಧ ಕೋಮುಗಳಿಗೆ ಸೇರಿದ ಎಂಟು ಜನ ಲೇಖಕರ ಅಂಕಿತದಲ್ಲಿ ರೂಪುಗೊಂಡ–ಮನವಿಯನ್ನು ಇತ್ತಂಡದವರೂ ಒಪ್ಪಿಕೊಳ್ಳದೆ ಅವರನ್ನು ನಿಂದನೆಗೊಳಗುಮಾಡಿದ್ದರು. ಈ ರೀತಿಯ ಸಾಹಿತ್ಯಿಕ ಸಾರ್ವಜನಿಕ ಸಂಬಂಧಗಳಲ್ಲಿ ತಾವು ಹೊಂದಿಕೊಳ್ಳಲಾರದವ (misfit) ಎಂದು ಅವರಿಗೆ ಮನವರಿಕೆ ಯಾಯಿತು. ಈ ಮೊದಲೇ ಮೂಡಿದ್ದ ಆಧ್ಯಾತ್ಮಿಕ ಒಲವು ಹಾಗೂ ಸಾಧನೆಗಳಿಂದ ಬಾಳಿಗೆ ಹೊಸ ದೃಷ್ಟಿಯನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನ ಅವರದಾಯಿತು.

೧೯೪೫ರ ಕೊನೆಯ ಭಾಗದಲ್ಲಿ ಮಧುರಚೆನ್ನರ ಪ್ರೇರಣೆಯಿಂದ ಮಾಳವಾಡರು ಪ್ರಥಮಸಲ ಅರವಿಂದಾಶ್ರಮವನ್ನು ಸಂದರ್ಶಿಸಿದರು. ಅಂದಿನಿಂದ ಸುಮಾರು ಮೂವತ್ತೈದು ವರ್ಷ ಅವರು ಪಾಂಡಿಚೇರಿ ಪ್ರಯಾಣ ಕೈಗೊಳ್ಳುತ್ತ ಅಲ್ಲಿ ನಾಲ್ಕೈದು ವಾರ ಮನೆಯವರ ಜೊತೆಗೆ ವಾಸಿಸುವ ರೂಢಿ ಇತ್ತು. "ಶಿವಶರಣರ ಬೋಧೆಯಲ್ಲಿ ಆ ನೆಮ್ಮದಿಯ ಹಾದಿ ಸೂಚಿತವಾಗಿದೆಯೆಂಬುದು ನಿಜ. ಆದರೆ ಅದನ್ನು ವಾಸ್ತವವಾಗಿ ರೂಢಿಸಿಕೊಳ್ಳುವ ಪ್ರಯೋಗಶಾಲೆಯಾಯಿತು ಆಶ್ರಮವು ನಮಗೆ" ಎನ್ನುತ್ತಿದ್ದರು ಮಾಳವಾಡರು. ಅರವಿಂದಾಶ್ರಮದ ಸ್ವರೂಪ, ಕಾರ್ಯ ಯೋಜನೆ, ಅನುಷ್ಠಾನಗಳ ವಿವರಗಳನ್ನು ತಮ್ಮ 'ಅರವಿಂದ ಸಂಗಮ' ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಅರವಿಂದರು ಹಾಗೂ ಮಾತೆಯವರ ವಿಚಾರಧಾರೆಯನ್ನು ಬೇರೆ ಕೆಲವು ಗ್ರಂಥಗಳಲ್ಲಿ ಸುಲಭ ಶೈಲಿಯಲ್ಲಿ ಅವರು ವಿವರಿಸಿದ್ದಾರೆ. ಅವರ ಪ್ರಕಾರ ಅರವಿಂದಾಶ್ರಮವು ಬಾಳಿನಿಂದ ಪಲಾಯನವನ್ನು ಬೋಧಿಸುವದಿಲ್ಲ. ಮಾನವೀಯ ಬಾಳಿನ ಮಧ್ಯದಲ್ಲಿಯೇ ದೈವೀಪ್ರಜ್ಞೆ ಪ್ರಕಟವಾಗಬೇಕೆಂಬುದು ಅಲ್ಲಿಯ ಸಂದೇಶವಾಗಿದೆ. ಯಾವುದೇ ಬಗೆಯ ಧಾರ್ಮಿಕ ವಿಧಿವಿಧಾನ, ದೀಕ್ಷೆ ಇತ್ಯಾದಿ ಅಲ್ಲಿ ಇಲ್ಲ. ಪರಮಾತ್ಮನ ಅನುಸಂಧಾನವನ್ನು ಕುರಿತು ಯಾರೂ ಯಾವುದೇ ಕ್ರಮವನ್ನು ಧರ್ಮವನ್ನು ಅನುಸರಿಸಬಹುದು.

೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ೧೯೮೫ರಲ್ಲಿ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳಿಂದ ಅವರನ್ನು ಗೌರವಿಸಲಾಯಿತು. ಆದರೆ ಮಾಳವಾಡರಿಗೆ ಇದಾವುದರ ಕಡೆಗೂ ಲಕ್ಷ್ಯವಿರಲಿಲ್ಲ. ತಮ್ಮ 'ಪ್ರಶಾಂತ' ಗೃಹದಲ್ಲಿ ಪತ್ನಿ ಶಾಂತಾದೇವಿಯವರ ಜೊತೆಗೆ ಸದಾ ವ್ಯಾಸಂಗನಿರತರಾಗಿ, ಸಾಧ್ಯವಿದ್ದಷ್ಟು ಬರವಣಿಗೆಯನ್ನು ಮಾಡುತ್ತ ಜೀವನ – ಸಾಹಿತ್ಯ – ಅಧ್ಯಾತ್ಮ – ದಾಂಪತ್ಯಗಳಲ್ಲಿ ಪರಸ್ಪರ ಪೂರಕವೆನಿಸಿದ್ದರು. ಹಡೆದ ಮಗನಲ್ಲದಿದ್ದರೂ ಪಡೆದ ಮಗ (ತಮ್ಮನ ಮಗ ಚೆನ್ನಬಸವ) ಮನೆಯಲ್ಲಿದ್ದು, ಸೊಸೆ (ಲಲಿತಾ) ಮನೆತುಂಬಿ, ಮಾಳವಾಡ ದಂಪತಿಗಳ ಉಡಿಯಲ್ಲಿ ಮೂವರು ಮೊಮ್ಮಕ್ಕಳನ್ನು (ಮೀರಾ, ಚಿನ್ಮಯಿ, ಅರವಿಂದ) ನೀಡಿರುವಾಗ ಅವರಿಗೆ ಯಾವ ಕೊರತೆಯೂ ಎನಿಸಿರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಹಂಬಲಿಸಬಹುದಾದ, ರಾಜ್ಯ ಸರ್ಕಾರ ಕೊಡ ಮಾಡಿದ ಮಾಸಿಕ ಗೌರವ ಧನವನ್ನು ನಿರಾಕರಿಸಿದ್ದು ಮಾಳವಾಡರ ನಿಸ್ಪೃಹತೆಗೆ ಸಾಕ್ಷಿಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದತ್ತಿ ಉಪನ್ಯಾಸಕ್ಕಾಗಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಪ್ರಶಸ್ತಿಗಾಗಿ ಒಂದು ಮೊತ್ತದ ಹಣವನ್ನು ನೀಡಿ, ಕನ್ನಡ ಸಾಹಿತ್ಯ ಸಂವರ್ಧನೆಯ ಬಗೆಗಿನ ತಮ್ಮ ಕಳಕಳಿಯನ್ನು ಕಾರ್ಯರೂಪಕ್ಕಳಿಸಿ ಕೃತಾರ್ಥರಾದರು."ಕಾಯದ ಕಳವಳಕ್ಕಂಜಿ 'ಕಾಯಯ್ಯ' ಎನ್ನೆನು; ಜೀವನೋಪಾಯಕ್ಕಾಗಿ 'ಈಯಯ್ಯಾ' ಎನ್ನೆನು" ಎಂಬ ಬಸವವಾಣಿಯನ್ವಯ ತಮ್ಮ ಜೀವನವನ್ನು ರೂಪಿಸಿಕೊಂಡ ಮಾಳವಾಡರು, "ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ" ನ್ಯಾಯನಿಷ್ಠುರರಾಗಿ ಬಾಳಿದರು.

ಸ್ನೇಹಿತರ ಹಾಗೂ ಸಾಹಿತ್ಯಾಸಕ್ತರ ಅಪೇಕ್ಷೆಯಂತೆ ಮಾಳವಾಡರ ಅರವತ್ತನೆಯ ಹುಟ್ಟುಹಬ್ಬವನ್ನು ಧಾರವಾಡದಲ್ಲೂ ಎಪ್ಪತ್ತರ ಹುಟ್ಟುಹಬ್ಬವನ್ನು ಬೆಂಗಳೂರಿನಲ್ಲೂ ಸಾರ್ವಜನಿಕ ಸಮಾರಂಭವಾಗಿ ಆಚರಿಸಲಾಯಿತು. ಧಾರವಾಡದ ಸಮಾರಂಭದಲ್ಲಿ ಅವರು ಹೇಳಿದರು: "ನಾನು ಜನಪ್ರಿಯತೆ ಗಳಿಸಲಿಲ್ಲ ಎಂಬುದು ನನಗೆ ಗೊತ್ತಿದೆ. ಆ ದಿಸೆಯಲ್ಲಿ ನಾನು ಸಾಗಲಿಲ್ಲ. ಕರ್ತವ್ಯನಿಷ್ಠೆ, ನ್ಯಾಯಸಮ್ಮತ ಸ್ಪಷ್ಟೋಕ್ತಿ ಈ ದೃಷ್ಟಿಯಿಂದ ಕೆಲಮಟ್ಟಿಗೆ ನಿಷ್ಠುರವಾದ ಹಾದಿಯನ್ನೇ ನಾನು ತುಳಿದೆ." ಅವರ ಭಾಷಣ ಹಾಗೂ ಬರೆಹಗಳಲ್ಲಿ ಹೆಚ್ಚಿನ ವ್ಯತ್ಯಾಸವಿರುತ್ತಿರಲಿಲ್ಲ.

೭೫ನೆಯ ಹುಟ್ಟುಹಬ್ಬದಂದು (೧೯೮೫) 'ವ್ಯಾಸಂಗ' ಹೆಸರಿನ ಅಭಿನಂದನ ಗ್ರಂಥವನ್ನು ಧಾರವಾಡದಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ಮಾಳವಾಡರಿಗೆ ಸಲ್ಲಿಸಲಾಯಿತು. ವಿಮರ್ಶಕ ಮಾಳವಾಡರ ಅಭಿರುಚಿಗೆ ತಕ್ಕಂತೆ ಆ ಗ್ರಂಥದಲ್ಲಿ, ಭಾರತೀಯ ಹಾಗೂ ಪಾಶ್ಚಾತ್ಯ ವಿಮರ್ಶಾ ಪರಿಕಲ್ಪನೆಗಳು ಮತ್ತು ಸಮಸ್ಯೆಗಳನ್ನು ಕುರಿತಂತೆ ಸಂಪಾದಕರಾದ ಪ್ರೊ. ಸದಾನಂದ ಕನವಳ್ಳಿಯವರು ವಿದ್ವತ್ಪೂರ್ಣ ಲೇಖನಗಳನ್ನು ಬರೆಯಿಸಿ ವಿಶಿಷ್ಟ ಮಾದರಿಯನ್ನು ಹಾಕಿಕೊಟ್ಟರು. ಈ ಗ್ರಂಥ ಯಾವ ಅಭಿಮಾನಿ ಸಂಘವನ್ನು ಕಟ್ಟಿಕೊಂಡಿರದ, ವ್ಯಾಸಂಗಪ್ರಿಯರಾದ ಪ್ರೊ. ಮಾಳವಾಡರಿಗೆ ಬೆಲೆಯುಳ್ಳದ್ದಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ.

ಧಾರವಾಡವೆ ಮಾಳವಾಡರ ಜ್ಞಾನಕ್ಷೇತ್ರ ಹಾಗೂ ಕರ್ಮಭೂಮಿಯಾಗಿದ್ದರಿಂದ, 'ಬೇಂದ್ರೆಯವರಂತೆ ನನಗೂ ಧಾರವಾಡ ತಾಯಿಯ ವಾತ್ಸಲ್ಯ ಒಡಗೂಡಿ ಬಂದಿತು' ಎಂಬ ಅವರ ಹೇಳಿಕೆ ಅರ್ಥಪೂರ್ಣವಾಗಿದೆ. ವಸ್ತುನಿಷ್ಠ ದೃಷ್ಟಿಯಿಂದ ಅವರು ಜಗತ್ತನ್ನೂ ಉಳಿದವರನ್ನೂ ನೋಡಿದಂತೆ ಆ ದೃಷ್ಟಿಯನ್ನು ತಮ್ಮ ಮೇಲೂ ಹಾಯಿಸಿ ಕೊಳ್ಳಲು ಅವರು ಮರೆಯಲಿಲ್ಲ. ಒಂದೆಡೆ ಅವರು ಹೇಳಿದ್ದಾರೆ: "ನನ್ನ ಓದು ವಿಸ್ತಾರವಾದದ್ದು; ಆಳ ಇರಲಿಕ್ಕಿಲ್ಲ. ಈ ಮಾತು ನನ್ನ ಬರೆಹಕ್ಕೂ ಅನ್ವಯಿಸಬಹುದು. ನನ್ನ ಚೇತನವೇ ಹಾಗಿರಬಹುದು. ಈ ಬಗೆಗೆ ನಾನು ವಿಷಾದಪಟ್ಟುಕೊಳ್ಳುವದಿಲ್ಲ. ಪರಮಾತ್ಮ ದಯಪಾಲಿಸಿದ ಸೀಮಿತ ಶಕ್ತಿಯನ್ನು ಶ್ರದ್ಧೆಯಿಂದ, ಪರಿಶ್ರಮದಿಂದ ಉಪಯೋಗಿಸಿದೆನೆಂಬ ಸಮಾಧಾನ ನನ್ನದಾಗಿದೆ. ನನ್ನ ದುಡಿಮೆಯೆ ನನಗೆ ಸಂತೋಷವನ್ನು ನೀಡಿದೆ." ಈ ಪ್ರವೃತ್ತಿಯೇ ಅವರನ್ನು ದೊಡ್ಡವರನ್ನಾಗಿಸಿತು.

('ಹೊಸತು' ವಾರ್ಷಿಕ ವಿಶೇಷ ಸಂಚಿಕೆ ೨೦೧೨)

‘ಗಾಯನ ಗಂಗಾ’

ಎರಡು ವರ್ಷಗಳ ಹಿಂದೆ ಸ್ವರಸಾಮ್ರಾಜ್ಞಿ ಡಾ. ಗಂಗೂಬಾಯಿ ಹಾನಗಲ್ಲ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಖ್ಯಾತನಟ ನಾನಾ ಪಾಟೇಕರ ಅವರು ಹುಬ್ಬಳ್ಳಿಗೆ ಬಂದು ಸಮಾರಂಭದಲ್ಲಿ ಭಾಗವಹಿಸಿದಾಗ ಒಂದು ಮಾತು ಹೇಳಿದರು: “ಎರಡು–ಮೂರು ರಾಷ್ಟ್ರೀಯ ಪುರಸ್ಕಾರಗಳು ಬಂದುಬಿಟ್ಟರೆ ನಾವು ನೆಲದ ಮೇಲೆ ಇರಲಾರೆವು. ಅಂಥದರಲ್ಲಿ ನಲವತ್ತೈದು ರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದ ಈ ಅಮ್ಮನಲ್ಲಿ ಒಂದಿಷ್ಟೂ ಗರ್ವವಿಲ್ಲವಲ್ಲ!” ಗಂಗೂಬಾಯಿಯವರ ಈ ವಿನಯವಂತಿಕೆಯ ಗುಣವೇ ನಮ್ಮನ್ನು ಮೊದಲು ಆಕರ್ಷಿಸುವದು. ದೊಡ್ಡಸ್ತಿಕೆಯಿಂದ ಯಾವಾಗಲೂ ದೂರವಿರುತ್ತಿದ್ದ ಅವರು ಜನಸಾಮಾನ್ಯರಲ್ಲಿ ಸುಲಭವಾಗಿ, ಸಹಜವಾಗಿ ಬೆರೆಯುತ್ತಿದ್ದರು. ಹಾಗೇ ತಮ್ಮ ಅಂತರಂಗವನ್ನು ತೆರೆದಿಡುತ್ತಿದ್ದರು.

ಒಂದು ಸಲ ಮಾತಾಡುತ್ತ ಅವರು ಹೇಳಿದರು: ‘ಸಂಗೀತಕ್ಕೆ ಇತಿಹಾಸ ಆದ, ಭೂಗೋಲ ಇಲ್ಲ’. ಸಂಗೀತದ ವಿಶ್ವವ್ಯಾಪಕತ್ವವನ್ನು ಇದಕ್ಕಿಂತಲೂ ಪರಿಣಾಮಕಾರಿಯಾಗಿ ಸಂಕ್ಷಿಪ್ತವಾಗಿ ಹೇಳುವದು ಸಾಧ್ಯವಿಲ್ಲವೆನಿಸುತ್ತದೆ. ಅವರ ಸಂಗೀತ ಎಷ್ಟು ಅಮೋಘವಾಗಿರುತ್ತಿತ್ತೊ ಅವರು ಆಗಾಗ ಆಡುತ್ತಿದ್ದ ಇಂಥ ಮಾತುಗಳೂ ಮಾಣಿಕ್ಯದ ದೀಪ್ತಿಯಂತಿರುತ್ತಿದ್ದವು.

ಧಾರವಾಡ, ದೇಶವಿದೇಶಗಳಲ್ಲಿ ಜಯಭೇರಿ ಬಾರಿಸಿದ ಸಂಗೀತ ದಿಗ್ಗಜರ ಜನ್ಮಭೂಮಿ ಎಂದು ಹೆಮ್ಮೆಯಿಂದ ಹೇಳುತ್ತ ಬಂದಿದ್ದೇವೆ. ಗುರುವಿನ ಮೂಲಕ ಶಿಷ್ಯ, ಶಿಷ್ಯನ ಮೂಲಕ ಗುರು ಪ್ರಜ್ವಲಿಸುತ್ತ ಸಾಗುವ ಪರಂಪರೆಯ ನಿರಂತರತೆ ಸಂಗೀತದಲ್ಲಿದೆ. ಗಂಗೂಬಾಯಿಯವರ ಗಂಡುಧ್ವನಿಗೆ ವರಕವಿ ಬೇಂದ್ರೆ ತಮಾಷೆ ಮಾಡುತ್ತಿದ್ದರಂತೆ: “ನಿನ್ನ ಗಂಟಲಲ್ಲಿ ಒಬ್ಬ ಶಾಪಗ್ರಸ್ತ

ಗಂಧರ್ವ ಕೂತಿದ್ದಾನೆ" ಎಂದು. ಸಂಗೀತ ತೀರ ಮುಕ್ತವಾದ, ಅತ್ಯಂತ ಅಮೂರ್ತವಾದ, ಇತರ ಕಲೆಗಳಿಗೆ ಯಾವ ರೀತಿಯಲ್ಲೂ ಅಧೀನವಾಗದ ಕಲೆಯಾಗಿದ್ದರಿಂದ ಪ್ರತಿಭೆಗೆ ಇಲ್ಲಿ ಅನಂತ ಅವಕಾಶವಿದೆ. ಗಂಗೂಬಾಯಿಯವರು ಅದನ್ನು ನೂರಕ್ಕೆ ನೂರರಷ್ಟು ಸಾರ್ಥಕಪಡಿಸಿಕೊಂಡವರಲ್ಲಿ ಅಗ್ರಗಣ್ಯರು.

ಕಳೆದ ಇಡೀ ಒಂದು ಶತಮಾನ ಕಾಲ, ನಾಡಿನ ಹಾಗೂ ದೇಶದ ಎಲ್ಲ ಆಗು ಹೋಗುಗಗಳಿಗೆ ಸಾಕ್ಷೀಪ್ರಜ್ಞೆಯಾಗಿದ್ದು, ತಮ್ಮ ವ್ಯಕ್ತಿತ್ವದ ಸಾರಸರ್ವಸ್ವವೆನಿಸಿದ ಸಂಗೀತ ಮಾಧುರ್ಯದಿಂದ ಜನಮನವನ್ನು ಬೆಳಗಿದ ಹಿರಿಯ ಚೇತನ ಅವರದು. ಕಿರಾಣಾ ಘರಾಣೆಯ ಆದ್ಯ ಪ್ರವರ್ತಕರೆನಿಸಿದ ಅಬ್ದುಲ್ ಕರೀಂಖಾನ ಅವರು, ಗಂಗೂಬಾಯಿ ಯವರು ಒಂಬತ್ತು ವರ್ಷದ ಬಾಲಿಕೆಯಾಗಿದ್ದಾಗ ಹಾಡಿದ್ದ ಹಾಡನ್ನು ಕೇಳಿ, ಬೆನ್ನುತಟ್ಟಿ 'ಖೂಬ ಗಾವೂ, ಖೂಬಗಾವೊ' ಎಂದು ಮೆಚ್ಚುಗೆಯಿಂದ ಆಡಿದ ಮಾತು ಕೊನೆಯ ವರೆಗೂ ಅಚ್ಚಳಿಯದಂತೆ ಉಳಿದು ಬಂದಿತು.

ಭಾರತದ ಅತ್ಯುನ್ನತ ಸಂಗೀತ ಪ್ರಶಸ್ತಿಯಾಗಿರುವ ತಾನ್‌ಸೇನ ಸಮ್ಮಾನ, ಪದ್ಮ ವಿಭೂಷಣ ಪ್ರಶಸ್ತಿಗಳನ್ನೊಳಗೊಂಡು ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳು ಅವರ ಮಡಿಲಿಗೆ ಬಿದ್ದಿದ್ದರೂ ವರಕವಿ ಬೇಂದ್ರೆಯವರು ನೀಡಿದ 'ಗಾಯನಗಂಗಾ' ಎಂಬ ಬಿರುದು ಗಂಗೂಬಾಯಿಯವರಿಗೆ ಹೆಚ್ಚು ಬೆಲೆಯುಳ್ಳದ್ದಾಗಿತ್ತು. ಇವತ್ತು ಗಂಗಾನದಿ ತನ್ನ ಪರಿಶುದ್ಧತೆಯನ್ನು ಕಳೆದುಕೊಳ್ಳುತ್ತಿರುವಾಗ ನಮ್ಮ ಕನ್ನಡನಾಡಿನ 'ಗಾಯನಗಂಗಾ' ತನ್ನ ಪಾವಿತ್ರ್ಯವನ್ನು ಪರಿಶುದ್ಧತೆಯನ್ನು ಕಾಪಾಡಿಕೊಂಡು ಭಾವ ಹಾಗೂ ಸ್ವಭಾವದಿಂದ ಇಂದಿಗೂ ಆದರ್ಶಪ್ರಾಯವಾಗಿ ಕಂಗೊಳಿಸುತ್ತಿದೆ.

ಸಂಗೀತ ಕೇವಲ ಶಾಸ್ತ್ರವಾಗದೆ, ಸಾಧನೆಯ ಪ್ರದರ್ಶನವಾಗದೆ, ಬೌದ್ಧಿಕ ಕಸರತ್ತಾಗದೆ ಲಲಿತ ಕಲೆಯಾದಾಗ ಮಾತ್ರ ಎಲ್ಲರ ಹೃದಯವನ್ನು ತಟ್ಟಬಲ್ಲದು, ವಿಶ್ವವ್ಯಾಪಿಯಾಗಿ ನಿಲ್ಲಬಲ್ಲದು. ಹಾಗೆ ಗಾಯನಕಲೆಯನ್ನು ಮುಕ್ತಿಯ ಸೋಪಾನವಾಗಿ ಮಾಡಿದವರಲ್ಲಿ ಪ್ರಥಮ ಪಂಕ್ತಿಯಲ್ಲಿರುವವರು ಗಂಗೂಬಾಯಿಯವರು. ಒಂದು ಅರ್ಥದಲ್ಲಿ ಕಲೆಗಳಲ್ಲೆಲ್ಲ ಸಂಗೀತವೇ ಅತ್ಯಂತ ಪ್ರಾಚೀನವಾದದ್ದು ಮತ್ತು ಪ್ರಭಾವಶಾಲಿ ಯಾದದ್ದು. ಭಾರತದಲ್ಲಿ ಅದನ್ನೊಂದು ಅಲೌಕಿಕ ವಿದ್ಯೆಯೆಂಬ ದೈನಿಕವಾದ ಹಿನ್ನೆಲೆಯಲ್ಲಿ ಬೆಳೆಸಿಕೊಂಡು ಬರಲಾಗಿದೆ. ಸಂಗೀತ ಕ್ಷೇತ್ರದಲ್ಲಿ ಯುಗಯುಗಾಂತರಗಳಲ್ಲಿ ಕಷ್ಟಸಾಧ್ಯವಾದ ಸಾಧನೆಯನ್ನು ಕರ್ನಾಟಕ ತನ್ನ ಶ್ರೇಷ್ಠ ಗಾಯಕರ ಮೂಲಕ ಒಂದೇ ಶತಮಾನದಲ್ಲಿ ಮಾಡಿ ತೋರಿಸಿದ್ದು ಅಚ್ಚರಿಗೊಳಿಸುವಂಥದ್ದು.

ನಮ್ಮಲ್ಲಿ ಉನ್ನತಮಟ್ಟದ ಅನೇಕ ವಾಗ್ಮಿಗಳಿರಬಹುದು. ಆದರೆ ಗಂಗೂಬಾಯಿ ಯವರಂತೆ ಅಪ್ಪಟ ಧಾರವಾಡ ಕನ್ನಡದಲ್ಲಿ, ಸಹಜವಾದ ಆತ್ಮೀಯ ಶೈಲಿಯಲ್ಲಿ ಮಾತನಾಡಬಲ್ಲವರು ವಿರಳ. ಅವರ ಮಾತುಕತೆ, ಉಡುಗೆ ತೊಡುಗೆ, ಊಟ-ಉಪಚಾರ, ಆಚಾರ-ವಿಚಾರ ಎಲ್ಲವೂ ನೇರ ಹಾಗೂ ಸರಳ. ಕೃತ್ರಿಮತೆಗೆ ಅಲ್ಲಿ ಎಳ್ಳಷ್ಟು

ಸ್ಥಾನವಿಲ್ಲ. ದೇಶದಾದ್ಯಂತ ಖ್ಯಾತಿ ಪಡೆದಿದ್ದರೂ ತಾಯ್ನೆಲದ ಬಾಂಧವ್ಯವನ್ನು ಅವರು ಬಿಗಿಯಾಗಿಯೇ ಇಟ್ಟುಕೊಂಡಿದ್ದರು. ಈ ನೆಲದ ಸೊಬಗನ್ನು ಸೊಗಸನ್ನು ಎಲ್ಲೆಡೆ ಪಸರಿಸಿದರು. ದೇಶದ ಯಾವುದೇ ಮೂಲೆಗೆ ಹೋದರೂ ಸಂಗೀತ ಕಛೇರಿ ಮುಗಿದ ಕೂಡಲೆ ಅವರಿಗೆ ಹುಬ್ಬಳ್ಳಿಯ ರೈಲು ಹತ್ತುವ ತನಕ. ಮಾನವತೆಗೆ ಆದ್ಯತೆ ನೀಡಿದ ಗಂಗೂಬಾಯಿಯವರು ನಮ್ಮ ದೇಶದ ಒಂಬತ್ತು ಪ್ರಧಾನಿಗಳಿಂದ ಸನ್ಮಾನ ಪಡೆದ ಹೆಗ್ಗಳಿಕೆಯನ್ನು ತಮ್ಮದಾಗಿಸಿಕೊಂಡವರು.

ಇತ್ತೀಚೆಗೆ ಅಪೂರ್ವ ಸಂಗ್ರಹಾಲಯವೊಂದು ಅವರ ಮನೆ 'ಗಂಗಾಲಹರಿ'ಯಲ್ಲಿ ರೂಪು ತಳೆದಿದೆ. ಈ 'ಭಾರತೀಯ ಶಾಸ್ತ್ರೀಯ ಸಂಗೀತ ವಸ್ತು ಸಂಗ್ರಾಹಾಲಯ' ದೇಶ ವಿದೇಶಗಳ ಸಂಗೀತಕಲಾಸಕ್ತರಿಗೆ ಅಪರೂಪದ ಆಕರ್ಷಣೆ. ಗುರುಕುಲ ಪದ್ಧತಿಯ ಶಾಸ್ತ್ರೀಯ ಸಂಗೀತ ಕೇಂದ್ರವೊಂದು ರಾಜ್ಯಸರಕಾರದ ಸಂಪೂರ್ಣ ನೆರವಿನಿಂದ ಹುಬ್ಬಳ್ಳಿಯಲ್ಲಿ ರೂಪುಗೊಂಡು ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ ಧಾರವಾಡದಲ್ಲಿ ಅವರು ಜನಿಸಿದ ಮನೆ ನವೀಕರಣಗೊಂಡು ಸಂಗೀತಾಸಕ್ತರ ಪ್ರವಾಸೀತಾಣವಾಗಿ ಪರಿಣಮಿಸಿದೆ. ನಾಡು-ನುಡಿಗೆ ಸಂಬಂಧಪಟ್ಟ ಹಲವಾರು ಚಳವಳಿಗಳಿಗೆ ಅವರು ನೈತಿಕ ಬೆಂಬಲ ನೀಡಿ, ಜನರ ನೋವಿಗೆ ಸ್ಪಂದಿಸಿದ್ದನ್ನು ಮರೆಯುವಂತಿಲ್ಲ.

ಇಂದು ಅವರು ಭೌತಿಕವಾಗಿ ನಮ್ಮಿಂದ ಕಣ್ಮರೆಯಾಗಿದ್ದಾರೆಂದು ಹೇಳಲೂ ಬಾಯಿ ಬರುತ್ತಿಲ್ಲ. ಯಾಕೆಂದರೆ ಅವರ ದಿವ್ಯ ಸಂಗೀತ, ಅಂತಃಕರಣದ ಮಾತು, ಮುಗ್ಧಮುಖ ನಮ್ಮ ಕಣ್ಣ ಮುಂದೆ ಅಚ್ಚಳಿಯದೆ ಕಟ್ಟಿದಂತಿವೆ.

('ತರಂಗ' ವಾರಪತ್ರಿಕೆ ೨೦೦೯)

ವಿದ್ವನ್ಮಣಿ ಡಾ. ಕೆ. ಕೃಷ್ಣಮೂರ್ತಿ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ (ಈಗ ಪ್ರಸಾರಾಂಗ) ೧೯೫೨ರಲ್ಲಿ ಪ್ರಾರಂಭವಾದಾಗ ನಾನು (ಪ್ರಥಮ ನಿರ್ದೇಶಕನಾಗಿ) ಹಾಕಿಕೊಂಡ ಯೋಜನೆಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಉಪನ್ಯಾಸ ಶಿಬಿರಗಳ ಏರ್ಪಾಡು ಹಾಗೂ ಆ ಉಪನ್ಯಾಸಗಳನ್ನು ಕಿರು ಹೊತ್ತಿಗೆಯಾಗಿ ಸುಲಭ ಬೆಲೆಯಲ್ಲಿ ಪ್ರಕಟಿಸುವದೂ ಅವುಗಳಲ್ಲಿ ಒಂದಾಗಿತ್ತು. ಹೀಗೆ ಪ್ರಾರಂಭವಾದ ಉಪನ್ಯಾಸ ಗ್ರಂಥಮಾಲೆಯ ಮೊದಲ ಪುಸ್ತಕವೇ ಡಾ. ಕೆ. ಕೃಷ್ಣಮೂರ್ತಿಯವರ 'ಭವಭೂತಿ' ಕಿರುಹೊತ್ತಿಗೆ (೧೯೫೩). ಆಗ ಅವರು ಕುಮಟಾ ಕ್ಯಾನರಾ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದರು. ಆಗ ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ತೀ.ನಂ. ಶ್ರೀಕಂಠಯ್ಯನವರೊಡನೆ ಚರ್ಚಿಸಿ ಹಸ್ತಪ್ರತಿಯನ್ನು ಕೃಷ್ಣಮೂರ್ತಿಯವರು ನನ್ನ ಕೈಗಿತ್ತರು. ಅಂದಿನಿಂದಲೇ ಅವರ ಪರಿಚಯ ಸ್ನೇಹವಾಗಿ ಪರಿಣಮಿಸಿ ಉದ್ದಕ್ಕೂ ಆತ್ಮೀಯವಾಗಿ ಬೆಳೆದುಕೊಂಡು ಬಂದಿತು. ಮುಂದೆ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗವನ್ನು ಅವರು ಸೇರಿಕೊಂಡ ಮೇಲೆ ಅದು ಪೂರ್ತಿ ಸ್ಥಾನಮಾನ ಪಡೆಯುವಂತೆ ಬೆಳೆಸಿದ ಶ್ರೇಯಸ್ಸಿಗೆ ಪಾತ್ರರಾದರು.

ಸಂಸ್ಕೃತ, ಕನ್ನಡ ಹಾಗೂ ಇಂಗ್ಲಿಷ್ ಮೂರೂ ಭಾಷಾ ಸಾಹಿತ್ಯದಲ್ಲಿ ಪರಿಣತಿ ಪಡೆದಿದ್ದ ಅವರು ಒಳ್ಳೆಯ ಲೇಖಕರಾಗಿ, ಸಂಶೋಧಕರಾಗಿ ಖ್ಯಾತಿ ಪಡೆದಿದ್ದರು. ನಮ್ಮ ವಿಶ್ವವಿದ್ಯಾಲಯದ ಜರ್ನಲ್ ಒಳಗೊಂಡಂತೆ ಬೇರೆ ಬೇರೆ ವಿದ್ವತ್ ಪತ್ರಿಕೆಗಳಲ್ಲಿ ಅವರ ಲೇಖನಗಳು ಆಗಾಗ ಪ್ರಕಟ ಗೊಳ್ಳುತ್ತಿದ್ದವು. ಪಿ.ವಿ. ಕಾಣೆ ಹಾಗೂ ವೇಲಂಕರರಿಂದ ಪರಿವೀಕ್ಷಣೆಗೊಂಡು ಮೆಚ್ಚುಗೆ ಪಡೆದ "ಆನಂದವರ್ಧನನ ಧ್ವನ್ಯಾಲೋಕ ಹಾಗೂ ಖಂಡನಕಾರರು'

ಪ್ರೌಢಪ್ರಬಂಧವೆನಿಸಿಕೊಂಡಿತ್ತು. ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ.ಡಿ.ಸಿ. ಪಾವಟೆಯವರು ಜರ್ಮನಿಗೆ ಹೋದಾಗ ಅಲ್ಲಿಯ ವಿದ್ವಾಂಸರು ಡಾ.ಕೆ. ಕೃಷ್ಣಮೂರ್ತಿಯವರ ವಿದ್ವತ್ತನ್ನು ಪ್ರಶಂಸಿಸಿದ್ದನ್ನು ಕೇಳಿದರಂತೆ. ಅವರು ಮರಳಿ ಧಾರವಾಡಕ್ಕೆ ಬಂದಾಗ ಕೃಷ್ಣಮೂರ್ತಿಯವರನ್ನು ಕರೆದು, "ನಿಮ್ಮಿಂದ ನಮ್ಮ ವಿಶ್ವವಿದ್ಯಾಲಯಕ್ಕೆ ಮನ್ನಣೆ, ಗೌರವ ಬಂದಿದೆ. ವಿದ್ಯಾರ್ಥಿಗಳಿರಲಿ, ಇಲ್ಲದಿರಲಿ ಸಂಸ್ಕೃತ ವಿಭಾಗವನ್ನು ಮುಂದುವರಿಸು" ಎಂದು ಹೇಳಿದರಂತೆ. ಡಾ. ಪಾವಟೆಯವರು ಮೂರು ಅವಧಿಯವರೆಗೆ ವಿಶ್ವವಿದ್ಯಾಲಯದ ಕುಲಪತಿಯಾಗಿ ಅದರ ಸರ್ವತೋಮುಖ ಬೆಳವಣಿಗೆಗೆ ಕಾರಣರಾದರು. ಕೊನೆಯಲ್ಲಿ ಪಂಜಾಬದ ರಾಜ್ಯಪಾಲರಾಗಿ ಅವರು ಹೋಗುವ ಮುನ್ನ ಡಾ. ಕೃಷ್ಣಮೂರ್ತಿಯವರಿಗೆ ಪ್ರಾಧ್ಯಾಪಕರಾಗಿ ಬಡತಿ ನೀಡಿದರು. ಡಾ.ಕೃಷ್ಣಮೂರ್ತಿಯವರು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದಾಗ "ನಿಮಗೆ ಇದು ಎಂದೊ ಸಿಗಬೇಕಾಗಿತ್ತು. ಇದೊಂದು ರೀತಿ ಮುದುಕಿಗೆ ಆಭರಣ ಕೊಟ್ಟಂತೆ" ಎಂದು ವಿನೋದವಾಗಿ ನುಡಿದರಂತೆ. ಇಂಥ ಸಂಗತಿಗಳನ್ನೆಲ್ಲ ಕೃಷ್ಣಮೂರ್ತಿಯವರು ಆತ್ಮೀಯ ಸ್ನೇಹಿತನೆನ್ನಿಸಿಕೊಂಡ ನನ್ನೊಡನೆ ಹಂಚಿಕೊಳ್ಳುತ್ತಿದ್ದರು.

ನಮ್ಮ ಪ್ರಸಾರಾಂಗದಿಂದ ಮತ್ತು ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದಿಂದ ಕೃಷ್ಣಮೂರ್ತಿಯವರ ಅನೇಕ ಕೃತಿಗಳು ಪ್ರಕಟಗೊಂಡಿದ್ದು ಅನೇಕ ಮುದ್ರಣಗಳನ್ನು ಕಂಡಿವೆ. ಕುಂತಕನ ಪ್ರಾಚೀನ ಕೃತಿ 'ವಕ್ರೋಕ್ತಿಜೀವಿತ'ವನ್ನು ಇಂಗ್ಲಿಷಿಗೆ ಭಾಷಾಂತರಿಸಿ, ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟುದನ್ನು ಪ್ರಕಟಣೆಗೆ ನಾವು ಸಿದ್ಧಪಡಿಸುತ್ತಿದ್ದಂತೆಯೇ ದಿಲ್ಲಿಯ ಗಣ್ಯಪ್ರಕಾಶಕ ಹಾಗೂ ಪುಸ್ತಕ ಮಾರಾಟಗಾರರಾದ ಮೋತಿಲಾಲ್ ಬನಾರಸಿದಾಸ್ ಸಂಸ್ಥೆ ಅದರ ಐದುನೂರು ಪ್ರತಿಗಳಿಗಾಗಿ ಲಿಖಿತ ಬೇಡಿಕೆಯನ್ನು ಮುಂಗಡವಾಗಿ ಕೊಟ್ಟಿದ್ದುಂಟು. ಮೈಸೂರು ವಿಶ್ವವಿದ್ಯಾಲಯ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದಲೂ ಕೃಷ್ಣಮೂರ್ತಿಯವರ ಕೆಲವು ಮಹತ್ವದ ಗ್ರಂಥಗಳು ಪ್ರಕಟವಾಗಿವೆ. ಮೈಸೂರಿನ ಶಾರದಾಮಂದಿರದ ಎಚ್.ಎಂ. ಶಂಕರನಾರಾಯಣರಾವ್ ಅವರಂತೂ ತಮ್ಮ ಪ್ರಕಾಶನದ ಪ್ರಾರಂಭದಿಂದ ಕೊನೆಯವರೆಗೂ ಇವರ ಸ್ವತಂತ್ರ ಹಾಗೂ ಅನುವಾದಿತ ನಾಟಕ ಕೃತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊರತಂದದ್ದನ್ನು ಇಲ್ಲಿ ನೆನೆಯಬಹುದು. ಅಭಿನಂದನ ಗ್ರಂಥಗಳಿಗೆ, ವಿಶೇಷ ಸಂಚಿಕೆಗಳಿಗೆ, ಸ್ಮರಣಗ್ರಂಥಗಳಿಗೆ ಅವರು ಅನೇಕ ವಿಶೇಷ ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷಿಗಳಲ್ಲಿ ಬರೆದಿದ್ದು ಅವೆಲ್ಲ ಗ್ರಂಥರೂಪದಲ್ಲಿ ಬರಬೇಕಾಗಿದೆ. ಕೃಷ್ಣಮೂರ್ತಿಯವರ ಪ್ರತಿಭೆ ಲುಪ್ತವಾಗಿ ಹೋಗದೆ, ಮಗಳು ಡಾ.ಕೆ. ಲೀಲಾಪ್ರಕಾಶ್ ಅವರಲ್ಲಿ ಪರಿಸ್ಫುಟವಾಗಿರುವುದು ತುಂಬ ಸಂತೋಷದ ಸಂಗತಿ. ಮೈಸೂರಿನಲ್ಲಿ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಿ ಅದರ ಸ್ಥಾಪಕ ನಿರ್ದೇಶಕಿಯಾಗಿರುವುದು ಇದಕ್ಕೆ ನಿದರ್ಶನವಾಗಿದೆ.

ಪ್ರಚಾರದ ಅಪೇಕ್ಷೆ, ಸನ್ಮಾನದ ಗೊಡವೆ ಅವರಲ್ಲಿ ಎಳ್ಳಷ್ಟೂ ಇರಲಿಲ್ಲ. ತಾನಾಯಿತು ತಮ್ಮ ಕೆಲಸವಾಯಿತು. ಕರ್ಮಯೋಗಿಯಂತೆ ಅಹರ್ನಿಶಿ ಅಧ್ಯಯನಶೀಲರಾಗಿ

ಬರವಣಿಗೆಯಲ್ಲಿ ತೊಡಗಿರುತ್ತಿದ್ದರು. ತಮ್ಮ ಈ ಬಗೆಯ ದುಡಿಮೆಯಲ್ಲಿಯೇ ಪುತ್ರಶೋಕವನ್ನು ಮರೆಯಲೆತ್ನಿಸುತ್ತ ಆರ್ಷಸಂಪ್ರದಾಯದ ಅಭಿಜಾತ ಸಾಹಿತ್ಯವನ್ನು ಉನ್ನತ ಮಟ್ಟಕ್ಕೇರಿಸಿದ ಮಹಾಸಾಧಕರು ಅವರು. ರಾಜ್ಯಸರ್ಕಾರ ಕೊಡಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನಮ್ಮೀರ್ವರಿಗೂ ಒಂದೇ ವರ್ಷ (೧೯೮೯) ದೊರೆತದ್ದು ಒಂದು ಯೋಗಾಯೋಗ. ಈ ಮೊದಲೇ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೭೩), ಸಂಸ್ಕೃತ ಕೃತಿಗಾಗಿ ರಾಷ್ಟ್ರಪ್ರಶಸ್ತಿ (೧೯೭೮)ಗಳು ದೊರೆತಿದ್ದವು. ಅವರ ವಿದ್ವತ್ತಿಗೆ ತಕ್ಕ ಗೌರವ ಎಲ್ಲೆಡೆಯಿಂದಲೂ ಸಂದಿದೆ. ಅಖಿಲಭಾರತ ಪ್ರಾಚ್ಯವಿದ್ಯಾ ಸಮ್ಮೇಳನದ ಅಧ್ಯಕ್ಷ ಸ್ಥಾನ (೧೯೯೭) ಹಾಗೂ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನದ ಅಧ್ಯಕ್ಷಸ್ಥಾನ (೧೯೯೮)ಗಳನ್ನು ನೀಡಿ ವಿದ್ವತ್ ಪ್ರಪಂಚ ಅವರನ್ನು ಗೌರವಿಸಿದೆ. ನಿವೃತ್ತರಾದ ಮೇಲೆ ಸತ್ಯಸಾಯಿ ವಿಶ್ವವಿದ್ಯಾಲಯ ತನ್ನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ಪೀಠದ ಮುಖ್ಯಸ್ಥರನ್ನಾಗಿ ಮಾಡಿ ಅವರ ಯೋಗ್ಯತೆಗೆ ತಕ್ಕ ಮನ್ನಣೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಡಾ. ಕೆ. ಕೃಷ್ಣಮೂರ್ತಿಯವರು ವಿದ್ಯಾರ್ಥಿ ದೆಸೆಯಿಂದ ತಮ್ಮ ಕ್ಷೇತ್ರದಲ್ಲಿ ಕೊನೆಯವರೆಗೂ ಪ್ರಥಮ ಶ್ರೇಣಿಯನ್ನು ಕಾಪಾಡಿಕೊಂಡು ಬಂದು ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿದರು.

ಸಂಸ್ಕೃತ, ಕನ್ನಡ, ಇಂಗ್ಲಿಷ್–ಈ ಮೂರೂ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ಪ್ರಾವೀಣ್ಯತೆಯನ್ನು ಪಡೆದಿದ್ದುದನ್ನೂ ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಅವರು ರಚಿಸುತ್ತಿದ್ದ ಕಂದ ಪದ್ಯಗಳು ಸಂಸ್ಕೃತ ಹಾಗೂ ಕನ್ನಡದ ಲಲಿತಮಿಶ್ರಣದಿಂದ ಮನೋಹರವಾಗಿರುತ್ತಿದ್ದವು. ಸಂಸ್ಕೃತದಿಂದ ನಾಟಕ ಇತ್ಯಾದಿ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಮೂಲ ಸಂಸ್ಕೃತ ಶ್ಲೋಕಗಳನ್ನು ಕನ್ನಡಕ್ಕೆ ಪದ್ಯರೂಪದಲ್ಲಿಯೇ ಸೊಗಸಾಗಿ ತರುತ್ತಿದ್ದರು. ಡಾ. ದೇ. ಜವರೇಗೌಡರು 'ಗದ್ಯಶೈಲಿ' ಎಂಬ ತಮ್ಮ ಉತ್ಕೃಷ್ಟ ಕೃತಿಯಲ್ಲಿ ಡಾ. ಕೃಷ್ಣಮೂರ್ತಿಯವರ ಭಾಷಾಶೈಲಿಯನ್ನು ಹೀಗೆ ಗುರುತಿಸಿದ್ದಾರೆ: "ಸಂಸ್ಕೃತಾಂಗ್ಲ ಕನ್ನಡ ಸಾಹಿತ್ಯ ಸಾಗರಗಳಲ್ಲಿ ಸಲೀಲವಾಗಿ ಈಜಾಡಬಲ್ಲ ಕೆ.ಕೃಷ್ಣಮೂರ್ತಿಯವರ ಪಾಂಡಿತ್ಯ ಹಾಗೂ ಲೇಖನ ಸಾಮರ್ಥ್ಯ ಅನ್ಯಾದೃಶವಾದುದು. ಅವರ ಭಾಷೆಯಲ್ಲಿ ಕಂಡುಬರುವ ಸಂಸ್ಕೃತ ಪ್ರಾಚುರ್ಯದ ಹೆಚ್ಚಳ ಸಹಜ ಮಾತ್ರವಲ್ಲ, ಕಮನೀಯವಾದದ್ದು. ಕನ್ನಡಕ್ಕೆ ಹೊರೆಯಾಗದಂತೆ ಹೆರವಾಗದಂತೆ ಹೊಂದಿ ಕೊಳ್ಳುವಂತೆ ಸಂಸ್ಕೃತಪದಗಳನ್ನು ಬಳಸುವುದರಲ್ಲಿ ಅವರು ನಿಸ್ಸೀಮರು. ಸೂಕ್ಷ್ಮಾತಿ ಸೂಕ್ಷ್ಮ ಭಾವದಿಂದ ಹಿಡಿದು ಗಹನಸಂಗತಿಯವರೆಗೆ ಅದೆಷ್ಟೇ ಕ್ಲಿಷ್ಟವಾಗಿರಲಿ. ಸುಲಭ ಗ್ರಾಹ್ಯವಾಗುವಂತೆ ರೂಪಿಸಬಲ್ಲ ಸಾಮರ್ಥ್ಯದಿಂದಾಗಿ ಅವರ ಶೈಲಿ ಸರಳತೆ, ಪ್ರೌಢತೆಗಳೆರಡನ್ನೂ ಮೈಗೂಡಿಸಿಕೊಂಡಿದೆ."

ಡಾ. ಕೃಷ್ಣಮೂರ್ತಿಯವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮನವರು ಮನೆಯ ಕೆಲಸಗಳನ್ನೆಲ್ಲ ತಾವೇ ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಇವರು ತಮ್ಮ ವೇಳೆಯನ್ನೆಲ್ಲ ಅಭ್ಯಾಸಕ್ಕೆ ಮೀಸಲಿಡಲು ಸಾಧ್ಯವಾಯಿತು. ಶ್ರೀಮತಿಯವರ ಆತಿಥ್ಯದ ಸವಿಯನ್ನು ನಾನು

ಸಾಕಷ್ಟು ಸಲ ಅನುಭವಿಸಿದ್ದೇನೆ. ಹಬ್ಬಹರಿದಿನಗಳನ್ನು ಸಾಂಪ್ರದಾಯಿಕ ಸಂಭ್ರಮದಿಂದ ಅವರು ಆಚರಿಸುತ್ತಿದ್ದರು. ಸ್ವತಃ ಕೃಷ್ಣಮೂರ್ತಿಯವರ ತಾಯಿ ಗೌರಮ್ಮನವರು ತಮ್ಮ ಇಳಿವಯಸ್ಸಿನಲ್ಲಿಯೂ ರುಚಿ ರುಚಿಯಾಗಿ ತಯಾರಿಸುತ್ತಿದ್ದ ಚಕ್ಕುಲಿ, ಕೋಡಬಳೆ, ಮಿಠಾಯಿ, ಉಂಡಿ, ತೇಂಗೊಳಲು ಮೊದಲಾದ ತಿಂಡಿತಿನಿಸುಗಳನ್ನು ಗೋಕುಲಾಷ್ಟಮಿಯ ದಿನ ನಾನು, ಕೃಷ್ಣಮೂರ್ತಿಯವರ ಇಷ್ಟಮಿತ್ರರೊಡನೆ ಅನೇಕ ಸಲ ಸವಿದಿದ್ದೇನೆ. ಶುದ್ಧ ತುಪ್ಪದಲ್ಲಿಯೇ ತಯಾರಿದ ತಿಂಡಿಗಳ ರುಚಿಯನ್ನಂತೂ ಬೇರೆ ಬಣ್ಣಿಸಬೇಕಿಲ್ಲ. ಕೃಷ್ಣಮೂರ್ತಿಯವರು ಮನೆಗೆ ಬಂದ ಅತಿಥಿ ಅಭ್ಯಾಗತರನ್ನು ಉಪಚರಿಸುತ್ತ ವಿದ್ವಾಂಸ ಮಿತ್ರರ ಸಮಸ್ಯೆ – ಸಂದೇಹಗಳನ್ನು ದೂರೀಕರಿಸಿ ಪರಿಹಾರವನ್ನು ನೀಡುವುದರಲ್ಲಿಯೂ ಮುಂದಾಗಿರುತ್ತಿದ್ದರು. ಕವಿವರ್ಯ ಬೇಂದ್ರೆಯವರು ತಮ್ಮ ಬೆಳಗಿನ ವಿಹಾರದಲ್ಲಿ ಆಗಾಗ ಡಾ. ಕೃಷ್ಣಮೂರ್ತಿಯವರ ಮನೆಗೆ ಬಂದು ದೀರ್ಘಚರ್ಚೆಯಲ್ಲಿ ತೊಡಗಿರುತ್ತಿದ್ದುದನ್ನು ನಾನು ಕಂಡಿದ್ದೇನೆ. ಇದರಿಂದಾಗಿ ಕೃಷ್ಣಮೂರ್ತಿಯವರು ವಿಶ್ವವಿದ್ಯಾಲಯದಲ್ಲಿ ತಮ್ಮ ಪಾಠ ಪ್ರವಚನಗಳನ್ನು ತಪ್ಪಿಸಿಕೊಂಡು ತೊಳಲಾಡಿದ್ದೂ ಉಂಟು.

ಡಾ. ಕೃಷ್ಣಮೂರ್ತಿಯವರು ಕುಟುಂಬವತ್ಸಲರು. ಮನೆಯಲ್ಲಿ ಹೆಣ್ಣುಮಕ್ಕಳ ಪರಿವಾರ ದೊಡ್ಡದು. ಎಲ್ಲರೂ ವಿದ್ಯಾಪಾರಂಗತರಾಗಿ, ಸುಖಪ್ರದ ದಾಂಪತ್ಯ ಜೀವನವನ್ನು ನಡೆಸಿ ಕೊಂಡು ಬಂದಿದ್ದಾರೆ. ಬಹಳ ವರ್ಷದ ಹಿಂದೆಯೇ ಧಾರವಾಡದಲ್ಲಿ ಕಟ್ಟಿದ ಮನೆಯನ್ನೇ ಕೊಂಡು ಮತ್ತೆ ಅದನ್ನು ವಿಸ್ತರಿಸಿ ಇಲ್ಲಿಯ ರೀತಿನೀತಿಗಳಿಗೆ ಒಗ್ಗಿಕೊಂಡು ಕೃಷ್ಣಮೂರ್ತಿ ಯವರ ಬಳಗ · ಇಲ್ಲಿಯ ಸಾಂಸ್ಕೃತಿಕ ವಾತಾವರಣದಲ್ಲಿ ಒಂದಾಗಿಬಿಟ್ಟಿದ್ದರು. ಕೃಷ್ಣಮೂರ್ತಿಯವರು ನಿವೃತ್ತರಾದ ಮೇಲೆ ಅನಿವಾರ್ಯ ಕಾರಣಗಳಿಂದಾಗಿ ಮನಸ್ಸಿಲ್ಲದ ಮನಸ್ಸಿನಿಂದ ಅವರು ಧಾರವಾಡವನ್ನು ಬಿಟ್ಟು ಮೈಸೂರಿಗೆ ಹೋಗಬೇಕಾಯಿತು.

ಕೊನೆಯದಾಗಿ ಒಂದು ಮಾತನ್ನು ನಾನು ಹೇಳಲೇಬೇಕು. ಡಾ. ಕೃಷ್ಣಮೂರ್ತಿ ಯವರ ಪಾಂಡಿತ್ಯ ಹಾಗೂ ವಿದ್ವತ್ತನ್ನು ನಾನು ಮೆಚ್ಚಿಕೊಂಡಂತೆಯೇ ನನ್ನ ಕಾವ್ಯವನ್ನು ಅವರು ವಿಶೇಷವಾಗಿ ಮೆಚ್ಚಿಕೊಂಡಿದ್ದರು. ನನ್ನ ನಾಲ್ಕನೆಯ ಕವನ ಸಂಗ್ರಹ 'ಮಧುಚಂದ್ರ' (೧೯೫೪)ದ ಎರಡನೆಯ ಆವೃತ್ತಿ ೧೯೬೭ರಲ್ಲಿ ಅಚ್ಚಿನಲ್ಲಿದ್ದಾಗ ಡಾ. ಕೃಷ್ಣಮೂರ್ತಿಯವರನ್ನು ಅದಕ್ಕೆ ಮುನ್ನುಡಿ ಬರೆಯಲು ಕೇಳಿಕೊಂಡೆ. (ಮೊದಲ ಆವೃತ್ತಿಗೆ ಮುನ್ನುಡಿಯಿರಲಿಲ್ಲ) ಅವರು ಅದಕ್ಕೆ ತಕ್ಷಣ ಒಪ್ಪಿಕೊಂಡು ೧೪ ಪುಟಗಳ ದೀರ್ಘ 'ರಸಾನುಸಂಧಾನ' (ಮುನ್ನುಡಿಗೆ ಬದಲು)ವನ್ನು ಬರೆದರು. "ಕವಿಗಳನ್ನು ಕುರಿತು ಬರೆಯಲು ಕವಿಗಳಷ್ಟೇ ಅಧಿಕಾರಿಗಳೆಂಬ ಪ್ರಚಲಿತ ಕಟ್ಟಳೆಯನ್ನು ಪಾಲಿಸದೆ, ನನ್ನ ಎರಡು ಮಾತಿಗೆ ಇಲ್ಲಿ ಎಡೆಗೊಟ್ಟ ಕವಿಗಳ ಔದಾರ್ಯ ನಿಜಕ್ಕೂ ಹೆಚ್ಚಿನದಷ್ಟೇ ಅಲ್ಲ, ಇತರರಿಗೆ ಮಾದರಿಯೂ ಆಗಬಹುದೆಂದು ನನ್ನ ಎಣಿಕೆ" ಎಂಬುದಾಗಿ ಭಾವಿಸಿದ ಅವರ ವಿನಯವಂತಿಕೆಯೂ ಸರ್ವಾದರಣೀಯವೆಂದು ನಾನು ಬಗೆದಿದ್ದೇನೆ. ಹಾಗೆಯೇ ತಮ್ಮ ಪಾಂಡಿತ್ಯವನ್ನು ನಿಕಷಕ್ಕೊಡ್ಡುವ ಪ್ರಸಂಗ ಬಂದಾಗ ಅವರು ಅಷ್ಟೇ ನಿಷ್ಠುರವಾಗಿ ವರ್ತಿಸಿದ್ದನ್ನೂ ನಾನು ಕಂಡಿದ್ದೇನೆ.

('ಡಾ. ಕೆ. ಕೃಷ್ಣಮೂರ್ತಿ ಬದುಕು – ಬರಹ' ೨೦೧೪)

ಗೊ.ರು.ಚ.: ನಾನು ಕಂಡಂತೆ

ಬೊಗಸೆಗಂಗಳು, ನೀಳನಾಸಿಕ, ದಾಳಿಂಬದ ದಂತ ಪಂಕ್ತಿ, ತಿದ್ದಿ ತೀಡಿದ ಬೈತಲೆ, ಮಲ್ಲಿಗೆಯಂಥ ಶುಭ್ರವಸನ, ಆತ್ಮೀಯತೆಯ ನರುಗಂಪು – ಇದು ಕಾವ್ಯದಲ್ಲಿ ವರ್ಣಿಸುವ ಹೆಣ್ಣಿನ ಚಿತ್ರವೆಂದು ಬಗೆದರೆ ಅದು ನನ್ನ ತಪ್ಪಲ್ಲ. ಗೊ.ರು.ಚನ್ನಬಸಪ್ಪನವರನ್ನು ನೋಡದಿರುವ ನಿಮ್ಮ ತಪ್ಪು. ಬಣ್ಣವನ್ನು ಪಂಪನ ಮಾತಿನಲ್ಲಿಯೇ ಹೇಳಬೇಕಾದೀತು. 'ಕದಳೀ ಗರ್ಭಶ್ಯಾಮ'. ಅವರನ್ನು ಮೊದಲ ಬಾರಿಗೆ ಕಂಡಾಗ ಈ ಚಿತ್ರ ನನ್ನ ಮನಸ್ಸಿನಲ್ಲಿ ಮೂಡಿದ್ದು. ಈಗಲೂ ಅಷ್ಟೆ; ಆದರೆ ಕಣ್ಣಿಗೆ ಚಾಳೀಸಿನ ಅಲಂಕಾರ, ಬೈತಲೆಯಲ್ಲಿ ಅಲ್ಲಲ್ಲಿ ಬಿಳಿಗೂದಲು. ಒಪ್ಪ ಓರಣದಲ್ಲಾಗಲಿ, ಸರಳತೆ ಸಜ್ಜನಿಕೆಯಲ್ಲಾಗಲಿ ಯಾವ ಬದಲಾವಣೆಯೂ ಇಲ್ಲ.

ಮೂವತ್ಮೂರು ವರ್ಷಗಳ ಹಿಂದೆ (ಫೆಬ್ರವರಿ ೧೯೫೭) ಗಿರಿಯಾಪುರದಲ್ಲಿ (ಚಿಕ್ಕಮಗಳೂರು ಜಿಲ್ಲೆ) ಶಿವಾದ್ವೈತ ಪ್ರಚಾರಕ ಸಮಿತಿಯವರು ನಡೆಸುತ್ತಿದ್ದ ಎಂಟನೆಯ ಶಿವಾನುಭವ ಸಮ್ಮೇಳನದಲ್ಲಿ ಭಾಷಣಕಾರನಾಗಿ ನಾನು ಭಾಗವಹಿಸಿದಾಗ ಗೊ.ರು.ಚ. ಅವರ ಪ್ರಥಮ ಪರಿಚಯ. ಆ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದವರೂ ಅವರೇ. ಅಂದಿನಿಂದ ಇಂದಿನವರೆಗೂ ನಾವು ಮೇಲಿಂದ ಮೇಲೆ ಭೆಟ್ಟಿಯಾಗದಿದ್ದರೂ ಭೆಟ್ಟಿ ಯಾದಾಗೆಲ್ಲ ಅದೇ ಸ್ನೇಹದ ಸುಗಂಧ ಸುಳಿದು, ಸುತ್ತಿಮುತ್ತಿಕೊಳ್ಳುತ್ತದೆ. ಗೊ.ರು.ಚ. ಗೋರೋಚನ (ಒಂದು ಸುಗಂಧ ದ್ರವ್ಯ)ಕ್ಕೆ ಸಮೀಪದ ಒಂದು ಸಂಕ್ಷಿಪ್ತ ಹೆಸರಾಗಿ ನನಗೆ ಗೋಚರಿಸುತ್ತದೆ. ಗಿರಿಯಾಪುರದ ಅಂದಿನ ಆ ಸಭೆಯನ್ನು ನಡೆಸಿದ ರೀತಿ, ಸಮಯ ನಿಷ್ಠೆ, ಹೆಚ್ಚುಕಡಿಮೆಯಾಗದ ಅಚ್ಚುಕಟ್ಟಾದ ಮಾತು, ಆದರಾತಿಥ್ಯ ಒಂದೊಂದೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿವೆ. ಅಂಥ ಸಾವಿರಾರು ಸಭೆ ಸಮ್ಮೇಳನಗಳನ್ನು ಅವರು

ನಡೆಸಿಕೊಂಡು ಬಂದಿದ್ದಾರೆ. ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಯಾವುದೇ ಆಗಿರಲಿ, ತಮ್ಮ ಸಂಘಟನಾ ಚಾತುರ್ಯದಿಂದ ಕಾರ್ಯಶ್ರದ್ಧೆಯಿಂದ ಜನತೆಯ ನಿಕಟ ಸಂಪರ್ಕದಿಂದ ಅದು ಸಫಲವಾಗುವಂತೆ ಅವರು ನೋಡಿಕೊಳ್ಳುತ್ತಾರೆ. ೧೯೬೧ರಲ್ಲಿ ಗಿರಿಯಾಪುರದ ಸಮಿತಿ ಹನ್ನೆರಡನೆಯ ವಾರ್ಷಿಕ ಮಹೋತ್ಸವವನ್ನು ಆಚರಿಸುವ ಕಾಲಕ್ಕೆ ಅನೇಕ ಬೆಲೆಯುಳ್ಳ ಲೇಖನಗಳನ್ನೊಳಗೊಂಡ 'ವಿಭೂತಿ' ಸಂಸ್ಮರಣ ಗ್ರಂಥವೊಂದನ್ನು ಪ್ರಕಟಿಸಿತು. ಅದು ಗೊ.ರು.ಚ. ಸಂಪಾದಿಸಿದ ಮೊದಲ ಗ್ರಂಥವೆಂದು ತೋರುತ್ತದೆ. ಮುಂದೆ ಅದೇ ಬಗೆಯ ಏಳೆಂಟು ಗ್ರಂಥಗಳಿಗೆ ಅವರು ಕಾರಣ ಕರ್ತರಾದದ್ದುಂಟು.

೧೯೬೭ರಲ್ಲಿ ನನಗೆ ಚನ್ನಬಸಪ್ಪನವರ ಇನ್ನೊಂದು ಮುಖದ ಪರಿಚಯವಾಯಿತು. ಅದು ಜಾನಪದದಲ್ಲಿರುವ ಅವರ ವಿಶೇಷ ಆಸಕ್ತಿ. ತರೀಕೆರೆಯಲ್ಲಿ ಮೊದಲ ಬಾರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ನೆರವೇರಿದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಪ್ರೇರಕಶಕ್ತಿಯಾಗಿ, ಕಾರ್ಯದರ್ಶಿಯಾಗಿ ಅವರು ಮಾಡಿದ ಕೆಲಸ ಅಪೂರ್ವವಾಗಿದ್ದಿತು. ಅವರ ಕೋರಿಕೆಯಂತೆ ಸಮ್ಮೇಳನದ ಸಾಹಿತ್ಯ ಗೋಷ್ಠಿಯಲ್ಲಿ ನಾನೊಂದು ಪ್ರಬಂಧವನ್ನು ('ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ') ಮಂಡಿಸಿದೆ. ಅದೂ ಅಲ್ಲದೆ, ಕವಿವರ ಬೇಂದ್ರೆಯವರು ಆ ಸಮ್ಮೇಳನದ ಅಧ್ಯಕ್ಷರು. ಅನಾರೋಗ್ಯದ ಮೂಲಕ ಅವರು ಸಮ್ಮೇಳನಕ್ಕೆ ಬಾರದಿದ್ದರೂ ತಮ್ಮ ಭಾಷಣವನ್ನು ನನ್ನ ಕೈಯಲ್ಲಿ ಕೊಟ್ಟು ಕಳಿಸಿದ್ದರು. ಚನ್ನಬಸಪ್ಪನವರಿಗೆ ಅದನ್ನು ತಲುಪಿಸಿದೆ. 'ಬೇಂದ್ರೆಯವರ ಪರವಾಗಿ ಅವರ ಭಾಷಣವನ್ನು ಸಭೆಯಲ್ಲಿ ನೀವೇ ಓದಬೇಕು' ಎಂದು ಅವರು ಒತ್ತಾಯದಿಂದ ಆ ಕೆಲಸವನ್ನು ನನಗೆ ವಹಿಸಿಬಿಟ್ಟರು. ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ನೆರೆದಿದ್ದ ಪ್ರಚಂಡ ಜನ ಸಮೂಹ ಬೇಂದ್ರೆ ಯವರ ಗೈರುಹಾಜರಿಯಲ್ಲಿ ಅವರ ಭಾಷಣವನ್ನು ಶಾಂತ ರೀತಯಿಂದ ಆಲಿಸಿತು. ನಾನು ಅಗ್ನಿದಿವ್ಯದಿಂದ ಪಾರಾದೆ ಎನಿಸಿತು. ಆ ವರ್ಷದ ಕೊನೆಯಲ್ಲಿಯೇ ಸಂಸ್ಮರಣ ಗ್ರಂಥವೂ ಪ್ರಕಟವಾಯಿತು. ಚನ್ನಬಸಪ್ಪನವರೇ ಅದರ ರೂವಾರಿ ಎಂದು ಬೇರೆ ಹೇಳಬೇಕಿಲ್ಲ. ಐವತ್ತಾರು ಜನ ಲೇಖಕರ ಅಮೂಲ್ಯ ಲೇಖನಗಳನ್ನೊಳಗೊಂಡ ೮೩೫ ಪುಟಗಳ ಬೃಹತ್ ಗ್ರಂಥ 'ಹೊನ್ನ ಬಿತ್ತೇವು ಹೊಲಕೆಲ್ಲ!' ಆಮೇಲೆ ಕನ್ನಡ ನಾಡಿನ ತುಂಬ ನಡೆದ ಜಾನಪದದ ಸುಗ್ಗಿಗೆ ಅಂದಿನ ಹದವಾದ ಬಿತ್ತನೆಯೇ ಕಾರಣವಾಯಿತೆಂದರೆ ತಪ್ಪಾಗದು. 'ಕರ್ನಾಟಕ ಜನಪದ ಕಲೆಗಳು' ಅವರಿಂದಲೇ ಸಂಪಾದನೆಗೊಂಡು ಸಾಹಿತ್ಯ ಪರಿಷತ್ತಿನಿಂದ ೧೯೭೭ರಲ್ಲಿ ಪ್ರಕಟವಾದಾಗ ಈ ರೀತಿಯಲ್ಲಿ ಅದು ಮತ್ತೊಂದು ಮೈಲು ಗಲ್ಲಾಗಿ ಪರಿಣಮಿಸಿತು. 'ಗ್ರಾಮ ಜ್ಯೋತಿ' (ಕೆ.ಆರ್. ಲಿಂಗಪ್ಪ ಅಭಿನಂದನ ಗ್ರಂಥ)ವನ್ನು ಅವರು ಬೆಳಗಿದಾಗ ಆ ಕ್ಷೇತ್ರದಲ್ಲಿ ಮತ್ತಷ್ಟು ಹೊಸ ಫಸಲು ಬರುವಂತಾಯಿತು.

ಹಲವಾರು ಸ್ವಂತ ಕೃತಿ ರಚನೆಯ ಜೊತೆಗೆ ಚಿತ್ರರಂಗ, ಪತ್ರಿಕಾ ಕ್ಷೇತ್ರಕ್ಕೂ ಅವರ ಸೇವೆ ಸಂದಿದೆ. ಸದಾ ಕ್ರಿಯಾಶೀಲರಾಗಿರುವ ಅವರು ತಮ್ಮ ನಿಸ್ವಾರ್ಥ ಸೇವೆಯಿಂದ ಎಲ್ಲರಿಗೂ

ಅಚ್ಚುಮೆಚ್ಚು. ಕೆಲಸದಿಂದ ನಿವೃತ್ತರಾಗಿದ್ದರೂ ಅನೇಕ ಸಂಘ ಸಂಸ್ಥೆಗಳಿಗೆ ಅವರು ನಿವೃತ್ತರಾಗುವುದು ಬೇಕಾಗಿಲ್ಲ. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಆ ಮೇಲೆ ಅಧ್ಯಕ್ಷರಾಗಿರುವುದು ಅವರ ಅನುಭವದ ಸದುಪಯೋಗಕ್ಕೆ ಒದಗಿರುವ ಒಂದು ದೊಡ್ಡ ಅವಕಾಶವೆನ್ನಬಹುದು.

ಹೊಟ್ಟೆಯೊಳಗಿನ ಹಾಡ ಬಿಟ್ಟು ಬಿಡದಲೆ ಹಾಡಿ
ಮುಟ್ಟಿಸಬೇಕ ಕಲಿತ ರುಣವ, ಇಲದಿರಕ
ಹಾಡ ಹಿಂಗ್ಯಾವ ಬಾಯಾಗ

ಜನಪದ ಕವಿಗಳು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡದ್ದು ಇಂಥ ಕರ್ತವ್ಯ ನಿಷ್ಠೆಯಿಂದ ಕೂಡಿದ ಸಾಮಾಜಿಕ ಕಳಕಳಿಯಿಂದ, ಗೊ.ರು. ಚನ್ನಬಸಪ್ಪನವರಿಗೆ ಇಂದು ರಾಜ್ಯಮಟ್ಟದಲ್ಲಿ ಅಭಿನಂದನ ಸಮಾರಂಭ ನಡೆಯುತ್ತಿರುವುದು ನಾಡಿನ ಜನ ಅವರಿಗೆ ತಮ್ಮ ಋಣ ಮುಟ್ಟಿಸುತ್ತಿರುವುದರ ದ್ಯೋತಕವೆಂದು ನಾನು ಭಾವಿಸಿದ್ದೇನೆ.

ಈಚಿನ ಎರಡು ದಶಕಗಳಿಗೂ ಮಿಕ್ಕಿದ ಅವಧಿಯಲ್ಲಿ ವಚನ ಸಾಹಿತ್ಯ, ಜಾನಪದ ಮತ್ತು ಸಮಾಜಸೇವೆ ಈ ಮೂರು ಕ್ಷೇತ್ರಗಳಲ್ಲಿ ಗೊ.ರು.ಚ. ತಮ್ಮ ಕಾರ್ಯವನ್ನು ಮುಂದುವರಿಸಿ ಗಮನಾರ್ಹವಾದ ಕೆಲಸವನ್ನು ಮಾಡುತ್ತ ಬಂದಿದ್ದಾರೆ. ನಲವತ್ತಕ್ಕೂ ಮಿಕ್ಕಿದ ಸರ್ಕಾರಿ ಮತ್ತು ಸ್ವಯಂಸೇವಾ ಸಂಸ್ಥೆಗಳಿಗೆ ಅವರ ಸೇವೆ ಸಂದಿದೆ. ೧೯೭೪ರ 'ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ತಜ್ಞಪ್ರಶಸ್ತಿ'ಯಿಂದ ಹಿಡಿದು ೨೦೧೩ರ ಕೆಂಪೇಗೌಡ ಪ್ರಶಸ್ತಿಯವರೆಗೆ ಹಲವಾರು ಪ್ರಶಸ್ತಿ ಗೌರವಗಳು ಅವರ ಮಡಿಲಿಗೆ ಬಂದಿವೆ. ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ವಿಶೇಷ ಸೇವೆಗಾಗಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ೨೦೧೨ರ ಪ್ರಶಸ್ತಿಯನ್ನು ರಾಷ್ಟ್ರಪತಿ ಪ್ರಣವ ಮುಖರ್ಜಿಯವರಿಂದ ಕಳೆದ ಮೇ ೨೮ರಂದು ಸ್ವೀಕರಿಸಿ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಭಾರತದಲ್ಲಿಯೇ ಮೊದಲಿನದೆನ್ನ ಬಹುದಾದ ಜಾನಪದ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ಸ್ಥಾಪನೆಗೊಳ್ಳಲು ಕಾರಣ ಕರ್ತರಾದ ಪ್ರಮುಖರಲ್ಲಿ ಗೊ.ರು.ಚ. ಅವರೂ ಒಬ್ಬರೆಂಬುದನ್ನು ಮರೆಯುವಂತಿಲ್ಲ.

ಶರಣ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂದೇಶವನ್ನು ಸಮಕಾಲೀನ ಜನಸಮುದಾಯಕ್ಕೆ ಮುಟ್ಟಿಸುವ ಧ್ಯೇಯದಿಂದ ಸುತ್ತೂರು ವೀರಸಿಂಹಾಸನ ಮಠದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮೈಸೂರಿನಲ್ಲಿ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಪ್ರಸಿದ್ಧ ಸಾಹಿತಿ ಹಾಗೂ ವಿದ್ವಾಂಸರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಪ್ರಥಮ ಅಧ್ಯಕ್ಷರಾಗಿ ಅದಕ್ಕೆ ಗಟ್ಟಿ ತಳಹದಿಯನ್ನು ಹಾಕಿದರು. ಅವರ ಅಕಾಲಿಕ ನಿಧನದನಂತರ ಪ್ರೊ. ಎಚ್. ಗಂಗಾಧರನ್ ಕೆಲಕಾಲ ಅಧ್ಯಕ್ಷತೆ ವಹಿಸಿ ಕಾರ್ಯನಿರ್ವಹಿಸಿದರು. ಅವರ ನಂತರ ೧೯೭೬ರಲ್ಲಿ ಶರಣಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ ಗೊ.ರು.ಚ. ಅವರನ್ನು ಸಹಜವಾಗಿಯೇ ಅರಸಿಕೊಂಡು ಬಂದಿತು. ಯಾಕೆಂದರೆ ಅಖಿಲಕರ್ನಾಟಕ ವ್ಯಾಪ್ತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ದಕ್ಷತೆಯಿಂದ

ಕಾರ್ಯನಿರ್ವಹಿಸಿದ ಅಪಾರ ಅನುಭವ ಗೊ.ರು.ಚ. ಅವರದ್ದಾಗಿದ್ದಿತು. ಶರಣಸಾಹಿತ್ಯ ಪರಿಷತ್ತಿನ ಆಡಳಿತ ಕಾರ್ಯಾಲಯವನ್ನು ಮೈಸೂರಿನಿಂದ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಬೆಂಗಳೂರು ಶಿಕ್ಷಣ ಸಂಕೀರ್ಣದ ಕಟ್ಟಡಕ್ಕೆ ವರ್ಗಾಯಿಸಿದ್ದರಿಂದ ಗೊ.ರು.ಚ. ಅವರಿಗೆ ತಮ್ಮ ಸಂಪೂರ್ಣ ಅವಧಿಯನ್ನು ಪರಿಷತ್ತಿನ ಕೆಲಸಗಳಿಗೆ ಮೀಸಲಿಡಲು ಅನುಕೂಲವಾಯಿತು.

ಕರ್ನಾಟಕವಂತೂ ಸರಿಯೆ, ಭಾರತದ ಇತರ ರಾಜ್ಯಗಳ ಮತ್ತು ವಿದೇಶಗಳಲ್ಲಿರುವ ಶರಣ ಸಾಹಿತ್ಯಾಭಿಮಾನಿಗಳೂ ಸೇರಿದಂತೆ ಪರಿಷತ್ತಿನ ಆಜೀವ ಸದಸ್ಯರ ಸಂಖ್ಯೆ ಹೆಚ್ಚುತ್ತ ಬಂದಿದೆ (ಸದ್ಯಕ್ಕೆ ೭೩೦೦). ಗೊ.ರು.ಚ. ಅವರು ಯಾವಾಗಲೂ ದೂರದೃಷ್ಟಿಯಿಂದ ವ್ಯಾಪಕವಾದ ಯೋಜನೆಗಳನ್ನೇ ಕೈಗೆತ್ತಿಕೊಳ್ಳುತ್ತಾರೆ. ಕರ್ನಾಟಕದ ಬಹುತೇಕ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಹಾಗೂ ನೆರೆಯ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳಲ್ಲಿ ಪರಿಷತ್ತಿನ ಕ್ಷೇತ್ರ ಘಟಕಗಳನ್ನು ರಚಿಸಲಾಗಿದೆ. ಕೇಂದ್ರ ಸಮಿತಿಯ ಸದಸ್ಯರ ಸಹಕಾರ ಹಾಗೂ ಜಗದ್ಗುರು ಶ್ರೀ ಶಿವರಾತ್ರಿ ಕೇಶಿಕೇಂದ್ರ ಮಹಾಸ್ವಾಮಿಗಳ ನಿರಂತರ ಪ್ರೋತ್ಸಾಹದಿಂದ ಕರ್ನಾಟಕದ ಒಳಗೂ ಹೊರಗೂ ಹತ್ತು ಸ್ಥಳಗಳಲ್ಲಿ ಅ.ಭಾ. ಶರಣ ಸಾಹಿತ್ಯ ಸಮ್ಮೇಳನಗಳನ್ನು ಸ್ಥಳೀಯ ಸಂಸ್ಥೆಗಳ ನೆರವಿನಿಂದ ಯಶಸ್ವಿಯಾಗಿ ನೆರವೇರಿಸಿದ್ದಾರೆ. ೧೧ನೇ ಸಮ್ಮೇಳನ ಡಿಸೆಂಬರ ೨೭ರಿಂದ ಮೂರು ದಿನ ಧಾರವಾಡದಲ್ಲಿ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯಿತು. ೨೦೦೪ರಲ್ಲಿ ಗದಗಿನ ತೋಂಟದಾರ್ಯಮಠದ ಆಶ್ರಯದಲ್ಲಿ ನಡೆದ ಸಮ್ಮೇಳನವನ್ನು ಪ್ರತ್ಯಕ್ಷ ಕಂಡಿರುವ ನನಗೆ ಗೊ.ರು.ಚ. ಅವರ ಶಿಸ್ತು, ಸಂಘಟನಾಸಾಮರ್ಥ್ಯದ ಬಗೆಗಿನ ವಿಶ್ವಾಸ ಹೆಚ್ಚುತ್ತಲೇ ಬಂದಿದೆ.

ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಶರಣ ಸಾಹಿತ್ಯ ಪ್ರಕಟಣೆ ಒಂದು ಪ್ರಮುಖ ಭಾಗವೆಂದು ಪರಿಗಣಿಸಿದ್ದ ಗೊ.ರು.ಚ. ಅರುವತ್ತಕ್ಕೂ ಮಿಕ್ಕಿ ಬೆಲೆಯುಳ್ಳ ಗ್ರಂಥಗಳನ್ನು ಪರಿಷತ್ತಿನಿಂದ ಪ್ರಕಟಿಸಿದ್ದು ಆರು ಗ್ರಂಥಗಳನ್ನು ಸ್ವತಃ ಅವರೇ ಸಂಪಾದಿಸಿಕೊಟ್ಟಿದ್ದಾರೆ. ಇವುಗಳಲ್ಲಿ '೧೨ನೆಯ ಶತಮಾನದ ಶರಣ ಕ್ಷೇತ್ರಗಳು' ಸಚಿತ್ರ ಸಂಪುಟ ಗಾತ್ರದಲ್ಲಿ ಮತ್ತು ಸತ್ವದಲ್ಲಿ ಒಂದು ಅದ್ಭುತ ಕೃತಿಯೆಂದರೆ ಅತಿಶಯೋಕ್ತಿಯಾಗದು. (ಪ್ರಧಾನ ಸಂಪಾದಕ: ಗೊರುಚ, ಸಂಪಾದಕ: ಡಾ. ಬಸವರಾಜ ಮಲಸೆಟ್ಟಿ) ತಜ್ಞರ ಸಮಿತಿಯ ಮಾರ್ಗದರ್ಶನ ಹಾಗೂ ಕರ್ನಾಟಕ ಸರಕಾರದ ಆರ್ಥಿಕ ನೆರವು ಎರಡನ್ನೂ ಪಡೆಯುವಲ್ಲಿ ಗೊ.ರು.ಚ. ಯಶಸ್ವಿಯಾಗಿದ್ದಾರೆ. ಶರಣ ಪರಂಪರೆಯಲ್ಲಿ ನಂತರ ಅಸ್ತಿತ್ವಕ್ಕೆ ಬಂದಿರುವ ಮತ್ತು ಶರಣ ಸಾಹಿತ್ಯ ಸಂಸ್ಕೃತಿಗಳ ಕೇಂದ್ರವಾಗಿರುವ ಕ್ಷೇತ್ರಗಳನ್ನು ದಾಖಲಿಸುವ ಸಚಿತ್ರ ಸಂಪುಟವನ್ನು ಶರಣ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸುವ ಯೋಜನೆಯನ್ನು ಅವರು ಈಗಾಗಲೇ ಹಾಕಿಕೊಂಡಿದ್ದಾರೆ. ಇವುಗಳ ಜೊತೆಗೆ ಕನ್ನಡೇತರ ಭಾಷೆಗಳಲ್ಲಿ – ಇಂಗ್ಲಿಷ್, ಹಿಂದಿ, ತಮಿಳು, ತೆಲುಗು – ಶರಣ ಸಂದೇಶ ಪ್ರಸಾರೋದ್ದೇಶದಿಂದ ಕೆಲವು ಮಹತ್ವದ ಕೃತಿಗಳನ್ನೂ ಪ್ರಕಟಿಸಲಾಗಿದೆ.

ಶರಣ ಸಾಹಿತ್ಯ ಪ್ರಸಾರದ ಒಂದು ಕ್ರಮವಾಗಿ ಪರಿಷತ್ತಿನಿಂದ 'ಮಹಾಮನೆ' ಮಾಸಪತ್ರಿಕೆ ೧೯೯೭ರಿಂದಲೇ ಪ್ರಕಟಗೊಳ್ಳುತ್ತಿದೆ. ಅದರ ಪ್ರಥಮ ಸಂಚಿಕೆಯನ್ನು ಧಾರವಾಡದಲ್ಲಿ ಬಿಡುಗಡೆಗೊಳಿಸುವ (೧೮-೩-೧೯೯೭) ಸುಯೋಗವನ್ನು ಗೊ.ರು.ಚ. ನನಗೆ ಒದಗಿಸಿದ್ದರು. ಬಸವ ಜಯಂತಿ ಶತಮಾನೋತ್ಸವ ಸಮಾರೋಪ ಸಮಾರಂಭ ಧಾರವಾಡದ ಮುರುಘಾಮಠದಲ್ಲಿ ನೆರವೇರಿದ ಸಂದರ್ಭದಲ್ಲಿ (೧೧-೭-೨೦೧೩) 'ಮಹಾಮನೆ'ಯ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸುವ ಭಾಗ್ಯವೂ ನನ್ನದಾಗಿತ್ತು. ಇದಕ್ಕೆ ಗೊ.ರು.ಚ ಅವರೇ ಕಾರಣರೆಂದು ಬೇರೆ ಹೇಳಬೇಕಿಲ್ಲ. ಧಾರವಾಡದಲ್ಲಿ ನೆರವೇರಿದ ೧೧ನೇ ಶರಣ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಕೆಲವು ಹೊಸ ಗ್ರಂಥಗಳ ಲೋಕಾರ್ಪಣೆಯೂ ನನ್ನಿಂದಲೇ ಆಗಬೇಕೆಂದು ಅವರು ಬಯಸಿದರು. ವಿ.ಸೀ. ಯವರ ಕವಿತೆಯ ಸಾಲು ನೆನಪಾಗುತ್ತದೆ: 'ಸ್ವರ್ಗದೊಳಗೀ ಸ್ನೇಹ ದೊರೆವುದೇನು?'

೮೪ರ ಇಳಿವಯಸ್ಸಿನಲ್ಲಿಯೂ ಇಷ್ಟೊಂದು ಕ್ರಿಯಾಶೀಲರಾಗಿರುವ ಸರಳ ಶುಭ್ರ ವ್ಯಕ್ತಿತ್ವದ ಗೊಂಡೇದ ಹಳ್ಳಿಯ ಈ ಗಾಂಧಿವಾದಿ ನಮ್ಮ ಮಧ್ಯ ಆರೋಗ್ಯವಂತರಾಗಿ ನೂರ್ಕಾಲ ಬಾಳಲಿ. 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ' ಎನ್ನುತ್ತದೆ ಈಶಾವಾಸ್ಯೋಪನಿಷತ್ತು. ಅಂದರೆ ಸಕ್ರಿಯ ಜೀವನವನ್ನು ನಡೆಸುತ್ತ ಮನುಷ್ಯರು ನೂರು ವರ್ಷ ಬಾಳಲು ಬಯಸಬೇಕು ಎಂದರ್ಥ.

('ಹಳ್ಳಿಯ ಬಳ್ಳಿ' ೨೦೧೪)

ತಾಯ್ನುಡಿಯ ತಮ್ಮಡಿ ಎಮ್ಮ (ಎಂ) ರಾಮಚಂದ್ರ

ಕತ್ತಲಲ್ಲಿ ತಡವರಿಸುತ್ತಾ ದಾರಿ ನಡೆಯುತ್ತಿದ್ದ ಮುಳಿಯ ತಿಮ್ಮಪ್ಪಯ್ಯನವರು ಹೇಳಿದರು:

"ನೋಡಿ ಕುಲಕರ್ಣಿಯವರೇ ನಿಮ್ಮ ಮನೆಯವರೆಗೆ ದಾರಿಬದಿಯಲ್ಲಿ ಲೈಟು ಹಾಕಿಸಿದರೆ ಮಾತ್ರ ನನ್ನಂತಹ ಮುದುಕರಿಂದ ಅದರ ಬೆಳಕಿನಲ್ಲಿ ನಡೆಯಲು ಸಾಧ್ಯ."

ಕುಲಕರ್ಣಿಯವರು ಉತ್ತರಿಸಿದರು:

"ಸ್ವಾಮೀ, ನನ್ನ ಮನೆಗೆ ಲೈಟು ಹಾಕಿಸುವ ಶಕ್ತಿಯೇ ನನಗಿಲ್ಲ. ಇನ್ನು ದಾರಿ ಬದಿಯ ಮಾತೇನು? ನೀವು ನಿಮ್ಮ ಬೆಳಕಿನಲ್ಲಿಯೇ ನಡೆದು ಬರಬೇಕು."

ವ್ಯಕ್ತಿಚಿತ್ರ ಬರೆಯುವುದರಲ್ಲಿ ಸಿದ್ಧಹಸ್ತರಾಗಿದ್ದ 'ದ.ಬಾ' ಬಗೆಗಿನ ವ್ಯಕ್ತಿಚಿತ್ರ ಹೀಗೆ ಕುತೂಹಲಕರವಾಗಿ ಪ್ರಾರಂಭವಾಗಿ, ಅವರ ವ್ಯಕ್ತಿತ್ವ ಹಾಗೂ ಬರವಣಿಗೆಯನ್ನು ಆಪ್ತವಾಗಿ ಕಂಡರಸಿದ ಈ ಬರೆಹವನ್ನು ನಾನು ಓದಿದ್ದು ೧೯೬೧ರ 'ಜಯಂತಿ' ಮಾಸಪತ್ರಿಕೆಯಲ್ಲಿ. ಇದನ್ನು ಬರೆದವರು 'ಚಂದ್ರಮಾ.' ಈ ಪ್ರತಿಭಾವಂತ ಉದಯೋನ್ಮುಖ ಲೇಖಕಿ ಯಾರಿರಬಹುದು ಎಂಬ ಕುತೂಹಲ ನನಗೆ. ಆಮೇಲೆ ಗೊತ್ತಾಯಿತು. ಇವರು ನಮ್ಮ (ಕರ್ನಾಟಕ) ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ವಿದ್ಯಾರ್ಥಿ ಎಂ. ರಾಮಚಂದ್ರ ಎಂಬುದು. ಹಿರಿಯ ವಿದ್ವಾಂಸರಾದ ಸೇಡಿಯಾಪು ಕೃಷ್ಣಭಟ್ಟರು ರಾಮಚಂದ್ರ ಅವರನ್ನು 'ಚಂದ್ರಮಾ' ಎಂದು ವಾತ್ಸಲ್ಯದಿಂದ ಸಂಬೋಧಿಸುತ್ತಿದ್ದುದರಿಂದ ತಮ್ಮ ಗುರುಗಳ ಬಗೆಗಿನ ಗೌರವದಿಂದ ಆ ಹೆಸರನ್ನಿಟ್ಟುಕೊಂಡು ಇವರು ಬರೆದಿದ್ದರಂತೆ.

ಧಾರವಾಡದ ದ.ಬಾ. ಕುಲಕರ್ಣಿಯವರು 'ಹಕ್ಕಿನೋಟ'ದ ನಂತರ ಇನ್ನೊಂದು ವ್ಯಕ್ತಿಚಿತ್ರಗಳ ಸಂಗ್ರಹ 'ಸೀಮಾಪುರುಷರು' ಎಂಬುದನ್ನು ೧೯೬೨ರಲ್ಲಿ ಪ್ರಕಟಿಸುವಾಗ ಅದಕ್ಕೆ ರಾಮಚಂದ್ರ ಅವರ ಈ ಲೇಖನವನ್ನೇ ಮುನ್ನುಡಿಯಾಗಿ ಬಳಸಿಕೊಳ್ಳುತ್ತ ಆ ಪುಸ್ತಕದ 'ಅರಿಕೆ'ಯಲ್ಲಿ ಹೀಗೆ ಹೇಳಿದ್ದಾರೆ: "ನನ್ನ ಮಿತ್ರ ಶ್ರೀ 'ಚಂದ್ರಮಾ' ನನ್ನದೇ ಒಂದು ವ್ಯಕ್ತಿಚಿತ್ರ ಬರೆದರು. ಅದು ಈ ಸಾಹಿತ್ಯ ಪ್ರಕಾರದ ಯಶಸ್ವೀ ಪ್ರಯೋಗವೆಂದು ನನ್ನ, ಅವರ ಮಿತ್ರರನೇಕರು ಹೇಳಿದರು. ಅದು ನನ್ನ ಸಾಹಿತ್ಯ ಜೀವನದ ಪರಾಮರ್ಶೆ ಯಾಗಿರುವುದರಿಂದ ಅದನ್ನೇ ಇಲ್ಲಿ ಮುನ್ನುಡಿಯಾಗಿ ಸೇರಿಸಿಕೊಂಡಿದ್ದೇನೆ." "ವ್ಯಕ್ತಿಚಿತ್ರ ಕಲೆಯಲ್ಲಿ ಅವರನ್ನು (ದ.ಬಾ.ಕು). ಸರಿಗಟ್ಟುವವರು ಒಬ್ಬ ಸಿದ್ದವ್ವನಹಳ್ಳಿ ಕೃಷ್ಣಶರ್ಮರು, ಇನ್ನೊಬ್ಬರ ಹೆಸರು ಹೇಳಲು ಆಲೋಚಿಸಬೇಕಾಗುತ್ತದೆ" ಎಂದು ರಾಮಚಂದ್ರ ತಮ್ಮ ಆ ಲೇಖನದಲ್ಲಿ ಹೇಳಿದ್ದು ಆಗಿನಮಟ್ಟಿಗೆ ನಿಜವೂ ಆಗಿತ್ತು. ಮೂವತ್ತೈದು ವರ್ಷಗಳ ನಂತರ ರಾಮಚಂದ್ರ ಅವರು ಬರೆದ ಇನ್ನೊಂದು ವ್ಯಕ್ತಿಚಿತ್ರ "ನನ್ನ ಗುರುಸ್ವಾಮಿ". ಅದನ್ನು ಓದಿದಾಗಲೂ ನನಗೆ ಇಂಥದೇ ಅನುಭವವಾದುದನ್ನು ಇಲ್ಲಿಯೇ ಹೇಳಬೇಕು. ಇದು ಇನ್ನಷ್ಟು ತುಂಬಿಕೊಂಡು ಬಂದ ಪಕ್ವ ಬರವಣಿಗೆ (ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ಅವರ ಅಭಿನಂದನ ಗ್ರಂಥ 'ಸಹೃದಯಿ'ಯಲ್ಲಿ ಇದು ಪ್ರಕಟವಾಗಿದೆ). ಅವರು ಬಯಸಿದ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪ್ರವೇಶ ದುಸ್ಸಾಧ್ಯವಾದಾಗ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅದು ಸಾಧ್ಯವಾದ ರೋಚಕ ಸಂಗತಿಯನ್ನು ಕೂಡ ರಾಮಚಂದ್ರ ಅವರು ಈ ಲೇಖನದ ಪ್ರಾರಂಭದಲ್ಲಿಯೇ ಸೆರೆಹಿಡಿದಿದ್ದಾರೆ. ಧಾರವಾಡದಲ್ಲಿದ್ದಾಗಿನಕ್ಕಿಂತ ಧಾರವಾಡ ಬಿಟ್ಟ ಮೇಲೆಯೇ ನನಗೆ ಅವರ ಹೆಚ್ಚಿನ ಸಂಪರ್ಕ ಒದಗಿದ್ದು. ಅವರು ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ತಾವು ಚಿಕ್ಕಂದಿನಿಂದಲೂ ಕಾಣುತ್ತಿದ್ದ ಕನಸನ್ನು ನನಸಾಗಿಸಿಕೊಂಡರು.

ಉಡುಪಿಯ ಎಂ.ಜಿ.ಎಂ. ಕಾಲೇಜು ನಡೆಸುತ್ತಿದ್ದ ಮುದ್ದಣ ಜಯಂತಿಗೆ ೧೯೬೫ರಲ್ಲಿ ಪ್ರೊ. ಕು.ಶಿ. ಹರಿದಾಸಭಟ್ಟರು ನನ್ನನ್ನು ಆಮಂತ್ರಿಸಿದ್ದರು. ಉಡುಪಿಗೆ ಅದು ನನ್ನ ಮೊದಲ ಭೇಟಿಯಾದ್ದರಿಂದ ಮನೆಯವರೂ ನನ್ನ ಜೊತೆಗಿದ್ದರು. ಎರಡು ದಿನಗಳ ಆ ಕಾರ್ಯಕ್ರಮದಲ್ಲಿ ಮೊದಲ ದಿನ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಾನು ಉಪನ್ಯಾಸ ಮಾಡಿದೆ. ಎರಡನೆಯ ದಿನ ಪೂರ್ಣಪ್ರಜ್ಞ ಕಾಲೇಜಿನ ಪ್ರಾಚಾರ್ಯರಾಗಿದ್ದ ಪ್ರೊ.ವಿ.ಎಂ. ಇನಾಮದಾರ ಅವರ ಅಧ್ಯಕ್ಷತೆಯಲ್ಲಿ ನನ್ನ ಕಾವ್ಯವಾಚನ ನಡೆಯಿತು. ಪ್ರೊ. ಇನಾಮದಾರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನನ್ನ ಗುರುಗಳಾಗಿದ್ದರು. (ಕನ್ನಡ ಆನರ್ಸ್ ಜೊತೆಗೆ ಎರಡು ಪೇಪರು ಇಂಗ್ಲಿಷ್ ತೆಗೆದುಕೊಂಡಿದ್ದೆ). ಅದೇ ಸಂದರ್ಭದಲ್ಲಿ ಎಂ.ಜಿ.ಎಂ. ಪುಸ್ತಕ ಮಾಲೆಯಲ್ಲಿ ಪ್ರಕಟವಾದ ಎಂ. ರಾಮಚಂದ್ರ ಅವರ 'ಸೇಡಿಯಾಪು ಕೃಷ್ಣಭಟ್ಟ' ಚಿಕ್ಕಪುಸ್ತಕದ ಬಿಡುಗಡೆಯೂ ನೆರವೇರಿತು. ರಾಮಚಂದ್ರ ಅವರ ವ್ಯಕ್ತಿಚಿತ್ರ ಕಲೆ ಇಲ್ಲಿ ಹೆಚ್ಚಿನ ಪರಹನ್ನು ಪಡೆದಿತ್ತು. ಪ್ರೊ. ಇನಾಂದಾರರು ಮಾತನಾಡುತ್ತ "ಕಣವಿ ಯವರಂತೂ ನನ್ನ ವಿದ್ಯಾರ್ಥಿಗಳಾಗಿದ್ದರು. ಎಂ. ರಾಮಚಂದ್ರ ಅವರೂ ಆಗಬಹುದಾಗಿತ್ತು" ಎಂಬ ಆಶಯವನ್ನು ವ್ಯಕ್ತಪಡಿಸಿದರು. ಅಂದಿನ ಸಮಾರಂಭ

ಸಹಜವಾಗಿ ಕವಿಗೋಷ್ಠಿಯ ಸ್ವರೂಪವನ್ನು ಪಡೆದುಕೊಂಡಿತು. ನಾನು ಮೊದಲೇ ನನ್ನ ನಾಲ್ಕೈದು ಕವಿತೆಗಳನ್ನು ವಾಚನ ಮಾಡಿದ್ದೆ. ರಾಮಚಂದ್ರ ಅವರು ಭಾವಪೂರ್ಣವಾಗಿ ಸೇಡಿಯಾಪು ಅವರ 'ಜಯಭಾರತ' ಕವಿತೆಯನ್ನು ವಾಚಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ. ಇನಾಮದಾರರು ಷೇಕ್ಸ್‌ಪಿಯರನ ಒಂದೆರಡು ಕವಿತೆಗಳ ವಾಚನದೊಂದಿಗೆ ಅಧ್ಯಕ್ಷಭಾಷಣ ಮುಕ್ತಾಯಗೊಳಿಸಿದರು.

ಕು.ಶಿ. ಹರಿದಾಸಭಟ್ಟರು ವ್ಯವಸ್ಥೆಗೊಳಿಸಿದಂತೆ ಮರುದಿನ ರಾಮಚಂದ್ರ ಅವರು ನಮ್ಮೀರ್ವರನ್ನು ಕಾರ್ಕಳಕ್ಕೆ ಕರೆದೊಯ್ದರು. ಆಗ ಅವರಿನ್ನೂ ಅವಿವಾಹಿತರಾಗಿದ್ದರು. ತಾವಿರುವ ಕೋಣೆಯಲ್ಲಿಯೇ ನಮಗೆ ತಿಂಡಿತೀರ್ಥದ ಉಪಚಾರವಾಯಿತು. ಶ್ರವಣಬೆಳಗೊಳದ ಗೋಮಟೇಶ್ವರನ ದರ್ಶನವಾಗುವದಕ್ಕಿಂತ ಮೊದಲೇ ಕಾರ್ಕಳದ ಗೊಮ್ಮಟೇಶ್ವರನ ದರ್ಶನ ನನಗೆ ಲಭಿಸಿದ್ದು ಒಂದು ಯೋಗಾಯೋಗವೇ. ಮೂಡುಬಿದಿರೆಯ ಸಾವಿರ ಕಂಬದ ಬಸದಿಯನ್ನು ಕಾಣುವ ಕುತೂಹಲವನ್ನು ತಣಿಸಿ ಕೊಂಡಾಯಿತು. ರಾಮಚಂದ್ರ ಅವರಂಥ ಸ್ನೇಹಿತರು ಜೊತೆಯಲ್ಲಿದ್ದುದರಿಂದ ನಮ್ಮ ಪ್ರಯಾಣ ಹೆಚ್ಚು ಅರ್ಥಪೂರ್ಣವಾಗಿ ಪರಿಣಮಿಸಿತು.

೧೯೯೬ರಲ್ಲಿ ನಾನು ಹಾಸನದಲ್ಲಿ ಅರುವತ್ತೈದನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ನಿಯೋಜಿತನಾದಾಗ 'ಉದಯವಾಣಿ'ಯಲ್ಲಿ ರಾಮಚಂದ್ರ ಅವರು ನನ್ನ ಬಗ್ಗೆ ಲೇಖನ ಬರೆದು, ಪತ್ರದೊಂದಿಗೆ ಪತ್ರಿಕೆಯ ಪ್ರತಿಯನ್ನು ಕಳಿಸಿಕೊಟ್ಟಿದ್ದರು. ಸವಿನೆನಪುಗಳೊಂದಿಗೆ ಕಾವ್ಯಾಸ್ವಾದನೆಗೆ ದಾರಿತೋರುವ, ವಿಮರ್ಶೆಯ ಮಿನುಗು ನೋಟಕ್ಕೆ ಅವರದೇ ಆದ ಕಲಾತ್ಮಕ ಚೌಕಟ್ಟು ಒದಗಿಸಿದ ವಿಶಿಷ್ಟ ರೀತಿಯ ಕವಿಪರಿಚಯ ಅದಾಗಿತ್ತು. ಹಾಸನದ ಸಾಹಿತ್ಯ ಸಮ್ಮೇಳನಕ್ಕೆ ಹೊಂದಿಕೊಂಡಂತೆ ಕಾರ್ಕಳದಲ್ಲಿ ಒಂಬತ್ತನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿ ಅದರ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗುವ ಅನುಕೂಲವನ್ನು ರಾಮಚಂದ್ರ ನನಗೆ ಒದಗಿಸಿದ್ದರು. ಆ ಸಮ್ಮೇಳನದ ಕಾರ್ಯದರ್ಶಿಗಳಾಗಿದ್ದ ಅವರ ಸಂಘಟನಾ ಚಾತುರ್ಯಕ್ಕೂ ಇದು ಸಾಕ್ಷಿ ಎನ್ನುವಂತಿತ್ತು. ಆ ಸಮ್ಮೇಳನದ ಸಾಹಿತ್ಯಿಕ ಪ್ರತಿನಿಧಿಯಾಗಿ ಕೊನೆಯಲ್ಲಿ ಪ್ರೊ. ಎಸ್.ಎಂ. ವೃಷಭೇಂದ್ರಸ್ವಾಮಿಯವರು ಎರಡೂ ದಿನ ನಡೆದ ಸಮ್ಮೇಳನದ ಕಾರ್ಯಕ್ರಮಗಳ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ ತಾವು ಮಾಡಿಕೊಂಡ ಇಪ್ಪತ್ತೆಂಟು ಪುಟಗಳ ಟಿಪ್ಪಣಿಗಳ ಸಾರವನ್ನು ವಿವರಿಸತೊಡಗಿದರು. ಮುಂದೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಡವಾಗಬಾರದೆಂದು ಚಡಪಡಿಸುತ್ತಿದ್ದ ಕಾರ್ಯದರ್ಶಿ ರಾಮಚಂದ್ರ ಅವರು ತಮ್ಮ ಗುರುಗಳ ಹಿಂದೆ ನಿಂತು ಮಾತುಗಳನ್ನು ಸಂಕ್ಷಿಪ್ತಗೊಳಿಸಲು ನಯವಾಗಿ ಸೂಚಿಸುತ್ತಿದ್ದ ದೃಶ್ಯ ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಪ್ರೊ. ಎಂ. ರಾಮಚಂದ್ರ ಎಂದರೆ ಸಮಯನಿಷ್ಠೆಯ ಸಂಕೇತ.

ಭುವನೇಂದ್ರ ಕಾಲೇಜಿನಲ್ಲಿ ಅಖಂಡ ಮೂವತ್ತೈದು ವರ್ಷಗಳ ಅಧ್ಯಾಪನ ವೃತ್ತಿಯಿಂದ ನಿವೃತ್ತರಾದ ಸಂದರ್ಭದಲ್ಲಿ (೩೦-೬-೧೯೯೭) ರಾಮಚಂದ್ರ ಅವರು

ಮುದ್ರಿಸಿ ವಿತರಿಸಿದ ನಿವೇದನಪತ್ರದಲ್ಲಿ ಅವರು ಹೇಳಿದ ಒಂದು ಮಾತು ನನಗೆ ಬಹಳ ಅರ್ಥಪೂರ್ಣವಾಗಿ ತೋರಿತು. "ಸಾಮಾನ್ಯ ಸರಕಾರಿ ಪರಿಭಾಷೆಯಲ್ಲಿ 'ಸೇವೆ' ಎನ್ನುವುದುಂಟು. ನನ್ನದು ಸೇವೆಯಲ್ಲ. ಸೇವೆಯೆಂದರೆ ಪ್ರತಿಫಲಾಪೇಕ್ಷೆಯಿಲ್ಲದೆ ನಿರ್ವಹಿಸಬೇಕಾದ ಕಾರ್ಯ! ಅಧ್ಯಾಪನಕ್ಕೆ ಪ್ರತಿಫಲ ಇದ್ದುದರಿಂದ ನನ್ನದು ಕರ್ತವ್ಯ ನಿರ್ವಹಣೆ. ಆ ಕರ್ತವ್ಯವನ್ನು ಮಾತ್ರ ತ್ರಿಕರಣಪೂರ್ವಕವಾಗಿ ಶ್ರದ್ಧೆ, ನಿಷ್ಠೆ, ಉತ್ಸಾಹಗಳಿಂದ ಕೊನೆಯ ದಿನದ ಕೊನೆಯ ಗಳಿಗೆಯವರೆಗೂ ಮಾಡಿದ್ದೇನೆ ಎಂಬುದನ್ನು ವಿನಮ್ರವಾಗಿ ವಿಜ್ಞಾಪಿಸುತ್ತೇನೆ." ರಾಮಚಂದ್ರ ಅವರ 'ಕೃತಾರ್ಥ, ಕೃತಜ್ಞ'ದ ಈ ಅಂತರಂಗದ ನುಡಿ ಹಾಗೂ ಅವರ ಕರ್ತವ್ಯಪರಾಯಣತೆ ನಮ್ಮ ಅಧ್ಯಾಪಕ ವೃಂದಕ್ಕೆಲ್ಲ ಒಂದು ಮಾದರಿಯಾಗಿ ನಿಂತರೆ ನಮ್ಮ ಶಿಕ್ಷಣಕ್ಷೇತ್ರದ ಭವಿಷ್ಯ ಎಷ್ಟೊಂದು ಉಜ್ವಲವಾಗಬಹುದಲ್ಲವೆ! ಎಂದು ನನ್ನಷ್ಟಕ್ಕೆ ಅಂದುಕೊಂಡಿದ್ದೇನೆ.

ಸಾಹಿತ್ಯ ಪರಿಚರ್ಯೆಯೂ ಸಾಹಿತ್ಯ ಸೃಷ್ಟಿಯಷ್ಟೇ ಮುಖ್ಯವಾದದ್ದೆಂದು ಜನ ತಿಳಿದುಕೊಂಡು ಜನರು ಅದನ್ನು ಗೌರವಿಸಬೇಕೆಂಬ ಉದ್ದೇಶದಿಂದ ಮಣಿಪಾಲ ಸಾಹಿತ್ಯ ಸಂಘ 'ಕೃತಿ–ಆಕೃತಿ' (ಎಂ. ರಾಮಚಂದ್ರ ಅರುವತ್ತು)ಯನ್ನು ಪ್ರಕಟಿಸಿ (೧೯೯೮) ಉಪಕರಿಸಿದೆ. ರಾಮಚಂದ್ರರು ಹಣದ ಗಂಟು ಮಾಡುವ ಗೊಡವೆಗೆ ಹೋದವರಲ್ಲ. ಅದು ಅವರ ಸ್ವಭಾವವೂ ಅಲ್ಲ. ಆದರೆ ಗುರುಹಿರಿಯರು, ಆತ್ಮೀಯರು, ಶಿಷ್ಯಮಿತ್ರರು ವಿವಿಧ ಸಂದರ್ಭಗಳಲ್ಲಿ ಬರೆದ ಓಲೆಗಳ ಒಂದು ದೊಡ್ಡ ಗಂಟೇ ಅವರ ಬಳಿಯಲ್ಲಿತ್ತು. "ನನ್ನನ್ನು ನಾನೇ ನೋಡಿಕೊಳ್ಳುವುದಕ್ಕೆ ಈ ಕಾಲಖಂಡ ಒಂದು ಕನ್ನಡಿಯೆಂದು" ಅವರಿಗೆ ತೋರಿದ್ದರಿಂದ ಆ ಪತ್ರಗಳಲ್ಲಿ ಅವರನ್ನ ಕುರಿತು ಮಾಡಿರುವ ಉಲ್ಲೇಖಗಳನ್ನೇ ಆರಿಸಿ ಪೋಣಿಸಿದ ಈ ಕೃತಿ ಚಿಕ್ಕದಾದರೂ ಚೊಕ್ಕ ಚಿನ್ನದಂತಹ ಅವರ ವ್ಯಕ್ತಿತ್ವದ ಪ್ರತೀಕವಾಗಿ ನಿಲ್ಲುತ್ತದೆ. ಸೇಡಿಯಾಪು ಕೃಷ್ಣಭಟ್ಟ, ಎಂ. ಗೋವಿಂದಪೈ, ಟಿ.ಎಂ.ಎ.ಪೈ, ಜಿ. ವೆಂಕಟಸುಬ್ಬಯ್ಯ, ಎಚ್. ತಿಪ್ಪೇರುದ್ರಸ್ವಾಮಿ, ಜಿ.ಪಿ. ರಾಜರತ್ನಂ, ವಿ.ಸೀ., ನಿರಂಜನ, ಮಾಸ್ತಿ, ಗೊರೂರು, ನಿಸಾರ್ ಅಹಮದ್, ಎಂ.ವಿ. ಸೀತಾರಾಮಯ್ಯ, ಸಿ.ಡಿ. ನರಸಿಂಹಯ್ಯ, ವಿ.ಎಂ. ಇನಾಂದಾರ್, ವೀರೇಂದ್ರ ಹೆಗ್ಗಡೆ, ಕಯ್ಯಾರ ಕಿಞ್ಞಣ್ಣರೈ, ಅಮೃತ ಸೋಮೇಶ್ವರ, ಬನ್ನಂಜೆ ರಾಮಾಚಾರ್, ತಾಳ್ತಜೆ ವಸಂತಕುಮಾರ, ಅ.ರಾ.ಮಿತ್ರ, ಹಾಮಾನಾಯಕ, ಜಿ.ಟಿ. ನಾರಾಯಣರಾವ್, ಎಸ್.ಎಂ. ವೃಷಭೇಂದ್ರಸ್ವಾಮಿ, ಕು.ಶಿ. ಹರಿದಾಸಭಟ್ಟ, ದ.ಬಾ. ಕುಲಕರ್ಣಿ, ಉಗ್ರಾಣ ಮಂಗೇಶರಾವ್, ಕೆ.ವಿ. ಅಯ್ಯರ್, ಬಾಗಲೋಡಿ ದೇವರಾಯ, ಸಿ.ಪಿ.ಕೆ., ಎನ್. ರಂಗನಾಥಶರ್ಮ, ಎಚ್.ಕೆ. ರಂಗನಾಥ, ಅನುಪಮಾ ನಿರಂಜನ, ಎಂ.ಎನ್. ಮೂರ್ತಿರಾವ್, ಜಿ.ಎಸ್. ಶಿವರುದ್ರಪ್ಪ, ಟಿ.ವಿ. ವೆಂಕಟಾಚಲಶಾಸ್ತ್ರಿ, ಚೆನ್ನವೀರಕಣವಿ, ಕೆ.ಕೆ.ಪೈ., ಎಸ್. ಪ್ರಭಾಕರ, ಎಲ್.ಎಸ್. ಶೇಷಗಿರಿರಾವ್, ಪುರುಷೋತ್ತಮ ಬಿಳಿಮಲೆ, ಎಂ.ಎಂ. ಕಲಬುರ್ಗಿ, ಬಿ.ಪಿ. ರಾಧಾಕೃಷ್ಣ, ಶತಾವಧಾನಿ ಗಣೇಶ್, ರಮೇಶ ಪೈ, ಹೆನ್ರಿ ಡಿಸೋಜಾ ಇವರೇ ಮೊದಲಾದ ಅನೇಕರ ಸೇಸೆ, ನಲ್ನುಡಿ, ಅಕ್ಕರೆ, ಒಸಗೆ, ಬಾಗಿನ ಹಾರೈಕೆಗಳನ್ನು ಪಡೆದ ಎಮ್ಮ ರಾಮಚಂದ್ರ ಎಂಥ ಪುಣ್ಯವಂತರು ಎಂದು

ಯಾರಿಗಾದರೂ ಅನಿಸಿದರೆ ಆಶ್ಚರ್ಯವಿಲ್ಲ. ಪತ್ರವ್ಯವಹಾರವೇ ಇಲ್ಲದ ಇಂದಿನ ಸಂದರ್ಭದಲ್ಲಂತೂ ಇದೊಂದು ಗತವೈಭವದ ಸ್ಮಾರಕ ಎನಿಸಿದರೂ ತಪ್ಪಾಗದು. ಇದರ ಜೊತೆಗೆ ರಾಮಚಂದ್ರ ಅವರು ಸಂಪಾದಿಸಿಕೊಟ್ಟ 'ಪತ್ರಾವಳಿ'ಯನ್ನು ಸ್ಮರಿಸಿಕೊಳ್ಳಬೇಕು. ಕನ್ನಡದಲ್ಲಿ ಪತ್ರ ಸಾಹಿತ್ಯಕ್ಕೆ ಇವು ದೊಡ್ಡ ಪ್ರೇರಣೆ ನೀಡಬಲ್ಲವು.

ರಾಮಚಂದ್ರ ಅವರಂಥ ಕ್ರಿಯಾಶೀಲ ವ್ಯಕ್ತಿಗಳಿಗೆ ನಿವೃತ್ತಿ ಎಂಬುದೇ ಇಲ್ಲ. ನಿವೃತ್ತಿಯ ನಂತರ ಅವರು ಮಾಡಿದ ಒಂದು ದೊಡ್ಡ ಕೆಲಸವೆಂದರೆ ಕಾರ್ಕಳ ಹಾಗೂ ಅಲ್ಲಿಯ ಪರಿಸರದ ಸಹೃದಯ ಸಾಹಿತ್ಯಾಸಕ್ತರನ್ನೆಲ್ಲ ಒಟ್ಟು ಹಾಕಿ 'ಸಾಹಿತ್ಯ ಸಂಘ ಕಾರ್ಕಳ'ವನ್ನು ಹುಟ್ಟುಹಾಕಿ ಅದರ ಸಂಚಾಲಕರಾಗಿ ಹದಿನಾಲ್ಕು ವರ್ಷಗಳಿಂದ ಬಿಡುವಿಲ್ಲದೆ ದುಡಿದು ಕನ್ನಡಿಗರೆಲ್ಲರ ಗಮನವನ್ನು ಸೆಳೆದಿದ್ದಾರೆ. ಕಾರ್ಕಳ ಇಂದು ಕರ್ನಾಟಕದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಶ್ರದ್ಧಾಕೇಂದ್ರಗಳಲ್ಲಿ ಒಂದಾಗಿದ್ದರೆ ಅದರ ಶ್ರೇಯಸ್ಸು ಎಂ. ರಾಮಚಂದ್ರ ಅವರಿಗೆ ಖಂಡಿತವಾಗಿಯೂ ಸಲ್ಲುತ್ತದೆ. ಕರ್ನಾಟಕದ ವಿವಿಧ ಭಾಗಗಳಿಂದ ನೂರಾರು ಸಾಹಿತಿಗಳನ್ನು, ಕಾವ್ಯ, ಗಾಯನ, ನೃತ್ಯ ಹಾಗೂ ಯಕ್ಷಗಾನದ ಹಲವಾರು ಕಲಾವಿದರನ್ನು ಬರಮಾಡಿಕೊಂಡು ಸಂಘ ನಿರಂತರ ಕ್ರಿಯಾಶೀಲವಾಗಿ ಸಾಂಸ್ಕೃತಿಕ ಉತ್ಕರ್ಷವನ್ನು ಸಾಧಿಸಿದೆ. ಸಂಘದ ವಾರ್ಷಿಕೋತ್ಸವದಲ್ಲಿ ನಾನೂ ಒಮ್ಮೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂದರ್ಭದಲ್ಲಿ (೨೦೦೫) ಮೇಲೆ ಗುರುತಿಸಿದ ಎಲ್ಲ ಗುಣ ಲಕ್ಷಣಗಳನ್ನು ಕಂಡು ಹಿಗ್ಗಿದ್ದೇನೆ. ಆ ಸಂದರ್ಭದಲ್ಲಿ ಕಾವ್ಯಗಾಯನ ಕಲಾಕಾರರಾದ ಚಂದ್ರಶೇಖರ ಕೆದಿಲಾಯ ಅವರು ನನ್ನ ಕೆಲವು ಕವಿತೆಗಳಿಗೆ ಸ್ವತಃ ರಾಗಸಂಯೋಜನೆ ಮಾಡಿ ಹಾಡಿದ್ದು ವಿಶೇಷವಾಗಿತ್ತು. ಇನ್ನೂ ಒಂದು ವಿಶೇಷವೆಂದರೆ ಮುಕ್ತ ಛಂದಕ್ಕೆ ಸಮೀಪವಾದ ಮಿಶ್ರ ಛಂದ 'ಆಕಾಶಬುಟ್ಟಿ' ಕವಿತೆಯನ್ನು ಕೆದಿಲಾಯರು ಹಾಡಿದ ರೀತಿ ನನ್ನನ್ನು ಅಚ್ಚರಿಗೊಳಿಸಿತ್ತು. 'ಇದು ಹಾಡಲಾಗದ ಕವಿತೆ' ಎಂದು ಕವಿ ಭಾವಿಸುವದೇ ತಪ್ಪು ಎಂದು ನನಗನಿಸಿದ್ದು ಅಂದೇ. 'ಮಾಡುವವನದಲ್ಲ ಕವಿತೆ ಹಾಡುವವನದು' ಎಂದು ಪು.ತಿ.ನ. ಹೇಳಿದ್ದು ನೆನಪಾಯಿತು. ಮರುದಿನ ಬೆಳಿಗ್ಗೆ ಭುವನೇಂದ್ರ ಕಾಲೇಜಿನ ಸಾಹಿತ್ಯ ಸಂಘದಲ್ಲಿಯೂ ನನ್ನ ಉಪನ್ಯಾಸವೇರ್ಪಡಲು ರಾಮಚಂದ್ರರೇ ಪ್ರೇರಕ ರಾಗಿದ್ದರು. ಪ್ರಾಂಶುಪಾಲರಾದ ಪ್ರೊ. ಬಿ. ಪದ್ಮನಾಭಗೌಡರ ಇಚ್ಛೆಯೂ ನೆರವೇರಿ ದಂತಾಯಿತು. ಎರಡೂ ಸಾಹಿತ್ಯ ಸಂಘಗಳಿಗೆ ಸೇತುವೆಯಾಗಿ ರಾಮಚಂದ್ರರು ಇಂದಿಗೂ ನಡೆದುಕೊಳ್ಳುತ್ತಾರೆ. 'ಜನರಲ್ಲಿ ಸಾಹಿತ್ಯೋ'ತ್ಸಾಹ, ಸ್ನೇಹ ಸಂವೃದ್ಧಿಯಿಂದ ಅವರು ತೃಪ್ತರು ಇಷ್ಟೇ ಅಲ್ಲ, ಸುತ್ತುಮುತ್ತಿನ ಸಂಘ ಸಂಸ್ಥೆಗಳಿಗೂ ಅವರು ಈ ದೃಷ್ಟಿಯಿಂದ ಸಾಹಿತ್ಯ ಪೋಷಕರೇ. ಹೀಗಾಗಿ ಕಾರ್ಕಳದಿಂದ ಮರಳುವಾಗ ಉಡುಪಿಯ ಗೋವಿಂದ ಪೈ ಸಂಶೋಧನ ಸಂಸ್ಥೆಯಲ್ಲಿ ಸನ್ಮಾನ ಕಾರ್ಯಕ್ರಮಕ್ಕೂ ನಾನು ಒಪ್ಪಿಕೊಳ್ಳಬೇಕಾಯಿತು ಕಾರ್ಕಳ ಸಾಹಿತ್ಯ ಸಂಘದ ದಶಮಾನೋತ್ಸವದ (೨೦೦೬-೨೦೦೭) ಸ್ಮರಣ ಸಂಚಿಕೆ 'ದಶಮೀ' ಸಂಗ್ರಾಹ್ಯ ಎನಿಸಿದ ಒಂದು ಮಾದರಿ ಸಂಚಿಕೆ. 'ಹತ್ತು ವರುಷಗಳ ಹೆಜ್ಜೆಗುರುತು' ಸಂಚಾಲಕರಾಗಿ ರಾಮಚಂದ್ರ ಬರೆದ ಮಾತು ಅವರ ವಿಶಿಷ್ಟ ದೃಷ್ಟಿಕೋನಕ್ಕೆ

ಸಾಕ್ಷಿ: "ಜನಮಾನಸದಲ್ಲಾಗಲೀ ಪರಿಸರದಲ್ಲಾಗಲೀ ಒಂದು ವ್ಯಕ್ತಿ ಹೇಗೆ ತನ್ನ ಇರುವಿಕೆಯ ಅಚ್ಚನ್ನು, ಒಂದು ಸಂಸ್ಥೆ ಹೇಗೆ ತನ್ನ ಹೆಜ್ಜೆ ಗುರುತನ್ನು ಮೂಡಿಸಿತು ಎಂಬುದೇ ನಿಜವಾದ ಅಸ್ತಿತ್ವ ಮತ್ತು ಆಯುಷ್ಯ... ಸಂಘದ ಮುಂದಿರುವುದೆಂದರೆ ಉದ್ದಕ್ಕೂ ಬಾಚಿರುವ ನಿಡುದಾರಿಯೆಂದೇ ದಾರಿ ನಡೆಯುವದೇ ಅದರ ಗುರಿ."

ನನ್ನ ಮೊಮ್ಮಗ ಅಪೂರ್ವನನ್ನು ಪಿ.ಯು.ಸಿ. ಅಭ್ಯಾಸಕ್ಕೆ ಎರಡುವರ್ಷ ಹೊರಗಿನ ವಾತಾವರಣದ ಸಂಪರ್ಕವಿರಲೆಂದು ಧಾರವಾಡ ಬಿಟ್ಟು ಬೇರೆ ಕಾಲೇಜಿಗೆ ಸೇರಿಸ ಬೇಕೆಂದು ವಿಚಾರ ಮಾಡುತ್ತಿದ್ದಾಗ ನಮಗೆ ಹೊಳೆದದ್ದು ಕಾರ್ಕಳದ ಭುವನೇಂದ್ರ ಕಾಲೇಜು. ರಾಮಚಂದ್ರ ಆಗಲೇ ನಿವೃತ್ತರಾಗಿದ್ದರೂ ಅವರ ಕಣ್ಣರಿಕೆಯಲ್ಲಿ ಇರುತ್ತಾನೆಂಬ ಸಮಾಧಾನ. ಪ್ರಾಂಶುಪಾಲರಾದ ಪ್ರೊ. ಬಿ. ಪದ್ಮನಾಭಗೌಡರೂ ಅವನ ಯೋಗ ಕ್ಷೇಮವನ್ನು ಚೆನ್ನಾಗಿ ನೋಡಿಕೊಂಡರು. ಅಪೂರ್ವ ಪಿ.ಯು.ಸಿ. ಮುಗಿಸಿ ವಿಶಿಷ್ಟ ಅನುಭವಗಳೊಂದಿಗೆ ಧಾರವಾಡಕ್ಕೆ ಮರಳುವಂತಾಯಿತು.

೨೦೦೮ ಆ ಕಾಲೇಜಿನ ಸುವರ್ಣ ಮಹೋತ್ಸವ ವರ್ಷ. ಶೈಕ್ಷಣಿಕ ಶಿಸ್ತು, ಘನತೆ ಮತ್ತು ಸಾಂಸ್ಕೃತಿಕ ಅರಿವಿಗೆ ಕ್ರಿಯಾಶೀಲತೆಯಿಂದ ನಿರಂತರವಾಗಿ ಬದ್ಧತೆಯಿಂದ ಮಹತ್ವ ನೀಡುತ್ತ ಬಂದ ಸಂಸ್ಥೆ. ಆ ವರ್ಷ ಅಕ್ಟೋಬರ್ ೧೪ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ 'ಕನ್ನಡ ಸಾಹಿತ್ಯದ ಬೆಳವಣಿಗೆ' ಕುರಿತು ನಾಲ್ಕು ಉಪನ್ಯಾಸಗಳು ಹಾಗೂ ಪ್ರತಿಕ್ರಿಯೆಗಳನ್ನೊಳಗೊಂಡ ಕಾರ್ಯಕ್ರಮ ಅದಾಗಿತ್ತು. ಅದರ ಉದ್ಘಾಟನೆಗೆ ನನ್ನನ್ನು ಒಳಗೊಳಗೇ ಒಪ್ಪಿಸಿದವರು ಬೇರಾರೂ ಅಲ್ಲ, ರಾಮಚಂದ್ರರೇ. ಅಂದಿನ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ರಾಮಚಂದ್ರ ಅವರು ವಹಿಸಿದ್ದು ಸಹಜವಾಗಿಯೇ ಕಾಲೇಜಿನ ಬಂಗಾರಕ್ಕೆ ಕುಂದಣವಿಟ್ಟಂತಾಗಿತ್ತು. ಅಂದೇ ಸಂಜೆ ಉಜಿರೆ ಕಾಲೇಜಿನಲ್ಲಿ ನನ್ನ ಉಪನ್ಯಾಸಕ್ಕೆ ಏರ್ಪಾಡು. ಡಾ. ಹಾ.ಮಾ. ನಾಯಕ ರಿಂದ ಕೊಡುಗೆಯಾಗಿ ಬಂದ ಅವರ ಸ್ವಂತ ಗ್ರಂಥಾಲಯಕ್ಕೆ ಆ ಕಾಲೇಜಿನ ಗ್ರಂಥಾಲಯದಲ್ಲಿ ಅಚ್ಚುಕಟ್ಟಾದ ಒಂದು ಪ್ರತ್ಯೇಕ ವ್ಯವಸ್ಥೆಯಿರುವುದನ್ನು ಕಂಡು ನನ್ನ ಹೃದಯ ತುಂಬಿ ಬಂದಿತು. ಉಜಿರೆ ಕಾಲೇಜಿಗೆ ಭೆಟ್ಟಿಕೊಟ್ಟದ್ದೂ ಸಾರ್ಥಕವೆನಿಸಿತು.

ರಾಮಚಂದ್ರ ಅವರ ನಿಸ್ವಾರ್ಥ ಸೇವೆಯನ್ನು ಸಮಾಜ ಗುರುತಿಸಿ ಸಂದರ್ಭಾನುಸಾರ ಸನ್ಮಾನಿಸಿ ಅವರನ್ನು ಗೌರವಿಸಿದೆ. ಪ್ರಶಸ್ತಿ, ಪುರಸ್ಕಾರಗಳೂ ಅವರನ್ನು ಹಿಂಬಾಲಿಸಿವೆ. ಕಾರ್ಕಳ ತಾಲೂಕು ನಾಲ್ಕನೆಯ ಸಾಹಿತ್ಯ ಸಮ್ಮೇಳನ (೨೫-೨-೧೯೯೬) ಹಾಗೂ ಕಾಸರಗೋಡು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಅಧ್ಯಕ್ಷರಾಗಿ ಜನಮನ್ನಣೆಗೆ ಅವರು ಪಾತ್ರರಾಗಿದ್ದಾರೆ. ಈ ಎರಡೂ ಸಮ್ಮೇಳನಗಳ ಅಧ್ಯಕ್ಷ ಭಾಷಣಗಳ ವಿಷಯ ಅನುಕ್ರಮವಾಗಿ 'ಸಾಹಿತ್ಯದಲ್ಲಿ ಸಾಕಲ್ಯದೃಷ್ಟಿ-ಸಮಷ್ಟಿಹಿತ' ಹಾಗೂ 'ಸಾಹಿತ್ಯ: ಪರಮಾರ್ಥ-ಯಥಾರ್ಥ.' 'ಸಾಹಿತ್ಯದ ಒಬ್ಬ ನಮ್ರ ವಿದ್ಯಾರ್ಥಿಯಾಗಿ, ಜಿಜ್ಞಾಸುವಾಗಿ, ಕುತೂಹಲವಾಗಿ' ಅತ್ಯಂತ ಪ್ರಾಂಜಲ ಮನಸ್ಸಿನಿಂದ ಮಾಡಿದ ಈ ಭಾಷಣಗಳಲ್ಲಿ ಸಾಹಿತ್ಯ-ಸಮಾಜ-ವಾಚಕ ಲೋಕದ ಬಗೆಗಿನ ಒಟ್ಟು ಕಾಳಜಿಗಳು ಗಟ್ಟಿ

ಗೊಂಡಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಕೆಲವನ್ನಾದರೂ ಈ ಸಂದರ್ಭದಲ್ಲಿ ಓದುಗರ ಗಮನಕ್ಕೆ ತರುವದು ಅವಶ್ಯವೆಂದು ನನಗನಿಸಿದೆ:

"ನಮ್ಮ ಪಠ್ಯ ವ್ಯವಸ್ಥೆಯಲ್ಲಿ ಭಾಷಾಭ್ಯಾಸ, ಸಾಹಿತ್ಯಾಧ್ಯಯನ ಕೊನೆತನಕವೂ ಕಡ್ಡಾಯವಾಗಿರಬೇಕು."

"ತರುಣರಲ್ಲೇ ಏಕೆ ಎಲ್ಲ ವಯೋಮಾನದವರಲ್ಲೂ ಜೀವನಮೌಲ್ಯಗಳ ಬೀಜಕ್ಷೇಪ ಮಾಡಿ, ಅವರೆದೆಯಲ್ಲಿ ಮಾನವತೆಯ ಹೊಂಬೆಳಕನ್ನು ಹಚ್ಚಬಲ್ಲದ್ದೇ ಕಲೆ ಮತ್ತು ಸಾಹಿತ್ಯ".

"ಈಗೀಗ ನಮ್ಮ ಲೇಖಕರೆಲ್ಲ ಹೆಚ್ಚು ಹೆಚ್ಚು ಕೇಂದ್ರೀಕೃತ Self centred ವ್ಯಕ್ತಿಗಳಾಗುತ್ತಿದ್ದಾರೋ ಎಂಬ ಭಯ ನನ್ನನ್ನು ಕಾಡುತ್ತಿದೆ."

"ಒಂದು ಸಾಹಿತ್ಯ ಕೃತಿ ಜನಮನವನ್ನು ಹೇಗೆ ಮುಟ್ಟುತ್ತದೆ, ಕಾಲದೇಶಗಳನ್ನು ಮೀರಿ ಹೇಗೆ ನಿಲ್ಲುತ್ತದೆ ಎಂಬುದರಿಂದಲೇ ಅದಕ್ಕೆ ಮೌಲಿಕತೆ, ಮಾನ್ಯತೆಯಲ್ಲದೆ ಅದು ಯಾವ ಪಂಥದ ಯಾವ ಜಾತಿಯ ಲೇಖಕನ ಕೃತಿ ಎಂಬುದರಿಂದ ಅಲ್ಲ."

"ಈಗೀಗ ಸಂಶೋಧನವೆಂಬ ಹೆಸರಲ್ಲಿ ಹೆಚ್ಚಾಗಿ ನಡೆಯುತ್ತಿರುವುದು ಸರ್ವೇಕ್ಷಣ ಕಾರ್ಯಮಾತ್ರ. ಸಂಶೋಧನವೆಂಬುದು ವಾಙ್ಮಯ ತಪಸ್ಸು. ಅದನ್ನು ಸ್ನಾತಕೋತ್ತರ ಪದವಿಯೊಂದಿಗೆ ಸೇರಿಸಿಕೊಳ್ಳಲೇಬೇಕಾದ ಒಂದು ಉಪಸರ್ಗವೆಂದು ಯಾರೂ ತಿಳಿಯಬಾರದು."

"ಬಾಯ್ಮಾತು ಹೇಗಿದ್ದರೂ ನಡೆಯುತ್ತದೆ. ಆದರೆ ಬರವಣಿಗೆಯು ಎಡವಬಾರದು. ಬರವಣಿಗೆಯ ಭಾಷೆ ಸಾರ್ವತ್ರಿಕ ಸ್ವರೂಪದ್ದಾಗಿರುವುದು ಉಚಿತ. ಅದು ಅಕ್ಲಿಷ್ಟವೂ ಸ್ಪಷ್ಟವೂ ಆದುದಾಗಿರಬೇಕು... ಭಾಷೆ ಒಂದು ಉದ್ಯಾನ, ಗೊಂಡಾರಣ್ಯ ಅಲ್ಲ. ಉದ್ಯಾನದಲ್ಲಿ ಅಗತೆ, ಪಾತಿಗಳ ಕೆಲಸ ನಡೆಯಬೇಕು. ಆದರೆ ಗಿಡಬಳ್ಳಿಗಳು ತಾವೇ ಹುಲುಸಾಗಿ ಬೆಳೆಯಬೇಕು."

"ಸಾಹಿತ್ಯದಲ್ಲಿ ಸಾಕಲ್ಯ ದೃಷ್ಟಿ ಮತ್ತು ಸಮಷ್ಟಿ ಹಿತವೇ ನನ್ನ ಆಶಯ."

"ಭಕ್ತ ಭಾವಕ ಜನಕ್ಕೆ ತ್ರಿವೇಣೀ ಸಂಗಮವು ಹೇಗೆ ಅಧಿಕ ಪುಣ್ಯತರವೋ ಹಾಗೆ ಸಾಹಿತಿ, ವಿಮರ್ಶಕ, ವಾಚಕರ ತ್ರಿಕರಣಗಳು ಸಮರಸ ಭಾವದಿಂದ ಸಮನ್ವಯ ಗೊಂಡಾಗಲೇ ಸಾಹಿತ್ಯ ರಚನೆ, ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯಪಾಠಗಳ ಸಾರ್ಥಕತೆ."

"ಸಾರಾಸಾರ ವಿಚಾರಶೀಲರಾದ ವಾಚಕರ ಸಂಖ್ಯೆ ಹೆಚ್ಚಿದಾಗಲೇ ಸಾಹಿತ್ಯದ ಉತ್ಕರ್ಷ. ಅಂತಹ ಉತ್ಕರ್ಷದಿಂದಲೇ ಉತ್ಕೃಷ್ಟ ಸಾಹಿತ್ಯದ ನಿರ್ಮಾಣ."

ಕನ್ನಡ ಸಾಹಿತ್ಯದಲ್ಲಿ ಏನೇನು ಒಳ್ಳೆಯದು ಇದೆಯೊ ಅದೆಲ್ಲಕ್ಕೂ ನಾನು ಕಣ್ಣು, ಕಿವಿ, ಎದೆ ಎಲ್ಲವನ್ನು ತೆರೆದುಕೊಂಡಿದ್ದೇನೆ ಎಂಬ ಅವರ ಮಾತು ಅವರ ಯಾವ

ಬರವಣಿಗೆಯನ್ನು ನೋಡಿದರೂ ತಟ್ಟನೆ ಗೊತ್ತಾಗುತ್ತದೆ. ಸೇಡಿಯಾಪು, ಪಂಜೆ, ಮಾಸ್ತಿ, ವಿ.ಸೀ., ರಾಜರತ್ನಂ ಕುರಿತು ಸ್ವತಂತ್ರ ವ್ಯಕ್ತಿಚಿತ್ರಣದಲ್ಲಿ ಎತ್ತಿ ತೋರುವಂಥ ಪುಸ್ತಕಗಳನ್ನು ನೀಡಿರುವುದಲ್ಲದೆ 'ಬಾಡದ ಹೂಗಳು', 'ತೋರಣ', 'ರಸಾಯನ'ದಂತಹ ರುಚಿಕಟ್ಟಾದ ಲೇಖನಗಳ ಸಂಗ್ರಹಗಳನ್ನು ಸಲ್ಲಿಸಿದ್ದಾರೆ. ಸಂಪಾದಿತ ಕೃತಿಗಳಲ್ಲಿ ತಮ್ಮದೇ ಆದ ಮುದ್ರೆ ಒತ್ತಿರುವುದನ್ನು ಕಾಣಬಹುದು. ಅಂದವಾದ ಅಚ್ಚುಕಟ್ಟಾದ, ಅರ್ಥಪೂರ್ಣವಾದ ಅಂತರಂಗಕ್ಕೆ ತಾಗುವ ಅಚ್ಚಗನ್ನಡ ಭಾಷಾಶೈಲಿಯಲ್ಲಿ ರಾಮಚಂದ್ರ ಎತ್ತಿದ ಕೈ. ಅವರ ಸ್ನೇಹಿತರಾದ ಎಂ.ವಿ. ಭಟ್ ಹೇಳುವಂತೆ ಎಂ. ರಾಮಚಂದ್ರ ವಾಚಾಳಿಯಲ್ಲ. ಆದರೆ ವಾಗ್ಮಿ! ಸಮಯ ಸಂದರ್ಭಗಳ ಪರಿವೆಯಿಲ್ಲದೆ, ಹೊತ್ತು ಗೊತ್ತಿಲ್ಲದೆ ಅವರು ಮಾತನಾಡುವುದಿಲ್ಲ... "ಕಾರ್ಕಳದ ಕರಿಕಲ್ಲುಗಳನ್ನು ಸಾಹಿತ್ಯ ಸಿಂಚನದಿಂದ ಮೆದು ಮಾಡಿದ್ದಾರೆ. ತಂಗಾಳಿಗೆ ತಲೆದೂಗುತ್ತಾ ಕಲ್ಲುಗಳೆದೆಯಲ್ಲಿ ತಲೆಯೆತ್ತಿ ಶ್ವೇತ ಗುಲಾಬಿಯಾಗಿ ನಲಿದಿದ್ದಾರೆ."

ಕಪ್ಪು ಕಲೆಯಿಲ್ಲದ ಸ್ವಚ್ಛವಾದ ಬಿಳಿಯುಡುಪು, ಸೌಮ್ಯವಾದ ಬೆಳ್ನಗೆ, ನೇರವಾದ ನಡೆ, ನುಡಿ, ಎಪ್ಪತ್ತರಲ್ಲಿ ಮುಪ್ಪು ಅವರನ್ನು ಹೌದೊ ಅಲ್ಲವೊ ಎನ್ನುವಂತೆ ಮೂಸಿ ನೋಡಿ ದೂರ ಸರಿದಿದೆ. ಎಂ. ರಾಮಚಂದ್ರರು ಎಮ್ಮವರಾಗಿ ಹತ್ತಿರದಲ್ಲಿ ನಿತ್ಯವೂ ಹೀಗೆಯೇ ಎಂದಿನಂತೆ ನಗುತ್ತಿರಲಿ. 'ಸಾಹಿತ್ಯ ಪರಿಚಾರಕ' ಪದ ಕ್ಲೀಷೆ ಎನಿಸಿದ್ದರಿಂದ ಮತ್ತು ಅವರ ವ್ಯಕ್ತಿತ್ವವನ್ನು ಅದು ಸಂಪೂರ್ಣ ಚಿತ್ರಿಸುವುದಿಲ್ಲವಾದ್ದರಿಂದ 'ತಾಯ್ನುಡಿಯ ತಮ್ಮಡಿ' ಎಂದು ನಾನು ವಿಶಾಲಾರ್ಥದಲ್ಲಿ ಕರೆದದ್ದು. (ಮಾಸ್ತಿಯವರು ಹಿಂದೆ ತಮ್ಮನ್ನು ಹಾಗೆ ಕರೆದುಕೊಂಡದ್ದುಂಟು.) 'ತಮ್ಮಡಿ' ಪದಕ್ಕೆ ಅರ್ಚಕ, ಪೂಜಾರಿ, ಗುರು, ಮುನಿ, ಋಷಿ ಎಂಬೆಲ್ಲ ಅರ್ಥಗಳಿವೆ. ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಇವೆಲ್ಲ ಅಂಶಗಳ ರಸಪಾಕವಾಗಿ ಎಮ್ಮ (ಎಂ) ರಾಮಚಂದ್ರ ನನಗೆ ಕಂಡಿದ್ದಾರೆ. ಯಾಕೆಂದರೆ, ರಾಮಚಂದ್ರ ಹೂವುಗಳನ್ನು ಪೋಣಿಸಿ ಮಾಲೆ ಮಾಡುವ ದಾರವಷ್ಟೇ ಅಲ್ಲ, ಸ್ವತಃ ಹೂವಾಗಿ ಪರಿಮಳ ಬೀರಿದವರು. ನನ್ನ ಕವಿತೆಯೊಂದರ ಎರಡು ಸಾಲುಗಳು ಹೀಗಿವೆ:

ಹೋಗಬೇಡ ಕವಿತೆ ನೀನು, ಬಾಗಬೇಡ ಯಾರಿಗೂ
ತೂಗಿ ನೋಡಿ ಬೆಲೆಯ ಕಟ್ಟು, ಹೂವಿನಂತೆ ನಾರಿಗೂ

('ಚಂದ್ರಮ'-೨೦೧೧)

ಕೃತಾರ್ಥ

ಸಂಸ್ಕೃತಿಯನ್ನು ಕುರಿತು ಅನೇಕರು ಅನೇಕ ಬಗೆಯ ವ್ಯಾಖ್ಯೆಗಳನ್ನು ಕೊಟ್ಟಿದ್ದರೂ ಅದು ಸುಲಭವಾಗಿ ಎಟಕುವದಿಲ್ಲ. ಆದರೆ ಸುಸಂಸ್ಕೃತರ ಸಂಪರ್ಕ ಅದನ್ನು ಒದಗಿಸಿಕೊಡಬಲ್ಲುದು, ಹೂವಿನ ಪರಿಮಳದಂತೆ. ಸಿಂದಗಿಯ ಡಾ.ಬಿ.ಆರ್. ನಾಡಗೌಡರು ಅಂಥ ಒಬ್ಬ ವ್ಯಕ್ತಿ. ವೃತ್ತಿಯಿಂದ ಅವರು ವೈದ್ಯರು. ಔಷಧ ಕೊಡುವುದಷ್ಟೇ ವೈದ್ಯರ ಕರ್ತವ್ಯವಿರಬಹುದು. ಹಾಗೆಯೇ ಪಾಠ ಹೇಳುವುದಷ್ಟೇ ಅಧ್ಯಾಪಕರ ಕೆಲಸವಾಗಿರಬಹುದು. ನಿಯಮಗಳಿಗೆ ಅನುಸರಿಸಿ ಅದೆಲ್ಲ ಸರಿಯೇ. ಆದರೆ ಅವರ ವರ್ತನೆ ಮನುಷ್ಯರೊಡನೆ ಇರುವುದರಿಂದ ಅಂಥ ಸಂಬಂಧ ಮಾನವೀಯವಾಗಿರ ಬೇಕೆಂಬುದನ್ನು ಬೇರೆ ಹೇಳಬೇಕಿಲ್ಲ. ಇನ್ನಷ್ಟು ಮುಂದುವರಿದರೆ ಅದು ಒಂದು ಸಮುದಾಯವನ್ನು ಮುದಗೊಳಿಸಬಲ್ಲುದು. ಅದರ ಹಿತಕ್ಕೆ ಪೋಷಕವಾಗಬಲ್ಲುದು. ಇಂಥ ಮಧುರ ಸಂಬಂಧಗಳು ಸೌಜನ್ಯವನ್ನು ಅಪೇಕ್ಷಿಸುತ್ತವೆ. ಅಂಥ ಮನೋಧರ್ಮವನ್ನು ಡಾ. ನಾಡಗೌಡರಂಥ ವ್ಯಕ್ತಿಗಳಲ್ಲಿ ಕಾಣುತ್ತೇವೆ.

ಬಹಳ ವರ್ಷಗಳ ಹಿಂದಿನ ಮಾತು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನ್ಯಾಸ ಶಿಬಿರಗಳು ಹಳ್ಳಿಪಟ್ಟಣಗಳೆನ್ನದೆ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರದ ಗುರಿಯನ್ನಿಟ್ಟುಕೊಂಡು ತುಂಬ ಜನಪ್ರಿಯವಾಗಿದ್ದ ಕಾಲ. ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರು ಆಸ್ಥೆಯಿಂದ ಇವುಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ ಸಾಮಾನ್ಯ ಜನತೆಯ ಸಂಪರ್ಕದಿಂದ ಹಾಗೂ ಗ್ರಾಮೀಣ ಪರಿಸರದಿಂದ ಒಂದು ಬಗೆಯ ವಿಶೇಷವಾದ ಅನುಭವವನ್ನೂ ಅವರು ಪಡೆಯುತ್ತಿದ್ದರು. ಇಂಥ ಒಂದು ಉಪನ್ಯಾಸ ಶಿಬಿರವನ್ನು ಸಿಂದಗಿ ತಾಲೂಕಿನ ಅಸ್ಕಿ ಗ್ರಾಮದಲ್ಲಿ ಏರ್ಪಡಿಸಿದಾಗ ಅಲ್ಲಿ

ತಮ್ಮ ವೈದ್ಯಕೀಯ ವೃತ್ತಿಯನ್ನು ಪ್ರಾರಂಭಿಸಿದ್ದ ನಾಡಗೌಡರು ಆಸ್ಥೆಯಿಂದ ಅಲ್ಲಿಯ ಜನರ ಸಹಕಾರದೊಡನೆ ಯಶಸ್ವಿಯಾಗಿ ನಿರ್ವಹಿಸಿದರು. ಉಪನ್ಯಾಸಕರಲ್ಲಿ ಪತ್ರಕರ್ತರಾಗಿದ್ದ ವ್ಹಿ.ಬಿ. ನಾಯಕರೂ ಒಬ್ಬರಾಗಿದ್ದು ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಉದ್ಬೋಧಕ ಭಾಷಣ ಮಾಡಿದರು. ತಮಗೆ ಮೊದಲೇ ಪರಿಚಯವಿದ್ದ ವ್ಹಿ.ಬಿ. ನಾಯಕರಿಂದ ಶಿಬಿರದ ವ್ಯವಸ್ಥೆಯ ಬಗ್ಗೆ ನಾಡಗೌಡರು ಮಾರ್ಗದರ್ಶನ ಪಡೆದಿದ್ದರು. ತಮ್ಮ ವೃತ್ತಿ ಜೀವನದ ಪ್ರಾರಂಭದ ಏಳು ವರ್ಷಗಳನ್ನು ಅಸ್ಕಿಯಲ್ಲಿ ಕಳೆದ ನಂತರ ಅವರು ಸಿಂದಗಿಗೆ ಬಂದರು. ಸಾಂಸ್ಕೃತಿಕ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಲೇ ಬಂದವು.

ಅಂದಿನಿಂದ ಇಂದಿನವರೆಗೂ ಅವರ ಸ್ನೇಹಸಂಪರ್ಕ ಬೆಳೆದುಕೊಂಡು ಬಂದಿದೆ. ಸಿಂದಗಿಯಲ್ಲಿಯೇ ನಮ್ಮ ಉಪನ್ಯಾಸ ಶಿಬಿರವಿದ್ದಾಗ ಎಲ್ಲ ಉಪನ್ಯಾಸಕರನ್ನು ಮನೆಗೆ ಬರಮಾಡಿಕೊಂಡು ಅತಿಥ್ಯ ನೀಡಿದರು. ನಾನು ಸಿಂದಗಿಗೆ ಬೇರೆ ಕಾರ್ಯಕ್ರಮಗಳಿಗೆ ಹೋದಾಗಲೂ ಅವರ ಮನೆಯ ಬೇಟಿ ತಪ್ಪುತ್ತಿರಲಿಲ್ಲ. ಅವರ ಕೌಟುಂಬಿಕ ಜೀವನವೂ ಪ್ರೀತಿ ಬರುವಂತಿದೆ. ಕುಟುಂಬ ಅಥವಾ ಮನೆ ನಾಗರಿಕ ಸಮಾಜದ ತಳಹದಿ ಮಾತ್ರವಲ್ಲ, ಅದೊಂದು ನಿಸರ್ಗ ಸಹಜ ಸುಂದರ ವ್ಯವಸ್ಥೆ. ಮೂಲತಃ ಸಾಂಸ್ಕೃತಿಕ ವಿಕಾಸಕ್ಕೆ, ಸಾಮಾಜಿಕ ಸಂಘಟನೆಗೆ, ಬೌದ್ಧಿಕ ಪ್ರಗತಿಗೆ, ಆಧ್ಯಾತ್ಮಿಕ ಸಾಧನೆಗೆ ಮಾನವೀಯ ಗುಣಗಳ ಹಾಗೂ ನೈತಿಕತೆಯ ಸಂವರ್ಧನೆಗೆ ಮನೆಯೇ ಮೂಲ ಹಾಗೂ ಚಾಲಕಶಕ್ತಿ. ನಾಡಗೌಡರಂಥ ಎಲ್ಲ ಬಗೆಯ ಚಟುವಟಿಕೆಗಳ ಹಿಂದೆ ಇಂಥ ಒಂದು ಸುಸಂಸ್ಕೃತವಾದ ಕೌಟುಂಬಿಕ ವಾತಾವರಣವಿರುವುದನ್ನು ಯಾರೂ ಕಾಣಬಹುದು. ಅವರ ಮಗಳು ಮಿತ್ರವಿಂದಾ ಪಾಟೀಲ ಒಳ್ಳೆಯ ಕವಯತ್ರಿಯಾಗಿದ್ದು ಪ್ರಥಮ ಸಂಕಲನ 'ಪ್ರತಿಬಿಂಬ'ಕ್ಕೆ ನಾನು ಸಂತೋಷದಿಂದ ಮುನ್ನುಡಿಯನ್ನು ಬರೆದಿದ್ದೇನೆ. 'ಜಗತ್ತಿನೊಡನೆ ನಾವು ಹಳಬರಾಗುತ್ತ ಹೊರಟಿದ್ದೇವೆ ಎಂದು ಅನಿಸುತ್ತಿರುವಂತೆಯೇ ಹೊಸ ಹೊಸ ರೂಪ ತಾಳಿ ನೂರಾರು ಅರ್ಥಗಳನ್ನು ತೋರಿಸುತ್ತ ತನ್ನೊಂದಿಗೆ ಬರಲು ಹೇಳಲು 'ಬದುಕಿ'ನ ಬಗೆಯನ್ನು ಕಂಡ ಮಿತ್ರವಿಂದಾ ಅವರ ಕವಿತೆಗಳು ಅವರ ಕಾವ್ಯಜೀವನದ ಭವಿಷ್ಯದ ಭರವಸೆ ಹುಟ್ಟಿಸುತ್ತವೆ' ಎಂಬ ಮಾತನ್ನು ಅಲ್ಲಿ ಕಾಣಿಸಿದ್ದೇನೆ.

ಡಾ. ನಾಡಗೌಡರ ಹಲಬಗೆಯ ಆಸಕ್ತಿಗಳನ್ನು, ಸಾಂಸ್ಕೃತಿಕ ಕಾಳಜಿಗಳನ್ನು ಕಂಡುಕೊಂಡ ನಾನು ಬೀದರ ಜಿಲ್ಲೆಯ ಬಗದಲ ಗ್ರಾಮದಲ್ಲಿ ಏರ್ಪಡಿಸಿದ ಪ್ರಸಾರಾಂಗದ ಉಪನ್ಯಾಸ ಶಿಬಿರಕ್ಕೆ ಉಪನ್ಯಾಸಕಾರರಾಗಿ ಅವರನ್ನು ಆಮಂತ್ರಿಸಿದೆ. ರಂಗಭೂಮಿಯ ನಟಸಾರ್ವಭೌಮ ಸಿದ್ಧರಾಮಪ್ಪ ಹಂದಿಗನೂರ ಅವರನ್ನು ಕುರಿತು ಅವರು ಭಾಷಣ ಮಾಡಿದರು. ಜನರಿಗೆ ಅದು ತುಂಬ ಹಿಡಿಸಿತು. ಅದನ್ನು ಕಿರುಹೊತ್ತಿಗೆಯಾಗಿ ಉಪನ್ಯಾಸ ಗ್ರಂಥಮಾಲೆಯಲ್ಲಿ ೧೯೮೦ರಲ್ಲಿಯೇ ಪ್ರಕಟಿಸಲಾಯಿತು. ತಾವು ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ದೇವರ ಹಿಪ್ಪರಗಿಯಲ್ಲಿ ಸಿದ್ಧರಾಮಪ್ಪನವರ 'ವಿಶ್ವರಂಜನ ನಾಟ್ಯ ಕಲಾಸಂಘ'ದ ಪರಿಪ್ಲಂದ್ರ ನಾಟಕ ನೋಡಿದ್ದನ್ನು ಜ್ಞಾಪಿಸಿಕೊಂಡು ಅವರ

ಜೀವನ-ಸಾಧನೆಯ ಸ್ವರೂಪವನ್ನು ಸಾರವತ್ತಾಗಿ ಅದರಲ್ಲಿ ನಿರೂಪಿಸಿದ್ದಾರೆ. ಅವರ ಮುಂದಿನ ಲೇಖನ ವ್ಯವಸಾಯಕ್ಕೆ ಈ ಚಿಕ್ಕಹೊತ್ತಿಗೆ ಪ್ರೇರಣೆ ನೀಡಿತೆಂದರೆ ತಪ್ಪಾಗದು.

'ಸಾನ್ನಿಧ್ಯ', 'ಮೊಹರೆ ಹನುಮಂತರಾಯರು', 'ರಿಡಿಂಗ್ ಇಂಗ್ಲೆಂಡ ಪ್ರವಾಸಕಥನ' ಇವೇ ಮೊದಲಾದ ಅವರ ಪುಸ್ತಕಗಳು ಇದಕ್ಕೆ ಒಳ್ಳೆಯ ನಿದರ್ಶನಗಳಾಗಿವೆ. 'ನಾನು ಚಿಕ್ಕವನಿಂದಾಗಲೂ ಸುದೈವದಿಂದ ಅನೇಕ ಹಿರಿಯ ಸಾಹಿತಿಗಳನ್ನು ಹಿರಿಯ ಕಲಾವಿದರನ್ನು ದೂರದಿಂದಲೂ ಸಮೀಪದಿಂದಲೂ ನೋಡಿ, ಅವರನ್ನು ಮಾತನಾಡಿಸಿ ಹರ್ಷಗೊಳ್ಳುವುದರ ಜೊತೆಗೆ ಸ್ವಲ್ಪಮಟ್ಟಿಗೆ ಓದುವ ಹವ್ಯಾಸವನ್ನು ಬೆಳೆಸಿಕೊಂಡವನು' ಎಂದು 'ಸಾನ್ನಿಧ್ಯ'ದಲ್ಲಿ ಹೇಳಿಕೊಂಡದ್ದು ಅವರ ಬರವಣಿಗೆಗೂ ಪುಟಗೊಟ್ಟಿರುವುದನ್ನು ಇಲ್ಲಿ ಕಾಣಬಹುದು. ಹಿರಿಯ ಸಾಹಿತಿಗಳ ಒಡನಾಟದಲ್ಲಿ ಅನುಭವಿಸಿದ ಕೆಲವು ರೋಚಕ ಘಟನೆಗಳನ್ನು, ಸನ್ನಿವೇಶಗಳನ್ನು ವ್ಯಕ್ತಿಚಿತ್ರದ ಮಾದರಿಯಲ್ಲಿ ಜೀವಂತವಾಗಿ ಇಲ್ಲಿ ಹಿಡಿದಿಟ್ಟಿದ್ದಾರೆ. ಅವರ ಷಷ್ಟಿಪೂರ್ತಿ ಸಮಾರಂಭದ ಸಂದರ್ಭದಲ್ಲಿ (೧೯೯೪) ಇದು ಪ್ರಕಟವಾಗಿರುವುದು ಔಚಿತ್ಯಪೂರ್ಣವಾಗಿದೆ. 'ಮೊಹರೆ ಹನುಮಂತರಾಯರು' (೨೦೦೧), 'ಇಂಗ್ಲೆಂಡ ಪ್ರವಾಸ ಕಥನ' (೨೦೦೬) ಪುಸ್ತಕಗಳು ಲೇಖನ ಕಲೆಯಲ್ಲಿ ಅವರು ಪಳಗುತ್ತ ಬಂದಿರುವುದನ್ನು ಸೂಚಿಸುತ್ತವೆ. ಡಾ.ಎಂ.ಎಂ. ಕಲಬುರ್ಗಿ ಹಾಗೂ ಸಿಂದಗಿಯ ನೆಲೆ ಪ್ರಕಾಶನದ ಮಿತ್ರರಿಂದ ನಾಡಗೌಡರಿಗೆ ಈ ದಿಸೆಯಲ್ಲಿ ದೊರೆತ ಪ್ರೋತ್ಸಾಹವೂ ಅಷ್ಟೇ ಗಮನಾರ್ಹವಾಗಿದೆ.

ಡಾ. ನಾಡಗೌಡರು ಸಿಂದಗಿಯಲ್ಲಿ 'ಭಾರತೀಯ ಸಂಸ್ಕೃತಿ ಪ್ರಸಾರ ಮಂಡಳಿ'ಯನ್ನು ಸ್ಥಾಪಿಸಿ ಅದರ ಮುಖಾಂತರ ಸ್ನೇಹಿತರ ಸಹಕಾರದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದ ರೀತಿ ಕೂಡ ಅನುಕರಣೀಯವೆನ್ನಬಹುದು. ಬೇಂದ್ರೆ, ಕಾರಂತ, ಕೃಷ್ಣಮೂರ್ತಿಪುರಾಣಿಕ, ರಾವಬಹದ್ದೂರ, ಅಣ್ಣು ಗುರೂಜಿ, ಬೀಚಿ ಮೊದಲಾದ ಗಣ್ಯರು ಈ ಮಂಡಳಿಯ ಕಾರ್ಯಕ್ರಮಗಳಿಗೆ ಬಂದು ಹೋದದ್ದು ಆ ಭಾಗದ ಪರಿಸರದ ಸಾಂಸ್ಕೃತಿಕ ವಾತಾವರಣಕ್ಕೆ ಹೆಚ್ಚಿನ ಕಳೆಯನ್ನು ತಂದುಕೊಟ್ಟಿರಲು ಸಾಕು. ಇದರ ಜೊತೆಗೆ ಖಾದೀ-ಔದ್ಯೋಗಿಕ ಸಂಘ, ಶಿಕ್ಷಣ ಪ್ರಸಾರ ಸಮಿತಿ, ಭೀಮಾಶಂಕರ ಮಠದ ಧಾರ್ಮಿಕ ಸಮಿತಿ, ಲಾಯನ್ಸ ಸಂಸ್ಥೆ, ಭಗವದ್ಗೀತೆ-ಭಾಗವತ ಕುರಿತ ಉಪನ್ಯಾಸಗಳು, ಹಾವನೂರ ವರದಿ, ಗೋಕಾಕ ಚಳವಳಿ ಇವೇ ಮೊದಲಾದವುಗಳಲ್ಲಿ ಡಾ. ನಾಡಗೌಡರು ವಹಿಸಿದ ಪಾತ್ರ, ನಿರ್ವಹಿಸಿದ ಕಾರ್ಯ ಅವರಿಗೆ ಘನತೆಯನ್ನೂ ಗೌರವವನ್ನೂ ತಂದುಕೊಟ್ಟಿವೆ.

ಡಾ. ನಾಡಗೌಡರಿಗೆ ಬೇಂದ್ರೆ ಸಾಹಿತ್ಯದಲ್ಲಿ ವಿಶೇಷ ಒಲವು. ವರಕವಿಯ ವ್ಯಕ್ತಿತ್ವದಿಂದ ಆಕರ್ಷಿತರಾದ ಅವರು ಬೇಂದ್ರೆಯವರ ನಿಧನದ ನಂತರ 'ಅಂಬಿಕಾತನಯದತ್ತ ವೇದಿಕೆ' ಯನ್ನು ಪ್ರಾರಂಭಿಸಿದರು. ತಮ್ಮ ಮನೆಯನ್ನೇ ಮೊದಲ ವೇದಿಕೆಯನ್ನಾಗಿ ಮಾಡಿಕೊಂಡು ಅವರು ಅದನ್ನು ಹೊರಗೂ ವಿಸ್ತರಿಸಿದರು. 'ಬೇಂದ್ರೆಸ್ಮೃತಿ' ಕಾರ್ಯಕ್ರಮದ ಜೊತೆಗೆ ಹಿರಿಯ ಸಾಹಿತಿಗಳ ಸ್ಮರಣೆ, ಹಾಗೂ ಕಾವ್ಯಗಾಯನ ನಡೆದುಕೊಂಡು ಬಂದಿವೆ.

ಅವರ ಮನೆಯಲ್ಲಿ ಇಂಥ ಒಂದು ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೂ ಉಂಟು. ಬೇಂದ್ರೆ ಪ್ರತಿಷ್ಠಾನವನ್ನು ಸ್ಥಾಪಿಸಿ ಪ್ರತಿವರ್ಷ ಗದ್ಯ-ಪದ್ಯವನ್ನೊಳಗೊಂಡಂತೆ ಆಯ್ದ ಕೃತಿಗಳ ಲೇಖಕರಿಗೆ ಮೂರು ಸಾವಿರ ರೂ. ನಗದು ಬಹುಮಾನ, ಸನ್ಮಾನ ಸಲ್ಲಿಸುವುದಲ್ಲದೆ ಸಾಮಾಜಿಕ ಕಾರ್ಯಕರ್ತರನ್ನು ಗೌರವಿಸುವ ಕಾರ್ಯವೂ ನಡೆಯುತ್ತಿದೆ. ಧಾರವಾಡ ಆಕಾಶವಾಣಿಯ ಗ್ರಾಮಾಂತರ ಪ್ರದೇಶದ ಪ್ರಸಾರ ಸಲಹಾ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸುವುದಲ್ಲದೆ, ಸ್ವಂತ ರೇಡಿಯೋ ನಾಟಕಗಳನ್ನೂ 'ಚಿಂತನ'ಗಳನ್ನೂ ಪ್ರಸಾರಗೊಳಿಸಿದ್ದಾರೆ.

ವೈದ್ಯವೃತ್ತಿಯ ೫೨ನೆಯ ವರ್ಷದಲ್ಲಿಯೂ ಇವೆಲ್ಲ ಚಟುವಟಿಕೆಗಳೂ ನಿರಾತಂಕವಾಗಿ ಮುಂದುವರಿದಿವೆ. ವಿಜಾಪುರ ಜಿಲ್ಲೆಯ ಹಿರಿಯ ವ್ಯಕ್ತಿಗಳ ಅಭಿನಂದನ ಗ್ರಂಥಗಳಿಗೆ ಲೇಖನ ಬರೆಯುವುದನ್ನು ಅವರು ತಪ್ಪಿಸಿಲ್ಲ. ಧಾರ್ಮಿಕ ಹಾಗೂ ಸಾಹಿತ್ಯಿಕ ಸಂಘ ಸಂಸ್ಥೆಗಳ ಗೌರವ-ಸನ್ಮಾನಗಳಿಗೂ ಅವರು ಪಾತ್ರರಾಗಿದ್ದಾರೆ. ಓದುವವರೆಲ್ಲ ಬುದ್ಧಿವಂತರಲ್ಲ, ಬುದ್ಧಿವಂತರೆಲ್ಲ ಹೃದಯವಂತರಲ್ಲ, ಬುದ್ಧಿ-ಭಾವಗಳ ಸಮ್ಮಿಲನದಿಂದ ಪೂರ್ಣ ವ್ಯಕ್ತಿತ್ವ ಸಿದ್ಧಿಸುತ್ತದೆ. ಆ ಹಾದಿಯಲ್ಲಿ ಸಾಗಿರುವ ಡಾ. ನಾಡಗೌಡರಿಗೆ ಇದೀಗ ೮೦. ಅಂದರೆ ಎಂಬತ್ತು ವಸಂತಗಳ ಚಿಗುರೆಲೆಗಳನ್ನು ಕಂಡು, ವಿಧವಿಧ ವಿಹಗಸ್ವನಗಳಿಂದ ಮನಸ್ಸು ತುಂಬಿಕೊಳ್ಳುವ ಮನೋಧರ್ಮ ಅವರದು. ಜೀವನದ ಸಾರ್ಥಕತೆ ಎಂದರೆ ಇನ್ನೇನು?

('ಆತ್ರೇಯ' ೨೦೧೨)

ನಿಡಸೋಸಿಯ ನಿಶ್ಶಬ್ದ ಮೂರ್ತಿ

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬೆರೆವೆ ನಾನು ಕೆಚ್ಚು ಬೆಳೆಯಿತ್ತಯ್ಯ!
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರದಂತೆ ಮಾಡು ಕೂಡಲಸಂಗಮದೇವಾ.

ಅಹಂಕಾರ ಬೆಳೆಯುವುದಕ್ಕೆ ಸಾಧನಗಳು ಸುತ್ತಮುತ್ತ ಸಾಕಷ್ಟಿವೆ. ಬಂದ ಬಂದವರೆಲ್ಲರಿಗೂ ನಾನು ದೊಡ್ಡವನೆಂದು ನಮಸ್ಕರಿಸುತ್ತಾರೆ. ಇದರಿಂದ 'ಅಯ್ಯತನ' ಅಂದರೆ, ನಾನು ಶ್ರೇಷ್ಠನೆಂಬ ಭಾವ ತಲೆಗೇರಿ ಹಿರಿದಾಗಿ ಮೆರೆಯುತ್ತೇನೆ. ಕೆಚ್ಚು ಅಂದರೆ ಸೊಕ್ಕು ಬೆಳೆಯುತ್ತದೆ. ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು, ಅಂದರೆ ಅಹಂಕಾರವನ್ನು ಸುಟ್ಟು ಬೂದಿ ಮಾಡಿ ಶರಣರ ಸಂಗದಲ್ಲಿ ಸುಲಗ್ನಗೊಳಿಸು ಎಂದು ಪ್ರಾರ್ಥಿಸುತ್ತಾರೆ ಬಸವಣ್ಣನವರು.

ಕಾವಿಯುಟ್ಟವರೆಲ್ಲ ಕಾಲು ಮುಂದೆ ಮಾಡುವ ಇಂದಿನ ಕಾಲದಲ್ಲಿ ಬಸವಣ್ಣನವರ ಈ ಆತ್ಮನಿರೀಕ್ಷಣೆ ಎಷ್ಟು ಜನಕ್ಕೆ ಬಂದೀತು? ಆದರೂ ಈ ಬಗೆಯ ಬಸವಮನೋಧರ್ಮವನ್ನು ಹೊಂದಿದವರು ಅಲ್ಲಲ್ಲಿ ಕೆಲವರಿದ್ದಾರೆ. ಅಂತೆಯೇ ಸಮಾಜದಲ್ಲಿ ಒಂದು ಸಮತೋಲನವನ್ನು ಸಾಧಿಸಲು ಸಾಧ್ಯವಾಗಿದೆ. ಅಂಥವರಲ್ಲಿ ನಿಡಸೋಸಿಯ ಶ್ರೀ ದುರದುಂಡೀಶ್ವರ ಸಿದ್ಧ ಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು ಒಬ್ಬರು. ನಾವು ಬಾಗುವ ಮುನ್ನವೇ ನಮ್ಮನ್ನೆತ್ತಿ ಹಿಡಿದು ಅವರು ಕ್ಷೇಮ ಸಮಾಚಾರದ ಮಾತನಾಡುತ್ತಾರೆ. ಇದನ್ನು ನಾನೇ ಎಷ್ಟೋ ಸಲ ಅನುಭವಿಸಿರುವುದರಿಂದ ಸಹಜವಾಗಿಯೇ ಅವರ ಬಗ್ಗೆ ಗೌರವ ಭಾವನೆ ಬೆಳೆಯುತ್ತ ಬಂದಿದೆ. ಎರಡನೆಯವರಲ್ಲಿ ದೊಡ್ಡತನವನ್ನರಸುವ ಬುದ್ಧಿ ಅವರದಾಗಿರುವುದರಿಂದ ಅವರಲ್ಲಿ ಅಹಂಕಾರದ ಮಾತೇ ಇಲ್ಲ.

೧೯೯೬ರಲ್ಲಿ ಹಾಸನದಲ್ಲಿ ಆಯೋಜಿಸಿದ ಅ.ಭಾ. ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನು ಒಮ್ಮತದಿಂದ ಆಯ್ಕೆ ಮಾಡಿದಾಗ, ನನ್ನನ್ನು ಅತ್ಯಂತ ಸಮೀಪದಿಂದ ಬಲ್ಲ ಧಾರವಾಡ ಹುಬ್ಬಳ್ಳಿ ಮಹಾನಗರ ಪಾಲಿಕೆ ಪೌರಸನ್ಮಾನ ನೀಡಿ ಗೌರವಿಸಿದ್ದು ಸಹಜವೇ. ಆದರೆ ಅದಕ್ಕೂ ಮೂರು ವರ್ಷದ ಹಿಂದೆಯೇ ೧೯೯೩ ಆಗಸ್ಟ್ ೨೯ರಂದು ದೂರದ ಗಡಿಯಲ್ಲಿರುವ ಸಂಕೇಶ್ವರದ ಪುರಸಭೆ ನನಗೆ ಪೌರ ಸನ್ಮಾನವನ್ನು ನೀಡಿ ಸತ್ಕರಿಸಿದ್ದು, ನನಗೆ ಅಚ್ಚರಿಯನ್ನುಂಟು ಮಾಡಿತು. ಇಷ್ಟಲ್ಲದೆ ನನ್ನ ಸಾಹಿತ್ಯ ಕುರಿತು ಎರಡು ವಿಚಾರಗೋಷ್ಠಿಗಳನ್ನು ಏರ್ಪಡಿಸಿದ್ದು ಕೂಡ ಅರ್ಥಪೂರ್ಣವಾಗಿತ್ತು. ಈ ಇಡೀ ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ವಿಮರ್ಶಕ ಮಿತ್ರ ಡಾ. ಗುರುಪಾದ ಮುರಿಗುದ್ದಿ ಯವರ ಹಂಬಲ ಸಾಕಾರಗೊಳ್ಳಲು ಆಶೀರ್ವದಿಸಿದವರು ನಿಡಸೋಸಿಯ ಜಗದ್ಗುರು ಶ್ರೀ ಶಿವಲಿಂಗೇಶ್ವರ ಸ್ವಾಮಿಗಳೆಂಬುದು ನನಗೆ ಆಮೇಲೆ ತಿಳಿದು ಧನ್ಯತೆಯನ್ನುಂಟು ಮಾಡಿತು. ಅಂದು ಶ್ರೀಗಳವರು ವಿಚಾರ ಸಂಕಿರಣ ಪೂರ್ತಿ ಮುಗಿಯುವವರೆಗೆ ಶ್ರೀಸಾಮಾನ್ಯರಂತೆ ಸಾಹಿತ್ಯಾಸಕ್ತರ ನಡುವೆ ಕುಳಿತು ಉಪನ್ಯಾಸಗಳನ್ನು ಆಲಿಸಿ ಆಸ್ವಾದಿಸಿದರು. ಇದು ನಿಜಕ್ಕೂ ಅಪರೂಪದ ಸಂಗತಿ. ಅಂದಿನ ವಿಚಾರ ಸಂಕಿರಣದಲ್ಲಿ ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿ ನನ್ನ ಕಾವ್ಯವನ್ನು ಕುರಿತು ಮಾತನಾಡಿದ ಪ್ರೊ. ಕಿ.ರಂ. ನಾಗರಾಜ ಅವರು ಸ್ವಾಮಿಗಳ ಈ ಸರಳತೆ ಹಾಗೂ ಸಹೃದಯತೆಯನ್ನು ಕಂಡು ಸಂತುಷ್ಟರಾದದ್ದು ಇಲ್ಲಿ ಸ್ಮರಣೀಯ.

ಅಂದೇ ಸಂಜೆ ಶ್ರೀಗಳವರು ಎಲ್ಲ ಅತಿಥಿಗಳನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ಪ್ರಸಾದ ವ್ಯವಸ್ಥೆ ಮಾಡಿ ಸಂತೋಷಪಟ್ಟು ಎಲ್ಲರನ್ನೂ ಸತ್ಕರಿಸಿದರು. ಹಿಂದಿನ ಜಗದ್ಗುರುಗಳು ಉಪಯೋಗಿಸುತ್ತಿದ್ದ ಬೆಳ್ಳಿ ಪಲ್ಲಕ್ಕಿ, ಕಿರೀಟ, ಬೆಳ್ಳಿ ಬೆತ್ತ ಇತ್ಯಾದಿಗಳು ಈಗ ಪ್ರದರ್ಶನದ ವಸ್ತುಗಳಾಗಿ ಒಂದು ಕೋಣೆಯಲ್ಲಿ ಭದ್ರವಾಗಿವೆ. ಭಕ್ತರು ಅಪೇಕ್ಷೆಪಟ್ಟರೂ ಅವನ್ನು ದೂರವಿರಿಸಿದ್ದು ಇಂದಿನ ಸ್ವಾಮೀಜಿಯವರ ಸರಳತೆಯ ದ್ಯೋತಕವೆಂದೂ ಬದಲಾವಣೆಯ ಪ್ರಗತಿಪಥದಲ್ಲಿ ಇಟ್ಟ ಹೆಜ್ಜೆಯೆಂದೂ ಅಂದು ನನ್ನ ಜೊತೆಗಿದ್ದ ಸಾಹಿತಿಗಳೆಲ್ಲರೂ ಮೆಚ್ಚಿಕೊಂಡರು.

ಕಟ್ಟುಮಸ್ತಾದ ಸ್ವಚ್ಛ ಬಿಳಿಕುದುರೆಯೊಂದು ಮಠದಲ್ಲಿದೆ. ಮಠಕ್ಕೆ ಸಂಬಂಧಪಟ್ಟ ಸುತ್ತಲಿನ ಹೊಲಗಳಲ್ಲಿ ನಡೆಯುತ್ತಿರುವ ಕೆಲಸಗಳನ್ನು ನಿರೀಕ್ಷಿಸಲು ಬೆಳಗಿನಲ್ಲಿ ಸುತ್ತಿಬರಲು ಸ್ವಾಮಿಗಳು ಅದನ್ನು ಉಪಯೋಗಿಸುತ್ತಾರೆ. ಸ್ವಲ್ಪ ದೂರದಲ್ಲಿರುವ ತಾವೇ ಪ್ರಾರಂಭಿಸಿದ, ಆಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಪಾಲಿಟೆಕ್ನಿಕ್ ಕಾಲೇಜಿಗೂ ಹೋಗಿ ವಸತಿಗೃಹದ ವಿದ್ಯಾರ್ಥಿಗಳು ಅಭ್ಯಾಸದಲ್ಲಿ ತೊಡಗಿದ್ದಾರೆಯೇ ಎಂಬುದನ್ನು ವಿಚಾರಿಸಿಕೊಂಡೂ ಬರುವದುಂಟು. ನನ್ನನ್ನೂ ನನ್ನ ಶ್ರೀಮತಿಯವರನ್ನೂ ಈ ಸಭ್ಯ ಕುದುರೆಯ ಮೇಲೆ ಹತ್ತಿಸಿ ನೋಡಿ ಸಂತೋಷಪಡಬೇಕೆಂಬುದು ಸ್ವಾಮಿಗಳ ಅಪೇಕ್ಷೆಯಾಗಿತ್ತು. ನನಗೆ ಅದು ಸಾಧ್ಯವಾಗಲಿಲ್ಲ. ನಮ್ಮ ಮನೆಯವರು ಮಾತ್ರ ಹತ್ತಿ

ಕುಳಿತು ಮತ್ತೆ ಇಳಿದರು. ರೋಣದಲ್ಲಿ ಶಾಲೆಗೆ ಹೋಗುವಾಗ (೧೯೪೩-೪೬) ತಾಸು ಕುದುರೆ ಸವಾರಿ ಕಲಿಯುವ ಸಾಹಸ ಮಾಡಿದ್ದನ್ನು ನೆನಪಿಸಿಕೊಂಡು ಹೇಳಿದರು.

ನಮ್ಮ ಮಾವಂದಿರಾದ ಸಿದ್ಧಬಸಪ್ಪ ಗಿಡ್ನವರ (ಕಂದಾಯ ಇಲಾಖೆಯಲ್ಲಿ ಅಸಿ. ಕಮೀಷನರ್ ಆಗಿ ನಿವೃತ್ತರಾದವರು) ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿ ತತ್ವಜ್ಞಾನದ ಒಲವುಳ್ಳವರು. ಪುಸ್ತಕ ಪ್ರೇಮಿಯಾದ ಅವರು ಮನೆಯಲ್ಲಿ ಇವೆರಡೂ ವಿಷಯಗಳ ಬಗೆಗಿನ ಗ್ರಂಥಗಳ ದೊಡ್ಡ ಭಂಡಾರವನ್ನೇ ನಿರ್ಮಿಸಿಕೊಂಡಿದ್ದರು. ಧಾರವಾಡದಲ್ಲಿಯೇ ಮನೆಮಾಡಿಕೊಂಡಿದ್ದ ಅವರು ಕೊನೆಗಾಲದಲ್ಲಿ ತಮ್ಮ ಊರಾದ ಯಮಕನಮರಡಿಯ ಹತ್ತಿರದ ನರಸಿಂಗಪುರದಲ್ಲಿ ಇರತೊಡಗಿದರು. ತಮ್ಮ ಗ್ರಂಥಾಲಯದ ಪುಸ್ತಕಗಳ ಬಹು ಭಾಗವನ್ನು ಮಂಗಳೂರು ಹಾಗೂ ಧಾರವಾಡ ವಿಶ್ವವಿದ್ಯಾಲಯದ ಗ್ರಂಥಾಲಯಗಳಿಗೆ ಕೊಟ್ಟು ತಮಗೆ ಬೇಕಾಗಿದ್ದ ಸಾವಿರಾರು ಗ್ರಂಥಗಳನ್ನು ನರಸಿಂಗಪುರದ ಮನೆಯಲ್ಲಿ ಒಯ್ದು ಇಟ್ಟುಕೊಂಡಿದ್ದರು. ವೃದ್ಧಾಪ್ಯದಿಂದ ಅವರು ತೀರಿಕೊಂಡ ಮೇಲೆ ಆ ಹಳ್ಳಿಯ ಮನೆಯಲ್ಲಿ ಆ ಗ್ರಂಥಗಳ ಆರೈಕೆ ಮಾಡುವವರು ಇಲ್ಲವಾದರು. ಅವರ ಮನೆಯವರೂ (ನನ್ನ ಅತ್ತೆಯವರು) ಓದುವ ಹವ್ಯಾಸವುಳ್ಳವರಾದರೂ ಅಷ್ಟೊಂದು ದೊಡ್ಡ ಮೊತ್ತದ ಪುಸ್ತಕಗಳನ್ನು ಸ್ವಚ್ಛವಾಗಿಡುವದೇ ಕಷ್ಟವಾಯಿತು. ಎಸ್.ವ್ಹಿ. ಗಿಡ್ನವರ ಅವರಿಗೆ ಇತರ ಮಠಗಳಂತೆ ನಿಡಸೋಸಿ ಸಿದ್ಧ ಸಂಸ್ಥಾನ ಮಠದ ಸಂಪರ್ಕ ಮೊದಲಿನಿಂದಲೂ ಇದ್ದಿತು. ಸಂಸ್ಕೃತ ಪಾಠಶಾಲೆಯ ಜೊತೆಗೆ ಆರಂಭವಾದ 'ಗ್ರಂಥಾಲಯ'ವನ್ನು ಇನ್ನಷ್ಟು ಬೆಳೆಸಿ ಅಭ್ಯಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಹಂಬಲ ಶಿವಲಿಂಗೇಶ್ವರ ಸ್ವಾಮಿಗಳದಾಗಿತ್ತು. ಗಿಡ್ನವರು ತೀರಿಕೊಂಡ ನಾಲ್ಕೈದು ವರ್ಷಗಳ ನಂತರ ಇದನ್ನರಿತ ಶ್ರೀಮತಿ ಭಾಗೀರಥಿಯವರು ತಮ್ಮ ಮನೆಯ ಗ್ರಂಥಗಳನ್ನೆಲ್ಲ ನಿಡಸೋಸಿ ಮಠದ ಗ್ರಂಥಾಲಯಕ್ಕೆ ಕೊಡ ಮಾಡಿದರು. ಸ್ವಾಮಿಗಳು ಮಠದ ತಮ್ಮ ಗ್ರಂಥಾಲಯದಲ್ಲಿ ಪ್ರತ್ಯೇಕ ವಿಭಾಗವೊಂದರ ಕಪಾಟುಗಳಲ್ಲಿ ವ್ಯವಸ್ಥಿತವಾಗಿ ಅವುಗಳನ್ನಿಟ್ಟುಕೊಂಡುದನ್ನು ನನಗೆ ತೋರಿಸಿದರು. ಆಗಲೇ ವಯಸ್ಸಾಗಿದ್ದ ಅತ್ತೆಯವರ ಮನಸ್ಸು ಈ ವ್ಯವಸ್ಥೆಯಿಂದ ನಿರಾಳವಾಯಿತು. ಸ್ವಾಮೀಜಿಯವರು ಆಗಾಗ ಮನೆಗೆ ಬಂದು ಶ್ರೀಮತಿ ಗಿಡ್ನವರ ಆರೋಗ್ಯದ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಅವರ ಚಿಕ್ಕ ಮಗ ಸದಾನಂದ ಹಾಗೂ ಮಡದಿ ಮಕ್ಕಳು ಸ್ವಾಮೀಜಿಯವರನ್ನು ಗುರುಸ್ವರೂಪದಲ್ಲಿ ಆದರಿಸುತ್ತಿದ್ದಾರೆ. ಶ್ರೀಮತಿ ಗಿಡ್ನವರು ತೀರಿಕೊಂಡಾಗ (೨೦೦೪) ಶ್ರೀಗಳು ನಿಡಸೋಸಿಯಿಂದ ನರಸಿಂಗಪುರಕ್ಕೆ ಬಂದು ಅಂತ್ಯಕ್ರಿಯೆಯಲ್ಲಿಯೂ ಭಾಗಿಯಾಗಿದ್ದರು.

ಶ್ರೀಗಳು ಬಾಗಲಕೋಟ ಚರಂತಿಮಠ ಮತ್ತು ನಿಡಸೋಸಿಮಠ ಎರಡಕ್ಕೂ ಪೀಠಾಧಿಕಾರಿಗಳಾಗಿ ಅನೇಕ ಜನಹಿತ ಕಾರ್ಯಗಳನ್ನು ಮಾಡುತ್ತ ಬಂದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅನ್ನದಾಸೋಹ, ಜ್ಞಾನದಾಸೋಹ ಪರಂಪರೆಯನ್ನು ಸತ್ವಯುತವಾಗಿ ಮುನ್ನಡೆಸಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ವಿಸ್ತಾರಗೊಳಿಸಿ ಹೆಚ್ಚಿನ ಸುಧಾರಣೆಗೆ ದಾರಿ ಮಾಡಿಕೊಟ್ಟಿದ್ದಾರೆ. ಕಪ್ಪುಶಿಲೆಯ ಬೃಹದಾಕಾರದ ಕೋಟೆಯಂತಿರುವ ಮಠವನ್ನು

ಹೆಚ್ಚಿನ ಸೌಕರ್ಯಗಳೊಂದಿಗೆ ವ್ಯವಸ್ಥೆಗೊಳಿಸಿರುವುದನ್ನು ಕಾಣುತ್ತೇವೆ. ಮಠದ ಕೃಷಿಭೂಮಿ ಅಭಿವೃದ್ಧಿಗೊಳ್ಳುತ್ತ ಬಂದಿದೆ. 'ಮಹಾದಾಸೋಹ ಜಾತ್ರೆ' ಈ ಮಠದ ವೈಶಿಷ್ಟ್ಯವಾಗಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಲಕ್ಷಾಂತರ ಜನ ಭಕ್ತಿಯಿಂದ, ಬಡವ ಬಲ್ಲಿದರೆಂಬ ಭೇದವಿಲ್ಲದೆ ಜಾತ್ರೆಯಲ್ಲಿ ಭಾಗವಹಿಸಿ, ಸಾಮೂಹಿಕವಾಗಿ ಸ್ಥಳ ಸಿಕ್ಕಲ್ಲಿ ಕೂತು ಪ್ರಸಾದ ಸ್ವೀಕರಿಸುವ ದೃಶ್ಯವಂತೂ ಅಪರೂಪದ್ದೆಂದೇ ಹೇಳಬಹುದು. ಪರಧರ್ಮಸಹಿಷ್ಣುತೆಯ ಮೌಲ್ಯ ಮಠದ ಪರಂಪರೆಯಲ್ಲಿಯೇ ಸೇರಿಹೋಗಿದೆ.

ನಿರಂತರ ನಡೆಯುವಂತೆ ಏರ್ಪಡಿಸಿದ ಸಾಹಿತ್ಯ, ಸಂಗೀತ ಹಾಗೂ ಶಿವಾನುಭವ ಗೋಷ್ಠಿಗಳಲ್ಲಿ ತಜ್ಞರು ಖ್ಯಾತ ಕಲಾವಿದರೂ ಭಾಗವಹಿಸುತ್ತಾರೆ. 'ಶ್ರೀ ನಿಜಲಿಂಗೇಶ್ವರ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ ಉತ್ತಮ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಸಾಹಿತ್ಯ ಸಂಸ್ಕೃತಿಯ ಸೇವೆಯಲ್ಲಿ ಶ್ರೀಗಳು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶ್ರೀಮಠದ ಭಕ್ತರಲ್ಲಿ ಮರಾಠಿಗರೂ ಗಣನೀಯವಾಗಿದ್ದು ಅವರಿಗೂ ಶರಣರ ಜೀವನಸಾಧನೆ, ವಚನ ಸಾಹಿತ್ಯದ ಅರಿವು ದೊರೆಯಬೇಕೆಂಬ ಆಶಯದಿಂದ ಈಚೆಗೆ 'ಗಡಿನಾಡು ಶರಣ ಸಂಸ್ಕೃತಿ ಅಧ್ಯಯನ ಕೇಂದ್ರ' ಅಸ್ತಿತ್ವಕ್ಕೆ ಬಂದಿರುವುದು ಸಂತೋಷದ ಸಂಗತಿ. ಬಸವಣ್ಣನವರ ಆಯ್ದ ನೂರೊಂದು ವಚನಗಳ ಮರಾಠಿ ಅನುವಾದ ಕೃತಿಯನ್ನು ಪ್ರಕಟಿಸಿದ ನಂತರ ಆ ಯೋಜನೆ ಮುಂದುವರಿದಂತೆ ತೋರುವುದಿಲ್ಲ. ಶ್ರೀಸಿದ್ದೇಶ್ವರ ಸ್ವಾಮಿಗಳ 'ಭಗವಚ್ಚಿಂತನ'ದ ಮರಾಠಿ ಅನುವಾದ ಮರಾಠಿ ಓದುಗರಲ್ಲಿ ಜನಪ್ರಿಯ ವಾಗಿರುವುದು ಸಂತೋಷದ ಸಂಗತಿ. ಉಭಯಭಾಷಾ ತಜ್ಞರಾದ ಡಾ. ಗುರುಲಿಂಗ ಕಾಪಸೆಯವರಂಥ ಶರಣ ಸಾಹಿತ್ಯತಜ್ಞರಿಗೆ ಈ ಯೋಜನೆಯನ್ನು ಸಂಪೂರ್ಣ ಒಪ್ಪಿಸಿ ಅಗತ್ಯವಾದ ಈ ಕೆಲಸ ಮುಂದುವರಿಯುವಂತೆ ಮಾಡುವದು ಶ್ರೇಯಸ್ಕರ. ಶ್ರೀಗಳವರ ಷಷ್ಟ್ಯಬ್ದಿಯ ಶುಭಸಂದರ್ಭ ಇಂಥ ನೂತನ ಯೋಜನೆಗಳಿಗೆ ನಾಂದಿಯಾಗಲಿ ಎಂದು ಹಾರೈಸುತ್ತೇನೆ.

ಗ್ರಾಮೀಣ ಜನತೆಯ ಜೀವನದಲ್ಲಿ ಹಾಸುಹೊಕ್ಕಾಗಿ ಇಷ್ಟೆಲ್ಲ ಕಾರ್ಯೈದಿದ್ದರೂ ಶ್ರೀಗಳು ಪ್ರಚಾರಪ್ರಿಯತೆಯಿಂದ ದೂರವಿರುವದು ಈಗಿನ ಪ್ರಚಾರಯುಗದಲ್ಲಿ ಯಾರಿಗಾದರೂ ಆಶ್ಚರ್ಯವನ್ನುಂಟು ಮಾಡದಿರದು. ಡಾ. ಗುರುಪಾದ ಮರಿಗುದ್ದಿ ಯವರೆಂದಂತೆ "ಮಠದ ಪೂಜೆ, ಸೇವೆಗಳಲ್ಲಿ ಅನೇಕ ಜಾತಿಗಳ ಜನರಿದ್ದಾರೆ. ಬ್ರಾಹ್ಮಣ, ಮರಾಠಾ, ವೀರಶೈವ, ವಿಶ್ವಕರ್ಮ, ಹರಿಜನ, ಹೂಗಾರ ಮುಂತಾದವರು ಸೇನೆ, ಆಡಳಿತ ವಿಭಿನ್ನ ಕೆಲಸದಲ್ಲಿದ್ದಾರೆ. ಚಿಕ್ಕಹಳ್ಳಿಯಲ್ಲಿದ್ದು ಹಳ್ಳಿಯಜನರ ಬುದ್ಧಿ, ಜಾಣ್ಮೆ, ಪ್ರತಿಭೆಗಳಿಂದಾಗಿ ವಿಶಿಷ್ಟ ಪರಂಪರೆಯನ್ನು ಹೊಂದಿದ ಮಠ ಈ ಭಾಗದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬದುಕಿನ ಆಗುಹೋಗುಗಳನ್ನು ಪ್ರಭಾವಿಸಿದ, ನಿಯಂತ್ರಿಸಿದ ರೀತಿ ಅನನ್ಯವಾಗಿದೆ."

('ಮಾನವೀಯ ಚಿಂತನೆಗಳು' ೨೦೧೪)

‘ಕನ್ನಡದ ತೇರು’ ಮುನ್ನಡೆಸಿದ ‘ಚಂದ್ರು’

‘ಮುಖ್ಯಮಂತ್ರಿ ಚಂದ್ರು’ ಎಂಬುದು ಇವರಿಗೆ ಇಟ್ಟಹೆಸರಲ್ಲ. ಜನ ಪ್ರೀತಿಯಿಂದ ಕೊಟ್ಟ ಹೆಸರು. ಐದುನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡ ‘ಮುಖ್ಯಮಂತ್ರಿ’ ನಾಟಕದಲ್ಲಿ ಇವರು ನಿರ್ವಹಿಸಿದ ಮುಖ್ಯಮಂತ್ರಿ ಪಾತ್ರವು ಇವರಿಗೆ ಅಪಾರ ಯಶಸ್ಸನ್ನು ತಂದುಕೊಟ್ಟಿದ್ದರಿಂದ ಜನರ ಬಾಯಲ್ಲಿ ಅದೇ ಹೆಸರು ಕಾಯಂ ಆಗಿಬಿಟ್ಟಿತು, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬಂತೆ. ಚಂದ್ರಶೇಖರ ಅವರು ಸಾರ್ವಜನಿಕ ಸಭೆಗಳಲ್ಲಿ ಮಾತಾಡುವಾಗ ಮೊದಲೇ ಈ ವಿಷಯವನ್ನು ಸಂಕೋಚದಿಂದ ಪ್ರಸ್ತಾಪಿಸುವುದುಂಟು.

ಅದೇನೇ ಇರಲಿ, ಇವರು ಅಭಿನಯಿಸಿದ ಕೆಲ ಚಲನಚಿತ್ರಗಳನ್ನು ಧಾರಾವಾಹಿಗಳನ್ನು ನಾನು ನೋಡಿದ್ದೇನೆ. ಇವರ ಸಹಜವಾದ ಅಭಿನಯ, ಮಾತುಗಾರಿಕೆ, ವಿಶಿಷ್ಟವಾದ ಹಾವಭಾವ ಎಲ್ಲವೂ ಇವರು ಹುಟ್ಟುಕಲಾವಿದ ರೆಂಬುದನ್ನು ಸಾಬೀತುಗೊಳಿಸುತ್ತವೆ. ಅದಕ್ಕಾಗಿಯೇ ನಾಲ್ಕುನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸುವ ಅವಕಾಶ ತಾನಾಗಿ ಇವರಿಗೆ ಒದಗಿದ್ದು. ವಿದ್ಯಾರ್ಥಿ ನಾಯಕರಾಗಿ ಹೆಸರುಗಳಿಸಿದ ಇವರು ೧೯೮೫ ರಲ್ಲಿಯೇ ಶಾಸಕರಾಗಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ, ಇದುವರೆಗಿನ ನಾಡಿನ ಹಾಗೂ ದೇಶದ ರಾಜಕೀಯ ವಿದ್ಯಮಾನಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ವ್ಯಕ್ತಿಯ ಚಾರಿತ್ರ್ಯ, ಕಾರ್ಯದಕ್ಷತೆ, ಕ್ರಿಯಾಶೀಲತೆಯನ್ನು ರಾಜಕಾರಣದಲ್ಲಿ ಜನ ಗಮನಿಸದೆ ಇರುವದಿಲ್ಲ.

೨೦೦೮ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ (ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿ) ನೇಮಕಗೊಂಡಂದಿನಿಂದ ಅದಕ್ಕೆ ಕಾಯಕಲ್ಪ ಚಿಕಿತ್ಸೆ ನೀಡಿ, ಹಿಂದಿನ ಅಧ್ಯಕ್ಷರ ಅನುಭವದ ಒಳ್ಳೆಯ

ಅಂಶಗಳ ಹಿನ್ನೆಲೆಯಲ್ಲಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಿಕೊಂಡು ಅವುಗಳ ಅನುಷ್ಠಾನಕ್ಕಾಗಿ ಪರಿಶ್ರಮಿಸುತ್ತ ಬಂದಿರುವುದನ್ನು ಕನ್ನಡದ ಹಿತಚಿಂತಕರು ಮೆಚ್ಚಿಕೊಂಡಿದ್ದಾರೆ. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕ ಗಳಿಸಿದ ರಾಜ್ಯ ಹಾಗೂ ಹೊರರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ನೀಡಿಕೆ ಪ್ರಾಧಿಕಾರದ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಬೆಳಗಾವಿಯಲ್ಲಿ ಹಮ್ಮಿಕೊಂಡ ಇಂಥ ಸಮಾರಂಭವೊಂದರಲ್ಲಿ ನಾನು ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಉತ್ಸಾಹ ಹಾಗೂ ಕನ್ನಡದ ಬಗೆಗಿನ ಕಳಕಳಿ ಕಂಡು ಸಂತೋಷ ಪಟ್ಟಿದ್ದೇನೆ. ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರಿಗೆ ಕನ್ನಡ ಪುರಸ್ಕಾರವನ್ನು ಅದೇ ಸಂದರ್ಭದಲ್ಲಿ ನೀಡಲಾಯಿತು. ಪ್ರತಿವರ್ಷವೂ ಈ ಕಾರ್ಯಕ್ರಮ ತಪ್ಪದೆ ನಡೆಯುತ್ತಿದ್ದು, ವಿದ್ಯಾರ್ಥಿಗಳಲ್ಲಿ ಕನ್ನಡ ಮಾಧ್ಯಮದ ಆಸಕ್ತಿಯನ್ನು ಹೆಚ್ಚಿಸಲು ನೆರವಾಗಿದೆ.

ಕನ್ನಡೇತರರಿಗೆ ಕನ್ನಡ ಕಲಿಕಾ ಕೇಂದ್ರಗಳ ಸ್ಥಾಪನೆ, ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ಅಧಿಕಾರಿಗಳಿಗೆ ತರಬೇತಿ, ಭಾಷಾ ಭಾವೈಕ್ಯ ಸಮಾವೇಶ, ಗಡಿನಾಡ ಸಮಾವೇಶ, ಹೊರನಾಡ ಕನ್ನಡಿಗರ ಸಮಾವೇಶ, ಕಾರ್ಮಿಕರಿಗೆ ಕನ್ನಡ ಜಾಗೃತಿ ಇವೇ ಮೊದಲಾದ ಅರ್ಥಪೂರ್ಣ ಕಾರ್ಯಕ್ರಮಗಳು ನಾಡು-ನುಡಿ-ಸಂಸ್ಕೃತಿಯ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಡಾ. ಸರೋಜಿನಿ ಮಹಿಷಿ ವರದಿಯನ್ನು ಬದಲಾದ ಕಾಲ ಸಂದರ್ಭದಲ್ಲಿ ಮತ್ತೆ ಪರಿಷ್ಕರಿಸಿ ಅನುಷ್ಠಾನಗೊಳಿಸಲು ಪ್ರಾಧಿಕಾರದ ಅಧ್ಯಕ್ಷರು ಮುಖ್ಯಮಂತ್ರಿಗಳನ್ನು ಒಪ್ಪಿಸಿರುವುದು ಸಂದರ್ಭೋಚಿತವಾಗಿದೆ. ಅದು ಬೇಗ ಈಡೇರಿದಷ್ಟೂ ಒಳ್ಳೆಯದು.

ರಾಷ್ಟ್ರೀಯ ಶಿಕ್ಷಣ ನೀತಿ, ರಾಷ್ಟ್ರೀಯ ಉದ್ಯೋಗನೀತಿ, ರಾಷ್ಟ್ರೀಯ ಜಲ ನೀತಿ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ - ಇತ್ಯಾದಿ ಕರ್ನಾಟಕದ ಜ್ವಲಂತ ಸಮಸ್ಯೆಗಳ ಅರಿವನ್ನುಂಟು ಮಾಡಿಸಲು ಪ್ರಧಾನಮಂತ್ರಿಗಳು, ಕೇಂದ್ರ ಸಚಿವರು ಹಾಗೂ ಕಾರ್ಯದರ್ಶಿಗಳ ಜೊತೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅದರ ಅಧ್ಯಕ್ಷರ ನೇತೃತ್ವದಲ್ಲಿ ತಜ್ಞರ ನಿಯೋಗವನ್ನು ಎರಡು ಸಲ ದಿಲ್ಲಿಗೆ ಕರೆದೊಯ್ದು ತಕ್ಕಮಟ್ಟಿನ ಪ್ರತಿಫಲ ಕಂಡುಕೊಂಡದ್ದುಂಟು. ಹೈದರಾಬಾದ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರಕಿಸಲು ಪ್ರಾಧಿಕಾರ ಪ್ರಯತ್ನಿಸಿದ್ದೂ ಇದೆ. ಎರಡು ಸಲವೂ ನಿಯೋಗದಲ್ಲಿ ನನಗೆ ಆಮಂತ್ರಣವಿತ್ತಾದರೂ ಆರೋಗ್ಯದ ದೃಷ್ಟಿಯಿಂದ ಅದರಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ.

'ಕನ್ನಡನುಡಿ - ಕನ್ನಡಗಡಿ ಜಾಗೃತಿಜಾಥಾ' ಕನ್ನಡ ಚಳವಳಿಗಳಲ್ಲಿ ಪ್ರಮುಖ ವಾದದ್ದು. ಈ ಜಾಥಾದ ಮೂಲಕ ಐವತ್ತೆರಡು ಗಡಿ ತಾಲುಕುಗಳ ಕನ್ನಡಿಗರ ಸಂಕಷ್ಟಗಳನ್ನು ಕುರಿತು ವರದಿ ಸಿದ್ಧಪಡಿಸಿ ಚಂದ್ರು ಅವರು ಖಾಸಗಿ ನಿರ್ಣಯವಾಗಿ ವಿಧಾನ ಪರಿಷತ್ತಿನಲ್ಲೂ ಮಂಡಿಸಿದ್ದುಂಟು. ನಾಲ್ಕು ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ ಹಾಗೂ ವಿದೇಶಗಳಲ್ಲಿ ಹಲವಾರು ಕನ್ನಡ

ಸಮ್ಮೇಳನಗಳನ್ನು ನಡೆಸಿ ಕನ್ನಡ ಕಲಿಕಾ ಕೇಂದ್ರಗಳನ್ನು ಪ್ರಾಧಿಕಾರ ಸ್ಥಾಪಿಸಿದ್ದು ಒಂದು ಸಾಹಸವೆಂದೇ ಹೇಳಬಹುದು. ಅವುಗಳ ಕಾರ್ಯನಿರ್ವಹಣೆಯನ್ನು ಆಗಾಗ ಪರಿಶೀಲಿಸುತ್ತಿರಬೇಕು.

ಇವರ ಕಾಲಾವಧಿಯ ಪ್ರಾಧಿಕಾರದ ಪ್ರಕಟಣೆಗಳನ್ನು ನೋಡಿದರೇ ಸಾಕು, ಅವುಗಳ ಮಹತ್ವ ಒಡೆದು ಕಾಣುತ್ತದೆ. 'ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು', 'ಬಯಲುಸೀಮೆಯ ಭಾಷಾ ವೈವಿಧ್ಯತೆ', 'ದೇಸಿ ಸೊಗಡು', 'ಆಡಳಿತ ಪದಕೋಶ', 'ಕನ್ನಡ ಜನಪದ ನಿಘಂಟು', 'ಕರ್ನಾಟಕ ಸಂಗಾತಿ' (ಪರಿಷ್ಕೃತ ಆವೃತ್ತಿ), 'ಗಡಿ ಕನ್ನಡಿಗರ ಕಥೆ-ವ್ಯಥೆ' (೨೦೦೬) ಮೊದಲಾದವನ್ನು ಇಲ್ಲಿ ಹೆಸರಿಸಬಹುದು. ನಾಲ್ವತ್ತು ವರ್ಷಗಳ ಹಿಂದೆಯೇ ಚಂದ್ರು ಅವರು ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ನಟನಾಗಿ, ನಿರ್ದೇಶಕನಾಗಿ, ತಂತ್ರಜ್ಞನಾಗಿ, ಸಂಘಟಕನಾಗಿ ಹಾಗೂ ಶ್ರೇಷ್ಠ ಮೂಕಾಭಿನಯ ಕಲಾವಿದನಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಾಗಿನ ತಮ್ಮ ಎಲ್ಲ ಬಗೆಯ ಕಲಾ ನೈಪುಣ್ಯವನ್ನು ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಧಾರೆ ಎರೆದಿರುವುದರಿಂದಲೇ ಪ್ರಾಧಿಕಾರ ಇಷ್ಟೆಲ್ಲ ಸಾಧನೆಗೈಯಲು ಕಾರಣವಾಯಿತೆಂದು ಊಹಿಸಬಹುದು. ಸಂಘಟನಾ ಚಾತುರ್ಯ ಹಾಗೂ ಅವರ ನಿರರ್ಗಳ ಮಾತುಗಾರಿಕೆ, ಜನತೆಯೊಡನೆ ಸಮರಸವಾಗಿ ಕೆಲಸ ಮಾಡಲು ಸಾಕಷ್ಟು ನೆರವಾಗಿರುವುದರಲ್ಲಿ ಸಂದೇಹವಿಲ್ಲ.

ಇಂಗ್ಲಿಷ್ ವ್ಯಾಮೋಹ ಎಲ್ಲೆಡೆ ವ್ಯಾಪಿಸಿ, ಕರ್ನಾಟಕದ ಬಹುತೇಕ ಖಾಸಗಿ ಸಂಸ್ಥೆಗಳಿಗೆ ಶಿಕ್ಷಣ ಒಂದು ವ್ಯಾಪಾರ, ದಂಧೆಯಾಗಿ, ಕನ್ನಡ ಕಲಿಕೆಯಿಂದ ಏನೂ ಪ್ರಯೋಜನವಿಲ್ಲ ಎಂಬ ಭಾವನೆ ಸಾರ್ವಜನಿಕವಾಗಿ ಪ್ರಚಲಿತಗೊಂಡಿರುವ ಸನ್ನಿವೇಶದಲ್ಲಿ ಪ್ರಾಧಿಕಾರ, 'ಕಾಲೇಜು ವಿದ್ಯಾರ್ಥಿಗಳಿಗೆ ಕನ್ನಡ ಜಾಗೃತಿ' ಎಂಬ ಕಾರ್ಯಕ್ರಮವನ್ನು ನಾಡಿನ ಎಲ್ಲ ಭಾಗದ ಕಾಲೇಜುಗಳಲ್ಲಿ ನಡೆಸಿದ್ದುಂಟು. ಹುಬ್ಬಳ್ಳಿಯ ಮೂರುಸಾವಿರ ಮಠದ ಮಹಿಳಾ ಮಹಾವಿದ್ಯಾಲಯ ಹಾಗೂ ಸವದತ್ತಿ (೨೫-೯-೨೦೦೯) ಸಾರ್ವಜನಿಕ ಸಭಾಗೃಹದಲ್ಲಿ ಸ್ಥಳೀಯ ಕಾಲೇಜುಗಳ ವಿದ್ಯಾರ್ಥಿಗಳ ಮೇಳ-ಎರಡರಲ್ಲಿಯೂ ಪ್ರಾಧಿಕಾರ ನನ್ನನ್ನು 'ಕನ್ನಡ ಅನುಷ್ಠಾನ ವರ್ಷ'ದಲ್ಲಿ ಅತಿಥಿಯಾಗಿ ಭಾಗವಹಿಸಲು ಕರೆದುಕೊಂಡು ಹೋದದ್ದುಂಟು. ವಿದ್ಯಾರ್ಥಿಗಳು ಅಧ್ಯಾಪಕರು ಹಾಗೂ ಸಾರ್ವಜನಿಕರು ಅತ್ಯಧಿಕ ಸಂಖ್ಯೆಯಲ್ಲಿ ನೆರೆದು ಕಾರ್ಯಕ್ರಮದ ಪ್ರಯೋಜನ ಪಡೆದದ್ದನ್ನು ನಾನು ಪ್ರತ್ಯಕ್ಷ ಕಂಡಿದ್ದೇನೆ. ಕನ್ನಡದಿಂದ ಕನ್ನಡ ಸಂಸ್ಕೃತಿಯಿಂದ ಇಂದಿನ ಯುವಪೀಳಿಗೆ ದೂರವಾಗುತ್ತಿದ್ದುದನ್ನು, ಪರಕೀಯ ಸಂಸ್ಕೃತಿಯ ವ್ಯಾಮೋಹದಿಂದ ಅವರ ಬದುಕು ಹದಗೆಟ್ಟು ಹೋಗುತ್ತಿರುವುದನ್ನು ಇಂಥ ಕಾರ್ಯಕ್ರಮಗಳಿಂದ ಕೆಲಮಟ್ಟಿಗಾದರೂ ತಡೆಯಬಹುದಾಗಿದೆ. ಹಿಂದೀ ಮತ್ತು ಇಂಗ್ಲಿಷ್ ಭಾಷೆಗಳು ಸಂಪರ್ಕ ಭಾಷೆಗಳಾಗಿ ಮುಂದುವರಿಯಲು ಯಾರ ಆಕ್ಷೇಪಣೆಯೂ ಇಲ್ಲ. ಆದರೆ ಪ್ರಾದೇಶಿಕ ಭಾಷೆಗಳ ಮೇಲೆ ಅವು ಆಕ್ರಮಣ ಮಾಡಕೂಡದು. ಭಾಷೆ ಕೇವಲ ವ್ಯವಹಾರಕ್ಕೆ ಇರದೆ.

ಒಂದು ಜನಾಂಗವನ್ನು ಸಂಸ್ಕಾರದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗುತ್ತದೆ. ಇಂಗ್ಲಿಷ್ ಎಂದರೆ ಉದ್ಯೋಗ ಎಂಬ ಕಲ್ಪನೆ ಬಂದುಬಿಟ್ಟಿದೆ. ಆದರೆ ಮಾತೃಭಾಷೆಯಾದ ಕನ್ನಡದಿಂದ ನಿಜವಾದ ತಿಳುವಳಿಕೆ, ಜ್ಞಾನ ಎನ್ನುವದು ಜನಗಳಿಗೆ ಗೊತ್ತಾಗಬೇಕಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ದಿಕ್ಕಿನಲ್ಲಿ ಕನ್ನಡ ಶಾಲೆಗಳ ಪುನರುಜ್ಜೀವನದ ಕಡೆಗೆ ಇನ್ನೂ ಹೆಚ್ಚು ಗಮನ ಹರಿಸಬೇಕಾಗಿದೆ.

ಕೊನೆಯದಾಗಿ 'ಕನ್ನಡ ನುಡಿತೇರು, ಜಾಗೃತಿಜಾಥಾ'ದ ಫಲಶುತಿಯ ಬಗ್ಗೆ ಒಂದು ಮಾತು ಹೇಳಲೇಬೇಕು. ಬೆಳಗಾವಿಯಲ್ಲಿ ಎರಡನೆಯ ವಿಶ್ವ ಕನ್ನಡ ಸಮ್ಮೇಳನ ಜರುಗುವ ಪೂರ್ವದಲ್ಲಿ ಈ ಪರಿಕಲ್ಪನೆಯನ್ನು ಪ್ರಾಧಿಕಾರ ಕಾರ್ಯರೂಪದಲ್ಲಿ ತಂದಿದ್ದರಿಂದ ಬೆಳಗಾವಿ ಜಿಲ್ಲೆಯಾದ್ಯಂತ ಕನ್ನಡದ ವಾತಾವರಣ ನಿರ್ಮಾಣ ಮಾಡುವಲ್ಲಿ ಬಹುಮಟ್ಟಿಗೆ ಸಫಲವಾಯಿತು. ವಿಶ್ವ ಕನ್ನಡ ಸಮ್ಮೇಳನದ ನಂತರ ಇನ್ನುಳಿದ ಜಿಲ್ಲೆಗಳಲ್ಲಿಯೂ ಈ ಕಾರ್ಯಕ್ರಮ ನೆರವೇರಿತು. ವಿಜಾಪುರ ಜಿಲ್ಲೆಯಲ್ಲಿ ಇಂಡಿ ತಾಲೂಕಿನಿಂದ ಈ ಉತ್ಸವ ಪ್ರಾರಂಭವಾದಾಗ ಅದರ ಉದ್ಘಾಟನೆ ಮಾಡುವ ಅವಕಾಶ ನನಗೆ ಒದಗಿದ್ದಿತು (೨೬-೭-೨೦೧೧). ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರೂ ಮುಖ್ಯ ಅತಿಥಿಯಾಗಿ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಚಿವರು, ಸಂಸದರು, ಶಾಸಕರು, ಸಾಹಿತಿಗಳು, ಕನ್ನಡಪರ ಸಂಘಟನೆಗಳು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಹೀಗೆ ಎಲ್ಲರೂ ಒಟ್ಟಾಗಿ ಭಾಗವಹಿಸಿದ್ದು ನಿಜಕ್ಕೂ ಹೆಮ್ಮೆಯ ಸಂಗತಿ. ಹಿರಿಯ ನಟ ಹಾಗೂ ರಂಗಕರ್ಮಿ ಶ್ರೀ ಕೆ.ವಿ. ನಾಗರಾಜಮೂರ್ತಿಯವರು ಚಂದ್ರು ಅವರ ಬಲಗೈಯಾಗಿ ನಿಂತುಕೊಂಡು ಈ ಬೃಹತ್ ಸಂಘಟನೆಯ ಎಲ್ಲ ಕಾರ್ಯಗಳನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದರು. ಸಮಾರಂಭಕ್ಕೆ ಮುನ್ನ ಕರ್ನಾಟಕದ ಪ್ರಸಿದ್ಧ ಜಾನಪದ ಕಲಾತಂಡಗಳ ಬೃಹತ್ ನುಡಿತೇರು ನಗರದ ಪ್ರಮುಖ ಬೀದಿಗಳಲ್ಲಿ ಹೊರಟು ಸಭಾಗೃಹಕ್ಕೆ ಬಂದಾಗ ಜನ ಕಿಕ್ಕಿರಿದು ಒಳಗೆ ಪ್ರವೇಶಿಸುವದೇ ಸಾಧ್ಯವಾಗಲಿಲ್ಲ. ಆಗ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರು ಅವರು ಒಬ್ಬ ಕಾರ್ಯಕರ್ತನಂತೆ ಓಡಾಡಿ, ಸಭಾಗೃಹದ ಹೊರಗೇ ಬಯಲಿನಲ್ಲಿ ಸಮಾರಂಭಕ್ಕೆ ಚಾಲನೆ ನೀಡಿದರು. ಬಿರುಬಿಸಿಲಿನಲ್ಲಿಯೇ ಜನ ಅಲ್ಲಾಡದೆ ನಿಂತಲ್ಲಿಯೇ ನಿಂತು, ಕುಳಿತಲ್ಲಿಯೇ ಕುಳಿತು ಅತಿಥಿಗಳ ಭಾಷಣಗಳನ್ನು ಆಲಿಸಿದರು. ಹೀಗೆ ಕನ್ನಡ ಮನೋಧರ್ಮವನ್ನು ಜಾಗೃತಗೊಳಿಸುವ ಉದ್ದೇಶ 'ಕನ್ನಡ ನುಡಿತೇರಿನ' ಮೂಲಕ ಸಾಧ್ಯವಾದುದನ್ನು ಇಲ್ಲಿ ಸ್ಮರಿಸಬೇಕು.

ಕನ್ನಡತನ ಒಂದು ಸಮಭುಜ ತ್ರಿಕೋಣವಿದ್ದಂತೆ. ಅದರ ಕೇಂದ್ರದಲ್ಲಿ ಅಂದರೆ ಹೃದಯಸ್ಥಾನದಲ್ಲಿ ಅಭಿಮಾನವಿರಬೇಕು. ಆ ತ್ರಿಕೋಣದ ಮೂರು ಮೂಲೆಗಳು ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಗಳಾಗಿ ಈ ಅಭಿಮಾನಕ್ಕೆ ಶ್ರೀರಕ್ಷೆಯಾಗಿವೆ. 'ನುಡಿತೇರು' ಈ ಮೂರು ಶಕ್ತಿಗಳ ಸಮನ್ವಯದ ಸಂಕೇತ. ಈ ತೇರಿನಲ್ಲಿರುವ ಕನ್ನಡ ಭುವನೇಶ್ವರಿ ಜಾತಿ, ಮತ, ಪಂಥಗಳನ್ನು ಮೀರಿದ ನಾಡಿನ ಸರ್ವಶಕ್ತಿಯ ಸಂಕೇತವೆಂದು ಭಾವಿಸಬೇಕು.

ನೋಡ ನೋಡುತ್ತಲೇ ಚಂದ್ರು ಅವರಿಗೆ ಅರುವತ್ತಾಗಿರುವುದು ಅಚ್ಚರಿಯ ಸಂಗತಿ. ಕನ್ನಡಕ್ಕೆ ಆಗಬೇಕಾದ ಕೆಲಸಗಳು ನೂರಾರು. ಅವೆಲ್ಲಕ್ಕೂ ಹೆಗಲು ಕೊಡುವ ಶಕ್ತಿ ಸಾಮರ್ಥ್ಯಗಳು ಅವರಲ್ಲಿವೆ ಎಂಬುದನ್ನು ಜನ ಮನಗಂಡಿದ್ದಾರೆ.ಕರ್ನಾಟಕ ಸರಕಾರ ಕನ್ನಡದ ಸರ್ವತೋಮುಖ ಅಭಿವೃದ್ಧಿಗೆ ಈ ಶಕ್ತಿಯನ್ನು ಈ ದಕ್ಷತೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲೆಂದು ಹಾರೈಸಿ, ಡಾ. ಮುಖ್ಯಮಂತ್ರಿ ಚಂದ್ರು ಅವರಿಗೆ ಎಲ್ಲ ಶುಭಗಳನ್ನು ಕೋರುತ್ತೇನೆ.

('ಪೂರ್ಣಚಂದ್ರ' ೨೦೧೪)

ಸುಸಂಸ್ಕೃತ ಮೂರ್ತಿ

೧೯೮೯ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲು ನಾನು ಬೆಂಗಳೂರಿಗೆ ಹೋದಾಗ ಶಾಂತಿನಗರದಲ್ಲಿರುವ ನಮ್ಮ ಮಗ ಚಂದ್ರಮೌಳಿಯ ಮನೆಯಲ್ಲಿದ್ದೆ. ಸಮಾರಂಭದ ದಿನ ಬೆಳಿಗ್ಗೆ ಡಾ. ಜಿ.ಎಸ್. ಶಿವರುದ್ರಪ್ಪ ನವರೊಂದಿಗೆ ಶ್ರೀ ಐ.ಎಂ. ವಿಠಲಮೂರ್ತಿಯವರು ಸ್ವಲ್ಪ ಇಕ್ಕಟ್ಟಿನಲ್ಲಿದ್ದ ಆ ಮನೆಯನ್ನು ಹುಡುಕಿಕೊಂಡು ಬಂದಿದ್ದರು. ಆಗ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದರೆಂದು ತೋರುತ್ತದೆ. ಹೂ ಗುಚ್ಛವನ್ನು ನೀಡಿ ನನ್ನನ್ನು ಮೊದಲು ಅಭಿನಂದಿಸಿದರು. ಆಮೇಲೆ ಮಾತಾಡುತ್ತ ಕುಳಿತಾಗ, ಅಂದಿನ ಸಂಜೆಯ ಸಮಾರಂಭದಲ್ಲಿ ಪ್ರಶಸ್ತಿ ಪಡೆದವರ ಪರವಾಗಿ ನಾನು ಹತ್ತು ನಿಮಿಷ ಮಾತನಾಡಬೇಕೆಂದು ಕೇಳಿಕೊಂಡರು. ನಾನು ಒಪ್ಪಿಕೊಂಡದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ, ಸಂಜೆ ಐದು ಗಂಟೆಗೆ ಕಾರು ಕಳಿಸಿಕೊಡುವುದಾಗಿ ಹೇಳಿ ಮುಗುಳ್ನಗೆಯೊಂದಿಗೆ ಮರಳಿದರು. ಸರಕಾರದ ಒಬ್ಬ ಉಚ್ಚ ಅಧಿಕಾರಿ ಸಾಹಿತಿ-ಕಲಾವಿದರೊಡನೆ ನಡೆದುಕೊಳ್ಳುವ ರೀತಿಗೆ ವಿಠಲಮೂರ್ತಿ ಒಂದು ಉತ್ತಮ ಮಾದರಿಯಾಗಿ ನನಗೆ ಕಂಡುಬಂದರು. ಇಂದಿಗೂ ಅವರು ಅದೇ ಸಜ್ಜನಿಕೆ ಅದೇ ಸೌಜನ್ಯದ ಕಣ್ಣುಕಟ್ಟುವ ಮೂರ್ತಿಯಾಗಿದ್ದು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡದ್ದು ಒಮ್ಮೆಯೂ ನನಗೆ ಕಂಡುಬಂದಿಲ್ಲ. ಅಲ್ಲದೆ ಅವರ ಕಲಾಸಕ್ತಿ ಮತ್ತು ಕರ್ತೃತ್ವ ಶಕ್ತಿಯ ಬಗ್ಗೆ ನನಗಿರುವ ಗೌರವ ಹೆಚ್ಚುತ್ತಲೇ ಬಂದಿದೆ.

ಗದಗ, ಮಡಿಕೇರಿ, ಹಾಸನ, ಶಿವಮೊಗ್ಗ, ಮಂಗಳೂರು, ವಿಜಾಪುರ, ತುಮಕೂರು, ಬಳ್ಳಾರಿ, ಬೆಂಗಳೂರು ಹೀಗೆ ಎಲ್ಲ ಕಡೆಗೂ ವಿವಿಧ ಬಗೆಯ ಹುದ್ದೆಗಳಲ್ಲಿ ದಕ್ಷತೆಯಿಂದ ಕೆಲಸ ಮಾಡಿದ ಅವರಿಗೆ ಕರ್ನಾಟಕದ

ಬಹುತೇಕ ಎಲ್ಲ ಭಾಗದ ಪರಿಚಯವಿರುವುದಲ್ಲದೆ ಕೆಳಗಿನಿಂದ ಮೇಲಿನವರೆಗೆ ಎಲ್ಲ ವರ್ಗದ ಜನರ ಭಾವನೆಗಳಿಗೆ ಸ್ಪಂದಿಸುತ್ತ ಬಂದಿರುವುದನ್ನು ಕೇಳಿಬಲ್ಲೆ. ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಾಗಿ, ಪ್ರವಾಸೋದ್ದಿಮೆ ಇಲಾಖೆಯ ಆಯುಕ್ತರಾಗಿ ಅವರು ಕೆಲಸ ಮಾಡಿದ್ದರಿಂದ ಅನೇಕ ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿ ಹಾಗೂ ನವೀಕರಣದಲ್ಲಿ ಆಸ್ಥೆವಹಿಸಿ ಕೆಲಸ ಮಾಡಲು ಅವರಿಗೆ ಅನುಕೂಲವಾಯಿತು. ಯಾವುದೇ ಕೆಲಸದ ಜವಾಬ್ದಾರಿಯನ್ನು ಹೊತ್ತುಕೊಂಡಾಗಲೂ ಕನ್ನಡ ಭಾಷೆ, ಸಂಸ್ಕೃತಿ ಬಗೆಗಿನ ಕಾಳಜಿ ಸದಾವಕಾಲ ಅವರಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿತ್ತು.

ವಿಠಲಮೂರ್ತಿಯವರು ತುಮಕೂರು ಜಿಲ್ಲಾಧಿಕಾರಿಯಾಗಿದ್ದಾಗ ಕೆ.ಎಸ್.ನರಸಿಂಹ ಸ್ವಾಮಿಯವರ ಜೊತೆಯಲ್ಲಿ ನನಗೂ ಸನ್ಮಾನವೇರ್ಪಡಿಸಿ ಮಲ್ಲಿಗೆ ಹೂಗಳ ರಾಶಿಯಲ್ಲಿ ನಮ್ಮನ್ನು ಮುಳುಗಿಸಿದ್ದನ್ನು ನಾನು ಮರೆಯುವಂತಿಲ್ಲ. ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಚ್.ಎಸ್. ವೆಂಕಟೇಶಮೂರ್ತಿ ಮೊದಲಾದ ಸಾಹಿತಿಗಳ ಜೊತೆಗೆ, ಸಿ. ಅಶ್ವತ್ಥ, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲಾಪ್ರಕಾಶ ಅವರನ್ನೊಳಗೊಂಡು ಪ್ರಸಿದ್ಧ ಸುಗಮ ಸಂಗೀತಕಾರರೆಲ್ಲರೂ ಅಂದಿನ ಸಮಾರಂಭದಲ್ಲಿ ಭಾಗವಹಿಸಿ ಗಂಧರ್ವಲೋಕವನ್ನೇ ನಿರ್ಮಿಸಿದ್ದನ್ನು ಕಂಡು ಹೆಚ್ಚು ಸಂತೋಷಪಟ್ಟವರೆಂದರೆ ವಿಠಲಮೂರ್ತಿಯವರು.

ಎಂ.ಎಸ್.ಆಯ್.ಎಲ್.ನ ಆಡಳಿತ ನಿರ್ದೇಶಕರಾಗಿದ್ದ ಅವಧಿಯಲ್ಲಿ ಚಿತ್ರಕಲೆ ಮತ್ತು ಸುಗಮಸಂಗೀತ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಅಮೋಘವಾದದ್ದು. ಚಿಕ್ಕಮಗಳೂರು ಹಾಗೂ ಹಂಪಿಯಲ್ಲಿ ದೊಡ್ಡ ಪ್ರಮಾಣದ ರಾಷ್ಟ್ರೀಯ ಕಲಾಶಿಬಿರಗಳನ್ನೇರ್ಪಡಿಸಿ ರಾಷ್ಟ್ರಮಟ್ಟದ ಶ್ರೇಷ್ಠ ಕಲಾವಿದರನ್ನು ಒಂದೆಡೆ ಸೇರಿಸಿ ಪರಸ್ಪರ ಅನುಸಂಧಾನಕ್ಕೆ ಅವಕಾಶ ಒದಗಿಸಿದ್ದಲ್ಲದೆ ಕರ್ನಾಟಕದ ಕಲಾಪರಂಪರೆಯನ್ನು ಅವರಿಗೆ ಪರಿಚಯಿಸಲಾಯಿತು. ಕಲೆಯ ಪ್ರಾತ್ಯಕ್ಷಿಕೆಗಳಿಂದ ಆಸಕ್ತರ ಕಲಾಭಿರುಚಿಗೆ ಪೋಷಣೆ, ಪ್ರೇರಣೆ ದೊರೆಯು ವಂತಾಯಿತು.

ಭಾವಗೀತೆಗಳ ಹಾಡುಗಾರಿಕೆಯ 'ನಿತ್ಯೋತ್ಸವ' ಕಾರ್ಯಕ್ರಮವಂತೂ ಗ್ರಾಮೀಣ ಪ್ರದೇಶದ ನೂರಾರು ಮಕ್ಕಳಿಗೆ ಅವಕಾಶ ಒದಗಿಸಿದ್ದಲ್ಲದೆ ಅವರಲ್ಲಿಯ ಅನೇಕ ಪ್ರತಿಭೆ ಗಳನ್ನು ವಯೋನುಗುಣವಾಗಿ ಗುರುತಿಸಿ ಪ್ರೋತ್ಸಾಹಿಸುವ ಜನಪ್ರಿಯ ಕಾರ್ಯಕ್ರಮವಾಗಿ ಪರಿಣಮಿಸಿದ್ದರಲ್ಲಿ ಆಶ್ಚರ್ಯವಿಲ್ಲ. ದೂರದರ್ಶನದ ಮೂಲಕ ಇದು ಇನ್ನೂ ಹೆಚ್ಚು ಜನಕ್ಕೆ ತಲುಪಲು ಸಾಧ್ಯವಾಯಿತು. ಕೊನೆಯ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮುಂಬಯಿಯ ಮೈಸೂರು ಅಸೋಸಿಯೇಷನ್‌ನ ಅಮೃತಮಹೋತ್ಸವ ಸಮಾರಂಭದ ಸಂದರ್ಭವನ್ನು ಬಹುಮಾನ ವಿತರಣೆಗೆ ಆಯ್ದುಕೊಂಡದ್ದು ವಿಠಲಮೂರ್ತಿಯವರ ಔಚಿತ್ಯ ಪ್ರಜ್ಞೆಯನ್ನು ಸೂಚಿಸುತ್ತದೆ. ಆಗ ಈ ಗೀತೆಗಳ ಧ್ವನಿಸುರುಳಿಗಳನ್ನು ಬಿಡುಗಡೆ ಗೊಳಿಸುವ ಕಾರ್ಯವನ್ನು ನಾನು ಸಂತೋಷದಿಂದ ನಿರ್ವಹಿಸಿದೆ.

ಸರಕಾರ ವಹಿಸಿದ ಬೇರೆ ಬೇರೆ ಕೆಲಸಗಳಿಗಾಗಿ ವಿದೇಶಗಳನ್ನು ಸುತ್ತಾಡಿದ ತಮ್ಮ ಅನುಭವದ ಲಾಭವನ್ನು ರಾಜ್ಯಕ್ಕೆ ಒದಗಿಸಿದ್ದಾರೆ. ವ್ಯಾಪಾರೋದ್ಯಮವನ್ನು ಬಲಗೊಳಿಸಲು

ಇಂಡೋನೇಷಿಯಾ, ಥೈಲಂಡ್‌ಗಳಿಗೆ ಭೇಟಿಕೊಟ್ಟಾಗ ಕನ್ನಡ ಮತ್ತು ಸಂಸ್ಕೃತಿಯನ್ನು ಪ್ರಸಾರಗೊಳಿಸುವ ಧ್ಯೇಯವನ್ನು ಈಡೇರಿಸಿದರು.

ಹೀಗೆ ಕಲೆ, ಸಾಹಿತ್ಯ, ರಂಗಭೂಮಿ, ಚಲನಚಿತ್ರ ಮುಂತಾದ ಕ್ಷೇತ್ರಗಳಲ್ಲಿ ಸ್ವತಃ ಆಸ್ಥೆವಹಿಸಿದ್ದರಿಂದ ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಕಳೆಯೊದಗಿತು. ರಾಷ್ಟ್ರಮಟ್ಟದ ಪ್ರಶಸ್ತಿಗೆ ಪಾತ್ರವಾದ 'ಕಾನೂರು ಹೆಗ್ಗಡತಿ', 'ಮತದಾನ' ಮತ್ತು 'ಹಸೀನಾ' ಕಥಾ ಚಿತ್ರಗಳಿಗೆ ವಿಠಲಮೂರ್ತಿಯವರು ಗೌರವ ಸಲಹಾನಿರ್ಮಾಪಕರಾಗಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಮೈಸೂರಿನಲ್ಲಿ ನೆರವೇರಿದಾಗ ಅದರ ವೈಭವಕ್ಕೆ ಹಾಗೂ ಅಚ್ಚುಕಟ್ಟುತನಕ್ಕೆ ಕುಂದುಬರದಂತೆ ಪರಿಶ್ರಮಪಟ್ಟವರಲ್ಲಿ ವಿಠಲಮೂರ್ತಿಯವರೂ ಒಬ್ಬರು. ಕಳೆದ ಮಾರ್ಚ್ ತಿಂಗಳು ಬೆಳಗಾವಿಯಲ್ಲಿ ನಡೆದ ದ್ವಿತೀಯ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿಯೂ ಇವರು ಅತ್ಯಂತ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದರಾದರೂ ಯೋಜನೆಯ ಪ್ರಾರಂಭದಿಂದಲೇ ವಿಠಲಮೂರ್ತಿಯವರಿಗೆ ಅದರ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿದ್ದರೆ ಇನ್ನಷ್ಟು ವ್ಯವಸ್ಥಿತವಾಗಿ, ವೈಭವಪೂರ್ಣವಾಗಿ ಹಾಗೂ ಅರ್ಥವತ್ತಾಗಿ ಸಮ್ಮೇಳನ ನೆರವೇರಲು ಸಾಧ್ಯವಿತ್ತು. ಸಮ್ಮೇಳನದ ಸ್ವರೂಪ ಹಾಗೂ ಸಿದ್ಧತೆಯನ್ನು ಕುರಿತು ವಿವರವಾದ ವರದಿಯೊಂದನ್ನು ಸರಕಾರಕ್ಕೆ ನೀಡುವುದಾಗಿ ಸಮಾರೋಪ ಸಮಾರಂಭದ ಕೊನೆಯಲ್ಲಿ ಅವರು ಹೇಳಿದ್ದರು. ಭವಿಷ್ಯದ ದೃಷ್ಟಿಯಿಂದ ಅದು ಉಪಯುಕ್ತವಾಗಬಹುದು.

ಆಡಳಿತ ನಿಯಮಾವಳಿಯ ಚೌಕಟ್ಟಿನಲ್ಲಿದ್ದುಕೊಂಡೇ ಕನ್ನಡ ನಾಡು–ನುಡಿ–ಸಂಸ್ಕೃತಿಯನ್ನು ಹೇಗೆ ಸುಂದರವಾಗಿ ಸಂಪುಷ್ಟವಾಗಿ ಕಟ್ಟಲು ನೆರವಾಗಬಹುದು ಎಂಬುದನ್ನು ಹಿರಿಯ ಐ.ಎ.ಎಸ್. ಅಧಿಕಾರಿ ವಿಠಲಮೂರ್ತಿಯವರು ತೋರಿಸಿಕೊಟ್ಟಿದ್ದಾರೆ. ಇದು ಉಳಿದ ಅಧಿಕಾರಿಗಳಿಗೂ ಮಾದರಿಯಾಗಬೇಕು. ನಿವೃತ್ತಿಯ ನಂತರವೂ ಯೋಗ್ಯತಾನುಸಾರ ನಾಡಿಗೆ ಅವರ ಸೇವೆ ಸಲ್ಲುವಂತಾಗಲಿ ಎಂದು ಹಾರೈಸುತ್ತೇನೆ.

ಈಚೆಗೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗುತ್ತಿರುವ ಅವರ 'ಆಡಳಿತದ ನೆನಪುಗಳು' ಸೂಕ್ಷ್ಮವಾದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದ್ದು ಮಹತ್ವದ ದಾಖಲೆಯಾಗಿ ಉಳಿಯಬಲ್ಲವು.

('ಸಂಸ್ಕೃತಿ' ೨೦೧೪)

ಅಧಿಕಾರ ಶಾಹಿಗೆ ಸಾಂಸ್ಕೃತಿಕ ದೀಕ್ಷೆ

ಕೆಲವರು ವಿದ್ಯಾರ್ಥಿ ದೆಸೆಯಲ್ಲಿ ಪ್ರಥಮ ದರ್ಜೆ ಸಂಪಾದಿಸಿರುತ್ತಾರೆ. ಅದರೆ ಮುಂದೆ ಅಧಿಕಾರ ಸ್ಥಾನದಲ್ಲಿದ್ದಾಗ ಅಥವಾ ಯಾವುದೇ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಾಗ ಅದೇ ದರ್ಜೆಯನ್ನು ಮುಂದುವರಿಸುತ್ತಾರೆಂದು ಹೇಳಲು ಬರುವುದಿಲ್ಲ. ಡಾ. ಸಿ. ಸೋಮಶೇಖರ ಅವರು ವಿದ್ಯಾರ್ಥಿಯಾಗಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಂತೆಯೇ ಆಮೇಲೆ ತಮಗೆ ಲಭಿಸಿದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಆ ದರ್ಜೆಗೆ ಮಿಗಿಲಾದ ರೀತಿಯಲ್ಲಿ ಸೇವೆ ಸಲ್ಲಿಸುತ್ತ ಬಂದಿರುವುದು ಅವರ ಹೆಗ್ಗಳಿಕೆ.

ಮೂವತ್ತು ವರ್ಷಗಳ ಹಿಂದೆ ಧಾರವಾಡದಲ್ಲಿ ಅವರು ಅಸಿಸ್ಟೆಂಟ್ ಕಮಿಷನರ್ ತರಬೇತಿ ಪಡೆಯುತ್ತಿದ್ದಾಗ ನನಗೆ ಅವರ ಪರಿಚಯವಾಯಿತು. ತರಬೇತಿಯ ನಂತರ ಧಾರವಾಡದಲ್ಲಿಯೇ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವಾಗಲೇ ಅವರು ಇಲ್ಲಿಯ ನಾಗರಿಕರೊಂದಿಗೆ ನಡೆದುಕೊಂಡ ರೀತಿ ಮೆಚ್ಚುವಂತಿತ್ತು. ಕನ್ನಡ ನಾಡು ನುಡಿಯ ಬಗೆಗಿನ ಅವರ ಅಭಿಮಾನ, ನಾಟಕ, ಸಾಹಿತ್ಯ, ಕಲೆಗಳಲ್ಲಿ ತೋರಿಸುತ್ತಿದ್ದ ವಿಶೇಷ ಆಸಕ್ತಿ, ಸಾಂಸ್ಕೃತಿಕ ಕೇಂದ್ರವೆನಿಸಿದ ಧಾರವಾಡದ ಸುಶಿಕ್ಷಿತರನ್ನು ಬಹುಬೇಗ ಆಕರ್ಷಿಸಿತು. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರಲ್ಲದೆ ಧಾರವಾಡದ ವಾತಾವರಣ ಅವರ ಮಾತುಗಾರಿಕೆಗೆ ಹೆಚ್ಚಿನ ಹೊಳಪನ್ನು ತಂದುಕೊಟ್ಟಿತೆಂದರೆ ತಪ್ಪಾಗದು. ಅಂದಿನಿಂದಲೇ ಆಡಳಿತದಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡುತ್ತ ಬಂದ ಅವರು ಇಂದಿಗೂ ಆ ಕಾರಣದಿಂದ ವಿಶಿಷ್ಟರೆನಿಸಿದ್ದಾರೆ. ಅವರ ಪ್ರಥಮ ಪುಸ್ತಕ 'ಚಿಂತನ ಚಿಲುಮೆ' ಪ್ರಕಟವಾದದ್ದು ಕೂಡ ಧಾರವಾಡದಲ್ಲಿಯೇ. ಆಗ ನನ್ನ ಬಗ್ಗೆ ಇಟ್ಟು

ಕೊಂಡಿದ್ದ ಅವರ ಪ್ರೀತಿ ವಿಶ್ವಾಸಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ.

ಕ್ರಮವಾಗಿ ಪದೋನ್ನತಿ ಪಡೆಯುತ್ತ ಡಾ. ಸೋಮಶೇಖರ ಅವರು ಮಂಗಳೂರು, ನಂತರ ಬೆಂಗಳೂರುಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಆಡಳಿತಾಧಿಕಾರಿಯಾಗಿ ಯಶೋಭಾಗಿ ಯಾಗಿದ್ದನ್ನು ಕೇಳಿದ್ದೆನಾದರೂ ೧೦-೧೪ ವರ್ಷಗಳ ಈ ಅವಧಿಯಲ್ಲಿ ಅವರ ಸಂಪರ್ಕ ಒದಗಿಬಂದಿರಲಿಲ್ಲ. ಮುಂದೆ ಇಸವಿ ೨೦೦೦ರಲ್ಲಿ ಸೋಮಶೇಖರ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ, ಎರಡು ವರ್ಷದ ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದಾಗ ನನ್ನ ಸಲಹೆ ಸೂಚನೆಗಳಿಗೆ ಅವರು ಕಾತರರಾಗಿದ್ದುದನ್ನು ನಾನು ಗಮನಿಸಿದ್ದೆ. ಭಾರತೀಯ ಆಡಳಿತ ಸೇವೆಗೆ (ಐ.ಎ.ಎಸ್.) ಪದೋನ್ನತಿ ಪಡೆದ ನಂತರ ಅವರು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದರು. ಧಾರವಾಡದ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಪ್ರತಿಷ್ಠಾನ ಯೋಜಿಸಿ ರೂಪಿಸಿದ 'ಸಾಧನಕೆರೆ ಉದ್ಯಾನ'ದ ಯೋಜನೆಯ ಉದ್ಘಾಟನೆಗೆ ನನ್ನನ್ನು ಪ್ರೀತಿಯ ಒತ್ತಾಯದಿಂದ ಒಪ್ಪಿಸಿ, ಸೋಮಶೇಖರ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ವಿಠಲಮೂರ್ತಿ ಹಾಗೂ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಡಾ. ಎಂ.ಎಂ. ಕಲಬುರ್ಗಿಯವರೊಂದಿಗೆ ಸಮಾರಂಭವನ್ನು ಅದ್ದೂರಿಯಾಗಿ ನೆರವೇರಿಸಿದರು. ಅವರ ಕಾರ್ಯವೈಖರಿಯನ್ನು ಮತ್ತೊಮ್ಮೆ ಪ್ರತ್ಯಕ್ಷವಾಗಿ ಕಾಣುವ ಅವಕಾಶ ಧಾರವಾಡದ ನಾಗರಿಕರಿಗೆ ಒದಗಿ ಬಂದಿತು.

ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ (೨೦೦೮-೧೨) ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನ ವೈಭವಪೂರ್ಣವಾಗಿ ಜರುಗಲು ಸೋಮಶೇಖರ ಅವರ ಸಂಘಟನಾ ಸಾಮರ್ಥ್ಯವೇ ಮುಖ್ಯ ಕಾರಣ ವಾಗಿತ್ತೆಂಬುದನ್ನು ಸಮ್ಮೇಳನದ ಉದ್ಘಾಟಕನಾಗಿ ಹೋಗಿದ್ದ ನನ್ನ ಅರಿವಿಗೆ ಬರಲು ತಡವಾಗಲಿಲ್ಲ. ಹಿರಿಕಿರಿಯ ಸಾಹಿತಿಗಳೊಂದಿಗೆ ಅವರಿಟ್ಟುಕೊಂಡಿದ್ದ ಮಧುರ ಬಾಂಧವ್ಯಕ್ಕೆ ಅಂದು ತಮ್ಮ ಮನೆಯಲ್ಲಿ ನೀಡಿದ ಗೌರವಾತಿಥ್ಯ ನಿದರ್ಶನದಂತಿತ್ತು. ಸಮ್ಮೇಳನದ ಅಂಗವಾಗಿ ಎರಡನೆಯ ಸಂಜೆ ತುಮಕೂರಿನ ವಿಶಾಲ ಕ್ರೀಡಾಂಗಣದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಸಹಕಾರದಿಂದ ಏರ್ಪಡಿಸಿದ ಕಾರ್ಯಕ್ರಮವನ್ನು ಮರೆಯುವಂತೆಯೇ ಇಲ್ಲ. ೨೦೧೯ರಲ್ಲಿ ಜಿಲ್ಲಾ ಉತ್ಸವ ಹಮ್ಮಿಕೊಂಡು ರಾಷ್ಟ್ರಮಟ್ಟದ ಹಿರಿಯ ಕಲಾವಿದರನ್ನು ಆಹ್ವಾನಿಸಿ ಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳಂತೂ ತುಮಕೂರಿನ ಜನತೆಯ ಮನಸ್ಸಿನಲ್ಲಿ ಇಂದಿಗೂ ಅಚ್ಚೊತ್ತಿದಂತಿದೆ.

ಬೆಂಗಳೂರಿನ ಬಸವ ವೇದಿಕೆಯ ರಾಜ್ಯಮಟ್ಟದ ವಿವಿಧ ಚಟುವಟಿಕೆಗಳಿಗೆ ಅದರ ಗೌರವಾಧ್ಯಕ್ಷರಾದ ಡಾ. ಸಿ. ಸೋಮಶೇಖರ ಅವರೇ ಕಾರಣರೆಂದು ಬೇರೆ ಹೇಳಬೇಕಿಲ್ಲ. ವೇದಿಕೆ ಬಸವಜಯಂತಿಯಂದು ಕೊಡಮಾಡುವ 'ಬಸವಶ್ರೀ' ಪ್ರಶಸ್ತಿಯನ್ನು ಸ್ವೀಕರಿಸಲು ನಾನು ಒಪ್ಪಿಕೊಂಡಿದ್ದೆ. ೨೦೧೨ ಮೇ ೧ರಂದು ರವೀಂದ್ರ ಕಲಾಕ್ಷೇತ್ರದ

ತುಂಬಿದ ಸಭೆಯಲ್ಲಿ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಅಂದು ಬಸವಜಯಂತಿಯ ಉದ್ಘಾಟನೆ ನೇರವೇರಿಸಿದವರು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಾ. ಬಿ.ಎಸ್. ಯಡಿಯೂರಪ್ಪನವರು, ಪ್ರಶಸ್ತಿ ಪ್ರದಾನ ಮಾಡಿದವರು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ. ಡಿ.ವಿ. ಸದಾನಂದಗೌಡರು. ರಾಜ್ಯದ ರಾಜಕೀಯದಲ್ಲಿ ಆಗಲೇ ಬಿಕ್ಕಟ್ಟು ತಲೆ ದೋರಿತ್ತು. ಈ ಇಬ್ಬರ ಅಂದಿನ ಭಾಷಣಗಳಿಂದ ಎಲ್ಲಿ ಸಮಾರಂಭದ ಸಮತೋಲನ ತಪ್ಪುವದೋ ಎಂಬ ಆತಂಕ ಸಭಿಕರಲ್ಲಿ ಉಂಟಾಗಿತ್ತು. ಆದರೆ ಡಾ. ಸಿ. ಸೋಮಶೇಖರ್ ತಮ್ಮ ಮುತ್ಸದ್ದಿತನದಿಂದ ಪ್ರಶಸ್ತಿ ಪ್ರದಾನ ಸಮಾರಂಭ ಸಂತೋಷಪ್ರದವಾಗಿ ನಡೆಯುವಂತೆ ನೋಡಿಕೊಂಡರು.

ಡಾ. ಸಿ. ಸೋಮಶೇಖರ ಅವರ 'ವಚನಗಳಲ್ಲಿ ಸಾಮಾಜಿಕ ಚಿಂತನೆ' ಎಂಬ ಪ್ರೌಢ ಪ್ರಬಂಧಕ್ಕಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಅವರಿಗೆ ಡಿ.ಲಿಟ್. ಪದವಿ ನೀಡಿದೆ. ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ಉತ್ತರಿಸಿದ ಪ್ರಪ್ರಥಮ ಕನ್ನಡಿಗ ಎಂಬ ಖ್ಯಾತಿ ಸಣ್ಣದಲ್ಲ. ಸರಕಾರದ ವಿವಿಧ ಬಗೆಯ ಹುದ್ದೆಗಳಲ್ಲಿ ದಕ್ಷತೆಯಿಂದ ಕೆಲಸ ಮಾಡಿದ ಅವರು ಕೆಳಗಿನಿಂದ ಮೇಲಿನವರೆಗೆ ಎಲ್ಲ ವರ್ಗದ ಜನರ ಭಾವನೆಗಳಿಗೆ ಸ್ಪಂದಿಸುತ್ತ ಬಂದಿದ್ದಾರೆ. ಬೇರೆ ಬೇರೆ ಕೆಲಸಗಳ ನಿಮಿತ್ತ ವಿದೇಶ ಸುತ್ತಾಡಿದ ತಮ್ಮ ಅನುಭವದ ಲಾಭವನ್ನು ರಾಜ್ಯಕ್ಕೆ ಒದಗಿಸಿದ್ದಾರೆ. ಆಡಳಿತ ನಿಯಮವಳಿಗಳ ಚೌಕಟ್ಟಿನಲ್ಲಿದ್ದುಕೊಂಡೇ ಕನ್ನಡನಾಡು-ನುಡಿ-ಸಮಾಜಗಳನ್ನು ಹೇಗೆ ಸುಂದರ ಸುಪುಷ್ಟವಾಗಿ ಕಟ್ಟಲು ನೆರವಾಗಬಹುದು ಎಂಬುದನ್ನು ಐ.ಎ.ಎಸ್. ಅಧಿಕಾರಿಯಾಗಿ ಡಾ. ಸಿ. ಸೋಮಶೇಖರ ತೋರಿಸಿಕೊಟ್ಟಿದ್ದಾರೆ.

'ಕರ್ನಾಟಕ ಸೇವಾರತ್ನ', 'ಕಾರ್ಮಿಕ ಸೇವಾ ಧುರೀಣ', 'ಕನ್ನಡ ಸಾಂಸ್ಕೃತಿಕ ರಾಯಭಾರಿ', 'ಆಡಳಿತ ರತ್ನ' ಇವೇ ಮೊದಲಾದ ಪ್ರಶಸ್ತಿಗಳು ಅವರಿಗೆ ಸಂದಿರುವುದು ಯಥೋಚಿತವಾಗಿದೆ. ಅರವತ್ತಕ್ಕೆ ಅರಳು-ಮರಳು ಎನ್ನುವುದು ಸಾಮಾನ್ಯವಾದ ವಾಡಿಕೆ. ಆದರೆ ಕವಿವರ ಬೇಂದ್ರೆಯವರ ಅರ್ಥದಲ್ಲಿ ಅದು 'ಮರಮರಳಿ ಅರಳುವ' ಕ್ರಿಯೆ. ಅದರಿಂದ ಭಾವಶುದ್ಧಿಯನ್ನು ಸಾಧಿಸಬಹುದು. ನಿವೃತ್ತಿಯ ನಂತರವೂ ಅವರ ಯೋಗ್ಯತಾನುಸಾರ ನಾಡಿಗೆ, ದೇಶಕ್ಕೆ ಅವರ ಸೇವೆ ಸಲ್ಲುವಂತಾಗಲಿ ಎಂದು ಹಾರೈಸಿ ಅವರಿಗೆ ಶುಭ ಕೋರುತ್ತೇನೆ.

('ಮುತ್ತಿನಹಾರ' ೨೦೧೪)

ದೇಸೀ ಸಂಪ್ರದಾಯದ ಸಂರಕ್ಷಣೆ

ಭಾವಗೀತೆಗಳ ಹಾಡುಗಾರಿಕೆ ಸುಗಮಸಂಗೀತವೆಂಬ ವ್ಯಾಪಕವಾದ ಹೆಸರಿನಲ್ಲಿ ಜನಮನದ ಅಭಿರುಚಿಯನ್ನು ಬೆಳೆಸಿಕೊಂಡು, ಒಂದು ಮಾಧ್ಯಮವಾಗಿ ತನ್ನದೇ ಆದ ಸ್ವಂತಿಕೆಯಿಂದ ಪ್ರಸಾರಗೊಂಡಿರುವುದನ್ನು ಎಲ್ಲರೂ ಬಲ್ಲರು. ಇದರ ಜೊತೆಗೆ ವಚನಗಾಯನ, ದಾಸರ ಹಾಡು, ತತ್ವಪದಗಳ ಹಾಡುಗಾರಿಕೆ, ಸನ್ನಿವೇಶದಿಂದ ನಿರ್ಬಂಧಿತಗೊಂಡಿರುವ ರಂಗಗೀತೆಗಳು ಹಾಗೂ ಯಾವುದೇ ಶಾಸ್ತ್ರಕ್ಕೆ ವಿಧೇಯವಾಗಿರದ, ಗೇಯತೆಯೇ ಪ್ರಧಾನವಾಗಿರುವ ಜಾನಪದ ಸಂಗೀತ ಇತ್ಯಾದಿ ವಿಭಿನ್ನ ಮಾದರಿಗಳೂ ಇವೆ. ಇವೆಲ್ಲವನ್ನೂ ಒಳಗೊಂಡಂತೆ ಒಟ್ಟಾಗಿ ಇದಕ್ಕೆ 'ಕನ್ನಡ ಸಂಗೀತ' ಎಂದು ಕರೆಯಬಹುದೆಂದು ದಿವಂಗತ ಜಿ.ವಿ. ಅತ್ರಿಯವರು ಭಾವಿಸಿ, ಆ ರೀತಿ ಜಿಲ್ಲಾ ಸ್ಥಳಗಳಲ್ಲಿ ಕನ್ನಡ ಸಂಗೀತ ಸಮ್ಮೇಳನಗಳನ್ನು ಹಿಂದೆ ನಡೆಸಿದ್ದುಂಟು. ಅದೇನೇ ಇರಲಿ, ಕನ್ನಡದ ಕಾವ್ಯ ಪರಂಪರೆಯಲ್ಲಿ ಗೇಯತೆ ಎನ್ನುವದು ಅದರ ವಿಶಿಷ್ಟ ನಾಡಿಬಡಿತವಾಗಿದೆ.

ಮೇಲೆ ಕಾಣಿಸಿದ ವಿವಿಧ ಪ್ರಕಾರಗಳ ಹಾಡುಗಾರಿಕೆಯ ಚತುರಂಗ ಬಲದೊಂದಿಗೆ ಜನತೆಯ ಹೃದಯವನ್ನು ಸೂರೆಗೊಳ್ಳುತ್ತಿರುವ ಬಸವ ಲಿಂಗಯ್ಯ ಹಿರೇಮಠರು ಉತ್ತರ ಕರ್ನಾಟಕದ ಅತ್ಯಂತ ಜನಪ್ರಿಯ ಗಾಯಕರಲ್ಲಿ ಮುಂಚೂಣಿಯಲ್ಲಿದ್ದಾರೆ. ಕನ್ನಡ ನಾಡಿನ ಗಡಿಯನ್ನು ದಾಟಿ ಅವರ ಕಂಠಸಿರಿ ರಾಷ್ಟ್ರವ್ಯಾಪಿಯಾಗುತ್ತಿರುವುದು ಅಭಿಮಾನದ ಸಂಗತಿ ಯಾಗಿದೆ. ಎಡಬದಿಗೆ ಪಿಟೀಲುವಾದಕ, ಬಲಬದಿಗೆ ತಬಲಾಸಾಥಿ, ನಡುವೆ ತಾವೇ ಹಾರ್ಮೋನಿಯಮ್ ಮೇಲೆ ಕೈಯಾಡಿಸುತ್ತ ನಡನಡುವೆ ಎರಡೂ ಕೈ ಮೇಲೆತ್ತಿ ಬಸವಲಿಂಗಯ್ಯ ಕಂಚಿನ ಕಂಠದಿಂದ ಹಾಡತೊಡಗಿದರೆ ಶ್ರೋತೃಗಳು ಹರ್ಷದಿಂದ ಓಲಾಡುವಂತೆ ಮಾಡಿಬಿಡುತ್ತಾರೆ. ಅದು

ವಚನವಾಗಿರಬಹುದು, ದಾಸರ ಹಾಡಾಗಿರಬಹುದು, ಶರೀಫರ ತತ್ವಪದವಾಗಿರಬಹುದು, ಜನಪದ ಗೀತವಾಗಿರಬಹುದು–ಎಲ್ಲವೂ ಹಿಗ್ಗಿ ಹಿಗ್ಗಿ ಹೊರಸೂಸುತ್ತವೆ. ಈ ಓಘದಲ್ಲಿ ಶ್ರೀಮತಿ ವಿಶ್ವೇಶ್ವರಿಯವರು ಅಲ್ಲಲ್ಲಿ ಪದ್ಯದ ಚರಣಗಳನ್ನೂ ಕಿವಿಯಲ್ಲಿ ಉಸುರುತ್ತ ದನಿಗೂಡಿಸುವದೂ ಅಷ್ಟೇ ಚಂದವಾಗಿರುತ್ತದೆ. ಮಾದರಿಗೊಂದರಂತೆ ಅವರು ಹಾಡಿದರೂ ಒಂದೂವರೆ ಗಂಟೆ ಗೊತ್ತಾಗದಂತೆ ಉಲ್ಲಾಸದಲ್ಲಿ ಕಳೆದು ಹೋಗಿರುತ್ತದೆ.

ಪರಂಪರಾಗತವಾಗಿ ನಮ್ಮ ಜನ ಹಾಡಿಕೊಂಡು ಬಂದಿರುವ ಸಂಗೀತ ಪ್ರಕಾರವೆಂದರೆ ಜಾನಪದ ಸಂಗೀತ. ಅದರಲ್ಲಿ ಹಳ್ಳಿಗಾಡಿನ ಜನರ ನೋವು–ನಲಿವು, ದೈವಭಕ್ತಿ, ಬೇಸರ ನೀಗಿಸುವ ಹಾಸ್ಯ, ಮುಗ್ಧತೆ, ಸರಳತೆಗಳು ತಾವೇ ತಾವಾಗಿರುತ್ತವೆ. ಸಾಮಾನ್ಯವಾಗಿ ಈ ಗಾಯನದಲ್ಲಿ ನಾದದ ಗುಂಗು ಹಿಡಿಸುವವರೇ ಹೆಚ್ಚು. ಆದರೆ ಬಸವಲಿಂಗಯ್ಯ ಜನಪದ ಗೀತಗಳನ್ನು ಹಾಡಿದರೆ ಅದರ ಸಾಹಿತ್ಯದ ಚೆಲುವನ್ನೂ ಸಮರ್ಪಕವಾಗಿ ಕೇಳುಗರಿಗೆ ದಾಟಿಸಬಲ್ಲರು. ಒಂದು ದೃಷ್ಟಿಯಿಂದ ಸ್ಥಗಿತಗೊಂಡಿರುವ ಜನಪದ ಕಾವ್ಯ ಹೊಸ ಸವಾಲನ್ನು ಎದುರಿಸುವ ಪ್ರಸಂಗ ಕಡಿಮೆಯಿದ್ದರೂ ಬಸವಲಿಂಗಯ್ಯ ಅವುಗಳ ಜೀವಂತಿಕೆಗೆ ಭಂಗ ಬರದಂತೆ ನೋಡಿಕೊಳ್ಳುತ್ತಾರೆ. ಜನಪದ ಗಾಯಕರು ಸಾಮಾನ್ಯವಾಗಿ ಕಂಠ ಮಾಧುರ್ಯಕ್ಕೆ ಹೆಚ್ಚು ಗಮನ ಕೊಡುವದಿಲ್ಲ ಎನ್ನುವದು ಕೆಲಮಟ್ಟಿಗೆ ನಿಜವಿದ್ದರೂ ಅದಕ್ಕಾಗಿ ತಕ್ಕ ಸಾಧನೆ ಮಾಡಿ ಇವರು ಅದನ್ನು ಕಾಪಾಡಿಕೊಂಡಿದ್ದಾರೆ.

ಬಸವಲಿಂಗಯ್ಯನವರು ರಂಗಗೀತೆಗಳನ್ನು ಸಾದರಪಡಿಸುವ ಮೋಡಿಯೇ ಬೇರೆ. ಅತ್ಯಂತ ಜನಪ್ರಿಯವಾಗಿ ಓಡುತ್ತಿದ್ದ ಈಟಿವಿ ವಾಹಿನಿಯ 'ಮೂಡಲಮನೆ' ಧಾರವಾಹಿ ಒಂದು ಹಂತದಲ್ಲಿ ನಿದಾನಗೊಂಡಾಗ ನಾಟಕದ ಹಾಡುಗಳೊಂದಿಗೆ ಬಸವಲಿಂಗಯ್ಯನವರ ಪ್ರವೇಶ ಅದಕ್ಕೆ ರಂಜನೆಯೊದಗಿಸಿದ್ದನ್ನು ಇಲ್ಲಿ ನೆನೆಯಬಹುದು. ಒಂದು ಕಾಲಕ್ಕೆ ನಾಟಕದ ಹಾಡುಗಳಿಗೆ ಮಾರುಹೋಗಿದ್ದ ಜನ ಚಿತ್ರಗೀತೆಗಳು ಬಂದ ಮೇಲೆ ಆ ಕಡೆಗೇ ಹೆಚ್ಚು ಆಕರ್ಷಿತರಾದರು. ಇದರಿಂದ ರಂಗಗೀತೆಗಳಿಗೆ ಪ್ರಾಮುಖ್ಯತೆ ಕಡಿಮೆಯಾಗಿ ಹೋಯಿತು. ಹಿರಿಯ ನಟರಾದ ಏಣಗಿ ಬಾಳಪ್ಪನವರು, ಬಸವಲಿಂಗಯ್ಯನಂಥವರು ಸಂದರ್ಭಗಳನ್ನು ಸದುಪಯೋಗಪಡಿಸಿಕೊಂಡು ಇಂದಿನ ಪೀಳಿಗೆಗೆ ಅವುಗಳ ರುಚಿ ತೋರಿಸಿ ಧ್ವನಿಮುದ್ರಣಗೊಳಿಸಿ ಮುಂದಿನ ಪೀಳಿಗೆಗಾಗಿ ಉಳಿಸಿಕೊಳ್ಳುತ್ತಿರುವುದು ಇದ್ದುದರಲ್ಲಿಯೇ ಸಮಾಧಾನದ ಸಂಗತಿಯಾಗಿದೆ. ರಂಗಗೀತೆಗಳಿಗೆ ಸಿದ್ಧಪಡಿಸಿದ ಒಂದು ಚೌಕಟ್ಟಿದ್ದರೂ ಸ್ವಂತಿಕೆಯ ಅಭಿವ್ಯಕ್ತಿಗೆ ಅವಕಾಶವಿಲ್ಲವೆಂದಲ್ಲ. ಹಿಂದಿನ ವೃತ್ತಿರಂಗ ಭೂಮಿಯ ಗೀತೆಗಳನ್ನು ಹಾಡುವವರು ಬೆರಳೆಣಿಕೆಯಲ್ಲಿರಬಹುದು. ಆ ಮಟ್ಟುಗಳನ್ನು ಅವರಿಂದಲೇ ಗ್ರಹಿಸಿ, ಪ್ರಾಚೀನ ಕಲೆಯ ಆಸ್ತಿಯನ್ನು ಉಳಿಸಿಕೊಳ್ಳುವ ಪ್ರಯತ್ನಗಳೂ ನಡೆದಿವೆ. ಬಸವಲಿಂಗಯ್ಯನವರು ಅದರ ಸಾರಥ್ಯವನ್ನು ಸಮರ್ಥವಾಗಿ ನಿರ್ವಹಿಸಬಲ್ಲರು.

ಬಸವಲಿಂಗಯ್ಯನವರು ಒಬ್ಬ ಹುಟ್ಟು ಕಲಾವಿದ ಬೇರೆ. ಚಿಕ್ಕ ವಯಸ್ಸಿನಲ್ಲಿಯೇ ಹಾರ್ಮೋನಿಯಂ ನುಡಿಸುತ್ತ ಹಾಡಲು ಕಲಿತರು. ಜನಪದ ಸಂಗೀತ ಹಾಗೂ ಬಯಲಾಟಗಳೊಂದಿಗೆ ಹಾಡುತ್ತ ಕುಣಿಯುತ್ತ ಬೆಳೆದರು. ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಹಾಡುಗಳ ಭಂಡಾರವೇ ಇವರ ನೆನಪಿನ ಖಜಾನೆಯಲ್ಲಿದೆ. ಬಾಳಪ್ಪ ಹುಕ್ಕೇರಿಯವರನ್ನು 'ಸಾವಿರ ಹಾಡಿನ ಸರದಾರ' ಎಂದು ಕರೆಯುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು. ಅವುಗಳಲ್ಲಿ ಜನಪದ ಹಾಡು, ಗೀಗೀ, ಲಾವಣಿ, ವಚನ, ದಾಸರಪದ, ರಂಗಗೀತೆ, ಬಯಲಾಟದ ಪದ, ತತ್ವಪದ, ಭಕ್ತಿಗೀತೆ ಹೀಗೆ ಯಾವ ಬಗೆಯ ಕಾರ್ಯಕ್ರಮಕ್ಕೂ ಅವರು ಸದಾಸಿದ್ಧರು.

ಜನಪದ ಕಲಾವಿದರು ಹಾಗೂ ಕಲೆಗಳನ್ನು ಕುರಿತಂತೆ ಬಸಲಿಂಗಯ್ಯನವರಿಗಿರುವ ಕಾಳಜಿ ಜಾನಪದ ಸಂಶೋಧನ ಕೇಂದ್ರವೊಂದನ್ನು ಸ್ಥಾಪಿಸಲು ಪ್ರೇರಕವಾಯಿತು. ಆ ಮೂಲಕ ಪ್ರಪ್ರಥಮವಾಗಿ ಶ್ರೀಕೃಷ್ಣಪಾರಿಜಾತ ಉತ್ಸವವನ್ನು ಚೆನ್ನಮ್ಮನ ಕಿತ್ತೂರಿನಲ್ಲಿ ಆಚರಿಸಿದ ಶ್ರೇಯಸ್ಸು ಇವರದಾಗಿದೆ. ಮರುವರ್ಷವೇ ಸಣ್ಣಾಟ ಉತ್ಸವ ನಡೆಸಿ ಅವುಗಳ ಸಂಪೂರ್ಣ ಅಧ್ಯಯನಕ್ಕೆ ಅವಕಾಶ ಒದಗಿಸಲಾಯಿತಲ್ಲದೆ ವಿಡಿಯೋ ದಾಖಲೀಕರಣವನ್ನು ಪೂರೈಸಿದರು. ದೊಡ್ಡಾಟ, ಸೋಗುಗಳ ಹಾಗೂ ಲಾವಣೀ ಗೀಗೀ ಉತ್ಸವವವೂ ಅದನ್ನು ಹಿಂಬಾಲಿಸಿದವು. ಜಾನಪದ ಅಕಾಡೆಮಿ ಸದಸ್ಯರಾಗಿದ್ದಾಗ ಜಾನಪದ ವಾದ್ಯ ಕಲೆಗಳಾದ ಜಗ್ಗಲಗಿ, ಹಲಗೆ, ಕಣಿ, ಕರಡೀಮಜಲು, ಗೊಂದಲಗೇರ ಹಾಡು ಇತ್ಯಾದಿ ವಾದ್ಯ ಪ್ರಕಾರಗಳನ್ನು ವಿಡಿಯೋ ಮುಖಾಂತರ ಇವರು ದಾಖಲೆಗೊಳಿಸಿದ್ದನ್ನು ಮರೆಯುವಂತಿಲ್ಲ. ಭೋಪಾಲದ ಇಂದಿರಾಗಾಂಧಿ ಮಾನವ ಸಂಗ್ರಹಾಲಯ ಈ ಸಂಸ್ಥೆಯ 'ಶ್ರೀಕೃಷ್ಣ ಪಾರಿಜಾತ'ವನ್ನು ದಾಖಲೆಮಾಡಿಕೊಂಡದ್ದು ಈ ಸಂಶೋಧನ ಕೇಂದ್ರದ ಹಿರಿಮೆಗೆ ಸಾಕ್ಷಿಯಾಗಿದೆ. 'ಪಾರಿಜಾತ ಪರಾಮರ್ಶೆ', 'ಸಣ್ಣಾಟ ಸ್ವರೂಪ,' 'ಸೋಗುಗಳ ಅಧ್ಯಯನ' ಇವೇ ಮೊದಲಾದ ಸಂಪಾದಿತ ಕೃತಿಗಳನ್ನು ಈ ಸಂಸ್ಥೆಯಿಂದ ಪ್ರಕಟಿಸಿ ಈ ದಿಸೆಯಲ್ಲಿ ಅಧ್ಯಯನ ಕೈಕೊಂಡವರಿಗೆ ಅನುವು ಮಾಡಿಕೊಡಲಾಗಿದೆ. ಇಡೀ ರಾತ್ರಿ ನಡೆಯುವ 'ಕೃಷ್ಣ ಪಾರಿಜಾತ'ವನ್ನು ಮೂಲ ಸ್ವರೂಪಕ್ಕೆ ಭಂಗಬಾರದಂತೆ ಪರಿಷ್ಕರಿಸಿ, ಮರುವಿನ್ಯಾಸದೊಂದಿಗೆ ಎರಡೂವರೆ ಗಂಟೆಗೆ ಇಳಿಸಿದ್ದರಿಂದ ನಗರವಾಸಿಗಳು ತಮ್ಮ ಅವಸರದ ಜೀವನದಲ್ಲಿಯೂ ಅಭಿರುಚಿಗೆ ಎರವಾಗದಂತೆ, ಈ ಪರಿಷ್ಕರಣೆ ಖ್ಯಾತ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿಯವರ ಮೆಚ್ಚುಗೆಗೂ ಪಾತ್ರವಾಗುವಂತೆ ನೋಡಿಕೊಳ್ಳಲಾಗಿದೆ.

ನೀನಾಸಂ ತಿರುಗಾಟದಲ್ಲಿ ಭಾಗವಹಿಸಿ ನಿರ್ದೇಶನದಲ್ಲಿ ಪರಿಣತರೆನಿಸಿದ ಬಿ.ವಿ. ಕಾರಂತ, ಚಿದಂಬರರಾವ್ ಜಂಬೆ, ಕೆ.ವಿ. ಸುಬ್ಬಣ್ಣ ಮುಂತಾದವರ ಸಂಪರ್ಕದಿಂದ ಕಲಿಯಬೇಕಾದುದನ್ನು ಕಲಿತು, ಒಳ್ಳೆಯ ನಟನಾಗಿ, ಸಂಗೀತ ನಿರ್ದೇಶಕನಾಗಿ ರೂಪುಗೊಂಡ ಬಸವಲಿಂಗಯ್ಯನವರು ಪತ್ನಿ ವಿಶ್ವೇಶ್ವರಿಯವರೊಂದಿಗೆ ಹಲವಾರು ಹವ್ಯಾಸಿನಾಟಕಗಳ ಸಂಗೀತ ನಿರ್ದೇಶನದಲ್ಲಿ ಯಶಸ್ಸು ಕಂಡಿರುವದು ಗಮನಾರ್ಹ.

ಖ್ಯಾತ ಗಾಯಕರಾದ ಸಿ. ಅಶ್ವತ್ಥ, ಶಿವಮೊಗ್ಗ ಸುಬ್ಬಣ್ಣರಂಥವರು ಶರೀಫರ ತತ್ವಪದಗಳ ಹಾಡುಗಾರಿಕೆಯಲ್ಲಿ ತಮ್ಮದೇ ಛಾಪು ಮೂಡಿಸಿದಂತೆ ಉತ್ತರ ಕರ್ನಾಟಕದಲ್ಲಿ ಬಸವಲಿಂಗಯ್ಯನವರೂ ಆ ಕಲೆಯಲ್ಲಿ ಹಿಂದೆ ಬಿದ್ದಿಲ್ಲವೆನ್ನುವುದಕ್ಕೆ 'ಅಭಿನವ ಶರೀಫ' ಎಂಬ ಪ್ರಶಸ್ತಿಯನ್ನು ಅವರಿಗೆ ಜನತೆ ನೀಡಿರುವುದೇ ಸಾಕ್ಷಿ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಸಂದ ಸಂದರ್ಭದಲ್ಲಿ 'ಬಾಳ ಖುಸಿಯಾಗೇತ್ರಿ. ಮನಿ, ಮಠ ಬಿಟ್ಟು ನಮ್ಮವರು ಕಲೆಗೆ ಸಮರ್ಪಿಸಿ ಕೊಂಡಿದ್ದಕ್ಕೆ ಬೆಲೆ ಸಿಕ್ಕಂಗಾಗೇತಿ' ಎಂದು ಉದ್ಗರಿಸಿದ ಶ್ರೀಮತಿ ವಿಶ್ವೇಶ್ವರಿ ಯವರು ಬಸವಲಿಂಗಯ್ಯನವರ ಎಲ್ಲ ಶ್ರೇಯಸ್ಸಿನಲ್ಲೂ ಸಹಭಾಗಿಯಾಗಿದ್ದಾರೆ.

ಈ ಎಲ್ಲ ಬಗೆಯ ಸಂಗೀತ ಹಾಗೂ ರಂಗಚಟುವಟಿಕೆಗಳಲ್ಲಿ ಬಸವಲಿಂಗಯ್ಯನವರು ಭಾವಗೀತೆಗಳ ಉತ್ತಮ ಹಾಡುಗಾರರೂ ಹೌದು ಎಂಬುದನ್ನು ನಾವು ಮರೆಯಬಾರದು. ಬೇಂದ್ರೆ, ಕುವೆಂಪು ಅವರನ್ನು ಒಳಗೊಂಡಂತೆ ಅನೇಕ ಕವಿಗಳ ಭಾವಗೀತೆಗಳನ್ನು ಅವರು ಸೊಗಸಾಗಿ ಹಾಡಬಲ್ಲರು. ಹಿಂದೆ ಸಿದ್ಧರಾಮ ಜಂಬಲದಿನ್ನಿಯವರ ವಚನಗಾಯನ ಕಾರ್ಯಕ್ರಮವಿದ್ದ ಸಂದರ್ಭಗಳಲ್ಲೆಲ್ಲ ನನ್ನ 'ನೀಲಾಂಬಿಕೆ' ಕವಿತೆಯನ್ನು ಅವರಿಂದ ಹಾಡಿಸಿ ಕೇಳಿ ಜನ ಸಂತೋಷಪಟ್ಟದ್ದುಂಟು. ಆ ಕವಿತೆಯ ಸ್ವರ ಸಂಯೋಜನೆಯೂ ಅವರದೇ ಆಗಿತ್ತು. ಈ ಸಂದರ್ಭದಲ್ಲಿ ಪು.ತಿ.ನ. ಅವರ 'ಮಾಡುವವನದಲ್ಲ ಕವಿತೆ ಹಾಡುವವನದು' ಎಂಬ ಮಾತು ನೆನಪಿಗೆ ಬರುತ್ತದೆ. ಅದೇ ರೀತಿ ಬಸವಲಿಂಗಯ್ಯನವರು ನನ್ನ 'ಯುಗ ಯುಗದ ಹಾಡು' ಭಾವಗೀತೆಯನ್ನು ತಮ್ಮದನ್ನಾಗಿ ಮಾಡಿಕೊಂಡುಬಿಟ್ಟಿದ್ದಾರೆ. ಅವರ ಸಂಗೀತ ಕಾರ್ಯಕ್ರಮ ಎಲ್ಲಿಯೇ ಇದ್ದರೂ 'ಯುಗ ಯುಗಕೂ ಉರುಳುತಿಹುದು ಜಗದ ರಥದ ಗಾಲಿ' ಹಾಡನ್ನು ತಮ್ಮದೇ ರೀತಿಯಲ್ಲಿ ಪ್ರಸ್ತುತಪಡಿಸುವುದನ್ನು ಮರೆಯುವುದಿಲ್ಲ. "ಗೆಳೆಯ ಬಸವಲಿಂಗಯ್ಯ ಹಿರೇಮಠ ಅವರ ಕೊರಳ ಹಾಡಾಗಿ, 'ಯುಗ ಯುಗದ ಹಾಡು' ಕೇಳಿದಾಗಿನಿಂದ ಎದೆಯೊಳಗೆ, ಕಿವಿಯೊಳಗೆ, ಮನದೊಳಗೆ ನಿರಂತರ ಮೊರೆಯುತ್ತಿರುವ ಅಲೌಕಿಕ ಸ್ವರದ ಅಶರೀರ ಅನುರಣನ ಗಾನವಾಗುಳಿದಿದೆ" ಎಂದು ಆ ಬಗ್ಗೆ ಕವಿ ಮೋಹನ ನಾಗಮ್ಮ ನವರ ಪ್ರತಿಕ್ರಿಯಿಸುತ್ತಾರೆ.

ಹೀಗೆ ಹಾಡುಗಾರಿಕೆ, ನಾಟಕ, ಬಯಲಾಟ, ನಟನೆ, ನಿರ್ದೇಶನ ಸಂಘಟನೆ ಎಲ್ಲದರಲ್ಲೂ ದೇಶೀ ಸಂಪ್ರದಾಯವನ್ನುಳಿಸಿ ಬೆಳೆಸಲು ಪ್ರಯತ್ನಿಸುತ್ತಿರುವ ಬಸವಲಿಂಗಯ್ಯ ಹಿರೇಮಠ ಹೊತ್ತಿರುವ ಸಾಂಸ್ಕೃತಿಕ ಜವಾಬ್ದಾರಿ ಬಹಳ ಗುರುತರ ವಾದದ್ದು. ಕನ್ನಡ ಜನತೆ ಅದನ್ನು ಗುರುತಿಸಿ ಗೌರವಿಸುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಎಲ್ಲ ಶುಭಗಳೂ ಒದಗಲಿ ಎಂದು ಹಾರೈಸುತ್ತೇನೆ.

('ಹಾಡ ತೂರ್‍ಯಾಡತಾವ : ೨೦೧೦)

ಅನಂತರ ನಡೆದ ಒಂದು ಸಂಗತಿಯನ್ನು ಇಲ್ಲಿ ನಿರೂಪಿಸುವದು ಅವಶ್ಯ. ೨೦೧೦ರ ಬಸವಜಯಂತಿಯಂದು. ಗಲ್ಫ್ ರಾಷ್ಟ್ರ ಬೆಹರೇನ್‌ನಲ್ಲಿ ಆಯೋಜಿಸಲಾಗಿದ್ದ

ಕಾರ್ಯಕ್ರಮದಲ್ಲಿ ಬಸವಲಿಂಗಯ್ಯನವರು ಜಾನಪದ ಸಂಗೀತ ಕಾರ್ಯಕ್ರಮ ನೀಡಿ ಅಭಿಮಾನಿಗಳ ಪ್ರಶಂಸೆಗೆ ಪಾತ್ರರಾದರು. ತತ್ವಪದ, ವಚನಗೀತೆ, ದಾಸವಾಣಿ, ರಂಗಗೀತೆಗಳು, ಲಾವಣಿ ಗೀಗಿ ಹೀಗೆ ಹಲವು ಬಗೆಯ ಹಾಡುಗಳನ್ನು ಎರಡು ತಾಸಿಗೂ ಹೆಚ್ಚು ಕಾಲ ಹಾಡಿ ಪ್ರೇಕ್ಷಕರು ಸಂತೋಷದಿಂದ ಕುಣಿದಾಡುವಂತೆ ಮಾಡಿದ ಹಿರಿಮೆ ಇವರದು. ಪತ್ನಿ ವಿಶ್ವೇಶ್ವರಿಯವರ ನಿರೂಪಣೆ ಅದಕ್ಕನುರೂಪವಾಗಿ ಇದ್ದೇ ಇರುತ್ತದೆ.

ಕಳೆದ ವರ್ಷವೇ ೨೫ ಹಾಗೂ ೨೬ರಂದು ಇಂಗ್ಲೆಂಡಿನ ಸ್ಟೋಕ್ ಆನ್ ಟ್ರೆಂಟ್‌ನಲ್ಲಿ ಕನ್ನಡದ ಬಳಗದ ಮೂವತ್ತನೇ ವಾರ್ಷಿಕೋತ್ಸವ ಹಾಗೂ ಯುಗಾದಿಯ ಆಚರಣೆಯಲ್ಲಿ ಬಸವಲಿಂಗಯ್ಯನವರು ಹಾಡಿದ ಆನಂದಕಂದರ ಭಾವಗೀತೆ ಹಾಗೂ ಶರೀಫರ ತತ್ವಪದಗಳು ಸಭಿಕರನ್ನು ಆಕರ್ಷಿಸಿದ್ದು ಹೆಮ್ಮೆಯ ಸಂಗತಿ. ಡಾ. ಎಸ್.ಎಲ್. ಭೈರಪ್ಪ ನವರು ಹಾಗೂ ಮುಖ್ಯಮಂತ್ರಿ ಚಂದ್ರು ಅವರೂ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷ. ಅಲ್ಲಿಂದ ಮರಳಿ ಬಂದ ಮೇಲೆ ಬಸವಲಿಂಗಯ್ಯ ವಿಶ್ವೇಶ್ವರಿ ದಂಪತಿಗಳು ನಮ್ಮ ಮನೆಗೆ ಬಂದು ತಮ್ಮ ಸಂತೋಷವನ್ನು ಹಂಚಿಕೊಳ್ಳುವುದರ ಜೊತೆಗೆ ಇನ್ನೂ ಕೆಲವು ಅನುಭವಗಳನ್ನು ವಿವರಿಸಿದಾಗ ನಿಜಕ್ಕೂ ರೋಮಾಂಚನವಾಯಿತು. ಇವರು ಶೇಕ್ಸ್‌ಪಿಯರ್‌ನ ಹುಟ್ಟೂರು ಸ್ಟ್ರಾಟ್‌ಫರ್ಡ್‌ಗೆ ಹೋದಾಗ ಅವನ ಮನೆಯ ಎದುರಿನ ದೊಡ್ಡ ಮಾರ್ಗದಲ್ಲಿ ಥಳುಕಿನ ಬಟ್ಟೆ ಧರಿಸಿ ಯುವಕ ಯುವತಿಯರು ಓಡಾಡುತ್ತಿದ್ದರಂತೆ. ಸದಾರಮೆ ನಾಟಕದಲ್ಲಿ ಬಿ.ವಿ. ಕಾರಂತರು ಬಳಸಿದ ಒಂದು ಶೇಕ್ಸ್‌ಪಿಯರನ ಸಾನೆಟ್ `Shall I compare thee' ಎನ್ನುವ ಪದವನ್ನು ಹಾಡಿ ಕೆಲವು ಕನ್ನಡ ರಂಗಗೀತೆಗಳನ್ನು ಹೇಳಿದರು. ಕಿಂಗ್‌ಲಿಯರ್ ನಾಟಕದ ಹಾಡುಗಳನ್ನು ಹಾಡಿದರು. ಆಗ ಅಕ್ಕಪಕ್ಕದ ಬಾರ್‌ನಲ್ಲಿರುವ ಮತ್ತು ಅಲ್ಲಿಯೆ ತಮ್ಮ ತಮ್ಮ ಲೋಕದಲ್ಲಿ ಓಡಾಡಿಕೊಂಡಿದ್ದ ಲಂಡನ್ನಿಗರು ಕೈಯಲ್ಲಿ ಗ್ಲಾಸು ಹಿಡಿದುಕೊಂಡೇ ಹೊರಬಂದು ಗುಂಪಾಗಿ Once again ಎನ್ನುತ್ತ ಭಾಷೆ ತಿಳಿಯದಿದ್ದರೂ ಆ ಹಾಡುಗಳನ್ನು ಎಂಜಾಯ್ ಮಾಡಿ ಖುಷಿಪಟ್ಟರಂತೆ.

ಲಂಡನ್ನಿನ 'ಬ್ರಾಡ್ ಮೊರಾ' ಎಂಬ ಆಸ್ಪತ್ರೆ ಜಗತ್ತಿನ ಅತ್ಯಂತ ಕ್ರೂರ ಹಾಗೂ ಕೊಲೆಗಡುಕರನ್ನು ತಂದು ಬಂಧಿಸಲ್ಪಟ್ಟ ಜೈಲೂ ಕೂಡ. ಅಲ್ಲಿಯೂ ಇವರದು ಅರ್ಧಗಂಟೆಯ ಸಂಗೀತ. ಅದು ಅವರಿಗೆ Musical therapy. ಇವರ ಹಾಡಿಗೆ ಅವರು ತಲೆದೂಗಿದರು. ಸಿಳ್ಳುಹೊಡೆದು ಕುಣಿದರು. ಸಂಗೀತಕ್ಕೆ ಭಾಷೆಯ ಹಂಗಿಲ್ಲವಲ್ಲ!

(೨೦೧೪)

'ಈಶ್ವರಶಿಲ್ಪ'ದ ಶೀಲಾಕಾಂತ ಪತ್ತಾರ

ಡಾ. ಶೀಲಾಕಾಂತ ಪತ್ತಾರ ಅವರ ಪರಿಚಯ ನನಗಾದದ್ದು ಬಹಳ ವರ್ಷಗಳ ಹಿಂದೆಯೇ– ನನ್ನ ವಿದ್ಯಾಗುರುಗಳಾದ ಪ್ರೊ. ಮಾಳವಾಡ ಅವರ 'ಪ್ರಶಾಂತ' ಮನೆಯಲ್ಲಿ. 'ಚೆಂಬೆಳಕಿ'ಗೂ 'ಪ್ರಶಾಂತ'ಕ್ಕೂ ಭೌತಿಕವಾಗಿಯೂ ಮಾನಸಿಕವಾಗಿಯೂ ಬಹಳ ಹತ್ತಿರದ ಸಂಬಂಧ. ಶೀಲಾಕಾಂತ ಪತ್ತಾರ ಅವರು ಮಾಳವಾಡ ದಂಪತಿಗಳಿಗೆ ಬಹಳ ಬೇಕಾದವರಾದ್ದರಿಂದ ಅವರಲ್ಲಿಗೆ ಮೇಲಿಂದ ಮೇಲೆ ಬರುತ್ತಿದ್ದರು. ಕರ್ನಾಟಕದ ಇತಿಹಾಸ, ಶಿಲ್ಪಕಲೆ ಹಾಗೂ ಸಾಹಿತ್ಯದಲ್ಲಿ ಅವರಿಗಿರುವ ವಿಶೇಷ ಆಸಕ್ತಿಯಿಂದಾಗಿ ನನಗಿರುವ ಯುವ ಗೆಳೆಯರ ಬಳಗದಲ್ಲಿ ಅವರೂ ಒಬ್ಬರಾದರು. ಪ್ರೊ. ಮಾಳವಾಡರು ಕರ್ನಾಟಕ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ಕೆಲಕಾಲ ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ನೆನೆಯಬಹುದು. ನನ್ನ ಆತ್ಮೀಯ ಸ್ನೇಹಿತರಾದ ಡಾ. ಗುರುಲಿಂಗ ಕಾಪಸೆಯವರು ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಶೀಲಾಕಾಂತರು ಅವರ ಶಿಷ್ಯರಾಗಿದ್ದು, 'ಗುರುದೈವಂ ಪರಂ ನಾಸ್ತಿ' ಎಂಬ ಸಮರ್ಪಣಾಭಾವವನ್ನು ಪತ್ತಾರ ಅವರು ಇದುವರೆಗೂ ಅಚ್ಚಳಿಯದಂತೆ ಉಳಿಸಿಕೊಂಡಿದ್ದಾರೆ. ಬಹಳ ಹಿಂದೆ ನಾನೂ ಕಾಪಸೆಯವರೂ ಕೂಡಲಸಂಗಮಕ್ಕೆ ಹೋದಾಗ ಶೀಲಾಕಾಂತರು ನೆರವಿಗೆ ನಮ್ಮ ಜೊತೆಗಿದ್ದು ತಮ್ಮ ಕ್ಯಾಮರಾದಿಂದ ಭಾವಚಿತ್ರಗಳನ್ನು ತೆಗೆದದ್ದುಂಟು. ಸಂಶೋಧಕರಾದವರಿಗೆ ಈ ಛಾಯಾಗ್ರಹಣ ಕಲೆ ಪ್ರಯೋಜನಕಾರಿ ವೆಂಬುದನ್ನು ಬೇರೆ ಹೇಳಬೇಕಿಲ್ಲ.

ಬಾದಾಮಿಯ 'ವಿಶ್ವಚೇತನ' ಸಂಸ್ಥೆ, ೨೦೦೨ರಲ್ಲಿ ನನಗೆ 'ಚಾಲುಕ್ಯ ಪ್ರಶಸ್ತಿ' ಪ್ರದಾನ ಮಾಡಿದ ಸಂದರ್ಭದಲ್ಲಿ ಸ್ನೇಹಿತರಾದ ಡಾ. ಜಿ.ಎಂ.ಹೆಗಡೆ

ಯವರೂ ನನ್ನ ಜೊತೆಗಿದ್ದರು. ಮರುದಿನ ಶೀಲಾಕಾಂತ ಅವರು ನಮ್ಮಿಬ್ಬರನ್ನು ಬೆಳಗಿನ ಉಪಹಾರಕ್ಕೆ ತಮ್ಮ ಮನೆಗೆ ಕರೆದುಕೊಂಡು ಹೋಗಿ ಉಪಚರಿಸಿದ್ದನ್ನು ಮರೆಯುವಂತಿಲ್ಲ. ತಮ್ಮ ಮನೆಗೆ ಅವರು 'ಈಶ್ವರಶಿಲ್ಪ' ಎಂಬ ಹೆಸರನ್ನಿಟ್ಟಿದ್ದೂ ಕೂಡ ಸಾಂಕೇತಿಕವಾಗಿ ನನಗೆ ಅರ್ಥಪೂರ್ಣವೆನಿಸಿತು. ಮನೆಯ ಗ್ರಂಥಭಂಡಾರದಲ್ಲಿ ಸಾಹಿತ್ಯ, ಶಿಲ್ಪಕಲೆ, ಇತಿಹಾಸ, ಶಾಸನಗಳಿಗೆ ಸಂಬಂಧಪಟ್ಟ ಹಲವಾರು ಮಹತ್ವದ ಗ್ರಂಥಗಳನ್ನು ಅವರು ಕೊಂಡು ಸಂಗ್ರಹಿಸಿರುವುದನ್ನು ಕಂಡು ಸಂತೋಷವಾಯಿತು. ಆ ಕೋಣೆಯ ಕಿಟಕಿಯಿಂದ ನಾನು ಹೊರಗೆ ನೋಡಿದಾಗ ಆ ಪರಿಸರದ ಭೂದೃಶ್ಯವೂ ಕಲಾದೇಗುಲವಾಗಿಯೇ ಕಂಡಿತು.

ವಿಜ್ಞಾನ ಪದವೀಧರರಾದ ಅವರು ಬಾದಾಮಿಯ ವೀರ ಪುಲಿಕೇಶಿ ಪ್ರೌಢಶಾಲೆಯಲ್ಲಿ ೨೨ ವರ್ಷ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಮೇಲೆ, ೧೯೯೦ರಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ. (ಇಂಗ್ಲಿಷ್) ಪರೀಕ್ಷೆಯಲ್ಲಿಯೂ ಉತ್ತಮ ರೀತಿಯಲ್ಲಿ ತೇರ್ಗಡೆಯಾಗಿ ಅದೇ ಬಾದಾಮಿಯ ಪದವಿಪೂರ್ವ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆಗೈದದ್ದು ಅವರ ವಿದ್ಯಾರ್ಜನೆಯ ಹಂಬಲಕ್ಕೆ ಸಾಕ್ಷಿಯಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಬಾದಾಮಿ ಸಮೇತ ಬನಶಂಕರಿ ಆವರಣದಲ್ಲಿ ಶಿಲ್ಪಕಲಾ ಪ್ರತಿಮಾಶಾಸ್ತ್ರ ವಿಭಾಗವನ್ನು ತೆರೆದದ್ದುಂಟು. ಅಲ್ಲಿಯೂ ಗೌರವ ಇಂಗ್ಲಿಷ್ ಅಧ್ಯಾಪಕರಾಗಿ ನಾಲ್ಕು ವರ್ಷ (೨೦೦೫–೨೦೦೯) ಸೇವೆ ಸಲ್ಲಿಸಿರುವುದು ಗಮನಾರ್ಹ ಸಂಗತಿಯಾಗಿದೆ. ರಾಜ್ಯದ ಆದರ್ಶ ಶಿಕ್ಷಕ ಪ್ರಶಸ್ತಿ, 'ಉತ್ತಮ ಉಪನ್ಯಾಸಕ ಪ್ರಶಸ್ತಿ', ರಾಷ್ಟ್ರಮಟ್ಟದ 'ಶಿಕ್ಷಕ ಪುರಸ್ಕಾರ' ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಫೆಲೋಶಿಪ್ ಮೊದಲಾದ ಮನ್ನಣೆಗಳು ಇವರಿಗೆ ದೊರೆತದ್ದು ಇವರ ಅರ್ಹತೆಗೆ ಇನ್ನೂ ಕಡಮೆಯೆಂದೇ ಹೇಳಬಹುದು.

ಸುಮಾರು ನಾಲ್ಕು ದಶಕಗಳಿಂದ ಶಿಲ್ಪಕಲೆಗೆ ಸಂಬಂಧಪಟ್ಟ ಇವರ ಸಂಶೋಧನಾತ್ಮಕ ಬರವಣಿಗೆ ಆ ವಿಷಯದಲ್ಲಿ ಇವರನ್ನು ತಜ್ಞರನ್ನಾಗಿ ಮಾಡಿರುವುದರಲ್ಲಿ ಸಂದೇಹವಿಲ್ಲ. ಇವರ ಮೊದಲ ಪುಸ್ತಕವೇ (೧೯೭೬) 'The Singing Rocks of Badami' ಪ್ರವಾಸಿಗರಿಗೆ ಅದರಲ್ಲೂ ವಿದೇಶಿ ಪ್ರವಾಸಿಗರಿಗೆ – ಕೈಪಿಡಿಯಾಗಿ ಪರಿಣಮಿಸಿರುವುದರಲ್ಲಿ ಸಂದೇಹವಿಲ್ಲ. ಎರಡು ವರ್ಷಗಳ ನಂತರ 'ಬಾದಾಮಿ–ಶಿಲ್ಪಕಾಶಿ'ಯೂ ಬಂದಿತು. 'ಸಪ್ತಕ' ಪುಸ್ತಕದಲ್ಲಿ (೧೯೮೮) ಏಳು ಸಂಶೋಧನಾತ್ಮಕ ಲೇಖನಗಳಿವೆ. ಸಂಗೀತ, ಶಿಲಾಶಾಸನಗಳನ್ನು ಕುರಿತಲ್ಲದೆ 'ಪಟ್ಟದಕಲ್ಲು–ಒಂದು ಕಲಾ ಪ್ರಯೋಗಾಲಯ' ವೆಂಬ ಮಹತ್ವದ ಪ್ರಬಂಧವೂ ಇಲ್ಲಿದೆ. ಇವರು ಬರೆದ ಮೂರು ಜೀವನ ಚರಿತ್ರೆಗಳಲ್ಲಿ 'ಸೆಪ್ಟೆಂಬರ್–೫' ಡಾ. ರಾಧಾಕೃಷ್ಣನ್‌ರ ಜೀವನ ಚರಿತ್ರೆಯನ್ನು ಸಾರವತ್ತಾಗಿ ೧೩೦ ಪುಟಗಳಲ್ಲಿ ಹಿಡಿದಿಟ್ಟಿರುವುದು ಗಮನಾರ್ಹ. "ವಿಶ್ವವಿದ್ಯಾಲಯದ ಮಟ್ಟದ ಪ್ರಾಧ್ಯಾಪಕರನ್ನು ಮೀರಿಸುವಂಥ ಕೆಲಸವನ್ನು ಶೀಲಾಕಾಂತ ಪತ್ತಾರ ಅವರು ಮಾಡಿದ್ದಾರೆಂದು ಹೇಳಿದರೆ – ನನ್ನ ವಿದ್ಯಾರ್ಥಿಯಾದ ಅವರ ಬಗ್ಗೆ ನಾನಿರಿಸಿಕೊಂಡ ವಾತ್ಸಲ್ಯಕ್ಕಿಂತ ವಿಮರ್ಶಕನ

ವಸ್ತುನಿಷ್ಠ ಅಭಿಪ್ರಾಯವೇ ಹೆಚ್ಚು ಪ್ರಮುಖವಾಗುತ್ತದೆಂಬ ವಿಶ್ವಾಸ ನನಗಿದೆ" ಎಂದು ಡಾ. ಗುರುಲಿಂಗ ಕಾಪಸೆಯವರು ಮುನ್ನುಡಿಯಲ್ಲಿ ಹೇಳಿದ್ದರಲ್ಲಿ ಅತಿಶಯೋಕ್ತಿಯಿಲ್ಲ. ಈ ಬಗೆಯ ಗ್ರಂಥಗಳಿಗೆ ತಾನೇ ತಾನಾಗಿ ಒಂದು ಸುಂದರವಾದ ಚೌಕಟ್ಟನ್ನು ಶೀಲಾಕಾಂತ ಅವರು ಒದಗಿಸಿದ್ದಾರೆ. ಅವರು ಸಂಪಾದಿಸಿದ ಕೃತಿಗಳು ಹಲವಾರಿದ್ದು, 'ಬಾದಾಮಿ ಚಾಲುಕ್ಯ ಸಂಪದ' (೨೦೦೮) ವಿವಿಧ ಲೇಖಕರ ೫೦ ಲೇಖನಗಳನ್ನೊಳಗೊಂಡಿದೆ. 'ಕರ್ನಾಟಕದ ಇತಿಹಾಸದಲ್ಲಿ ಬಾದಾಮಿ ಚಾಲುಕ್ಯರ ಅವಧಿಯನ್ನು 'ಸುವರ್ಣಯುಗ' ಎಂದೇ ಗುರುತಿಸಲಾಗಿದೆ. ಕನ್ನಡದ ಮೊದಲ ಸಮ್ರಾಟರೆಂಬ ಘನ ಗೌರವ ಹೊತ್ತ ಚಾಲುಕ್ಯರ ಬಗೆಗಿನ ಅಧ್ಯಯನವೆಂದರೆ ಒಂದರ್ಥದಲ್ಲಿ ಇಡಿಯಾಗಿ ಕರ್ನಾಟಕ ಸಂಸ್ಕೃತಿಯ ಅಧ್ಯಯನವೇ ಆಗಿದೆ' ಎಂದು ಅವರು ಸಂಪಾದಕರ ನುಡಿಯಲ್ಲಿ ಹೇಳಿದ್ದನ್ನು ಈ ಗ್ರಂಥದ ವಿವಿಧ ಸಂಶೋಧಕರ ವಿವರಣೆಯಲ್ಲಿ ಕಾಣಬಹುದು.

ಇದೂ ಅಲ್ಲದೆ, ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಅನೇಕ ಸಂಶೋಧನಾತ್ಮಕ ಲೇಖನ (ವಿಶೇಷವಾಗಿ ಶಿಲ್ಪಕಲೆಗೆ ಸಂಬಂಧಪಟ್ಟ)ಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡಿಸಿ ವಿದ್ವಜ್ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. 'ಬಾದಾಮಿ-ಒಂದು ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಡಿ.ಲಿಟ್. ಪದವಿಯನ್ನು (೧೯೯೯) ನೀಡಿ ಅವರನ್ನು ಗೌರವಿಸಿದೆ. ಜಪಾನ ದೇಶದ ರಾಯಭಾರಿ ಹಿರೋಸಿ ಹಿರೋಬಯಾಸಿ, ಮಹಾದಂಡನಾಯಕ ಜನರಲ್ ಪದ್ಮನಾಭನ್, ಅಣುವಿಜ್ಞಾನಿ ಡಾ. ರಾಜಾರಾಮಣ್ಣ, ಪಾಲ್ ನೇತೃತ್ವದ ಯುನೆಸ್ಕೋ ತಂಡ, ರಾಹುಲ್ ಗಾಂಧಿ ಇವರೇ ಮೊದಲಾದ ಗಣ್ಯಾತಿಗಣ್ಯರಿಗೆ ಬಾದಾಮಿ ಪ್ರದೇಶದ ಕಲಾದರ್ಶನ ಮಾಡಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಉತ್ತಮ ಶಿಕ್ಷಕನಾಗಿ, ಸ್ವಯಂಪ್ರೇರಣೆಯ ಕಲಾಸಂಶೋಧಕನಾಗಿ, ನುರಿತ ಲೇಖಕನಾಗಿ, 'ಕಲೆಗಳಲಿ ಪರಮಕಲೆ, ಜೀವನದ ಲಲಿತಕಲೆ, ಕಲಿಸಲದನಳವಲ್ಲ ಬಾಹ್ಯ ಬೋಧನೆಯಿಂ, ಲೌಕಿಕ ನಯವ ನೀಂ ತಿಳಿವುದೊಳಹದದಿಂದ' ಎಂದ ಡಿ.ವಿ.ಜಿ.ಯವರ ಮಾತಿಗೆ ಮೂರ್ತಿಮಂತ ನಿದರ್ಶನವಾಗಿದ್ದಾರೆ ಡಾ. ಶೀಲಾಕಾಂತ ಪತ್ತಾರ!

('ಕಲ್ಲೋಜ'- ೨೦೧೪)

ಪ್ರಕಾಶನ ಕ್ಷೇತ್ರದಲ್ಲಿ ಛಾಯಾಪತಿಯ ಚಹರೆ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಪ್ರಕಾಶಕ ಹಾಗೂ ಲೇಖಕ ಶ್ರೀ ಟಿ.ಎಸ್. ಛಾಯಾಪತಿಯವರು ನನ್ನ ಆತ್ಮೀಯ ಸ್ನೇಹಿತರಲ್ಲಿ ಒಬ್ಬರು. ಅವರು ಎಪ್ಪತ್ತರ ವಸಂತಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಅವರಿಗೆ ನೀಡಲಿರುವ ಅಭಿನಂದನ ಗ್ರಂಥಕ್ಕೆ ಲೇಖನ ಕೋರಿ ಸಂಪಾದಕರಾದ ಶ್ರೀ ಮಲ್ಲೇಪುರಂ ಜಿ. ವೆಂಕಟೇಶ ಅವರ ಪತ್ರ ಬಂದಾಗ ನನಗೆ ಒಮ್ಮೆಲೆ ದಿ. ತ.ಸು. ಶಾಮರಾಯರ ನೆನಪಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಭೆಗೆ ನಾನು ಕರ್ನಾಟಕ ವಿಶ್ವವಿದ್ಯಾಲಯದಿಂದ ಸಹಸದಸ್ಯನಾಗಿ ಆಗಾಗ ಹೋಗುತ್ತಿದ್ದೆ. ೧೯೫೬ರಿಂದ ೧೯೬೦ರ ವರೆಗೆ ಪ್ರಸಾರಾಂಗದ ನಿರ್ದೇಶಕರಾಗಿದ್ದ ಅವಧಿಯಲ್ಲಿ ತ.ಸು. ಶಾಮರಾಯರು ಕುವೆಂಪು ಅವರ ಪ್ರೇರಣೆಯಿಂದ ವಿವಿಧ ವಿಷಯಗಳನ್ನು ಕುರಿತ ಕನ್ನಡ ಪಠ್ಯ ಪುಸ್ತಕಗಳ ಪ್ರಕಟಣಾಕಾರ್ಯವನ್ನು ತೀವ್ರಗತಿಯಿಂದ ಪ್ರಾರಂಭಿಸಿದ್ದು ನಮಗೆ ಆದರ್ಶಪ್ರಾಯವಾಗಿತ್ತು. ಮುಂದೆ ಅಷ್ಟೇ ದಕ್ಷತೆಯಿಂದ ಡಾ. ಪ್ರಭುಶಂಕರ್ ಅವರು ಪ್ರಸಾರಾಂಗವನ್ನು ವಿವಿಧ ಮುಖದಿಂದ ಮುನ್ನಡೆಸಿದ್ದು ಈಗ ಇತಿಹಾಸ.

ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಶಾಮರಾಯರಿಗೆ ಅಣ್ಣನಾಗಿರುವುದಕ್ಕೂ ಹೆಚ್ಚಾಗಿ ಗುರುವೇ ಆಗಿದ್ದರು. ೧೯೩೯ರಲ್ಲಿ ಅವರು ದಿವಗಂತರಾದ ಮೇಲೆ ತಮ್ಮ ಪ್ರೀತಿಯ ಅಣ್ಣನ ಹೆಸರಿನಲ್ಲಿ ತ.ವೆಂ. ಸ್ಮಾರಕ ಗ್ರಂಥಮಾಲೆಯನ್ನು ಪ್ರಾರಂಭಿಸಿದರು (೧೯೫೦). ಪುಸ್ತಕ ಪ್ರಕಾಶನವನ್ನು ತಮ್ಮ ವೃತ್ತಿಯನ್ನಾಗಿಸದೆ ಒಂದು ಹವ್ಯಾಸವಾಗಿಯೇ ಬೆಳೆಸಿಕೊಂಡು ಬಂದುದರಿಂದ ನಾಡಿನ ಉತ್ತಮ ಗ್ರಂಥ ಪ್ರಕಾಶನ ಸಂಸ್ಥೆಗಳಲ್ಲಿ ಒಂದು ಎಂಬ ಕೀರ್ತಿಯನ್ನು ಅದು ಪಡೆಯಿತು.

೨೨-೧೧-೧೯೭೦ರಂದು ಶಾಮರಾಯರು ಒಂದು ಹೆಬ್ಬೊತ್ತಿಗೆಯನ್ನು 'ಗೌರವಾದರಗಳೊಡನೆ' ನನಗೆ ಕೊಟ್ಟು, ಗ್ರಂಥಮಾಲೆಯಿಂದ ನನ್ನದೊಂದು ಪುಸ್ತಕ ತರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ನನ್ನ ಮೊದಲ ಗದ್ಯ ಕೃತಿ 'ಸಾಹಿತ್ಯ ಚಿಂತನ' ೧೯೬೬ರಲ್ಲಿ ಧಾರವಾಡದ ಮಿಂಚಿನಬಳ್ಳಿ ಪ್ರಕಾಶನದಿಂದ ಪ್ರಕಟಗೊಂಡಿತ್ತು. ನನ್ನ ಎರಡನೆಯ ಕೃತಿ 'ಕಾವ್ಯಾನುಸಂಧಾನ' (ವಿಮರ್ಶಾತ್ಮಕ ಪ್ರಬಂಧಗಳ ಸಂಕಲನ) ತ.ವೆಂ. ಸ್ಮಾರಕ ಗ್ರಂಥಮಾಲೆಯಲ್ಲಿ ಪ್ರಕಟಗೊಂಡದ್ದು (೧೯೭೧) ನನ್ನ ಭಾಗ್ಯವೆಂದೇ ಹೇಳಬಹುದು. ನನ್ನ ಆತ್ಮೀಯ ಸ್ನೇಹಿತರಾಗಿದ್ದ ಡಾ. ಜಿ.ಎಸ್. ಶಿವರುದ್ರಪ್ಪನವರ ಪ್ರಥಮ ಕವನ ಸಂಕಲನ 'ಸಾಮಗಾನ' (೧೯೫೧) ಹಾಗೂ ಅವರ ಸಂಪ್ರಬಂಧ 'ಸೌಂದರ್ಯ ಸಮೀಕ್ಷೆ' ಅಲ್ಲದೆ ಅವರ ಇನ್ನೂ ಹಲವು ಗ್ರಂಥಗಳು ಇದೇ ಗ್ರಂಥಮಾಲೆಯಲ್ಲಿ ಪ್ರಕಟ ಗೊಂಡುದನ್ನು ಇಲ್ಲಿ ಸ್ಮರಿಸಬಹುದು.

ಶ್ರೀ ಶಾಮರಾಯರು ನನಗೆ ಕೊಡುಗೆಯಾಗಿ ನೀಡಿದ್ದ ಹೆಬ್ಬೊತ್ತಿಗೆ ದಿವಂಗತ ಪ್ರೊ.ಟಿ.ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ 'ಸವಿನೆನಪು' ಆದದ್ದು ನನ್ನ ಇನ್ನೊಂದು ಭಾಗ್ಯ. ಈ ಮೊದಲು ಟಿ.ಎಸ್. ವೆಂಕಣ್ಣಯ್ಯನವರ ಬಗ್ಗೆ ಕೆಲಮಟ್ಟಿಗೆ ತಿಳಿದುಕೊಂಡಿದ್ದೆ ನಾದರೂ ಈ ಸ್ಮಾರಕ ಗ್ರಂಥದ ಪ್ರಧಾನ ಸಂಪಾದಕರಾದ ಕುವೆಂಪು ಅವರು ಅದಕ್ಕೆ ಬರೆದ ಮುನ್ನುಡಿಯನ್ನು ಓದಿ ನಾನು ನಿಜಕ್ಕೂ ರೋಮಾಂಚಿತನಾದೆ. ಹಾಗೇ ಪ್ರಕಾಶಕರಾಗಿ ಶಾಮರಾಯರು ಬರೆದ 'ಪ್ರಕಾಶಕ ಭಗೀರಥನ ಬಿನ್ನಹ'ವನ್ನೋದಿ ಕಳವಳವೂ ಆಯಿತು. ಅಂತೂ ಸಂಸ್ಮರಣ ಗ್ರಂಥಗಳ ಪರಂಪರೆಯಲ್ಲಿ 'ಸವಿನೆನಪು' ಟಿ.ಎಸ್. ವೆಂಕಣ್ಣಯ್ಯನವರ ಭವ್ಯ ವ್ಯಕ್ತಿತ್ವಕ್ಕೆ ತಕ್ಕಂತೆ ಒಂದು ಮೈಲುಗಲ್ಲನ್ನೇ ಸ್ಥಾಪಿಸಿತೆನ್ನಬಹುದು.

ತ.ಸು. ಶಾಮರಾಯರು ವಯಸ್ಸಾಗುತ್ತಿದ್ದಂತೆ ಗ್ರಂಥಮಾಲೆಯ ಜವಾಬ್ದಾರಿಯನ್ನು ಮಗ ಛಾಯಾಪತಿಗೆ ವಹಿಸಿಕೊಟ್ಟರು. ಆಗತಾನೆ ಎಂ.ಕಾಂ. ಪದವಿ ಪಡೆದಿದ್ದ ಛಾಯಾಪತಿ ಗ್ರಂಥಮಾಲೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು (೧೯೬೮) ಅವರ ಮಾರ್ಗದರ್ಶನದಲ್ಲಿ ಹೊಸಕಾಲಕ್ಕೆ ತಕ್ಕಂತೆ ಹೊಸತನದಿಂದ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ನನ್ನ ಒಂಬತ್ತನೆಯ ಕವನ ಸಂಗ್ರಹ 'ನಗರದಲ್ಲಿ ನೆರಳು' ೧೯೭೪ರಲ್ಲಿ ಪ್ರಕಟಿಸಿ ಛಾಯಪತಿ ಮಾಲೆಯ ಜೊತೆಗಿರುವ ನನ್ನ ಸಂಬಂಧವನ್ನು ಗಟ್ಟಿಗೊಳಿಸಿದರು. ೧೯೮೩ರಲ್ಲಿ 'ಸ್ವಸ್ತಿ'ಯನ್ನು ಪ್ರಕಟಿಸುವುದರ ಮೂಲಕ ಛಾಯಾಪತಿ ಅಭಿನಂದನ ಗ್ರಂಥಗಳ ಪರಂಪರೆಯಲ್ಲಿ ಇನ್ನೊಂದು ಮೈಲುಗಲ್ಲನ್ನು ಸ್ಥಾಪಿಸಿದರೆಂದರೆ ಅತಿಶಯೋಕ್ತಿ ಯಾಗದು. ಇದು ತ.ಸು. ಶಾಮರಾಯರಿಗೆ ಅವರ ಎಪ್ಪತ್ತೆಂಟನೆಯ ಹುಟ್ಟುಹಬ್ಬದ ನೆನಪಿಗಾಗಿ ಶಿಷ್ಯರೂ ಮಿತ್ರರೂ ಅಭಿಮಾನಿಗಳೂ ಒಪ್ಪಿಸಿದ ಗೌರವ ಗ್ರಂಥ. ಇದರ ಸಂಪಾದಕರಾದ ಡಾ. ಹಾ.ಮಾ. ನಾಯಕ, ಡಾ. ಸಿ.ಪಿ.ಕೃಷ್ಣಕುಮಾರ್ ಹಾಗೂ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ತಮ್ಮ 'ಮೊದಲ ಮಾತು'ವಿನಲ್ಲಿ 'ಶಾಮರಾಯರು ಕನ್ನಡ ನವೋದಯದ ಆಚಾರ್ಯರಲ್ಲೊಬ್ಬರಾದ ಟಿ.ಎಸ್. ವೆಂಕಣ್ಣಯ್ಯನವರ ತಮ್ಮ. ಆದರೆ ಅವರ ಕೀರ್ತಿ ಅಣ್ಣನ ಹೆಸರನ್ನು ಅವಲಂಬಿಸಿದ್ದಲ್ಲ. ತಮ್ಮ ಸಾಧನೆಯ ಬಲದಿಂದ

ಶ್ರೀ ಶಾಮರಾಯರು ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನಕ್ಕೆ ಹಕ್ಕುದಾರರಾಗಿದ್ದಾರೆ' ಎಂದಿರುವುದು ಅತ್ಯಂತ ಸೂಕ್ತವಾಗಿದೆ. ಈ ಗ್ರಂಥದ ಮೊದಲನೆಯ ಭಾಗದಲ್ಲಿ ಹೊಸಗನ್ನಡದ ಎಪ್ಪತ್ತೆಂಟು ಮಹತ್ವದ ಪುಸ್ತಕಗಳನ್ನು ಕುರಿತ ಎಪ್ಪತ್ತೆಂಟು ಲೇಖನಗಳಿವೆ. ಮುದ್ದಣನಿಂದ ಹಿಡಿದು – ಅವನಿಗಿಂತ ಹಿಂದಿನ ಕೆಲವರು ಲೇಖಕರೂ ಇಲ್ಲಿದ್ದಾರೆ – ದೇವನೂರು ಮಹಾದೇವರವರೆಗೆ ಇಲ್ಲಿ ಕೃತಿಸಮೀಕ್ಷೆಯ ಹರಹು. ಇವರೆಲ್ಲ ಸಾಧ್ಯವಿದ್ದಷ್ಟು ಪ್ರಾತಿನಿಧಿಕ ಲೇಖಕರಿರುವಂತೆ ಸಂಪಾದಕರು ನೋಡಿಕೊಂಡಿರುವುದರಿಂದ, ಇಪ್ಪತ್ತನೆಯ ಶತಮಾನದ ಮಹತ್ವದ ಕೃತಿಗಳಲ್ಲಿ ಇವೂ ಸೇರುತ್ತವೆಂಬುದರಲ್ಲಿ ಸಂಶಯವಿಲ್ಲ. ಹೀಗೆ 'ಸ್ವಸ್ತಿ' ಅಭಿನಂದನ ಗ್ರಂಥಗಳಿಗೆ ಹೊಸಹಾದಿಯನ್ನು ತೋರಿಸಿತೆಂದರೆ ತಪ್ಪಾಗದು.

ಕನ್ನಡ ನಾಡಿನಲ್ಲಿ ವಿವಿಧ ಬಗೆಯ ಸಾಹಿತ್ಯದ ಬೆಳವಣಿಗೆಗೆ ಪ್ರಕಾಶಕರು ಸಲ್ಲಿಸುತ್ತ ಬಂದಿರುವ ಸೇವೆ ಗಮನಾರ್ಹವಾದದ್ದು. ಅಂತೆಯೇ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉತ್ತಮ ಗುಣಮಟ್ಟದ ಗ್ರಂಥಗಳು ಬೆಳಕಿಗೆ ಬರುವದು ಸಾಧ್ಯವಾಗಿದೆ. ಲೇಖಕರಿಗೂ ಇದು ಪ್ರೋತ್ಸಾಹದಾಯಕವಾಗಿರುವುದು ಸರ್ವವಿದಿತ ಸಂಗತಿಯಾಗಿದೆ. ಕೆಲವು ಪ್ರಕಾಶಕರು ಲೇಖಕರೂ ಆಗಿ ಹೆಸರು ಮಾಡಿದವರಿದ್ದಾರೆ. ಅಂಥವರು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿಯೇ ನಿರ್ವಹಿಸಿರುವುದನ್ನು ಕಾಣುತ್ತೇವೆ. ವ್ಯಾವಹಾರಿಕ ಜಾಣ್ಮೆಯನ್ನೂ ಸಾಧಿಸಿಕೊಂಡ ಟಿ.ಎಸ್. ಛಾಯಾಪತಿಯವರು ಪ್ರಕಾಶನ ಕಾರ್ಯವನ್ನು ಶಾಮರಾಯರಂತೆ ಕೇವಲ ಹವ್ಯಾಸವಾಗಿ ಇಟ್ಟುಕೊಳ್ಳದೆ ಪ್ರಕಾಶನ ವೃತ್ತಿಯನ್ನು ಒಂದು ತಪಸ್ಸಿನಂತೆ ಭಾವಿಸಿ ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡವರು. ಆದ್ದರಿಂದ ಈ ಅವಧಿಯಲ್ಲಿ ಕಾವ್ಯ, ಕಥೆ, ನಾಟಕ, ಪ್ರಬಂಧ, ವಿಮರ್ಶೆ, ಜೀವನಚರಿತ್ರೆ, ಅಂಕಣ ಬರೆಹ, ಪ್ರವಾಸ ಕಥನ, ಸಂಶೋಧನೆ, ಅಭಿನಂದನ– ಇವಕ್ಕೆ ಸಂಬಂಧಿಸಿದಂತೆ ಸಾವಿರಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಈ ಮಾಲೆಯಲ್ಲಿ ಪ್ರಕಟಿಸಲು ಸಾಧ್ಯವಾಗಿದೆ. ೧೯೯೯ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಅತ್ಯುತ್ತಮ ಪ್ರಕಾಶಕ' ಪ್ರಶಸ್ತಿಯನ್ನು ಛಾಯಾಪತಿ ಪಡೆದಿದ್ದಾರೆ. ಒಂದು ಅವಧಿಗೆ ಆ ಪ್ರಾಧಿಕಾರದ ಸದಸ್ಯರನ್ನಾಗಿಯೂ ಸರಕಾರ ಇವರನ್ನು ನೇಮಿಸಿದ್ದುಂಟು. ನಾಡಿನ ವಿವಿಧ ಕ್ಷೇತ್ರಗಳ ಅನೇಕ ಗಣ್ಯಲೇಖಕರು ಈ ಮಾಲೆಯ ಲೇಖಕ ಬಳಗದಲ್ಲಿದ್ದಾರೆ. ಈ ಮಾಲೆಯ ಹಲವಾರು ಪುಸ್ತಕಗಳು ಹತ್ತಾರು ಮುದ್ರಣಗಳನ್ನು ಕಂಡಿರುವುದಲ್ಲದೆ, ವಿವಿಧ ಪಶಸ್ತಿಗಳಿಗೂ ಪಾತ್ರವಾಗಿವೆ.

ಛಾಯಾಪತಿ ಒಳ್ಳೆಯ ಲೇಖಕರೂ ಆಗಿದ್ದು, ಇದುವರೆಗೆ ಇಪ್ಪತ್ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವ್ಯಕ್ತಿಚಿತ್ರಗಳನ್ನು ಕೊಡುವಲ್ಲಿ ಇವರ ಲೇಖನಿ ಪಳಗಿದೆ. ಇವರ ಕೃತಿ ರಚನೆಯಲ್ಲಿ ವಿಷಯ ವೈವಿಧ್ಯವಿದೆ. 'ಗಾಂಧೀಜಿಯ ಕನಸು ನಜೀರರಿಂದ ನನಸು' ಜಿಲ್ಲಾ ಪರಿಷತ್‌ನ ಕಾಯಿದೆಗಳ ಬಗ್ಗೆ ರಚಿಸಲಾಗಿದ್ದು, 'ಸರಳವಾಗಿ ಪ್ರತಿಯೊಬ್ಬ ಗ್ರಾಮಸ್ಥರೂ ತಿಳಿದುಕೊಳ್ಳುವಂತೆ ಚರ್ಚಿಸಲಾಗಿದೆ' ಎಂದು ಕುವೆಂಪು ಇಲ್ಲಿಯ ಬರವಣಿಗೆಯ ರೀತಿಯನ್ನು ಮೆಚ್ಚಿಕೊಂಡದ್ದುಂಟು. 'ಆಡಳಿತ ಭಾಷೆ ಕನ್ನಡ' ಛಾಯಾಪತಿಯವರ

ಸ್ವೋಪಜ್ಞವಾದ ಕೊಡುಗೆಯೆಂಬುದಾಗಿ ಡಾ. ಹಾ.ಮಾ. ನಾಯಕರು ಮೆಚ್ಚಿ ಈಗ ಬಂದಿರುವ ಎಲ್ಲ ಪುಸ್ತಕಗಳಿಗಿಂತ ಮುಂದೆ ಹೋಗಿದೆ ಎಂದೂ ಹೇಳಿದ್ದಾರೆ. ತ.ಸು. ಶಾಮರಾಯರು ೯೪ ವರ್ಷಗಳ ತುಂಬು ಬಾಳನ್ನು ಬಾಳಿ ತೀರಿಕೊಂಡ ಕೆಲ ವರ್ಷಗಳ ಮೇಲೆ ಛಾಯಾಪತಿ 'ಅಣ್ಣನ ಸ್ಮರಣೆ' ಬರೆದರು. ಈ ಪುಸ್ತಕದ 'ನೂರು ನೆನಪಿನ' ಬಿಂದುಗಳಲ್ಲಿ ಶ್ರೀ ತ.ಸು. ಶಾಮರಾಯರ ಅತ್ಯಂತ ಮಾನವೀಯವಾದ ವ್ಯಕ್ತಿತ್ವದ ಮಹತ್ವ ಮಿನುಗುತ್ತಿದೆ' ಎಂದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ನುಡಿದಿದ್ದಾರೆ. ನನಗೂ ಅದು ಮೆಚ್ಚಿಗೆಯ ಪುಸ್ತಕವಾಗಿತ್ತು.

ಇಸವಿ ೨೦೦೦ ತ.ವೆಂ. ಸ್ಮಾರಕ ಗ್ರಂಥಮಾಲೆಗೆ ಬಂಗಾರದ ಹಬ್ಬ. ಆ ಒಂದು ವರ್ಷದ ಅವಧಿಯಲ್ಲಿ ೫೦ ಪುಸ್ತಕಗಳನ್ನು 'ಬಂಗಾರದ ಬೆಳೆ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲು ಛಾಯಾಪತಿ ಯೋಚಿಸಿದಾಗ ಬೆಳೆಯ ೯ನೆಯ ಕುಸುಮವಾಗಿ ನನ್ನ 'ಬರೆದು ತೀರದ ಬದುಕು' ಕವನ ಸಂಗ್ರಹ ಪ್ರಕಟವಾದದ್ದೊಂದು ಯೋಗಾಯೋಗ. ಆ ಒಂದು ಅವಧಿಯಲ್ಲಿಯೇ ಐವತ್ತು ಪುಸ್ತಕಗಳು ಹೊರಬಂದಿದ್ದ ರಿಂದ ಮಾಲೆಗೆ ಇನ್ನಿಷ್ಟು ಮೆರಗು ಬಂದಂತಾಯಿತು.

ಛಾಯಾಪತಿಯವರು ಪ್ರಕಾಶನಕ್ಕೆ ಸಂಬಂಧಪಟ್ಟಂತೆ ಯಾವಾಗಲೂ ಹೊಸ ಪ್ರಯೋಗಗಳ ಬಗ್ಗೆ ಯೋಚನೆ ಮಾಡುತ್ತಿರುತ್ತಾರೆ. ಅದರ ಪರಿಣಾಮವಾಗಿಯೇ ೨೦೦೯ರಲ್ಲಿ ನನ್ನ ಹದಿನಾರು ಬಿಡಿ ಕವನ ಸಂಗ್ರಹಗಳು ಏಕಕಾಲಕ್ಕೆ ಪ್ರಕಟಗೊಳ್ಳು ವಂತಾಯಿತು. ನನ್ನ ಸಮಗ್ರ ಕಾವ್ಯ ಸಂಪುಟ ಮೂರು ಮುದ್ರಣಗಳನ್ನು ಕಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯವಾಗುವದು ಪ್ರಯೋಜನಕಾರಿ ಎಂಬ ವಿಚಾರ ಛಾಯಾಪತಿಯವರಿಗೆ ಹೊಳೆದದ್ದೇ ತಡ, ನನಗೊಂದು ಮಾತು ತಿಳಿಸಿ, ಕೂಡಲೆ ಕಾರ್ಯಪ್ರವೃತ್ತರಾದರು. ಈ ಎಲ್ಲ ಹದಿನಾರು ಕೃತಿಗಳಿಗೂ ಕಲಾವಿದ ಸುಧಾಕರ ದರ್ಬೆಯವರು ಅರ್ಥವತ್ತಾದ ಚಿತ್ರಗಳೊಂದಿಗೆ ಮುಖಪುಟ ವಿನ್ಯಾಸ ಸಿದ್ಧಗೊಳಿಸಿದರು. ಬೆನ್ನು ಹೊದಿಕೆಯಲ್ಲಿ ಆ ಕೃತಿ ಮೊದಲು ಪ್ರಕಟವಾದಾಗ ಬಂದ ವಿಮರ್ಶಕರ ನುಡಿ, ಒಳಗೆ ಕಾವ್ಯದ ಪ್ರಾರಂಭದಲ್ಲಿ, ಆಯಾ ಅವಧಿಯದೊಂದು ಕವಿಯ ಭಾವ ಚಿತ್ರ. ಸುಲಭವಾದ ಬೆಲೆ. ಕಾವ್ಯ ಪ್ರಿಯರಿಗೆ ಇನ್ನೇನು ಬೇಕು? ೨೦೦೯, ಅಕ್ಟೋಬರ ೨೯ರಂದು ಸಂಜೆ ೬ ಗಂಟೆಗೆ ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಡಾ.ಜಿ.ಎಸ್. ಶಿವರುದ್ರಪ್ಪನವರು ಈ ಎಲ್ಲ ಹದಿನಾರು ಬಿಡಿ ಸಂಗ್ರಹಗಳನ್ನು ಬಿಡುಗಡೆ ಮಾಡಿ ಪ್ರಕಾಶಕರಾದ ಟಿ.ಎಸ್. ಛಾಯಾಪತಿಯವರ ಪ್ರಯತ್ನವನ್ನು ಮುಕ್ತಕಂಠದಿಂದ ಪ್ರಶಂಶಿಸಿದರು. ಇಷ್ಟರಲ್ಲಿಯೇ ಇವು ಪುನರ್ಮುದ್ರಣಗೊಳ್ಳಬಹುದೆಂಬ ಸೂಚನೆಯನ್ನು ಛಾಯಾಪತಿ ಯವರು ನನಗೆ ನೀಡಿದ್ದಾರೆ. ಇದಕ್ಕೆ ಎರಡು ವರ್ಷಗಳ ಮುನ್ನ, ಅಂದರೆ ೨೦೦೭ರಲ್ಲಿ ನನ್ನ ಆಯ್ದ ಭಾವಗೀತೆಗಳ ಸಂಗ್ರಹ 'ಹೂವು ಹೊರಳುವವು ಸೂರ್ಯನ ಕಡೆಗೆ'

ಪ್ರಕಟಿಸಿ ವಿಸ್ತೃತ ನಾಲ್ಕನೆಯ ಮುದ್ರಣದ ಪ್ರತಿಗೆ (೧೧೦ ಪುಟಗಳು) ಕೇವಲ ೨೭ ರೂ. ಬೆಲೆ ಇಟ್ಟು ಸುಗಮಸಂಗೀತಗಾರರಿಗೆ ನೆರವಾದದ್ದನ್ನೂ ಇಲ್ಲಿ ನೆನೆಯಬೇಕು.

ಕಳೆದ ವರ್ಷ ಸೆಪ್ಟೆಂಬರ್ ೧೮ರಂದು ಬೆಂಗಳೂರಿನಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪ ನವರನ್ನು ಕಾಣಲು ಅವರ ಮನೆಗೆ ಹೋಗಿದ್ದೆ. ಆರೋಗ್ಯ ಚೆನ್ನಾಗಿರದಿದ್ದರೂ ಗಾಲಿ ಕುರ್ಚಿಯಲ್ಲಿ ಕುಳಿತು ಬಂದು ಕೆಲಹೊತ್ತು ಮಾತನಾಡಿದರು. ತಮ್ಮ ಹದಿನಾಲ್ಕು ಕವನ ಸಂಗ್ರಹಗಳ ಬಿಡಿ ಪ್ರತಿಗಳ ಒಂದು ಸೆಟ್ಟನ್ನು ನೆನಪು ಮಾಡಿಕೊಂಡು ನನಗೆ ಕೊಟ್ಟರು. ದಪ್ಪಗಿನ ಹಾಳೆಯಲ್ಲಿ ಮುದ್ರಣಗೊಂಡ ಆ ಎಲ್ಲ ಸಂಗ್ರಹಗಳಿಗೂ ಚಂದ್ರನಾಥ ಆಚಾರ್ಯರು ಸೂಕ್ತವಾದ ಮುಖಚಿತ್ರಗಳನ್ನು ತೆಗೆದಿದ್ದು, ಬೆಂಗಳೂರಿನ 'ಸಾಹಿತ್ಯ ಭಂಡಾರ'ದ ಶ್ರೀ ರಾಜು ಅವರು ಇವುಗಳನ್ನು ಪ್ರಕಟಿಸಿದ್ದಾರೆ. "ನಾಲ್ಕು ವರ್ಷಗಳ ಹಿಂದೆ ಛಾಯಾಪತಿ ನಿಮ್ಮ ಬಿಡಿ ಸಂಗ್ರಹಗಳನ್ನು ಏಕಕಾಲಕ್ಕೆ ಪ್ರಕಟಿಸಿದ್ದು ಇವರಿಗೆ ಪ್ರೇರಣೆ ನೀಡಿರಬೇಕು" ಎಂದು ಜಿ.ಎಸ್.ಎಸ್. ಆ ಸಂದರ್ಭವನ್ನು ಸಂತೋಷದಿಂದ ನೆನಪಿಸಿಕೊಂಡರು. ಜಿ.ಎಸ್.ಎಸ್. ಅವರ ಈ ಬಿಡಿ ಸಂಗ್ರಹಗಳೂ ಮುದ್ದಾಗಿವೆ. ಆದರೆ ಅದಕ್ಕೆ ಕವಿಯ ಭಾವಚಿತ್ರವಿಲ್ಲದಿರುವುದು ಒಂದು ಕೊರತೆ ಎನ್ನಿಸಿತು.

ಕೇಂದ್ರ ಸಾಹಿತ್ಯ ಅಕಾಡೆಮಿ, ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ಕೆಲಸ ಮಾಡಿದವರಿಗೂ ಪುರಸ್ಕಾರ ನೀಡುತ್ತದಷ್ಟೇ. ಕಳೆದ ವರ್ಷ ಕವಿ ಮಿತ್ರ ಡಾ.ಎಚ್.ಎಸ್. ವೆಂಕಟೇಶಮೂರ್ತಿಯವರು ಅದಕ್ಕೆ ಭಾಜನರಾದರು. ಈ ಅವಕಾಶಕ್ಕಾಗಿಯೇ ಕಾದಿದ್ದ ರೆನ್ನುವಂತೆ ಛಾಯಾಪತಿಯವರು ತ.ವೆಂ. ಸ್ಮಾರಕ ಗ್ರಂಥಮಾಲೆಯಲ್ಲಿ ಎಚ್.ಎಸ್.ವಿ. ಅವರ ಸಮಗ್ರ ಮಕ್ಕಳ ಸಾಹಿತ್ಯ ಸಂಪುಟವನ್ನು ತಂದೇಬಿಟ್ಟರು. ಕಳೆದ ವರ್ಷ ನವೆಂಬರ್ ೨೫ರಂದು ಬೆಂಗಳೂರಿನ ರಾಜಲಕ್ಷ್ಮಿ ಕಲಾವೇದಿಕೆಯಲ್ಲಿ, ಕಾವ್ಯಾಸಕ್ತರ ಸಮ್ಮುಖದಲ್ಲಿ ಅದರ ಬಿಡುಗಡೆಯೂ ನೆರವೇರಿತು. ಡಾ. ಗಿರಡ್ಡಿ ಗೋವಿಂದರಾಜ, ಪ್ರೊ. ಟಿ.ಪಿ. ಅಶೋಕ ಹಾಗೂ ನಾನು ಅತಿಥಿಯಾಗಿ ಮಾತನಾಡಿ ಕವಿ ಎಚ್.ಎಸ್.ವಿ. ಹಾಗೂ ಪ್ರಕಾಶಕ ಛಾಯಾಪತಿಯವರೊಂದಿಗೆ ನಮ್ಮ ಸಂತೋಷವನ್ನು ಹಂಚಿಕೊಂಡೆವು.

ಇವತ್ತು ಕನ್ನಡದಲ್ಲಿ ಏನಿಲ್ಲೆಂದರೂ ಪ್ರತಿವರ್ಷ ಏಳೆಂಟು ಸಾವಿರ ಪುಸ್ತಕಗಳು ಪ್ರಕಟವಾಗುತ್ತಿರಬಹುದು. ಕಳೆದ ಒಂದೆರಡು ದಶಕಗಳಲ್ಲಿ ಬೆಳೆಯುತ್ತಿರುವ ಪ್ರಕಾಶಕರ ಸಂಖ್ಯೆಯನ್ನು ನೋಡಿದರೆ ಪ್ರಕಾಶನ ಸಂಸ್ಥೆಗಳ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದೂ ಸಾಧ್ಯವಿಲ್ಲವೆಂದು ತೋರುತ್ತದೆ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂತಾದವುಗಳನ್ನು ಹೊರತು ಪಡಿಸಿಯೂ ಖಾಸಗಿ ಪ್ರಕಾಶಕರು ಆರೋಗ್ಯಕರವೆನಿಸುವ ಸ್ಪರ್ಧೆಯಿಂದ ಉತ್ಕೃಷ್ಟವಾದ ರೀತಿಯಲ್ಲಿ ಒಳ್ಳೊಳ್ಳೆಯ ಪುಸ್ತಕಗಳನ್ನು ತರುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿ. ಉದಾಹರಣೆಗೆ ಈಗ ನನ್ನೆದುರು ಇತ್ತೀಚೆಗೆ ಪ್ರಕಟವಾದ ಎರಡು ಪುಸ್ತಕಗಳಿವೆ. ಷ. ಶೆಟ್ಟರ್ ಬರೆದ 'ಹಳಗನ್ನಡ, ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ' (ಅಭಿನವ ಪ್ರಕಾಶನ, ಬೆಂಗಳೂರು) ಮತ್ತು ಜಿ. ರಾಮನಾಥ ಭಟ್ ಅನುವಾದಿಸಿದ 'ರವೀಂದ್ರ ಕಾವ್ಯ ಸಂಚಯ'

(ಗೀತಾಬುಕ್ ಹೌಸ್, ಮೈಸೂರು). ಹೆಸರಿಸಬೇಕಾದ ಇನ್ನೂ ಅನೇಕ ಗ್ರಂಥಗಳೂ ಹಾಗೂ ಪ್ರಕಾಶಕರೂ ಇದ್ದಾರೆ.

ಛಾಯಾಪತಿಯವರ ವಯೋಮಾನಕ್ಕನುಸರಿಸಿ (೭೦) ಹಿಂದಿನ ಹಾಗೂ ಇಂದಿನ ಎಪ್ಪತ್ತು ಮಹತ್ವದ ಪ್ರಕಾಶಕನ ಸಂಸ್ಥೆಗಳನ್ನು ಕುರಿತು ಸಂಕ್ಷಿಪ್ತ ಲೇಖನಗಳನ್ನು ಈ ಅಭಿನಂದನ ಗ್ರಂಥ ಒಳಗೊಂಡಿದ್ದರೆ 'ಸ್ವಸ್ತಿ'ಯಂತೆ ಇದೂ ವಿಶಿಷ್ಟವಾಗುತ್ತಿತ್ತೆಂದು ನನ್ನ ಅನಿಸಿಕೆ. ಆದರೆ ಅದಕ್ಕೆ ವೇಳೆಯ ಕೊರತೆ ಇತ್ತೆಂದು ತೋರುತ್ತದೆ.

ಸನ್ಮಿತ್ರ ಶ್ರೀ ಟಿ.ಎಸ್. ಛಾಯಾಪತಿಯವರಿಗೆ ಹಾಗೂ ಅವರ ಕುಟುಂಬವರ್ಗಕ್ಕೆ ಎಲ್ಲ ಬಗೆಯ ಶುಭವನ್ನು ಕೋರುತ್ತೇನೆ.

('ಛಾಯಾಭಿನಂದನ' ೨೦೧೪)

ಅದಮ್ಯ ಚೇತನದ ಅರಸು

ಡಾ. ಮೋಹನ ಗೋಪಾಲ ರಾಜೇ ಅರಸ್ ಅವರು ತಮ್ಮನ್ನು ಚುಟುಕಾಗಿ ಡಾ. ಎಂ.ಜಿ.ಆರ್. ಅರಸ್ ಎಂದೇ ಕರೆದುಕೊಂಡರೂ ಅವರ ಅಗಾಧವಾದ ಕಾರ್ಯಶಕ್ತಿಯನ್ನೂ ಅಮಿತವಾದ ಜೀವನೋತ್ಸಾಹವನ್ನೂ ಅವರ ಸಂಪರ್ಕಕ್ಕೆ ಬಂದ ಯಾರೂ ಅರಿಯಬಹುದು. ಅಂಥ ಒಂದು ಅವಕಾಶ ೧೯೯೮ರಲ್ಲಿ ನನಗೆ ಒದಗಿಬಂದದ್ದು ಒಂದು ಸುಯೋಗ. ಆ ವರ್ಷ (೨೩-೮-೧೯೯೮) ಮೈಸೂರಿನಲ್ಲಿ ಏರ್ಪಡಿಸಿದ ಒಂಬತ್ತನೆಯ ಚುಟುಕು ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ನಾನು ಬರಬೇಕೆಂದು ಡಾ. ಅರಸ್ ಅವರಿಂದ ವಿನಯಪೂರ್ವಕ ಆಮಂತ್ರಣ ಬಂದಿತು. ಜೊತೆಗೆ ಆತ್ಮೀಯ ಸ್ನೇಹಿತರಾದ ಚದುರಂಗರ ಪತ್ರವೂ ಇತ್ತು. ('ಚುಟುಕಿ'ಗೂ ಇಂಥ ದೊಡ್ಡ ಸಮ್ಮೇಳನವೆ? ಎಂದು ಕೆಲವರು ಹುಬ್ಬೇರಿಸಿದ್ದನ್ನು ನಾನು ಕಂಡಿದ್ದೆ.) ನಾನು ಸಂತೋಷ ದಿಂದಲೇ ಆ ಸಮ್ಮೇಳನದಲ್ಲಿ ಬಾಗವಹಿಸಿದೆ. ಡಾ. ಅರಸ್ ಅವರ ಕರ್ತವ್ಯ ದಕ್ಷತೆ ಹಾಗೂ ಕಾರ್ಯವೈಖರಿಯ ಪ್ರತ್ಯಕ್ಷ ಪರಿಚಯವಾದದ್ದು ನನಗೆ ಆಗಲೇ.

ವೃತ್ತಿಯಿಂದ ವೈದ್ಯರಾದ ಅವರು ಸಾಹಿತ್ಯ ರಚನೆಗೆ ಕೈಹಾಕದಿದ್ದರೂ, ಕನ್ನಡದಲ್ಲಿ ಪ್ರಕಟವಾಗಿರುವ ಚುಟುಕು ಸಾಹಿತ್ಯದಿಂದ ಅವರು ವಿಶೇಷ ಆಕರ್ಷಿತರಾದವರು. 'ಅನ್ನ'ದ ಅಕಬರ ಅಲಿ, ಚೌಪದಿಯ ಚಕ್ರವರ್ತಿ ದಿನಕರ ದೇಸಾಯಿ, 'ಮಂಕುತಿಮ್ಮನ ಕಗ್ಗ'ದ ಡಿ.ವಿ.ಜಿ.ಯವರನ್ನು ಮೊದಲು ಗೊಂಡು ಇನ್ನೂ ವಿವಿಧ ಬಗೆಯ ಹನಿಗವಿತೆಗಳ ಕವಿಗಳಿಂದ ಡಾ. ಅರಸ್ ಎಷ್ಟರಮಟ್ಟಿಗೆ ಪ್ರಭಾವಿತರಾಗಿದ್ದರೆಂದರೆ ಆ ಕಾವ್ಯಪ್ರಕಾರದ ಸ್ಥಾನಮಾನವನ್ನು ಗಟ್ಟಿಗೊಳಿಸಲು 'ಅಖಿಲ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತ'ನ್ನು ಸ್ಥಾಪಿಸಿದ ಮಹಾಸಾಹಸಿ ಅವರಾಗಿಬಿಟ್ಟರು. ಮುಂದೆ ಡಾ. ದೇ.ಜ.ಗೌ.

ಅವರಂಥ ಹಿರಿಯರ ಬೆಂಬಲ ದೊರೆತ ಮೇಲಂತೂ ಚುಟುಕಿನ ಕಾಲ್ದಾರಿ ಹೆದ್ದಾರಿಯಾಗಿ ಪರಿಣಮಿಸಿ ಇದುವರೆಗೆ ರಾಜ್ಯಮಟ್ಟದ ಹದಿನೆಂಟು ಸಮ್ಮೇಳನಗಳ ಯಶೋದುಂದುಭಿಯನ್ನು ಮೊಳಗಿಸಿದ ಕೀರ್ತಿ ಅವರ ಪಾಲಿಗೆ ಸಲ್ಲುವಂತಾಯಿತು. ಆದರೂ ಅಹಂಕಾರದ ಲವಲೇಶವೂ ಇಲ್ಲದೆ ಸ್ವಯಂಸೇವಕರಂತೆ ಅವರು ಸಭೆಯಲ್ಲಿ ಓಡಾಡುವದನ್ನು ನೋಡಿದರೆ ಅರುವತ್ನಾಲ್ಕರ ಅರಸ್ ಇಪ್ಪತ್ನಾಲ್ಕರ ಯುವ ಚೈತನ್ಯವನ್ನು ಉಳಿಸಿಕೊಂಡಿರುವುದರ ಬಗ್ಗೆ ಯಾರಿಗೂ ಅಚ್ಚರಿಯೆನಿಸಬಹುದು.

ನಾನು ಒಂಬತ್ತನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಹತ್ತು ವರ್ಷಗಳೇ ಸಂದಿದ್ದರೂ ಆ ಸಂಘಟನೆಯ ಚಿತ್ರ ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಧಾರವಾಡದ ನಂಟನ್ನು ಗಾಢವಾಗಿಯೇ ಉಳಿಸಿಕೊಂಡಿರುವ 'ಆಂದೋಲನ'ದ ರಾಜಶೇಖರ ಕೋಟಿ ತಮ್ಮ ಮನೆಯಲ್ಲಿಯೇ ನನ್ನನ್ನುಳಿಸಿಕೊಂಡು ಆತಿಥ್ಯ ನೀಡಿದರು. ಬೇರೆ ಬೇರೆ ಕ್ಷೇತ್ರದ ಗಣ್ಯ ವ್ಯಕ್ತಿಗಳನ್ನು ಒಳಗೊಂಡ ಅಂದಿನ ಸಮಾರಂಭ ಡಾ. ಅರಸ್ ಅವರ ಸಂಘಟನಾ ಚಾತುರ್ಯಕ್ಕೆ ಸಾಕ್ಷಿ ನುಡಿಯುವಂತಿತ್ತು. ಸಿಂಡಿಕೇಟ್ ಬ್ಯಾಂಕಿನ ವಿಶ್ರಾಂತ ಅಧ್ಯಕ್ಷರಾದ ಕೆ.ಕೆ.ಪೈ., ನಟರಾಜ ಪ್ರತಿಷ್ಠಾನದ ಅಧ್ಯಕ್ಷರಾದ ಚಿದಾನಂದ ಸ್ವಾಮಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಲೀಲಾವತಿ ಆರ್. ಪ್ರಸಾದ್, ಡಾ. ಎಂ. ಅಕಬರಅಲಿ, ಡಾ. ಸಿ.ಪಿ.ಕೆ. ರಾಜಶೇಖರ ಕೋಟಿ, ಕೈಗಾರಿಕೋದ್ಯಮಿಗಳಾದ ಎನ್.ಎಸ್. ಪ್ರಸಾದ್ ಹಾಗೂ ಶ್ರೀಮತಿ ಜಾಂಬವತಿ, ಎಂ.ಎಲ್.ಸಿ. ವೈ. ಮಹೇಶ್, ಶಾಸಕರಾದ ಎಚ್.ಎಸ್. ಶಂಕರಲಿಂಗೇಗೌಡ ಹಾಗೂ ಎ.ರಾಮದಾಸ್ ಇವರೇ ಮೊದಲಾದವರು ಸಮ್ಮೇಳನದ ಒಂದಿಲ್ಲ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮ್ಮೇಳನದ ಒಟ್ಟು ಯಶಸ್ಸಿಗೆ ಕಾರಣರಾದದ್ದು ಇಲ್ಲಿ ಸ್ಮರಣೀಯ.

'ಹನಿಗವಿತೆಗಳು', 'ನ-ನಗು-ನಿ-ನಗು', 'ಭಾರತ ಬಿಂದುರಶ್ಮಿ' ಕರ್ತೃ ಕವಿಮಿತ್ರ ಬಿ.ಆರ್. ಲಕ್ಷ್ಮಣರಾವ್ ಅವರಿಗೆ 'ಚುಟುಕುರತ್ನ' ಪ್ರಶಸ್ತಿ ಪ್ರದಾನ. ಅವರ ಅಧ್ಯಕ್ಷತೆಯಲ್ಲಿಯೇ ನಾಡಿನ ಬೇರೆ ಬೇರೆ ಭಾಗಗಳಿಂದ ಆಗಮಿಸಿದ್ದ ೪೦-೫೦ ಕವಿಗಳಿಂದ ಚುಟುಕು ವಾಚನಗೋಷ್ಠಿ ಜೊತೆಗೇ 'ಚುಟುಕು ಶ್ರೀ' ಪ್ರಶಸ್ತಿ ಸ್ಪರ್ಧೆ. ಇವೆಲ್ಲದರ ಹಿಂದೆ ಪ್ರಧಾನ ಸಂಚಾಲಕರಾಗಿ ಡಾ.ಎಂ.ಜಿ.ಆರ್. ಅರಸ್. 'ಚುಟುಕು ಉಪಹಾರ,' 'ಚುಟುಕು ಭೋಜನ' ಎಂದು ಅಚ್ಚಾದದ್ದು ಹೆಸರಿಗೆ ಮಾತ್ರ; ಎಲ್ಲವೂ ಗಡದ್ದಾಗಿಯೇ ಇತ್ತು. ಹಿರಿಯ ಸಾಹಿತಿ ಚದುರಂಗರು ಅನಾರೋಗ್ಯದ ಸ್ಥಿತಿಯಲ್ಲಿಯೂ ಸಮಾರಂಭದಲ್ಲಿ ಉಪಸ್ಥಿತರಿದ್ದುದು ಅದರ ಮಹತ್ವವನ್ನು ಹೆಚ್ಚಿಸಿತ್ತು. ('ಚದುರಂಗರ ಚುಟುಕುಗಳು' ಡಾ. ಅರಸ್ ಅವರ ಪ್ರಕಟನೆಯೇ.) ಚದುರಂಗರ ಜೊತೆಗೆ ನನ್ನನ್ನು ನಿಲ್ಲಿಸಿ ತೆಗೆದ ಭಾವಚಿತ್ರವನ್ನು ಡಾ. ಅರಸ್ ಮರೆಯದೆ ನನಗೆ ಕಳಿಸಿಕೊಟ್ಟರು.

ಚುಟುಕು ಸಾಹಿತ್ಯ ಪರಿಷತ್ತು ಇಂದು ನಾಡಿನ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿಯೂ ತನ್ನ ಶಾಖೆಗಳನ್ನು ಸ್ಥಾಪಿಸಿ ಕಾರ್ಯಪ್ರವೃತ್ತವಾಗಿದೆ. ಇತ್ತೀಚೆಗೆ

ಕೋಲಾರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತನ್ನು 'ಚುಟುಕು ಚೈತ್ರ' ವಸಂತ ಸಾಹಿತ್ಯೋತ್ಸವ ಆಚರಿಸಿದಾಗ ಅವರ ಆಮಂತ್ರಣ ಪತ್ರಿಕೆ 'ಸಿರಿಗನ್ನಡ ಚುಟುಕು ಸಾಹಿತ್ಯ ಗೆಲ್ಗೆ, ಬಾಳ್ಗೆ' ಎಂಬ ಘೋಷಣೆಯನ್ನು ಒಳಗೊಂಡದ್ದು ಅರ್ಥಪೂರ್ಣವೆನಿಸಿತು. 'ಚುಟುಕು ಶ್ರೀ', 'ಚುಟುಕು ಭೂಷಣ', 'ಚುಟುಕುರತ್ನ' ಪದವಿಗಳನ್ನು ಪರಿಷತ್ತು ಸ್ಥಾಪಿಸಿದ್ದು ಚುಟುಕು ಕವಿಗಳಿಗೆ ಪ್ರತಿವರ್ಷ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಡಾ. ಅರಸ್ ಅವರು ಸಂಸ್ಥಾಪಕರಾಗಿರುವ ಸಂಸ್ಥೆಗಳಲ್ಲಿ ಡಾ. ಚದುರಂಗ ಪ್ರತಿಷ್ಠಾನ, ಡಾ. ದೇ.ಜ.ಗೌ. ಜ್ಞಾನವಾಹಿನಿ ಟ್ರಸ್ಟ್, ಡಾ. ಎಚ್ಚೆಸ್ಕೆ ಪ್ರತಿಷ್ಠಾನಗಳನ್ನು ಎತ್ತಿ ಹೇಳಲೇಬೇಕು. ಈ ಪ್ರತಿಷ್ಠಾನಗಳ ಮೂಲಕ ಕನ್ನಡಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ ಆಯಾ ಮಹನೀಯರ ಸ್ಮರಣೆಯೊಂದಿಗೆ ಸಾಹಿತ್ಯ ಕೃತಿಗಳಿಗೆ, ಸಾಹಿತಿಗಳಿಗೆ, ಅಂಕಣಕಾರ ಪತ್ರಿಕಾಕರ್ತರಿಗೆ ಪ್ರತಿವರ್ಷ ಹಣದ ಮೊತ್ತದೊಂದಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ನಿಜಕ್ಕೂ ಪ್ರಶಂಸನೀಯ.

ಅರಸ್ ಹುಟ್ಟು ಹಾಕಿದ ಕನ್ನಡಪರ ಹೋರಾಟಗಳ ಇನ್ನೊಂದು ಸಂಸ್ಥೆ 'ಜಯ ಕರ್ನಾಟಕ ಸಾಹಿತ್ಯ ಮಂಟಪ'. ಕಳೆದ ಮಾರ್ಚ್ ತಿಂಗಳು (೩-೩-೨೦೦೯) ಮಂಟಪದ ವತಿಯಿಂದ ಡಾ. ಎಂ. ಅಕಬರ ಅಲಿಯವರ ೮೫ನೆಯ ಹುಟ್ಟುಹಬ್ಬದ ಶುಭ ಹಾರೈಕೆಗೆ ನನ್ನನ್ನು ಧಾರವಾಡದಿಂದ ಮೈಸೂರಿಗೆ ಬರಮಾಡಿಕೊಂಡ ಡಾ. ಅರಸ್ ಅವರಿಗೆ ನಾನು ಕೃತಜ್ಞತೆ ಸಲ್ಲಿಸಲೇಬೇಕು. ಯಾಕೆಂದರೆ, ಅಕಬರ ಅಲಿಯವರೊಡನೆ ನನಗಿದ್ದ ಸ್ನೇಹ ಸಂಬಂಧ ಅರವತ್ತು ವರ್ಷಗಳಷ್ಟು ಹಿಂದಿನದು. ನನ್ನ ಪ್ರಥಮ ಕವನ ಸಂಕಲನ 'ಕಾವ್ಯಾಕ್ಷಿ' ಪ್ರಕಟವಾದಾಗ (೧೯೪೯) ಅಲಿಯವರು ಬೆಳಗಾವಿ ಜಿ.ಎ. ಹಾಯ್‌ಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ನನ್ನ ಈ ಸಂಕಲನದ ಕವಿತೆಗಳ ವಾಚನದ ಮೂಲಕ ವಿದ್ಯಾರ್ಥಿಗಳಲ್ಲಿ ಕಾವ್ಯಾಭಿರುಚಿಯನ್ನು ಹೆಚ್ಚಿಸಲು ಅವರು ಪ್ರಯತ್ನಿಸಿದ್ದುಂಟು. ಸುನೀತಗಳ ರಚನೆಯಲ್ಲಿ ನಮ್ಮಿಬ್ಬರಿಗೂ ಸಮಾನವಾದ ಆಸಕ್ತಿ. ಅವರ ಪ್ರಥಮ ಕವನ ಸಂಗ್ರಹ 'ವಿಷಸಿಂಧು' (೧೯೫೧) ಪೂರ್ತಿ ಸುನೀತಗಳ ಸಂಗ್ರಹವೇ. ಆಮೇಲಿನ ಅವರ ಕಾವ್ಯೋದ್ಯೋಗದಲ್ಲಿ ಸಾನೆಟ್ ಕಾಣಿಸಿಕೊಂಡದ್ದು ತೀರ ವಿರಳ.

ಸ್ನೇಹ, ಜೀವನದ ಪರಮಮೌಲ್ಯಗಳಲ್ಲಿ ಒಂದು ಎಂಬುದನ್ನು ನಾವು ಪರಸ್ಪರ ಅರಿತಿದ್ದೇವೆ. ಸುತ್ತಲಿನ ಜೀವನದಲ್ಲಿ ದುಷ್ಟತನ, ಸಣ್ಣತನ, ಭ್ರಷ್ಟಾಚಾರ, ಜಾತೀಯತೆ ಎಲ್ಲಾ ಕಂಡೂ ಈ ಜೀವನ ಸ್ವೀಕಾರಾರ್ಹ ಎಂದು ಅನಿಸುತ್ತದಲ್ಲ ಯಾಕೆ? ಡಾ. ಅಕಬರ ಅಲಿಯವರಂಥ ಕೆಲವರಾದರೂ ವ್ಯಕ್ತಿಗಳು ಇನ್ನೂ ನಮ್ಮ ಮಧ್ಯದಲ್ಲಿದ್ದಾರಲ್ಲ ಎಂಬ ನಂಬುಗೆಯೇ ಅದಕ್ಕೆ ಕಾರಣ. ಡಾ. ಅರಸ್, ಅವರನ್ನು 'ಚುಟುಕುರತ್ನ' ಎಂಬ ಪ್ರಶಸ್ತಿ ನೀಡಿ ಗೌರವಿಸಿರುವುದಲ್ಲದೆ ಅಕಬರ ಅಲಿಯವರ ಸಮಗ್ರ ಕಾವ್ಯವನ್ನು ತಮ್ಮ 'ವೈದ್ಯವಾರ್ತಾ ಪ್ರಕಾಶನ'ದಿಂದ ಪ್ರಕಟಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ಈ ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಮಾಧವ ಕುಲಕರ್ಣಿಯವರು "ಆತ್ಮಗೌರವಕ್ಕೆ ಚ್ಯುತಿ ಬಾರದಂತೆ ಚದುರಿದ, ಕವಿ ಹೃದಯವನ್ನು ಒತ್ತೆಯಾಗಿಡಲು

ಒಪ್ಪದ, ಬದಲಾವಣೆಯ ಗಾಳಿಯಲ್ಲಿ ತನ್ನತನವನ್ನು ಮರೆಯದ ಅಪರೂಪದ ಜೀವ" ಎಂದಿರುವುದು ಯಥಾಯೋಗ್ಯವಾಗಿದೆ.

ಅಲಿಯವರ ಹುಟ್ಟುಹಬ್ಬದ ಅಂದಿನ ಸಮಾರಂಭದಲ್ಲಿ ಜಯಕರ್ನಾಟಕ ಸಾಹಿತ್ಯ ಮಂಟಪದ ಗೌರವ ಅಧ್ಯಕ್ಷರಾದ ಡಾ. ದೇ.ಜ.ಗೌ. ಮಾಜಿ ಗೃಹಸಚಿವರಾದ ಪಿ.ಜಿ.ಆರ್. ಸಿಂಧ್ಯಾ, ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ, ಲೋಕಸಭಾ ಸದಸ್ಯರಾದ ಸಿ.ಎಚ್. ವಿಜಯಶಂಕರ, ಎಂ.ಎಲ್.ಸಿ. ಶ್ರೀ ತೋಂಟದಾರ್ಯ, ಶ್ರೀ ಬಾಬಾ ಅಮಿರುದ್ದೀನ್, ಅ.ಕ. ಬ್ರಾಹ್ಮಣ ಸಭಾದ ಸಭಾಪತಿ ಕೆ. ರಘುರಾಂ ಮೊದಲಾದವರು ಭಾಗವಹಿಸಿದ್ದು ಡಾ. ಅಕಬರ ಅಲಿಯವರ ವ್ಯಕ್ತಿತ್ವದ ಘನತೆಗೆ ಹಾಗೂ ಡಾ. ಅರಸ್ ಅವರ ಸಂಘಟನಾ ಕೌಶಲಕ್ಕೆ ಸಾಕ್ಷಿಯಂತಿದ್ದವು. ಅಂದಿನ ಸಮಾರಂಭದಲ್ಲಿ ಡಾ. ಅರಸ್‌ರವರು ನಾನು ಕಂಡಂತೆ ಉಸ್ತುವಾರಿಗಾಗಿ ಓಡಾಡಿದ್ದೇ ಹೆಚ್ಚು.

'ವೈದ್ಯವಾರ್ತಾ ಪ್ರಕಾಶನ' ಕನ್ನಡ ವಾಙ್ಮಯಕ್ಕೆ ಅರಸ್ ಅವರ ಇನ್ನೊಂದು ಕೊಡುಗೆ. ಪತ್ರಿಕೆಯ ಜೊತೆಗೆ ಹಲವಾರು ಗ್ರಂಥಗಳನ್ನು ಪ್ರಕಟಿಸಿರುವುದು ಅವರ ಹೆಚ್ಚುಗಾರಿಕೆ. 'ಎಚ್.ಎಸ್.ಕೆ. ಸಮಗ್ರ ಪ್ರಬಂಧಗಳು', 'ಅಕಬರ ಅಲಿ ಸಮಗ್ರಕಾವ್ಯ', 'ಚದುರಂಗ-೮೦', ದೇ.ಜ.ಗೌ., ವಿ.ಗ. ನಾಯಕ, ಬಿ.ಟಿ. ಲಲಿತಾನಾಯಕ, ಸಿ.ಪಿ.ಕೆ. ಮೊದಲಾದವರ ಚುಟುಕುಗಳ ಸಂಗ್ರಹಗಳು, ಡಾ. ಎಲ್. ಬಸವರಾಜು, ಪ್ರೊ. ಸುಜನಾ ಅವರ ಕವನ ಸಂಗ್ರಹಗಳು ಮೊದಲಾದವು ಇದರಲ್ಲಿ ಸೇರ್ಪಡೆಯಾಗಿರುವುದು ಗಮನಾರ್ಹ. ಡಾ. ಅರಸ್ ಇನ್ನೂ ಎಷ್ಟೊ ಸಂಸ್ಥೆಗಳ ಸ್ಥಾಪಕ ಸದಸ್ಯರಾಗಿರುವುದಲ್ಲದೆ ಅನೇಕ ಗಣ್ಯವ್ಯಕ್ತಿಗಳ ಪ್ರಶಂಸೆಗೆ ಪಾತ್ರರಾಗಿರುವುದು ಸಹಜವೇ ಆಗಿದೆ. ಕಳೆದ ಮೂರು ದಶಕಗಳಿಂದ ಅವರು ಏರ್ಪಡಿಸಿದ ವಿಚಾರಸಂಕಿರಣಗಳು, ಕವಿಗೋಷ್ಠಿ, ಸಂಗಿತ ಸಭೆಗಳು ಅವರನ್ನು ಮೈಸೂರಿನ ಸಾಂಸ್ಕೃತಿಕ ಜೀವನದ ಅವಿಭಾಜ್ಯ ಅಂಗವೆನಿಸಿಬಿಟ್ಟಿವೆ. ಡಾ. ಅರಸ್ ಅವರ ಈ ಯಶಸ್ಸಿನ ಗುಟ್ಟೇನು? ಅವರ ಮಾರ್ಗದರ್ಶಕರಂತಿರುವ ಹಿರಿಯರಾದ ಡಾ. ದೇಜಗೌ ಅವರು ಹೇಳುತ್ತಾರೆ. "ಒಂದು ಮಾತಿನಲ್ಲಿ ಹೇಳುವುದಾದರೆ ಅದು ಉತ್ಸಾಹ, ಅದಮ್ಯ ಉತ್ಸಾಹ, ಅದು ಅತಿಯೆಂದರೂ ತಪ್ಪಲ್ಲ. ಈ ಅತಿ ರಚನಾತ್ಮಕವಾದದ್ದೇ ಹೊರತು ಹಾನಿಕಾರಕವಾದದ್ದಲ್ಲ." ಅದಕ್ಕೆ ತಕ್ಕಂತೆ ಅವರ ವ್ಯವಹಾರ ಕೌಶಲ್ಯವನ್ನು ಮರೆಯುವಂತಿಲ್ಲ. ಕಾವ್ಯವನ್ನು ಬರೆಯದೆಯೂ ಕಾವ್ಯದಿಂದ ಹದವಾದ ಮನಸ್ಸನ್ನು ಅವರು ಬೆಳೆಯಿಸಿಕೊಂಡಿರುವುದನ್ನು ಎಚ್ಚೆಸ್ಕೆ ಗುರುತಿಸಿದ್ದಾರೆ. ಅವರ ವ್ಯಕ್ತಿತ್ವಕ್ಕೆ ಸೆಕ್ಯುಲರ್ ಮೆರುಗಿರುವುದನ್ನು ಕಂಡುಕೊಂಡ ಡಾ. ಸಿ. ನಾಗಣ್ಣ ಹೇಳಿರುವಂತೆ "ಇವರ ನಡಿಗೆಯಲ್ಲಿ ಒಂದು purpose ಇದೆ. ಒಂದು ಗುರಿಯಿದೆ. ಈ ತರಹ ಒಂದು ಉದ್ದೇಶಕ್ಕಾಗಿ ಬದುಕುವ ಜನರು ನಮಗೆ ಅಗತ್ಯವಾಗಿ ಬೇಕಾಗಿದ್ದಾರೆ." ಎಂಬುದನ್ನು ಯಾರೂ ಅಲ್ಲಗಳೆಯಲಾರರು. "ಅವರಿಗೆ ದೊಡ್ಡ ದೊಡ್ಡ ಸಾಹಿತಿಗಳ ದೊಡ್ಡ ದೊಡ್ಡ ರಾಜಕಾರಣಿಗಳ ನಿಕಟ ಸಂಪರ್ಕವಿದೆ. ಒಡನಾಟವಿದೆ, ಸ್ನೇಹವಿದೆ. ಅವರು ಒಮ್ಮೆ ಒಬ್ಬರನ್ನು ಹಚ್ಚಿಕೊಂಡರೋ ಅವರನ್ನು ಕೊನೆಯವರೆಗೂ ತಲೆಯ ಮೇಲೆ

ಹೊತ್ತುಕೊಂಡು ಮೆರೆಯುತ್ತಾರೆ" ಎಂದು ಮೂವತ್ತು ವರ್ಷಗಳಿಂದಲೂ ಅವರನ್ನು ಸಮೀಪದಿಂದ ಬಲ್ಲ ಡಾ. ಮಳಲಿ ವಸಂತಕುಮಾರ ನುಡಿಯುತ್ತಾರೆ.

ಹೀಗೆ ಸಾಹಿತ್ಯದ ಒಂದು ಪ್ರಕಾರಕ್ಕೆ (ಚುಟುಕು ಸಾಹಿತ್ಯ) ರಾಜ್ಯಮಟ್ಟದಲ್ಲಿ ಒಂದು ಪರಿಷತ್ತನ್ನು ಸ್ಥಾಪಿಸಿ, ಪ್ರೋತ್ಸಾಹ ನೀಡುತ್ತಿರುವುದು ಅಪರೂಪವೆಂದೇ ಹೇಳಬಹುದು. 'ಕರ್ನಾಟಕ ಸುಗಮ ಸಂಗೀತ ಪರಿಷತ್ತು' ಮಾತ್ರ ಕಳೆದ ಹತ್ತು ವರುಷಗಳಿಂದ ಬೇರೆ ಬೇರೆ ಜಿಲ್ಲಾ ಸ್ಥಳಗಳಲ್ಲಿ ಬಹಳ ವಿಶಿಷ್ಟವಾದ ರೀತಿಯಲ್ಲಿ ಗೀತೋತ್ಸವವನ್ನು ನಡೆಸಿಕೊಂಡು ಬರುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

('ಅರಸು ೭೦'-೨೦೧೪)

ಬಹುಮುಖ ಪ್ರತಿಭೆಯ ಶಾಲೀನತೆ

ಕರ್ನಾಟಕ ವಿಶ್ವವಿದ್ಯಾಲಯದ 'ಡಿ' ಕ್ವಾರ್ಟರ್ಸ್‌ನ ಬಲಭಾಗದ ಎದುರಿನಲ್ಲಿಯೇ ವಿದ್ಯಾರ್ಥಿನಿಯರ ವಸತಿಗೃಹ. ನಾವಿದ್ದ ಆ ಕ್ವಾರ್ಟರ್ಸಿನ ಎದುರಿನ ರಸ್ತೆಯಲ್ಲಿಯೇ ಬಸ್ ಸಂಚಾರ. ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿನಿಯರು ಹೋಗಿಬರುವುದಕ್ಕೂ ಅದೇ ದಾರಿ. ೧೯೭೧-೭೩ರ ಅವಧಿ ಇರಬೇಕು. ವಿದ್ಯಾರ್ಥಿನಿಯರು ಕಲಕಲರವದಿಂದ ಗುಂಪಾಗಿ ಹಾಸ್ಟೆಲ್ ಕಡೆ ಹೋಗುತ್ತಿರುವಾಗ, ಸಹಜ ನಡೆದರೂ ಜಿಂಕೆಯಂತೆ ಓಡುತ್ತಿರುವ ಹಾಗೆ ಕಾಣುತ್ತಿದ್ದ ವಿದ್ಯಾರ್ಥಿನಿಯೋರ್ವಳು ನನ್ನ ಹಾಗೂ ನಮ್ಮ ಮನೆಯವರ ಗಮನ ಸೆಳೆದಿದ್ದಳು. ಆ ವಿದ್ಯಾರ್ಥಿನಿ ಉತ್ತರ ಕನ್ನಡ ಜಿಲ್ಲೆಯ ಶಾಲಿನಿ ಹೆಗಡೆ ಎಂದು ತಿಳಿದಾಗ ನಮಗೆ ಸಂತೋಷವಾಗಿತ್ತು. ಆ ಸಂತೋಷಕ್ಕೆ ಮುಖ್ಯ ಕಾರಣ, ಆಕೆ ಕನ್ನಡ ಅಧ್ಯಯನ ಪೀಠದಲ್ಲಿ ಅಭ್ಯಾಸ ಮಾಡುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದಲ್ಲದೆ ಎರಡು ವರ್ಷ (೧೯೭೧-೭೩) ಕರ್ನಾಟಕ ವಿಶ್ವವಿದ್ಯಾಲಯದ ಮಹಿಳಾ ಅಥ್ಲೆಟಿಕ್ ಚಾಂಪಿಯನ್ ಕೂಡ ಆದದ್ದು. ಮುಂದೆ ಆಕೆ ಎಂ.ಎ. (ಕನ್ನಡ) ಪ್ರಥಮ ವರ್ಗ, ಪ್ರಥಮ ರ್‍ಯಾಂಕ್ ಗಳಿಸಿದ್ದು ನಮ್ಮ ಆಶ್ಚರ್ಯವನ್ನು ಅಭಿಮಾನವನ್ನು ಹೆಚ್ಚಿಸಿತ್ತು. ಈ ಅವಧಿ ಯಲ್ಲಿಯೇ ಶಾಲಿನಿಯವರು ಭಾಷಾವಿಜ್ಞಾನ ಹಾಗೂ ಭಾಷಾಂತರದಲ್ಲೂ ವಿಶ್ವವಿದ್ಯಾಲಯದ ಡಿಪ್ಲೊಮಾ ಮಾಡಿಕೊಂಡದ್ದು ಗಮನಾರ್ಹ ಸಾಧನೆ ಯಾಗಿತ್ತು. ಹೀಗೆ ಕ್ರೀಡೆ ಮತ್ತು ಶಿಕ್ಷಣದಲ್ಲಿ ಏಕಪ್ರಕಾರವಾಗಿ ಉನ್ನತ ದಾಖಲೆ ನಿರ್ಮಿಸಿದ ಶ್ರೇಯಸ್ಸು ಅವರದಾಗಿತ್ತು. ಕ.ವಿ.ವಿ.ಯಲ್ಲಿ ಅವರ ನಂತರ ಹೀಗೆ ಉಭಯ ಕ್ಷೇತ್ರದಲ್ಲಿ ದಾಖಲೆ ಬರೆದವರ ಹೆಸರು ನನಗಿನ್ನೂ ತಿಳಿದುಬಂದಿಲ್ಲ.

ಡಾ. ಶಾಲಿನಿ ರಘುನಾಥ ಅವರು ಒಳ್ಳೆಯ ಅಧ್ಯಾಪಕಿಯಾಗಿ ಲೇಖಕಿಯಾಗಿ, ಸಂಶೋಧಕಿಯಾಗಿ, ಜಾನಪದ ತಜ್ಞೆಯಾಗಿ,

ಭಾಷಾವಿದೆಯಾಗಿ ಅದೇ ಉನ್ನತ ಮಟ್ಟವನ್ನು ಕಾಯ್ದುಕೊಂಡು ಬಂದಿರುವುದು ಸಣ್ಣ ಸಾಧನೆಯೇನೂ ಅಲ್ಲ. ಶಿರಸಿಯ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಹೆಸರು ಮಾಡಿದ ನಂತರ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿ ಪ್ರವಾಚಕಿಯಾಗಿ ಕೆಲಸ ಮಾಡಿದರು (೧೯೭೯–೮೭). ಈ ಅವಧಿಯಲ್ಲಿಯೇ 'ಹವ್ಯಕ ಭಾಷೆಯ ಸಾಮಾಜಿಕ ಅಧ್ಯಯನ' ಕುರಿತು ಅವರು ಪಿಎಚ್.ಡಿ. ಪದವಿಯನ್ನು ಪಡೆದದ್ದು (೧೯೮೫). ಈ ಮೊದಲು ಡಾ.ಕೆ.ಜಿ. ಶಾಸ್ತ್ರಿಯವರ `The Havyaka Dialect of N.K." ಸಂಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ೧೯೭೧ರಲ್ಲಿ ಪ್ರಕಟಿಸಿತ್ತು. ಡಾ. ಶಾಲಿನಿ ರಘುನಾಥ ಅವರ 'ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು' (೧೯೭೯) ಹಾಗೂ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನಃ ಒಂದು ಅಧ್ಯಯನ' (೧೯೮೮) ಕೃತಿಗಳನ್ನು ಮುಂದಿನ ಬೆಳೆವಣಿಗೆಯಾಗಿ ಇಲ್ಲಿ ಸ್ಮರಿಸಿಕೊಳ್ಳಬಹುದು. ನಂತರ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಸೇವೆ ಸಲ್ಲಿಸುತ್ತ, ಜಾನಪದ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ (೨೦೦೦) ಉನ್ನತ ಸ್ಥಾನ ಪಡೆದದ್ದು ಅವರ ವೃತ್ತಿಪರತೆಗೂ ಪ್ರತಿಭಾನ್ವಿತ ವ್ಯಕ್ತಿತ್ವಕ್ಕೂ ಅರ್ಹತೆಗೂ ಸಾಕ್ಷಿಯಾಗಿದೆ.

ಇವರ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳು ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿ ಪಡೆದಿರುವುದು ಅಧ್ಯಯನ ಅಧ್ಯಾಪನದಂತೆ ಸಂಶೋಧನೆಗೂ ಇವರು ನೀಡಿರುವ ಮಹತ್ವವನ್ನು ಎತ್ತಿ ತೋರಿಸುತ್ತದೆ. ಇವುಗಳಿಗೆ ಸಮಾನಾಂತರದಲ್ಲಿ ಅವರ ಬರವಣಿಗೆಯೂ ಸಾಗಿ ಬಂದಿರುವುದು ಅಧ್ಯಾಪಕ ವೃತ್ತಿಗೆ ಒಂದು ಮಾದರಿ ಎನಿಸುವಂತಿದೆ. ಇವರು ಇದುವರೆಗೆ ಪ್ರಕಟಿಸಿರುವ ಸ್ವತಂತ್ರ ಹಾಗೂ ಸಂಪಾದಿತ ಕೃತಿಗಳ ಸಂಖ್ಯೆ ಇಪ್ಪತ್ತಕ್ಕೂ ಮಿಕ್ಕಿದೆ. ಮಹಿಳೆ ಮತ್ತು ಶಿಕ್ಷಣ, ಭಾಷಾ ವಿಜ್ಞಾನ, ಜಾನಪದ ಸಂಗ್ರಹ–ಸಂಶೋಧನೆ, ಮಹಿಳಾ ಅಧ್ಯಯನ, ಜಾನಪದ ಕಲೆಗಳು, ಕನ್ನಡದ ಹಳಮೆ, ಪರಿಸರ ಮತ್ತು ಸಂಸ್ಕೃತಿ ಹೀಗೆ ಅವು ವಿಷಯವೈವಿಧ್ಯದಿಂದ ಕೂಡಿರುವುದು ಗಮನಾರ್ಹ. ಇವುಗಳಲ್ಲಿ ಹಲವಾರು ಕೃತಿಗಳು ಪ್ರತಿಷ್ಠಿತ ಬಹುಮಾನ ಹಾಗೂ ಪ್ರಶಸ್ತಿಗಳಿಗೂ ಪಾತ್ರವಾಗಿರುವುದು ಅವುಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಡಾ. ಶಾಲಿನಿ ರಘುನಾಥ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿವಿಧ ಅಕಾಡೆಮಿಗಳಿಂದ ಸನ್ಮಾನಗೊಂಡಿರುವುದು ಯಥೋಚಿತವಾಗಿದೆ. ಇತ್ತೀಚೆಗೆ ಸ್ಥಾಪನೆಗೊಂಡ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯತ್ವ ಇವರ ಅನುಭವಕ್ಕೆ ಹೆಚ್ಚಿನ ಅವಕಾಶವನ್ನು ಒದಗಿಸಿದೆ.

ವೈಯಕ್ತಿಕವಾದ ಒಂದೆರಡು ಸಂಗತಿಗಳು ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ತರಗತಿಗೆ ನನ್ನ 'ಚಿರಂತನದಾಹ' ಕವನ ಸಂಗ್ರಹ ಪಠ್ಯವಾಗಿತ್ತು. ಆಗ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಪ್ರವಾಚಿಕೆಯಾಗಿದ್ದ ಡಾ. ಶಾಲಿನಿ ರಘುನಾಥ ಅವರು ಆ ಸಂಗ್ರಹದ

ಪ್ರತಿಯೊಂದು ಕವಿತೆಯ ಬಗೆಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾದ ರೀತಿಯಲ್ಲಿ ಟಿಪ್ಪಣಿ ಬರೆದು, ಇಡಿಯಾಗಿ ಆ ಸಂಗ್ರಹವನ್ನು ವಿಮರ್ಶಿಸಿದ್ದರು. ಅದರ ಒಂದು ಪ್ರತಿಯನ್ನು ಸಲಹೆ ಸೂಚನೆಗಾಗಿ ನನಗೂ ಕಳಿಸಿಕೊಟ್ಟಿದ್ದರು. ಅದೊಂದು ಕಾವ್ಯಕುರಿತ ಒಳ್ಳೆಯ ಬರವಣಿಗೆಯಾಗಿತ್ತು. ಅದನ್ನೊಂದು ಕಿರುಹೊತ್ತಿಗೆಯಾಗಿ ಪ್ರಕಟಿಸಲು ಡಾ. ಹಾ.ಮಾ. ನಾಯಕರು ಡಾ. ಶಾಲಿನಿಯವರಿಗೆ ಸೂಚಿಸಿದ್ದರಂತೆ. ಡಾ. ಜಿ.ಎಸ್. ಕಾಪಸೆ ಮತ್ತು ಡಾ.ಜಿ.ಎಂ. ಹೆಗಡೆಯವರು ಸಂಪಾದಿಸಿದ 'ಬೆಳ್ಳಿ ತೇರಿನ ದಾರಿ' (ಕಣವಿ ಕಾವ್ಯದ ಅನುಸಂಧಾನ-೨೦೦೩) ಗ್ರಂಥದಲ್ಲಿ ಡಾ. ಶಾಲಿನಿಯವರ ಒಂದು ದೀರ್ಘ ವಿಮರ್ಶಾತ್ಮಕ ಲೇಖನವಿದೆ: 'ಕಣವಿಯವರ ಕಾವ್ಯಭಾಷೆ'ಯನ್ನು ಕುರಿತು. ಕಾವ್ಯ, ಭಾಷೆಯ ಪ್ರಕ್ರಿಯೆಯಲ್ಲಿ ಹೊರಹೊಮ್ಮುವ ಸೃಜನಶೀಲ ಸಾಹಿತ್ಯವಾಗಿರುವುದರಿಂದ ಕಾವ್ಯದ ಭಾಷಿಕ ಅಧ್ಯಯನವನ್ನೊಳಗೊಂಡಂತೆ ಆ ಲೇಖನದ ಸಮಗ್ರ ವಿವೇಚನೆಯನ್ನು ಸಂಪಾದಕರು ಮೆಚ್ಚಿಕೊಂಡದ್ದುಂಟು. ಭಾಷಣವೇ ಇರಲಿ, ಲೇಖನವೇ ಇರಲಿ, ವಿಷಯದ ಸಮಗ್ರ ವಿವೇಚನೆಯನ್ನು ಡಾ. ಶಾಲಿನಿಯವರು ಗಮನದಲ್ಲಿರಿಸಿ ಕೊಂಡಿರುವುದನ್ನು ನಾನು ಅನೇಕ ಸಂದರ್ಭಗಳಲ್ಲಿ ಕಂಡಿದ್ದೇನೆ. ಇವೆಲ್ಲದರ ಜೊತೆಗೆ ಡಾ. ಶಾಲಿನಿ ರಘುನಾಥ ಅವರ ಶಾಲೀನತೆ (ವಿನಯ, ಸೌಜನ್ಯ) ಅವರ ವಿದ್ವತ್ತಿಗೆ ವಿಶೇಷ ಮೆರುಗನ್ನು ತಂದುಕೊಟ್ಟಿದೆಯೆಂದು ನಾನು ಭಾವಿಸಿದ್ದೇನೆ. ಅವರಿಗೆ ಎಲ್ಲ ಬಗೆಯ ಶುಭವನ್ನು ಹಾರೈಸುತ್ತ ಅಭಿನಂದನ ಗ್ರಂಥದ ಸಂಪಾದಕರಿಗೆ ಹಾಗೂ ಅಭಿನಂದನ ಸಮಿತಿಗೆ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತೇನೆ.

('ದೇಸೀ ಸಂಪದಶಾಲಿನಿ' ೨೦೧೩)

ಪ್ರವೃತ್ತಿಗೆ ನಿವೃತ್ತಿಯಿಲ್ಲ

ಸುಭಾಷಿತವೊಂದು ಹೀಗೆ ಹೇಳುತ್ತದೆ: ಚಂಡು ಕೆಳಗೆ ಬಿದ್ದರೆ ಮತ್ತೆ ಮೇಲಕ್ಕೆ ಪುಟಿಯುವಂತೆ ಚರಿತ್ರಶೀಲನಾದ ಮನುಷ್ಯನು ಕಾರಣಾಂತರದಿಂದ ಕಷ್ಟಕ್ಕೆ ಈಡಾದರೂ ಮತ್ತೆ ಉನ್ನತಿಯನ್ನು ಪಡೆಯುವನು. ಆದರೆ ಚಾರಿತ್ರ್ಯ ಹೀನನಾದವನು ಒಮ್ಮೆ ಕೆಳಗೆ ಬಿದ್ದನೆಂದರೆ ಮಣ್ಣಿನ ಹೆಂಟೆಯಂತೆ ಪುಡಿಪುಡಿಯಾಗುವನು. ಸದುದ್ದಿಶ್ಯದ ಜೀವನ ಇರುವವರಿಗೆ ಆಗಾಗ ಕಷ್ಟಗಳು ಬಂದರೂ ಅವರು ತಮ್ಮ ಪ್ರಾಮಾಣಿಕತೆಯಿಂದ ಮತ್ತೆ ಚೇತರಿಸಿ ಕೊಳ್ಳುತ್ತಾರೆ. ಎಷ್ಟೋ ಸಲ ಕಷ್ಟಕಾಲದಲ್ಲಿ ಬಂದ ಅನುಭವಗಳಿಂದ ಪಾಠ ಕಲಿತು ಇನ್ನೂ ಹೆಚ್ಚು ಧೈರ್ಯದಿಂದ ಉನ್ನತಿ ಪಡೆಯುತ್ತಾರೆ.

ಅರುವತ್ತರ ಅಂಚಿನಲ್ಲಿರುವ ಪತ್ರಕರ್ತ ಮಿತ್ರರಾದ ಶ್ರೀ ಶಿವಕುಮಾರ ಭೋಜಶೆಟ್ಟರ ಅವರನ್ನು ಕುರಿತು ಬರೆಯಬೇಕೆಂದು ಅಭಿನಂದನಗ್ರಂಥದ ಸಂಪಾದಕರು ಕೇಳಿಕೊಂಡಾಗ ನನಗೆ ನೆನಪಿಗೆ ಬಂದದ್ದು ಈ ಸುಭಾಷಿತ. ಬಡತನದಿಂದಾಗಿ ಮನೆಮನೆಗೆ ಪೇಪರ ಹಂಚುತ್ತಿದ್ದ ಹುಡುಗನೊಬ್ಬ ಬೆಳೆದು ದೊಡ್ಡವನಾದಂತೆ ಅದೇ ಪತ್ರಿಕಾ ಪ್ರಪಂಚದಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಹೆಸರು ಗಳಿಸಿದ್ದು ಅವನ ವೃತ್ತಿನಿಷ್ಠೆಗೆ ಸಾಕ್ಷಿಯಾಗಿದೆ. ಎಸ್.ಎಸ್.ಎಲ್.ಸಿ.ಯವರೆಗೆ ಮಾತ್ರ ಓದಲು ಸಾಧ್ಯವಾಗಿ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ ಇವರು ಹುಟ್ಟೂರಾದ ನವಲಗುಂದದಲ್ಲಿ ನಾಡಿನ ಪ್ರತಿಷ್ಠಿತ ಪತ್ರಿಕೆಯಾದ 'ಸಂಯುಕ್ತ ಕರ್ನಾಟಕ'ದ ಗೌರವ ವರದಿಗಾರನಾಗಿ ಪತ್ರಿಕಾ ವೃತ್ತಿಯನ್ನು ಆರಂಭಿಸಿ ನಂತರ ಗದಗ, ರಾಯಚೂರು, ಬಳ್ಳಾರಿ, ಗುಲಬರ್ಗಾ, ಬೀದರ, ಹುಬ್ಬಳ್ಳಿ, ವಿಜಾಪುರ, ಬೆಂಗಳೂರು ಸೇರಿದಂತೆ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ 'ಸಂಯುಕ್ತ ಕರ್ನಾಟಕ'ದ ಪೂರ್ಣಾವಧಿ ಜಿಲ್ಲಾ ವರದಿಗಾರರಾಗಿ, ವಿಶೇಷ ವರದಿಗಾರರಾಗಿ, ಸಹಾಯಕ ಸಂಪಾದಕರಾಗಿ

ಕಾರ್ಯನಿರ್ವಹಿಸಿದ ರೀತಿ ತುಂಬ ರೋಚಕವಾಗಿದೆ. ಹೀಗೆ ಹಂತಹಂತವಾಗಿ ತಾವೂ ಬೆಳೆದು ಸಂಸ್ಥೆಗೂ ಸಾಧ್ಯವಿದ್ದ ಸೇವೆ ಸಲ್ಲಿಸಿದ್ದ ಸಂದರ್ಭ ದಲ್ಲಿಯೂ ತಮ್ಮ ಊರಿನ ಸ್ವಾತಂತ್ರ್ಯ ಹೋರಾಟಗಾರರಾದ ಗಣ್ಯವ್ಯಕ್ತಿಯೊಬ್ಬರನ್ನು ಅವರು ಮರೆಯುವುದಿಲ್ಲ. ಪ್ರಾರಂಭದಲ್ಲಿ ತಾವು ನಿರ್ವಹಿಸಿದ್ದ 'ಸಂಯುಕ್ತ ಕರ್ನಾಟಕ' ವರದಿಗಾರ ಕೆಲಸವನ್ನು ಇವರಿಗೆ ಬಿಟ್ಟುಕೊಟ್ಟು ಪ್ರೋತ್ಸಾಹಿಸಿದ ಶ್ರೀ ರಾಮಭಾವ ಜೋಶಿಯವರೇ ಆ ವ್ಯಕ್ತಿ.

ಈಗಿನಂತೆ ಸೌಲಭ್ಯಗಳಿರದಿದ್ದ ಅಂದಿನ ಕಾಲದಲ್ಲಿ ಪತ್ರಿಕಾವರದಿಗಾರರ ಪಡಿಪಾಟಲು, ಸೆಣಸಾಟ, ಓಡಾಟ ಹೇಳತೀರದು. ಅಂಥದರಲ್ಲಿಯೂ ಕಷ್ಟಪಟ್ಟು ಮಹತ್ವದ ಸುದ್ದಿಗಳನ್ನು ಸಂಗ್ರಹಿಸಿ ಮರುದಿನವೇ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗುವಂತೆ ಮಾಡುವಲ್ಲಿ ಶಿವಕುಮಾರ ಯಶಸ್ವಿಯಾದದ್ದುಂಟು. ಕೆಲವೊಂದು ಸಲ ಉದ್ವೇಗಕಾರಿ ಎನಿಸಿದರೂ ಪಕ್ಷಪಾತಕ್ಕೆ ಒಳಗಾದಂತೆ ತೋರುತ್ತಿರಲಿಲ್ಲ. ಅದೂ ಅಂತಿಂಥ ಮನೆಮುರುಕ ಸುದ್ದಿಗಳಲ್ಲ. ಅತಿವೃಷ್ಟಿ, ಅನಾವೃಷ್ಟಿಗಳಿಂದುಂಟಾದ ಬೆಳೆಹಾನಿ, ಸಾಲದ ಸಂಕಷ್ಟದಲ್ಲಿ ಉಂಟಾಗುವ ರೈತರ ಆತ್ಮಹತ್ಯೆ, ದಲಿತರ ಮೇಲೆ ನಡೆಯುವ ದೌರ್ಜನ್ಯ, ಕಿಲಾರಿ ಭೂಕಂಪದ ದುರಂತ ದೃಶ್ಯಗಳು ಎಲ್ಲವೂ ತಲ್ಲಣಗೊಳಿಸುವ ವಿಶೇಷ ವರದಿಗಳೇ. ಮುಖ್ಯಮಂತ್ರಿಗಳಾದವರ ಜೊತೆಗೆ ವರದಿಗಾರರಾಗಿ ಪ್ರವಾಸ, ಪ್ರಧಾನಿಗಳ ಪತ್ರಿಕಾ ಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಇಂಥ ಯಾವುದನ್ನೂ ಅವರು ನಿರರ್ಥಕ ಗೊಳಿಸಿಕೊಳ್ಳದೆ ಪತ್ರಿಕಾಕ್ಷೇತ್ರದ ದುಡಿಮೆಗೆ ಅರ್ಥಪೂರ್ಣತೆಯನ್ನು ತಂದುಕೊಟ್ಟರು. ಶ್ರಮ, ಶ್ರದ್ಧೆ, ಹೋರಾಟಗಳಿಂದ ಅನೇಕ ಸಂದರ್ಭಗಳಲ್ಲಿ ತಮ್ಮ ಯೋಗ್ಯತೆಯನ್ನು ಒರೆಗೆ ಹಚ್ಚಿ ನೋಡಿದ ಪ್ರಸಂಗಗಳಲ್ಲಿಯೂ ಅನೇಕ ಸಮಸ್ಯೆಗಳನ್ನೆದುರಿಸಿ ಉತ್ತೀರ್ಣರಾಗಿದ್ದಾರೆ.

ಈಗಿನಂತೆ ಪತ್ರಿಕೋದ್ಯಮದ ತರಬೇತಿ ನೀಡುವ ಸಂಸ್ಥೆಗಳೇ ಇಲ್ಲದಿರುವಾಗ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಲೇ ಎಲ್ಲವನ್ನು ಕಲಿಯಬೇಕಾಗುತ್ತಿತ್ತು. ಅಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಆಕರ್ಷಣೀಯವಾದ ಉನ್ನತಮಟ್ಟವನ್ನು ಸಾಧಿಸಲು ಹಿತಕರವಾದ ಸ್ಪರ್ಧೆ ಇರುತ್ತಿತ್ತು. ಸ್ವಾರ್ಥವನ್ನು ಬದಿಗಿಟ್ಟು ಜನತೆಯ ಹಿತಸಂಬಂಧಗಳಿಗೆ ಧಕ್ಕೆ ಬರದಂತೆ ನಾಡಿನ ಪ್ರಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾಧನೆಯ ಮಾರ್ಗದಲ್ಲಿ ಸಾಗಿದ ಪತ್ರಿಕೆಗಳಲ್ಲಿ ಉತ್ತರ ಕರ್ನಾಟಕದಲ್ಲಿ 'ಸಂಯುಕ್ತ ಕರ್ನಾಟಕ'ಕ್ಕೆ ಹಿರಿಯ ಚೇತನ ಸ್ಥಾನ ತಾನಾಗಿಯೇ ದೊರೆತಿತ್ತು. ಆಮೇಲೆ ಬರಬರುತ್ತ ಈ ಕ್ಷೇತ್ರ ವಿಸ್ತಾರವಾಗಿ ಹೊಸ ಹೊಸ ಪತ್ರಿಕೆಗಳು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಅದಕ್ಕೆ ಸ್ಪರ್ಧೆಯನ್ನೊಡ್ಡಿದ್ದು ಈಗ ಇತಿಹಾಸ. ಜನತೆಯಲ್ಲಿ ರಾಷ್ಟ್ರಾಭಿಮಾನವನ್ನು ಉದ್ದೀಪಿಸಿ ಅದೇಕಾಲಕ್ಕೆ ಹರಿದು ಹಂಚಿಹೋದ ಕನ್ನಡ ನಾಡನ್ನು ಸಂಯುಕ್ತವಾಗಿ ಬೆಸೆದು ಒಂದಾಗಿಸುವ ಧ್ಯೇಯ ದೊಂದಿಗೆ ಸಮೃದ್ಧ ಕರ್ನಾಟಕದ ಕನಸನ್ನು ಕನ್ನಡಿಗರ ಮನಸ್ಸಿನಲ್ಲಿ ಬಿತ್ತಿದ ಶ್ರೇಯಸ್ಸಿನ ಬಹುಪಾಲು ಈ ಪತ್ರಿಕೆಯದಾಗಿತ್ತು. ಇಂಥ ಹಿನ್ನೆಲೆಯನ್ನು ಪಡೆದ ಪತ್ರಿಕೆಯ ಧ್ಯೇಯವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರಿಂದಲೇ ಕಲ್ಲುಮುಳ್ಳುಗಳಿಂದ ಕೂಡಿದ ತಮ್ಮ ಹಾದಿಯನ್ನು ಶಿವಕುಮಾರ ಭೋಜಶೆಟ್ಟರ ಸುಗಮವಾಗುವಂತೆ ನೋಡಿಕೊಳ್ಳಲು ಸಾಧ್ಯವಾಯಿತೆಂದು ತೋರುತ್ತದೆ.

ಪಾರತಂತ್ರ್ಯದ ಕಾಲದಲ್ಲಿ ವೃತ್ತ ಪತ್ರಿಕೆಗಳು ಸ್ವತಂತ್ರವಿದ್ದವು. ಆದರೆ ಸ್ವಾತಂತ್ರ್ಯ ಬಂದ ನಂತರ ಪತ್ರಿಕೆಗಳು ಪರತಂತ್ರವಾಗಹತ್ತಿರುವುದೊಂದು ವಿರೋಧಾಭಾಸ. ಸರಕಾರದ ಟೀಕೆ ನಡೆಯುತ್ತದೆ. ಆದರೆ ಅದರ ಇಂಗಿತ ಬೇರೆಯೇ ಇರುತ್ತದೆ. ಪತ್ರಿಕಾ ವ್ಯವಸಾಯವನ್ನು ಬಾಧಿಸುವ ಪಂಚಭೂತಗಳ ಬಗ್ಗೆ ಬರೆಯುತ್ತ ನಮ್ಮ ವೈಚಾರಿಕ ಲೇಖಕರಲ್ಲಿ ಅಗ್ರಪಂಕ್ತಿಯಲ್ಲಿದ್ದ ಗೌರೀಶ ಕಾಯ್ಕಿಣಿಯವರು ಹೇಳಿದ ಮಾತುಗಳು ಮನನೀಯವಾಗಿವೆ: ೧) ವೃತ್ತ ಪತ್ರ ವ್ಯವಸಾಯದಲ್ಲಿ ಇಂದು ಬಂಡವಾಳದಾರ ನುಗ್ಗಿ ನಿಂತಿದ್ದಾನೆ. ಈ ಅನರ್ಥಕ ಮುನ್ಸೂಚನೆಯನ್ನು ಲೋಕಮಾನ್ಯ ತಿಲಕರು ೧೮೮೫ ರಲ್ಲಿಯೇ ಕೊಟ್ಟದ್ದನ್ನು ಅವರು ನೆನಪಿಸುತ್ತಾರೆ. ಅವರು ಅಂದು 'ಕೇಸರಿ' ಪತ್ರಿಕೆಯ ಪ್ರಥಮ ಅಗ್ರ ಲೇಖದಲ್ಲಿಯೇ ಬರೆದಿದ್ದರು: "ಪತ್ರಿಕಾ ವ್ಯವಸಾಯಕ್ಕೆ ಸಂಬಂಧವಿಲ್ಲದ ಮಂದಿ ಮುದ್ರಣಾಲಯಗಳನ್ನು ತೆರೆದು ಪತ್ರಿಕೆಗಳನ್ನು ನಡೆಯಿಸಬಹುದು."

ಎರಡನೆಯ ಭೂತವೆಂದರೆ ಅದು ರದ್ದಿಯ ತಂತ್ರ. ಹೆಚ್ಚು ಪುಟ ಹಾಕಿ ಸಂಚಿಕೆ ತೆಗೆಯುವದು. ಆ ಸಂಚಿಕೆಯನ್ನು ಓದುಗನು ರದ್ದಿಯ ಬೆಲೆಯನ್ನು ಗಮನದಲ್ಲಿಟ್ಟು ಕೊಂಡುಕೊಳ್ಳುವನು. ಅತಿದೊಡ್ಡ ಪ್ರಸಾರದ ಪತ್ರಿಕೆಯೆಂದು ಪ್ರಸಿದ್ಧಿ-ಪ್ರಶಸ್ತಿಗಳ ದೊಡ್ಡಸ್ತಿಕೆ ಬೇರೆ! ಇಂದು ಧ್ಯೇಯವಿಲ್ಲ ದೃಷ್ಟಿಯಿಲ್ಲ. ಪತ್ರಿಕೆಗಳನ್ನು ಕಾಡುವ ಮೂರನೆಯ ಭೂತ ಜಾಹೀರಾತುಗಳು ಮತ್ತು ಏಜೆಂಟರು. ನಾಲ್ಕನೆಯ ಭೂತ ರಾಜಕೀಯ ಧುರೀಣರು. ಈ ಧುರೀಣರಿಗೆ ಪತ್ರಿಕೆಗಳಲ್ಲಿ ಆದಷ್ಟು ಹೆಚ್ಚು ಪ್ರಸಿದ್ಧಿ ಬೇಕು. ಅವರ ಮೇಲೆ ಟೀಕೆ ಟಿಪ್ಪಣಿ ಬಂದರೆ ಏನೇನೂ ಸಹಿಸಲಾಗದು. ಇನ್ನು ಸುಪ್ರೀಂಕೋರ್ಟ್ ಪತ್ರಿಕಾ ವ್ಯವಸಾಯದ ಬೆನ್ನಿಗೆ ನಿಂತ ಐದನೆಯ ಭೂತ. ಒಂದು ದೊಡ್ಡ ಪತ್ರಿಕೆಯ ಹಕ್ಕಿನ ರಕ್ಷಣೆ ಮಾಡುವಾಗ ಅನೇಕ ಸಣ್ಣ ಪತ್ರಿಕೆಗಳ ಹಕ್ಕುಗಳು ಕಾಲಡಿಗೆ ಬೀಳುತ್ತವೆ. ಇದೆಲ್ಲ ಭೂತಬಾಧೆಯ ಪರಿಣಾಮವೇನು? ಇಂದು ಪತ್ರಿಕೆಗಳ ಪ್ರಸಾರ ಬೆಳೆದಿದೆ. ಆದರೆ ಪ್ರಭಾವ ಕಡಿಮೆಯಾಗಿದೆ. ಪತ್ರಿಕೆಗಳ ಮೇಲಿನ ಜನತೆಯ ವಿಶ್ವಾಸ ಹಾರಿಹೋಗಿದೆ. ಈ ದಿಸೆಯಲ್ಲಿ ಕಾಯ್ಕಿಣಿ ಅವರ ಹಿತವಚನವೆಂದರೆ ಸುದ್ದಿಗಾರ ಸದ್ದುಗಾರನಾಗಬಾರದು. ಸುಳ್ಳುಗಾರನೂ ಆಗಬಾರದು. 'ಗಾರ'ನಿಗಿಂತ ಸುದ್ದಿಗೇ ಪ್ರಾಧಾನ್ಯವಿರಬೇಕು.

ಶಿವಕುಮಾರ ಅವರು ನಿವೃತ್ತಿ ಹೊಂದಿರುವ ಈ ಸಂದರ್ಭದಲ್ಲಿ ಹೊಸ ದಿನಪತ್ರಿಕೆಯೊಂದರಲ್ಲಿ ಜಂಟಿ ಸಂಪಾದಕರಾಗಿ ಕಾರ್ಯನಿರ್ವಹಿಸುವ ಸೇವಾವಕಾಶ ಪಡೆದಿರುವುದು ಸಂತೋಷದ ಸಂಗತಿಯೇ. ಪ್ರವೃತ್ತಿಗೆ ನಿವೃತ್ತಿಯೆಲ್ಲಿ? ಪತ್ರಿಕೋದ್ಯಮವನ್ನೇ ತಮ್ಮ ಉಸಿರಾಗಿ ಮಾಡಿಕೊಂಡ ಅವರಲ್ಲಿ ಉತ್ಸಾಹಕ್ಕೇನೂ ಕೊರತೆಯಿಲ್ಲ. ಡಿ.ವಿ.ಜಿ.ಯವರು ದೊಡ್ಡ ಸಾಹಿತಿಯೆನಿಸಿದ್ದರೂ ಪತ್ರಿಕಾ ವ್ಯವಸಾಯ ಅವರ ಜೀವನದ ಒಂದು ಭಾಗವೇ ಆಗಿತ್ತು. ಅಂಥವರು 'ನಡೆದು ಬಂದ ದಾರಿ' ಅನುಭವ ಮತ್ತು ಆದರ್ಶವನ್ನು ಶಿವಕುಮಾರ ಅವರು ಹೆಚ್ಚು ಲಕ್ಷಿಸುತ್ತಾರೆಂದು ನಾನು ಭಾವಿಸಿದ್ದೇನೆ.

ಡಿ.ವಿ.ಜಿ.ಯವರ ಕಾಲಕ್ಕೆ ಪತ್ರಿಕೋದ್ಯಮ ಅಷ್ಟು ಪಕ್ವವಾಗಿರಲಿಲ್ಲ. ಅವರು ಮೊದಲ ಸಲ ಹೊರಡಿಸಿದ್ದು 'ಭಾರತಿ' ದಿನಪತ್ರಿಕೆ (೧೯೦೭), ಕಾನೂನಿನ ನಿರ್ಬಂಧನೆಗೊಳಗಾಗಿ ಪತ್ರಿಕೆ ನಿಲ್ಲಿಸಬೇಕಾಯಿತು. 'ಸಮಾಚಾರ ಸಂಗ್ರಹ' ಎಂಬ ಮತ್ತೊಂದು ದಿನಪತ್ರಿಕೆಯ

ಪ್ರಾರಂಭ. ೧೯೧೩ರಲ್ಲಿ 'ಕರ್ನಾಟಕ' ಎಂಬ ಇಂಗ್ಲಿಷ್ ದ್ವಿಸಾಪ್ತಾಹಿಕ. ಕನ್ನಡದಲ್ಲಿಯಂತೆ ಆಂಗ್ಲ ಭಾಷೆಯಲ್ಲಿಯೂ ಅವರಿಗೆ ಒಳ್ಳೆಯ ಪ್ರಭುತ್ವ-ಪತ್ರಿಕೆ ಲೋಕ ಪ್ರಿಯವಾಯಿತು. ಕನ್ನಡ, ಆಂಗ್ಲ ಕವಿಗಳು, ಕಾದಂಬರಿಕಾರರು, ರಾಜಕಾರಣಿಗಳು, ತತ್ವವೇತ್ತರು ಮೊದಲಾದವರ ಬಗ್ಗೆ ಮತ್ತು ಅವರ ಗ್ರಂಥಗಳ ಬಗ್ಗೆ, ಆಗಿನ ರಾಜಕೀಯದ ಬಗ್ಗೆ ಈ ಪತ್ರಿಕೆಗಳಲ್ಲಿ ವಿಮರ್ಶಾತ್ಮಕ ಲೇಖನಗಳು ಬರುತ್ತಿದ್ದುದರಿಂದ ವಿದ್ಯಾರ್ಥಿವೃಂದದಲ್ಲಿಯೂ ಪ್ರಚಾರಗೊಂಡಿತು. ಹಿರಿಯರೂ ಓದುತ್ತಿದ್ದರು. ಆದರೂ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಲ್ಲ. ೧೯೨೬ರ ಹೊತ್ತಿಗೆ ಪತ್ರಿಕೆ ನಿಲ್ಲಿಸಬೇಕಾಯಿತು. ಯಾರೂ ಧನಸಹಾಯ ಮಾಡಲು ಮುಂದೆ ಬರಲಿಲ್ಲ. ಡಿ.ವಿ. ಗುಂಡಪ್ಪನವರ ರಾಜಕೀಯ ಮತ್ತು ಪತ್ರಿಕಾ ಧ್ಯೇಯ ಧೋರಣೆ ಆಗೂ ಗೋಪಾಲಕೃಷ್ಣ ಗೋಖಲೆ ಪರಂಪರೆಗೆ ಸೇರಿತ್ತು. ಅವರನ್ನು ತಮ್ಮ ರಾಜಕೀಯ ಗುರುವೆಂದೇ ಇಟ್ಟುಕೊಂಡಿದ್ದರು. ಅಂತಲೆ ಗೋಖಲೆ ಸಾರ್ವಜನಿಕ ಸಂಸ್ಥೆ ಸ್ಥಾಪಿಸಿ ಅದರ ಮುಖಾಂತರ ವಿದ್ವಜ್ಜನರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಿಸಿದರು. ೧೯೧೬ರಲ್ಲಿ 'ಕರ್ನಾಟಕ ಜೀವನ ಮತ್ತು ಅರ್ಥ ಸಾಧಕ ಪತ್ರಿಕೆ' ಎಂಬ ಅರ್ಥಶಾಸ್ತ್ರ ವಿಷಯಗಳಿಗೆ ಮೀಸಲಾಗಿಟ್ಟ ಪತ್ರಿಕೆಯನ್ನು ಆರ್ಥಿಕ ಮುಗ್ಗಟ್ಟಿನಿಂದ ನಿಲ್ಲಿಸಬೇಕಾಯಿತು. ಆದರೂ ಈ ವ್ಯವಸಾಯಕ್ಕೆ ಸಲ್ಲಿಸಿದ ಕಾಣಿಕೆ ಅಮೂಲ್ಯವಾಗಿದೆ. ಅಂತೆಯೇ ಹ.ಕ. ರಾಜಪುರೋಹಿತ ಅವರು ಡಿವಿಜಿಯವರನ್ನು 'ಅಭಿಜಾತ ಪತ್ರಿಕೋದ್ಯಮಿ' ಎಂದು ಕರೆದಿರುವುದು ಅತ್ಯಂತ ಸಮಾಂಜಸವಾಗಿದೆ.

ಅವರ ಅಭಿಪ್ರಾಯದಲ್ಲಿ ಪತ್ರಿಕೋದ್ಯಮಿಗೆ ರಾಜ್ಯಶಾಸ್ತ್ರ, ಕಾಯಿದೆ ಕಾನೂನುಗಳ ಪರಿಚಯ, ಅರ್ಥಶಾಸ್ತ್ರ ಮೊದಲಾದವುಗಳ ಪರಿಚಯವೂ ಇರಬೇಕು. ಪುಸ್ತಕ ವ್ಯಾಸಂಗ ವಂತೂ ಹೆಚ್ಚಿಗೆ ಬೇಕು. ಪ್ರಕಟವಾದ ಹೊಸಹೊಸ ಪುಸ್ತಕಗಳನ್ನು ಪತ್ರಿಕಾಕರ್ತನು ಓದಲೇಬೇಕು. ಆದರೆ ಬರಿ ಓದಿದರೆ ಸಾಲದು ಅದನ್ನು ಅರಗಿಸಿಕೊಳ್ಳಬೇಕು. ಆಯಾ ವಿಷಯಗಳ ನ್ಯಾಯನಿರ್ಣಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ನಿಷ್ಪಕ್ಷಪಾತವಾಗಿರಬೇಕು. ಪತ್ರಿಕಾಚಾಲಕರು ಹಣಕ್ಕಾಗಲಿ ಹೆಸರಿಗೇ ಆಗಲಿ ತಮ್ಮ ಆತ್ಮವನ್ನು ಮಾರಿಕೊಳ್ಳಬಾರದು ಎಂಬುದು ಡಿವಿಜಿಯವರ ಅಮೂಲ್ಯ ಸಲಹೆ.

ಪಾರಿಭಾಷಿಕ ಶಬ್ದಗಳ ಬಳಕೆಯಲ್ಲಿ ಏಕರೂಪತೆಯನ್ನು ಸಾಧಿಸಬೇಕೆಂದು ಅವರು ಒತ್ತಿ ಹೇಳಿದ್ದಾರೆ. ಪತ್ರಿಕೆಗಳ ಭಾಷೆ ಮನಸ್ಸಿಗೆ ಆಕರ್ಷಕವಾಗಿಯೂ ವಿಶದವಾಗಿಯೂ ಶುದ್ಧವಾಗಿಯೂ ಇರಬೇಕು. ನೂತನ ಪದಸಂಯೋಜನೆ ಮಾಡುವುದರಲ್ಲಿ ಅದು ವಿಕಾರವಿಲ್ಲದೆ ಶ್ರಾವ್ಯವಾಗಿರುವಂತೆ ನೋಡಿಕೊಳ್ಳಬೇಕು. ಗ್ರಂಥಭಾಷೆ ಹಾಗೂ ಸಾಮಾನ್ಯ ಭಾಷೆಗೆ ಮಧ್ಯಸ್ಥಗಾರನಂತೆ ಇದ್ದು ಪತ್ರಿಕಾಲೇಖಕರು ಸಾಹಿತ್ಯ ಸೇವೆಯ ಕಡೆಗೆ ಲಕ್ಷ್ಯ ಕೊಡುವದು ಅವಶ್ಯವಾಗಿದೆ- ಎಂಬ ಶ್ರೀ ಡಿ.ವಿ. ಗುಂಡಪ್ಪನವರ ಹಿತನುಡಿಗಳು ಶ್ರೀ ಶಿವಕುಮಾರ ಭೋಜಶೆಟ್ಟರ ಅವರಿಗೆ ಸದಾ ಮಾರ್ಗದರ್ಶಕವಾಗಿರಲಿ ಎಂದು ಆಶಿಸಿ ನಿವೃತ್ತಿಯ ನಂತರದ ಅವರ ಪತ್ರಿಕಾವೃತ್ತಿ ಹೆಚ್ಚು ಫಲದಾಯಕವಾಗಲಿ ಎಂದು ಹಾರೈಸುತ್ತೇನೆ.

('ಸಂತೃಪ್ತಿ' ೨೦೧೩)

ವಯಸ್ಸಿಗೆ ಮೀರಿದ ಸಾಧನೆ

ಶ್ರೀ ಮುರುಗೇಶ ನಿರಾಣಿಯವರನ್ನು ನಾನು ಹತ್ತಿರದಿಂದ ಬಲ್ಲವನಲ್ಲ. ಪ್ರತ್ಯಕ್ಷ ಪರಿಚಯವಂತೂ ದೂರವೇ ಉಳಿಯಿತು. ಆದರೆ ಪತ್ರಿಕೆಗಳಲ್ಲಿ ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಓದಿದ್ದೇನೆ. ಬೇರೆ ಬೇರೆ ಕ್ಷೇತ್ರಗಳಲ್ಲಿರುವ ನನ್ನ ಸ್ನೇಹಿತರು ಅವರ ಸಾಧನೆಗಳ ಬಗ್ಗೆ ಒಳ್ಳೆಯ ಮಾತುಗಳನ್ನಾಡುವುದನ್ನು ಕೇಳಿದ್ದೇನೆ. ಜನಸಾಮಾನ್ಯರು – ಹಾಗೆ ನೋಡಿದರೆ ನಾವು ಭಾವಿಸಿದಷ್ಟು ಸಾಮಾನ್ಯರಲ್ಲ. ಅದರಲ್ಲೂ ರಾಜಕೀಯದಲ್ಲಿರುವ ವ್ಯಕ್ತಿಗಳ ಬಗ್ಗೆ ಅವರು, ಶಿಷ್ಟರೆನಿಸಿಕೊಂಡ ನಮಗಿಂತಲೂ ಹೆಚ್ಚು ತಿಳಿದುಕೊಂಡಿರುತ್ತಾರೆ. ಸಾರ್ವಜನಿಕವಾಗಿಯಲ್ಲದಿದ್ದರೂ ಖಾಸಗಿ ಕೂಟಗಳಲ್ಲಿ ಅಂಥ ವ್ಯಕ್ತಿಗಳ ಲೋಪದೋಷಗಳ ಬಗ್ಗೆ ಆಡಿಕೊಳ್ಳುತ್ತಾರೆ. ಆದರೆ ನನಗೆ ತಿಳಿದುಬಂದಂತೆ ಶ್ರೀ ಮುರುಗೇಶ ನಿರಾಣಿಯವರ ಬಗ್ಗೆ ಮೆಚ್ಚುಗೆಯ ನುಡಿಗಳನ್ನೇ ಹೆಚ್ಚು ಕೇಳಿದ್ದೇನೆಯೆ ಹೊರತು ಅಲ್ಲಸಲ್ಲದ ಮಾತುಗಳನ್ನಲ್ಲ. ಬಹಳ ವರ್ಷಗಳಿಂದ ಪತ್ರಿಕೆಗಳಲ್ಲಿ ಕೆಲಸ ಮಾಡಿ ತಮ್ಮ ವರದಿಗಳಿಂದ ಹಾಗೂ ಲೇಖನಗಳಿಂದ ಹೆಸರು ಪಡೆದಿರುವ ಶ್ರೀ ಶಿವಕುಮಾರ ಭೋಜಶೆಟ್ಟರ ಅವರು ಈಚೆಗೆ ನನ್ನನ್ನು ಭೇಟಿಯಾಗಿ, ಶ್ರೀ ಗವೀಶ ಹಿರೇಮಠರ ಜೊತೆಗೂಡಿ ಶ್ರೀ ಮುರುಗೇಶ ನಿರಾಣಿಯವರ ಗೌರವ ಗ್ರಂಥವನ್ನು ಸಂಪಾದಿಸುತ್ತಿರುವ ವಿಷಯವನ್ನು ತಿಳಿಸಿದಾಗ ಅಚ್ಚರಿಯೊಡನೆ ಸಂತೋಷವೂ ಆಯಿತು.

ಹಾಗೆ ನೋಡಿದರೆ ಶ್ರೀ ನಿರಾಣಿಯವರು ಇನ್ನೂ ಐವತ್ತರೊಳಗಿನ ಉತ್ಸಾಹಿ ತರುಣರು. ಈ ಹಂತದಲ್ಲಿ ಗೌರವ ಗ್ರಂಥಕ್ಕೆ ಭಾಜನರಾಗುವವರು ತೀರ ವಿರಳ. ಆದರೆ ವೇಗದಿಂದ ಓಡುತ್ತಿರುವ ಇಂದಿನ ಜಗತ್ತಿನಲ್ಲಿ ವ್ಯಕ್ತಿಯ ಸಾಧನೆಗಳನ್ನು ನೋಡಿದಾಗ, ನಾಡಿನ ಜನತೆಗೆ ಅವರಿಂದ ಸಂದ ಸೇವೆಯನ್ನು ನೆನೆದಾಗ ವಯಸ್ಸಿಗೂ ಅದಕ್ಕೂ ತಾಳೆ ಹಾಕಿ ನೋಡುವದು

ತರವಲ್ಲವೆಂದೇ ಹೇಳಬಹುದು. ವಯಸ್ಸಿಗೆ ಮೀರಿದ ಯೋಗ್ಯತೆಗೆ ಮತ್ತು ಮಾಡಿದ ಒಳ್ಳೆಯ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹದ ಮಾತುಗಳನ್ನಾಡಿದರೆ ಇನ್ನೂ ಹೆಚ್ಚಿನ ಸಾಧನೆಗೆ ಮಾರ್ಗ ಮಾಡಿಕೊಟ್ಟಂತಾಗುತ್ತದೆ. ಅಲ್ಲದೆ ಪ್ರಸ್ತುತ ಸಂದರ್ಭದಲ್ಲಿ ಶ್ರೀ ಮುರುಗೇಶ ನಿರಾಣಿಯವರ ಯೋಗ್ಯತೆಗೆ ಇದು ತಕ್ಕ ಪುರಸ್ಕಾರವೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ನಿರಾಣಿಯವರು ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಬಳಿಕ ರಾಜ್ಯದ ಕೈಗಾರಿಕಾ ವಲಯಕ್ಕೆ ಹೆಚ್ಚು ಶಕ್ತಿಯನ್ನು ತುಂಬುವ ಕೆಲಸ ನಡೆದು ಅದರ ಚಿತ್ರವೇ ಬದಲಾಗಿರುವುದನ್ನು ಎಲ್ಲರೂ ಕಂಡಿದ್ದಾರೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸುವುದರಲ್ಲಿ ಯಶಸ್ವಿಯಾಗಿ, ಆ ಮೂಲಕ ರಾಜ್ಯಕ್ಕೆ ನಾಲ್ಕು ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಗೆ ಒಡಂಬಡಿಕೆ ಮಾಡಿಕೊಂಡ ಶ್ರೇಯಸ್ಸಿಗೆ ಅವರು ಪಾತ್ರರಾಗಿದ್ದಾರೆ. ಇದರಿಂದ ರಾಜ್ಯದಲ್ಲಿ ಹತ್ತು ಲಕ್ಷ ಉದ್ಯೋಗ ಸೃಷ್ಟಿಯಾಗಲಿರುವುದನ್ನು ಪರಿಗಣಿಸಿದರೆ ರಾಜ್ಯದ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಯ ಕನಸು ನನಸಾಗುವುದರಲ್ಲಿ ಸಂದೇಹವಿಲ್ಲ.

ರಾಜ್ಯದ ರಾಜಧಾನಿ ಬೆಂಗಳೂರಷ್ಟೇ ಬೆಳೆದರೆ ಸಾಲದು. ಅಲ್ಲದೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಅದು ಮಿತಿಮೀರಿ ಬೆಳೆಯುವದು ಕ್ಷೇಮವೂ ಅಲ್ಲ. ರಾಜ್ಯದಲ್ಲಿ ಎರಡನೆಯ ಮತ್ತು ಮೂರನೆಯ ಹಂತದ ನಗರಗಳು ಬೆಳೆಯಬೇಕು. ಇದನ್ನು ಅರ್ಥಮಾಡಿಕೊಂಡ ನಿರಾಣಿಯವರು ರಾಜ್ಯಾದ್ಯಂತ ಲ್ಯಾಂಡ್ ಬ್ಯಾಂಕ್ ಸ್ಥಾಪಿಸಿ ಎಲ್ಲೆಡೆಯೂ ಕೈಗಾರಿಕೆ ಪಸರಿಸುವಂತೆ ಅವರು ಮಾಡಿರುವ ಪ್ರಯತ್ನ ನಿಜಕ್ಕೂ ಪ್ರಶಂಸನೀಯವಾದುದು. ದೇಶ ವಿದೇಶದ ಹೂಡಿಕೆದಾರರು ತಮ್ಮ ಇಚ್ಛೆಗನುಸಾರ ಕರ್ನಾಟಕ ಹೂಡಿಕೆಗೆ ಪ್ರಶಸ್ತ ಸ್ಥಳ ಎಂದು ನಿರ್ಧಾರ ಕೈಗೊಳ್ಳುವುದನ್ನು ಸಾಧ್ಯವಾಗಿಸಿದ್ದರ ಹಿಂದೆ ನಿರಾಣಿಯವರ ಪರಿಶ್ರಮ ಸಾಕಷ್ಟಿರುವುದನ್ನು ಅನೇಕರು ಬಲ್ಲರು. ಶ್ರಮ, ಶ್ರದ್ಧೆ, ಸಾಧನೆಗಳೆಲ್ಲ ಒಂದನ್ನೊಂದು ಹಿಂಬಾಲಿಸಿ ಮತ್ತು ಒಟ್ಟಾಗಿ ಬರುವ ಸಕಾರಾತ್ಮಕ ಅಂಶಗಳು.

ಇಂಥ ವಿಶ್ವಾಸಾರ್ಹ ವ್ಯಕ್ತಿತ್ವ ಒಮ್ಮೆಲೆ ರೂಪುಗೊಳ್ಳುವುದಿಲ್ಲ. ವಿದ್ಯಾರ್ಥಿ ಜೀವನದಿಂದಲೇ ಅವರು ಈ ದಿಸೆಯಲ್ಲಿ ಕನಸು ಕಾಣುತ್ತ ಬಂದವರು, ತಾಂತ್ರಿಕ ಪದವಿಗಾಗಿ ಓದುತ್ತಿರುವಾಗಲೇ ಅವರು ಕೈಗಾರಿಕಾ ಕ್ಷೇತ್ರದ ಬದಲಾವಣೆಯ ಬಗ್ಗೆ ಯೋಚಿಸಿದರು. ನಾಡಿನ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರದ ಬಗ್ಗೆ ಮನವರಿಕೆ ಮಾಡಿಕೊಂಡಿದ್ದರು. ಹುಬ್ಬಳ್ಳಿಯ ಬಿ.ವಿ.ಬಿ. ಕಾಲೇಜು ಮತ್ತು ಪುಣೆಯ ಬಿಜಿನೆಸ್ ಮ್ಯಾನೇಜ್‌ಮೆಂಟ್ ಇವೇ ತಳಹದಿಯಾಗಿ ಕ್ರಮೇಣ ಅವರು ರಾಜಕೀಯವನ್ನು ಪ್ರವೇಶಿಸಿದರು. ಸ್ವತಃ ರೈತ ಮನೆತನದಿಂದ ಬಂದ ನಿರಾಣಿಯವರು ಕೃಷಿಕರಾಗಿ ದುಡಿದವರು, ಕಬ್ಬು ಬೆಳೆದು ಸಕ್ಕರೆ ಕಾರಖಾನೆಗೆ ಹಾಕಿದವರು, ಚಿಕ್ಕ ಕಾರಖಾನೆಯೊಂದನ್ನು ಸ್ಥಾಪಿಸಿ ಕೆಲಸದವರ ಜೊತೆ ಕೆಲಸ ಮಾಡಿದವರು. ಎರಡನೆಯವರಿಗೆ

ಕಷ್ಟಕಾಲದಲ್ಲಿ ನೆರವಾದವರು. ಸಾಮಾನ್ಯವಾಗಿ ಮೃದುಸ್ವಭಾವದ ಅವರು ಛಲಗಾರರು. ಮಿನಿ ಫ್ಯಾಕ್ಟರಿಯನ್ನು ಬೃಹತ್ ಕಾರ್ಖಾನೆಯಾಗಿ ಬೆಳೆಸುವ ಸಂಕಲ್ಪವನ್ನು ಈಡೇರಿಸಿ ಕೊಂಡವರು.

ಸಮಾಜಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರಿಂದ ಚುನಾವಣೆಯಲ್ಲಿ ಸಹಜವಾಗಿ ಎರಡು ಸಲವೂ ಆರಿಸಿ ಬಂದದ್ದಲ್ಲದೆ ಸಚಿವರೂ ಆದರು. ತಮಗೆ ಒಗ್ಗಿದ ಖಾತೆಯನ್ನೇ ಪಡೆದರು. ಇಡೀ ಕ್ಷೇತ್ರದ ಜನರಿಗಾಗಿ ಕೆಲಸ ಮಾಡುವ ಹೃದಯವಂತ, ಸರಳ ಸೌಜನ್ಯದ ಸ್ನೇಹಜೀವಿ ಎನಿಸಿಕೊಂಡರು. ಅಲ್ಪಾವಧಿಯಲ್ಲಿ ಮುಧೋಳದ ನಿರಾಣಿ ಉದ್ಯಮ, ಸ್ವಂತ ಒಡೆತನದ ನಾಲ್ಕು ಸಕ್ಕರೆ ಕಾರಖಾನೆಗಳನ್ನು, ಎರಡು ಸಿಮೆಂಟ್ ಕಾರ್ಖಾನೆಗಳನ್ನು ಕಟ್ಟಿ ದೊಡ್ಡ ಉದ್ದಿಮೆ ಸಮೂಹವಾಗಿ ಬೆಳೆದಿದೆ. ಸಂಸ್ಥೆಯ ಈ ಅಪರೂಪದ ಸಾಧನೆಗೆ ಅವರ ದೂರದೃಷ್ಟಿ, ಸಾಹಸಪ್ರಿಯತೆ ಮತ್ತು ಕಠಿಣ ಪರಿಶ್ರಮಗಳೇ ಕಾರಣವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ರಾಜಕೀಯದಲ್ಲಿ ಹಂತಹಂತವಾಗಿ ಮೇಲೇರುತ್ತ ಬಂದ ಅವರಿಗೆ ಸರ್. ಎಂ. ವಿಶ್ವೇಶ್ವರಯ್ಯ ಔದ್ಯೋಗಿಕ ಸಾಧನಾ ಪ್ರಶಸ್ತಿಯನ್ನೊಳಗೊಂಡು ಅನೇಕ ಪ್ರಶಸ್ತಿಗಳು ಅವರನ್ನರಸಿಕೊಂಡು ಬಂದಿರುವುದರಲ್ಲಿ ಆಶ್ಚರ್ಯವಿಲ್ಲ. ತಮಗೆ ದೊರೆತ ರಾಜಕೀಯ ಶಕ್ತಿಯನ್ನು ಜನಹಿತದ ದೃಷ್ಟಿಯಿಂದ ಅವರು ಸದುಪಯೋಗಪಡಿಸಿಕೊಂಡಿರುವುದು ಕೂಡ ಅಷ್ಟೇ ಮಹತ್ವದ್ದಾಗಿದೆ. ವಿನಯವಿಭೂಷಿತರಾದ ಶ್ರೀ ಮುರುಗೇಶ ನಿರಾಣಿಯವರು ನಾಳೆ ರಾಜಕೀಯದಲ್ಲಿ ಏನೇ ಏರುಪೇರಾದರೂ ತಮ್ಮ ವ್ಯಕ್ತಿತ್ವಕ್ಕೆ ಬಾಧೆ ಬರದಂತೆ ತಮ್ಮ ಕರ್ತವ್ಯ ನಿಷ್ಠೆಯಿಂದ ಅದನ್ನು ನಿಭಾಯಿಸಬಲ್ಲರು. ಉತ್ತರ ಕರ್ನಾಟಕದ ಉತ್ತರೋತ್ತರ ಅಭಿವೃದ್ಧಿ ಇಂಥವರಿಂದ ಸಾಧ್ಯವಾಗಬಹುದೇ ಹೊರತು ಕೇವಲ ಮಾತಾಡುವವರಿಂದಲ್ಲ. ತಮ್ಮ ಎಲ್ಲ ಶಕ್ತಿಯನ್ನೂ ಜನಹಿತಕಾರ್ಯದಲ್ಲಿ ತೊಡಗಿಸಿ ಇನ್ನೂ ಹೆಚ್ಚಿನ ಸಾಧನೆಗೆ ಅವರು ಅಣಿಯಾಗಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

('ವಿನೂತನ' ೨೦೧೪)

ಮಕ್ಕಳ ಅಕ್ಕರೆಯ ಕವಿ ಸತ್ಯಾರ್ಥಿ

ಯಾರನ್ನೆಲ್ಲ ಮಕ್ಕಳೆಂದು ಕರೆಯಬೇಕು? ಎಷ್ಟು ವಯಸ್ಸಿನಿಂದ ಎಷ್ಟು ವಯಸ್ಸಿನವರೆಗೆ? ಅವರಿಗೆ ಕೊಡಬಹುದಾದ ಅಥವಾ ಅವರನ್ನುದ್ದೇಶಿಸಿ ರಚಿಸಬಲ್ಲ ಸಾಹಿತ್ಯದ ರೂಪ ಯಾವುದು? ನಾವು ದೃಷ್ಟಿಯಲ್ಲಿಟ್ಟುಕೊಳ್ಳ ಬಹುದಾದುದೆಂದರೆ ಕಿರಿಯ-ಹಿರಿಯ ಪ್ರಾಥಮಿಕ ಶಾಲೆಗಳ ಮಕ್ಕಳು. ಅವರಿಗಾಗಿ ರಚನೆಗೊಂಡ ಸಾಹಿತ್ಯವನ್ನು ಪಾಶ್ಚಾತ್ಯರು 'ಸಿಶು ಗೀತೆಗಳು' Nursery Rhymes ಎಂದು ಕರೆದರು. ಅದರಲ್ಲಿ ವಿಷಯದ ಬೋಧನೆ ಮುಖ್ಯವಲ್ಲ. ಕಿವಿಗೆ ಹಿತವಾಗಿ ಸಂತೋಷ ಹೆಚ್ಚಿಸುವ ಲಯಬದ್ಧವಾದ ಗುಣ ಮುಖ್ಯ, ಅದು ಅರ್ಥವನ್ನು ಕೊಡಲೇಬೇಕೆಂದಿಲ್ಲ. ಉದಾ: 'ಮುಟ್ಟಾಕ ಬಾರ ಮೂಲಂಗಿ ಜಾಣಿ.' ಇಲ್ಲಿ 'ಮೂಲಂಗಿ'ಗೆ ಯಾವ ಅರ್ಥವೂ ಇಲ್ಲ. ಆದರೆ ಕಿವಿಗೆ ಹಿತವಾಗಿದೆ. ನಾವೆಲ್ಲ ಬಾಲ್ಯದಲ್ಲಿ ಆಟವಾಡುತ್ತಲೇ ಇಂಥ ಅನೇಕ ಹಾಡುಗಳನ್ನು ಹೇಳಿಕೊಳ್ಳುತ್ತಿದ್ದುದು.

ಉಪದೇಶವನ್ನು ಮಾಡಬೇಕೆಂಬ ಹಟ ಮಕ್ಕಳ ಸಾಹಿತಿಗಳಿಗೆ ಇರಬಾರದು. ಅವರಿಗೆ ಸಂತೋಷ ಕೊಡಬಲ್ಲ, ಅವರ ಮನಸ್ಸಿಗೆ ಮುದ ನೀಡಬಲ್ಲ ಯಾವುದೇ ವೈಚಿತ್ರ್ಯ, ಅದ್ಭುತ, ಅಸಂಬದ್ಧಗಳೆಲ್ಲವೂ ಪ್ರಾಸಬದ್ಧವಾಗಿ ಅವರದೇ ಆದ ಭಾಷೆಯಲ್ಲಿ ಆಡುಮಾತಿನಲ್ಲಿ ಮೂಡಿಬರಬೇಕು. ಅವರಿಗೆ ಹಿಗ್ಗನ್ನುಂಟು ಮಾಡಿ ಕುತೂಹಲ ಕೆರಳಿಸಬೇಕು. ಯಾಕೆಂದರೆ, ಮಕ್ಕಳ ಲೋಕ ಹಿರಿಯರ ಲೋಕಕ್ಕಿಂತ ಭಿನ್ನವಾಗಿದೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ 'ತೆಂಕಣ ಗಾಳಿ'ಯ ಪಂಜೆ ಮಂಗೇಶರಾಯ ರಂಥವರ ಮಾರ್ಗದರ್ಶನ ಮತ್ತು ಮಾದರಿ ಪ್ರಾರಂಭದಲ್ಲಿಯೇ ದೊರೆತದ್ದು ಸುದೈವ. ಕವಿಶಿಷ್ಯರೆಂದೇ ಪ್ರಖ್ಯಾತರಾಗಿದ್ದ ಪಂಜೆಯವರು, ಶಾಲಾಮಾಸ್ತರರಾಗಿ, ಶಾಲಾ ಪರೀಕ್ಷಕರಾಗಿ ಮಕ್ಕಳ ಒಡನಾಟದಲ್ಲಿ ಗಳಿಸಿದ

ಅನುಭವವೆಲ್ಲವನ್ನೂ ಮಕ್ಕಳಿಗಾಗಿಯೇ ಧಾರೆಯೆರೆದರು. ಕನ್ನಡದಲ್ಲಿ ಮೊದಲು 'ಬಾಲ ಸಾಹಿತ್ಯ ಮಂಡಲ'ದ ಮೂಲಕ ಹಲವಾರು ಕೃತಿಗಳನ್ನು ಪ್ರಕಟಿಸಿ ಬಾಲಸಾಹಿತ್ಯಕ್ಕೆ ಒಂದು ಅಗತ್ಯವಾದ ಮಹತ್ವದ ಸ್ಥಾನವನ್ನು ಕಲ್ಪಿಸಿಕೊಟ್ಟರು.

ಈ ಬಗೆಯ ಸಾಹಿತ್ಯ ರಚನೆ ಮಕ್ಕಳ ಮನಸ್ಸಿನಲ್ಲಿರಬಹುದಾದ ಕಾಲ್ಪನಿಕ ಪ್ರಪಂಚವನ್ನು ಹೆಚ್ಚು ಕ್ರಿಯಾಶೀಲವಾಗಿ ಮಾಡಲು, ಸೃಜನಶೀಲಗೊಳಿಸಲು ಸಹಾಯ ಮಾಡುವದು. ಅವರಲ್ಲಿರುವ ಸಾಹಸ ಪ್ರವೃತ್ತಿಗೆ ಒತ್ತು ನೀಡುವದು, ಅವರ ವೈಜ್ಞಾನಿಕ ಚಿಂತನೆಯನ್ನು, ಕುತೂಹಲವನ್ನು ವೃದ್ಧಿಗೊಳಿಸುವದು, ಅವರನ್ನು ಲಿಂಗಭೇದವಿಲ್ಲದೆ ಬೆಳೆಯುವಂತೆ ನೋಡಿಕೊಳ್ಳುವದು, ಹಾಗೆಯೇ ಅದು ಪಶು, ಪಕ್ಷಿ, ಪ್ರಾಣಿ, ಪ್ರಕೃತಿ, ಪರಿಸರ–ಎಲ್ಲದರ ಬಗೆಗೂ ಪ್ರೀತಿಯನ್ನು ಬೆಳೆಸುವದು.

ಮಕ್ಕಳ ಸಾಹಿತ್ಯವಿಲ್ಲದೆ ಯಾವ ದೇಶದ ಸಾಹಿತ್ಯವೂ ಪರಿಪೂರ್ಣವೆನಿಸದು. ಕನ್ನಡ ನವೋದಯ ಕಾವ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ಪ್ರಾಶಸ್ತ್ಯ ನೀಡಿದ ಹಿರಿಯರನ್ನು ಎಂದಿಗೂ ಮರೆಯುವಂತಿಲ್ಲ. ಮಕ್ಕಳಿಗಾಗಿ ಬರೆಯುವದು ತಮ್ಮ ಅಂತಸ್ತಿಗೆ ಕುಂದು ಎಂದು ಭಾವಿಸದೆ ಅವರು ಸಮಾನ ಶ್ರದ್ಧೆಯಿಂದ ಈ ಕಾರ್ಯಕ್ಕೆ ತೊಡಗಿ ಕನ್ನಡ ಸಂಸ್ಕೃತಿಯ ವಾತಾವರಣವನ್ನು ಜೀವಂತವಾಗಿಟ್ಟರು. ಆದರೆ ಮುಂದೆ ನವ್ಯ ಸಾಹಿತಿಗಳ ಅನಾಸಕ್ತಿಯಿಂದ ಇಂಥ ಒಂದು ಆರೋಗ್ಯಕರ ಸಂಪ್ರದಾಯ ಮುಂದುವರಿಯದೆ ಮಕ್ಕಳ ಕಲ್ಪನೆ, ಕನಸುಗಳ ಲೋಕ ಬಣಗುಟ್ಟತೊಡಗಿತು. ಈ ಅವಧಿಯಲ್ಲಿ ಕೆಲಮಟ್ಟಿಗಾದರೂ ಅದನ್ನು ಹರಿಗಡಿಯದಂತೆ ನೋಡಿಕೊಂಡ ಶ್ರೇಯಸ್ಸು ನಾಡಿನ ವಿವಿಧ ಭಾಗದ ಪ್ರಾಥಮಿಕ ಶಾಲಾ ಶಿಕ್ಷಕ–ಕವಿಗಳನೇಕರಿಗೆ ಸಲ್ಲಬೇಕು. ಇವರ ಕೈಯಲ್ಲಿ ಶಿಶು ಸಾಹಿತ್ಯ ಮತ್ತೆ ಹೊಸ ಗರಿ ಮೂಡಿಸಿಕೊಂಡು ಹೊಸ ಹಾಡು ಹೊಮ್ಮಿಸತೊಡಗಿದ್ದು ಸ್ವಾಗತಾರ್ಹ. ಅಲ್ಲದೆ ಸಮಕಾಲೀನ ಗಣ್ಯ ಕವಿಗಳಲ್ಲಿ ಕೆಲವರು ಭಾವ, ಭಾಷೆ, ರೀತಿಗಳಲ್ಲಿ ಹೊಸತನಕ್ಕೆ ಸ್ಪಂದಿಸಿ ಮಕ್ಕಳ ಕವಿತೆ, ಕಥೆ, ಕಾದಂಬರಿ, ನಾಟಕಗಳನ್ನು ರಚಿಸಿರುವುದು ಪ್ರಸ್ತುತ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಪರಂಪರೆಯನ್ನು ಮುಂದುವರಿಸಿ ಜನಪ್ರಿಯರಾದವರಲ್ಲಿ ಎಪ್ಪತ್ತೈದರ ಹೊಸ್ತಿಲಲ್ಲಿರುವ ಚೆನ್ನಬಸಪ್ಪ ಹೊಸಮನಿ 'ಸತ್ಯಾರ್ಥಿ'ಯವರೂ ಒಬ್ಬರು. ಹಲವಾರು ಪ್ರಶಸ್ತಿಗಳಿಗೆ ಭಾಜನರಾದ ಅವರು ಮಕ್ಕಳ ಸಾಹಿತ್ಯ ಸಂಘಟನೆ, ಪ್ರಚಾರ, ಪ್ರಸಾರದಲ್ಲಿಯೂ ಗಣನೀಯ ಸೇವೆ ಸಲ್ಲಿಸಿದ್ದಾರೆ. ಮಕ್ಕಳ ಮನೋಧರ್ಮವನ್ನು ಚೆನ್ನಾಗಿ ಗ್ರಹಿಸಿರುವ ಅವರು ಅಷ್ಟೇ ಲವಲವಿಕೆಯಿಂದ ಅದನ್ನು ಅಭಿವ್ಯಕ್ತಿಗೊಳಿಸಬಲ್ಲರು. ಒಂದೆರಡು ನುಡಿಗಳನ್ನು ಇಲ್ಲಿ ಉದಾಹರಿಸಬಹುದು.

'ಇಂದು ನಮ್ಮಾ ತಂದೆಯೊಡನೆ
ಅತಿಥಿಯೊಬ್ಬ ಬಂದನು.
ಟಿ.ವಿ. ಎಂದು ಅವನ ಹೆಸರು
ಡೀವಿಯಿಂದ ಬಂದನು (ಹೊಸ ಅತಿಥಿ)

ಅಪ್ಪನ ಅಪ್ಪಾ ಮುಪ್ಪಿನ ಮುದುಕ
ದಪ್ಪನೆ ಮೀಸೆಯ ನಮ್ಮಜ್ಜ
ಬೆಳ್ಳಿಯ ಕೂದಲ ಹಳ್ಳಿಯ ಹಿರಿಯ
ಒಳ್ಳೇ ಮಾತಿನ ನಮ್ಮಜ್ಜ (ನಮ್ಮಜ್ಜ)

ನಮ್ಮ ಮನೆಯೆ ನಮ್ಮ ದೇಶ
ಅದುವೆ ಪುಟ್ಟ ಭಾರತ.
ತಂದೆ-ತಾಯಿ ಬಂಧು ಬಳಗ
ಒಟ್ಟಿಗಿರುವ ಭಾರತ (ಪುಟ್ಟ ಭಾರತ)

'ತಿರುಗುವ ತಿಪ್ಪ', 'ನಾಯಿ ಮತ್ತು ಬೆಕ್ಕು', 'ಕತ್ತೆಯ ಕನಸು', 'ಅನ್ನದಾತ', 'ಪುಟ್ಟಿಯ ಹೊಸಮರ', 'ಯಾಕಮ್ಮ ನಿನಗೆ ಬಿಡುವಿಲ್ಲ?', 'ನಾನೂ ಗಾಂಧಿಯಾಗುವೆ', 'ಪುಟ್ಟ ಭಾರತ' ಇವೇ ಮೊದಲಾದ ಕವಿತೆಗಳು ಮಕ್ಕಳ ಕಾವ್ಯಪ್ರಪಂಚಕ್ಕೆ ವಿಶೇಷ ಕೊಡುಗೆಯಾಗಿ ನಿಲ್ಲಬಲ್ಲವು. ಮಕ್ಕಳ ಮಾನಸಿಕ ಉಲ್ಲಾಸಕ್ಕೆ ನೆರವಾಗುವದೇ ಈ ಕವಿತೆಗಳ ಮುಖ್ಯ ಗುಣವಾಗಿರುವುದರಿಂದ ಮಕ್ಕಳು ಈ ಪದ್ಯಗಳು ತಮ್ಮವೆಂದೇ ಭಾವಿಸುವುದರಲ್ಲಿ ಸಂದೇಹವಿಲ್ಲ. ದಕ್ಷ ಶಿಕ್ಷಕರಾಗಿ, ಮಕ್ಕಳ ಅಕ್ಕರೆಯ ಕವಿಯಾಗಿ, ಸಮರ್ಥ ಸಂಘಟಕರಾಗಿ ಜನಪ್ರಿಯರಾದ 'ಸತ್ಯಾರ್ಥಿ'ಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಶುಭ ಕೋರುತ್ತೇನೆ.

('ಸತ್ಯಾರ್ಥಿ' ೨೦೧೩)

ಒಂದು ಅಪೂರ್ವ ವೈಜ್ಞಾನಿಕ ಪ್ರತಿಭೆ

ಪ್ರತಿಭಾಶಾಲಿ ವಿಜ್ಞಾನ ಪ್ರಾಧ್ಯಾಪಕರೆಂದು ವಿದ್ಯಾರ್ಥಿ ವೃಂದದಲ್ಲಿ ಹೆಸರಾಗಿದ್ದ ಪ್ರೊ. ರಾಜಶೇಖರ ಭೂಸನೂರಮಠ ಅವರು ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ನಿವೃತ್ತರಾದರು. ಬೋಧನೆಯಿಂದ ಜನಪ್ರಿಯರಾದಂತೆಯೇ ಲೇಖಕರಾಗಿ, ಕನ್ನಡದಲ್ಲಿ ವೈಜ್ಞಾನಿಕ ಕಥಾಸಾಹಿತ್ಯದ ಜನಕರೆಂದೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರು. ವಚನಸಾಹಿತ್ಯದ ಆಳವಾದ ಅಧ್ಯಯನದಿಂದ ತಮ್ಮ 'ಶೂನ್ಯ ಸಂಪಾದನೆಯ ಪರಾಮರ್ಶೆ' ಗ್ರಂಥಕ್ಕೆ ಪಂಪ ಪ್ರಶಸ್ತಿ ಪಡೆದು, ಅಕ್ಕಮಹಾದೇವಿಯ ಜೀವನ ವನ್ನಾಧರಿಸಿದ 'ಭವ್ಯಮಾನವ'ದಂಥ ದೇಶೀ ಮಹಾಕಾವ್ಯದ ಕೊಡುಗೆಯನ್ನು ಕನ್ನಡಕ್ಕೆ ನೀಡಿದ ಪ್ರೊ. ಸಂ.ಶಿ. ಭೂಸನೂರಮಠ ಅವರ ಜ್ಯೇಷ್ಠಪುತ್ರರಾದ ರಾಜಶೇಖರ ಸಹಜವಾಗಿಯೇ ತಂದೆಯ ಪ್ರಭಾವಕ್ಕೆ ಒಳಗಾಗಿದ್ದರು. ಬಾಲ್ಯದಲ್ಲಿಯೇ ಮಗನ ಪ್ರತಿಭೆಯನ್ನು ಗುರುತಿಸಿದ ಅವರು ಮುಂಬಯಿ ಮತ್ತು ಬನಾರಸ ಹಿಂದೂ ವಿಶ್ವವಿದ್ಯಾಲಯಗಳಲ್ಲಿ ಓದುವಂತೆ ಪ್ರೇರಣೆ ನೀಡಿದ್ದರಿಂದ ಇವರು ತಮ್ಮ ಜ್ಞಾನಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ಹೆಚ್ಚು ಅನುಕೂಲವಾಯಿತು.

೧೯೫೫ರಿಂದಲೇ ಬರವಣಿಗೆಯನ್ನು ಪ್ರಾರಂಭಿಸಿದ ರಾಜಶೇಖರ ಅವರು ವಿವಿಧ ಮಾಧ್ಯಮಗಳ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸಲು ಅಣಿಯಾದರು. ಶಾಲೆ-ಕಾಲೇಜುಗಳ ಮಟ್ಟದಲ್ಲಿ ಭೌತ ವಿಜ್ಞಾನದ ಅನೇಕ ಪುಸ್ತಕಗಳನ್ನು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಬರೆದು, ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಹಲವಾರು ದಿಸೆಗಳಲ್ಲಿ ಇವರ ಬರವಣಿಗೆ. ಚಟುವಟಿಕೆಗಳು ವಿಸ್ತರಿಸಿದ್ದರೂ ಕನ್ನಡದಲ್ಲಿ ವೈಜ್ಞಾನಿಕ ಕಥಾಸಾಹಿತ್ಯಕ್ಕೆ (Science fiction) ಇವರ ಕೊಡುಗೆ ಅಪರೂಪದ್ದು. ಇದನ್ನು ಓದುಗರೂ ವಿಮರ್ಶಕರೂ ಆಗಲೇ ಗುರುತಿಸಿ ಗೌರವಿಸಿದ್ದಾರೆ.

ಒಂದು ಕಾಲಕ್ಕೆ ವೈಜ್ಞಾನಿಕ ವಿಷಯಗಳ ಬಗ್ಗೆ ಲೇಖನ ಬರೆಯುವುದಾಗಲಿ, ಗ್ರಂಥ ರಚನೆ ಮಾಡುವುದಾಗಲಿ ಕಷ್ಟಸಾಧ್ಯ ಎನ್ನುವಂತಿತ್ತು. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಪ್ರಸಾರೋಪನ್ಯಾಸ ಗ್ರಂಥ ಮಾಲೆಯಲ್ಲಿ ವಿಜ್ಞಾನಕ್ಕೆ ಸಂಬಂಧ ಪಟ್ಟಂತೆ ಹಲವಾರು ಕಿರುಹೊತ್ತಿಗೆಗಳು ಪ್ರಕಟವಾಗಿ ಲೇಖಕರಿಗೆ ಹೆಚ್ಚಿನ ಧೈರ್ಯವನ್ನು ತಂದುಕೊಟ್ಟವು. ಮಾಧ್ಯಮಿಕ ಶಾಲೆಗಳಲ್ಲಿ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವ ವ್ಯವಸ್ಥೆಯುಂಟಾಗಿ ಆ ಬಗ್ಗೆ ಪಠ್ಯಪುಸ್ತಕಗಳು ಬರತೊಡಗಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಅನುಕೂಲವಾದ ವಾತಾವರಣ ಸೃಷ್ಟಿಯಾಯಿತು. ಹಾಗೆಯೇ ಜನಪ್ರಿಯ ವಿಜ್ಞಾನಕ್ಕೆ ಓದುಗರ ಆಸಕ್ತಿ ಹಾಗೂ ಉತ್ಸಾಹ ಕಂಡುಬಂದಿತು. ಖಾಸಗಿ ಪ್ರಕಾಶಕರು ಕೂಡ ಈ ದಿಸೆಯಲ್ಲಿ ಹಲವಾರು ಗ್ರಂಥಗಳನ್ನು ಪ್ರಕಟಿಸಿ ಓದುಗರ ಅಭಿರುಚಿಗೆ ಕಾರಣರಾದರು. ಶಿವರಾಮ ಕಾರಂತರ 'ವಿಜ್ಞಾನ ಪ್ರಪಂಚ'ದ ಸಂಪುಟಗಳು ಹೊಸ ಬರಹಗಾರರಿಗೆ ಈ ದಿಸೆಯಲ್ಲಿ ಸ್ಫೂರ್ತಿಯ ಕೇಂದ್ರವಾಗಿ ಪರಿಣಮಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಕೆಲವು ಪತ್ರಿಕೆಗಳೂ ವೈಜ್ಞಾನಿಕ ಲೇಖನಗಳನ್ನು ಆಗಾಗ ಪ್ರಕಟಿಸುತ್ತ ಬಂದಿವೆ. 'ಸುಧಾ' ವಾರ ಪತ್ರಿಕೆಯ 'ಚಿತ್ರಮಯ ಜ್ಞಾನಕೋಶ' ವಿಭಾಗದಲ್ಲಿ ಬಂದ ಜನಪ್ರಿಯ ವಿಜ್ಞಾನ ವಾಙ್ಮಯ ಕನ್ನಡದ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. 'ಜ್ಞಾನಗಂಗೋತ್ರಿ'ಯ (೧೯೭೦-೭೪) ಎರಡು, ಮೂರು ಮತ್ತು ನಾಲ್ಕನೆಯ ಸಂಪುಟಗಳು ವಿಜ್ಞಾನ ವಿಷಯಗಳಿಗೆ ಮೀಸಲಾಗಿದ್ದು. ('ಜೀವಜಗತ್ತು' 'ಭೌತಜಗತ್ತು' ಮತ್ತು 'ಯಂತ್ರ ಜಗತ್ತು') ಪರಿಣತರಾದವರು ಮಕ್ಕಳಿಗೂ ತಿಳಿಯುವಂತೆ ಕನ್ನಡದಲ್ಲಿ ಬರೆಯಲು ಸಾಧ್ಯ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ವಿಶ್ವಕೋಶ' ಈ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ಒಂದು ಸೂತ್ರ ಚೌಕಟ್ಟನ್ನು ಒದಗಿಸಿಕೊಡಬಹುದು. ಕರ್ನಾಟಕ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಅವಶ್ಯವಾದ ಕೆಲವು ವಿಜ್ಞಾನ ಪಠ್ಯಪುಸ್ತಕಗಳನ್ನು ಹಾಗೂ ಆಕರ ಗ್ರಂಥಗಳನ್ನು ಪ್ರಕಟಿಸಿವೆ. ಇದರ ಜೊತೆಗೇ ಕರ್ನಾಟಕ ವಿಶ್ವವಿದ್ಯಾಲಯದ 'ವಿಜ್ಞಾನ ಲೇಖನ ಕಮ್ಮಟ'ದ ಸಂಪುಟಗಳನ್ನು ಮರೆಯುವಂತಿಲ್ಲ.

ಪ್ರೊ. ರಾಜಶೇಖರ ಭೂಸನೂರಮಠರ ವೈಜ್ಞಾನಿಕ ಕಥೆಗಳು 'ಸುಧಾ' ಮತ್ತು 'ಮಯೂರ' ಪತ್ರಿಕೆಗಳಲ್ಲಿ ಪ್ರಕಟವಾದಾಗ ಓದುಗರಲ್ಲಿ ಹೊಸ ಸಂಚಲನವನ್ನೇ ಉಂಟು ಮಾಡಿದವು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರೋಪನ್ಯಾಸ ಶಿಬಿರದಲ್ಲಿ ಅವರೊಮ್ಮೆ ಭಾಗವಹಿಸಿದಾಗ ಅವರ ಬರವಣಿಗೆಯ ಬಗ್ಗೆ ನನ್ನ ಮೆಚ್ಚುಗೆಯನ್ನು ಸೂಚಿಸಿ, 'ಕೇವಲ ಪತ್ರಿಕೆಗಳಲ್ಲಿ ಇವು ಪ್ರಕಟಗೊಂಡರೆ ಸಾಲದು, ಅವುಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಕೊಟ್ಟರೆ ಇನ್ನೂ ಹೆಚ್ಚು ಉಪಯುಕ್ತ' ಎಂದಿದ್ದೆ. ಅದು ಅವರ ಮನಸ್ಸಿಗೆ ಹಿಡಿಸಿತು. ೧೯೭೫ರಿಂದಲೇ ಅವರ ವೈಜ್ಞಾನಿಕ ಕಥೆ, ಕಾದಂಬರಿಗಳು ಸಂಕಲನ ರೂಪದಲ್ಲಿ ಬರತೊಡಗಿದವು.

ಮೈಸೂರು ವಿಶ್ವವಿದ್ಯಾಲಯ 'ವಿಜ್ಞಾನ ಕರ್ನಾಟಕ' ತ್ರೈಮಾಸಿಕವನ್ನು ೧೯೬೮ರಲ್ಲಿ ಪ್ರಾರಂಭಿಸಿತು. ಕರ್ನಾಟಕ ವಿಶ್ವವಿದ್ಯಾಲಯ ಸಾಹಿತ್ಯ ಮತ್ತು ಸಂಶೋಧನೆಗೆ ಮೀಸಲಾದ

'ಕರ್ನಾಟಕ ಭಾರತಿ' ತ್ರೈಮಾಸಿಕವನ್ನು ಪ್ರಾರಂಭಿಸಿ, ಅದು ಸ್ಥಿರವಾದ ನೆಲೆಯನ್ನು ಕಂಡುಕೊಂಡ ಮೇಲೆ 'ವಿಜ್ಞಾನ ಭಾರತಿ' ಪತ್ರಿಕೆಯನ್ನು ಪ್ರಕಟಿಸುವ ಆಲೋಚನೆಯಲ್ಲಿದ್ದಾಗ ಪ್ರೊ. ರಾಜಶೇಖರ ಭೂಸನೂರಮಠರು ಅದರ ಸ್ಥಾಪಕ ಸಂಪಾದಕರಾಗಿ ನೆರವಿಗೆ ನಿಂತು ಅದರ ಯಶಸ್ಸಿಗೆ ಕಾರಣರಾದರು (೧೯೭೩). ಆಗ ಪ್ರಸಾರಾಂಗದ ನಿರ್ದೇಶಕನಾಗಿದ್ದ ನನಗೆ ವೈಜ್ಞಾನಿಕ ಲೇಖಕರ ಬಳಗ ಬೆಳೆಯುತ್ತಿದೆ ಎನಿಸಿತು. ವೈಜ್ಞಾನಿಕ ಕಥೆ, ಕಾದಂಬರಿಗಳನ್ನು ಬರೆಯುವುದು ಅಷ್ಟು ಸುಲಭವಲ್ಲ. ನಾವಿರುವ ಪ್ರಪಂಚಕ್ಕಿಂತ ಭಿನ್ನವಾದ ಸಾಮಾಜಿಕ ಅಥವಾ ಭೌತಿಕ ಪ್ರಪಂಚದ ಸೃಷ್ಟಿ ಮಾಡಿಕೊಳ್ಳ ಬೇಕಾಗುತ್ತದೆ. ಅದಕ್ಕೆ ವಿಜ್ಞಾನವನ್ನು ವಿವಿಧ ಮುಖದಲ್ಲಿ ಅರಗಿಸಿಕೊಂಡ ವಿಶಿಷ್ಟ ಕಲ್ಪನಾ ಶಕ್ತಿ ಬೇಕಾಗುತ್ತದೆ. ಅದು ನಮ್ಮದಲ್ಲದ ಬೇರೊಂದು ಪ್ರಪಂಚದ ಪರಿಕಲ್ಪನೆ. ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಹಲವಾರು ಸಂಶೋಧನೆಗಳ ಅಳವಡಿಕೆಯಿಂದ ಆವಿಷ್ಕಾರದಿಂದ ಅನುಭವಿಸಬಹುದಾದ ದುರಂತಗಳು ಅಥವಾ ಪ್ರಯೋಜನಗಳನ್ನು ಕಥೆಯ ರೂಪದಲ್ಲಿ ತರಬಲ್ಲ ಎಲ್ಲ ಸೃಜನಾತ್ಮಕ ಕೃತಿಗಳು ಕೂಡ ವೈಜ್ಞಾನಿಕ ಕತೆಗಳೆ. ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಕತೆಗಳ ಬರಹಗಾರರಲ್ಲಿ ಖ್ಯಾತರಾದ ಐಸಾಕ್ ಅಸಿಮೋವ್‌ರ ಮೇಲ್ಕಾಣಿಸಿದ ವಿಚಾರಗಳು ರಾಜಶೇಖರ ಭೂಸನೂರಮಠರ ಅನೇಕ ಕತೆ, ಕಾದಂಬರಿಗಳು ಈ ಜಾಡಿಗೆ ಸೇರಿದವೆಂದು ಡಾ. ಕೆ.ಎನ್. ಗಣೇಶಯ್ಯ ಅವರು ಅಭಿಪ್ರಾಯಪಡುತ್ತಾರೆ. ಅವರು ಮುಂದುವರೆದು "ವಿಜ್ಞಾನದ ಆವಿಷ್ಕಾರದ ಕತೆಗಳು ಕೂಡ ವೈಜ್ಞಾನಿಕ ಕತೆಗಳೆ. ಕನ್ನಡದಲ್ಲಿ ಇಂತಹ ಅಭೂತಪೂರ್ವ ಕತೆಗಳನ್ನು ರಚಿಸಿದ ರಾಜಶೇಖರ ಭೂಸನೂರಮಠ ಅವರ 'ಶುಕ್ರಗ್ರಹದ ಸಾಹಸಿ ಝಿಯಾನ್' ಹಾಗೂ ಇತರ ಕತೆಗಳು ಕೇವಲ fantasy ಎನಿಸಿಕೊಳ್ಳದೆ ಕನ್ನಡದ ವೈಜ್ಞಾನಿಕ ಕಥಾಸಾಹಿತ್ಯಕ್ಕೆ ದೊರೆತ ಅಪೂರ್ವ ಕೊಡುಗೆಗಳು. ಅವು ಎಚ್.ಜಿ. ವೆಲ್ಸ್, ಆರ್ಥರ್ ಕ್ಲಾರ್ಕ್, ಐಸಾಕ್ ಅಸಿಮೋವ್, ಕಾರ್ಲ್‌ಸಹಾನ್ ಅಂತಹವರ ಪ್ರಸಿದ್ಧ ಕತೆಗಳ ರೋಚಕತೆಯನ್ನು ವೈಜ್ಞಾನಿಕ ವಿಸ್ಮಯಗಳನ್ನು ಕನ್ನಡದಲ್ಲಿ ಪ್ರತಿಬಿಂಬಿಸುತ್ತ ಒಂದು ಇಡೀ ತಲೆಮಾರಿನ ಓದುಗರನ್ನು ಬೆರಗುಗೊಳಿಸಿದ್ದವು– ಇವರಿಗೂ ಅವು ಬೆರಗು ಮೂಡಿಸುವ ಕತೆಗಳಾಗಿ ಉಳಿದಿವೆ" ಎಂದಿರುವುದು, ಕನ್ನಡದ ವೈಜ್ಞಾನಿಕ ಕಥಾಸಾಹಿತ್ಯ ಕ್ಷೇತ್ರದಲ್ಲಿ ಭೂಸನೂರಮಠರಿಗಿರುವ ವಿಶಿಷ್ಟ ಸ್ಥಾನವನ್ನು ಸೂಚಿಸುತ್ತದೆ. ಅವು ಭವಿಷ್ಯತ್ತಿನ ವೈಜ್ಞಾನಿಕ ಸಾಧ್ಯತೆಗಳನ್ನು ಕೂಡ ತೆರೆದಿಡುವ ಕತೆಗಳಾಗಿವೆ.

ಬಿ.ಜಿ.ಎಲ್. ಸ್ವಾಮಿಯವರ 'ಹಸಿರು ಹೊನ್ನು' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಅತ್ಯುತ್ತಮ ಕೃತಿಯಾಗಿದೆ. ಆದರೂ ಅದನ್ನು ವೈಜ್ಞಾನಿಕ ಕತೆ ಎನ್ನುವುದಕ್ಕಿಂತ ವಿಜ್ಞಾನ ಸಾಹಿತ್ಯ ಎನ್ನುವುದೇ ಸೂಕ್ತ. ಹಾಗೆಯೇ ತೇಜಸ್ವಿಯವರ 'ಕರ್ವಾಲೊ' ಕಾದಂಬರಿ ಸಾಹಿತ್ಯ ಮತ್ತು ವಿಜ್ಞಾನ ಸಾಹಿತ್ಯದ ಅಂತರವನ್ನು ಅಳಿಸಿ ಹಾಕಿರುವುದನ್ನು ಕಾಣುತ್ತೇವೆ.

ಭಾರತೀಯ ಭಾಷೆಗಳಲ್ಲಿ ವೈಜ್ಞಾನಿಕ ಕಥಾಸಾಹಿತ್ಯದ ಕೊರತೆಯಿರುವಾಗ ಈ ಪ್ರಕಾರದ ಸಾಹಿತ್ಯವನ್ನು ಅಧಿಕೃತವಾಗಿ ಪ್ರಾರಂಭಿಸಿದ ಶ್ರೇಯಸ್ಸು ಖಂಡಿತವಾಗಿಯೂ

ಪ್ರೊ. ರಾಜಶೇಖರ ಭೂಸನೂರಮಠರಿಗೆ ಸಲ್ಲುತ್ತದೆ. ಅವರು ವೈಜ್ಞಾನಿಕ ಕಥಾ ಸಾಹಿತಿಗಳ ಸಂಘದ ಉಪಾಧ್ಯಕ್ಷರು ಆಗಿರುವುದು ಯಥೋಚಿತವಾಗಿದೆ. ಇವರ ಕೆಲವು ಕಥೆಗಳು ಇಂಗ್ಲಿಷ್, ಹಿಂದೀ, ಮರಾಠಿ, ತಮಿಳು ಮತ್ತು ಪಂಜಾಬಿ ಭಾಷೆಗಳಿಗೂ ಅನುವಾದ ಗೊಂಡಿರುವುದು ಅವುಗಳ ಅನನ್ಯತೆಯನ್ನು ತೋರಿಸುತ್ತದೆ. ಮಕ್ಕಳಿಗಾಗಿಯೂ ಅನೇಕ ವೈಜ್ಞಾನಿಕ ಕಥೆ, ಕಾದಂಬರಿ, ಚಿತ್ರಕಥೆಗಳನ್ನು (ಕಾಮಿಕ್ಸ್) ಇವರು ಬರೆದಿರುವುದು ಒಂದು ವಿಶೇಷವೆಂದೇ ಹೇಳಬಹುದು. ಇವತ್ತಿನ ವೈಜ್ಞಾನಿಕ ಕಲ್ಪಿತ ಕತೆಗಳು ನಾಳಿನ ಸತ್ಯಸಂಗತಿಗಳು ಎಂದು ಹೇಳುವುದಕ್ಕೆ ಭೂಸನೂರಮಠರು ಹಿಂಜರಿಯುವುದಿಲ್ಲ. ಭೂಸನೂರಮಠರ ಕೆಲವಾದರೂ ಕಥಾಸಂಕಲನ, ಕಾದಂಬರಿಗಳನ್ನು ಉಲ್ಲೇಖಿಸುವುದು ಅಗತ್ಯವಾಗಿದೆ. ಯಾಕೆಂದರೆ ಅವುಗಳ ಶೀರ್ಷಿಕೆಗಳೇ ಅಷ್ಟೊಂದು ಆಕರ್ಷಕವಾಗಿವೆ. 'ಮಾಯಾ' ವೈಜ್ಞಾನಿಕ ಪತ್ತೇದಾರಿ ಕಾದಂಬರಿಯಾದರೆ, 'ಕಿರಣಾ', 'ಟಿಚೀರಮಾ', 'ಸಿಗ್ನಿಸಂಗೀತ', 'ಮಂಗಳ' ಮೊದಲಾದವು ವೈಜ್ಞಾನಿಕ ಕಥಾ ಸಂಗ್ರಹಗಳಾಗಿವೆ. ೧೯೭೭ರಲ್ಲಿ ಮೊದಲಿಗೆ ಪ್ರಕಟಗೊಂಡ ಇವೆಲ್ಲವೂ ೨೦೧೧ರಲ್ಲಿ ಮರುಮುದ್ರಣಗೊಂಡಿವೆ. ವೈಜ್ಞಾನಿಕ ಸಾಹಸ ಕಾದಂಬರಿ 'ನೌಕಾಘಾತ'ವನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ನಾಟಕ ಹಾಗೂ ಬಾನುಲಿ ನಾಟಕ ಪ್ರಕಾರವನ್ನು ವೈಜ್ಞಾನಿಕವಾಗಿ ಬಳಸಿಕೊಂಡವರಲ್ಲಿ ಭೂಸನೂರಮಠರೇ ಪ್ರಥಮರು. "ಓಂಕಾರ" ನಾಟಕದ ಹಿನ್ನೆಲೆ ತುಂಬ ಕುತೂಹಲಕಾರಿಯಾಗಿದೆ. ಅವರೇ ಹೇಳುವಂತೆ "ನಮ್ಮ ವಿಶ್ವದಲ್ಲಿ ಸೂರ್ಯನಂಥ ಎಷ್ಟೋ ತಾರೆಗಳುಂಟು. ಕೆಲವು ತಾರೆಗಳ ಸುತ್ತ ಸೌರವ್ಯೂಹದಂಥ ಗ್ರಹಮಾಲೆಗಳುಂಟು. ಅವುಗಳಲ್ಲಿ ಹಲವು ಗ್ರಹಗಳ ಮೇಲೆ ಜೀವವಿಕಾಸವಾಗಿತ್ತು/ವಾಗಿರಬೇಕು. ಇಂಥ ಜೀವಾಧಾರೀ ಗ್ರಹಗಳಲ್ಲಿ ಕೆಲವಾದರೂ ಲೋಕಗಳಲ್ಲಿ ಬುದ್ಧಿಜೀವಿಗಳ ವಿಕಾಸವೂ ಆಗಿತ್ತು/ಆಗಿರಬೇಕು. ಓಂಕಾರ ಅಂಥ ವಿಶೇಷ ಲೋಕ. ನಮ್ಮ ಪೃಥ್ವಿಯ ಮೇಲಿನಂತೆ ಅಲ್ಲಿ ಮನುಷ್ಯನನ್ನು ಹೋಲುವ ಓಂಕಾರಿ ಗಳಿದ್ದಾರೆ. ಅವರ ಕಥೆಯೇ ಈ ನಾಟಕದ ವಸ್ತು. ಪೃಥ್ವಿಯಿಂದ ಓಂಕಾರಕ್ಕೆ ವಲಸೆ ಬಂದ ಜನರು ಓಂಕಾರದ ನಾಗರಿಕರಾಗಿ ಹೇಗೆ ನೆಲೆಸಿದರೆಂಬುದು ನಾಟಕದ ಉತ್ತರಾರ್ಧದ ವಸ್ತು. ಪೃಥ್ವಿ–ಓಂಕಾರಗಳ ನಡುವೆ ಓದುಗನು/ಪ್ರೇಕ್ಷಕನು ಕಲ್ಪನೆಯ ಸೇತುವೆ ನಿರ್ಮಿಸಿ ಕಾಲ–ಸೀಮೆಗಳ ಅರಿವನ್ನು ಕಳೆದುಕೊಂಡರೆ ಮಾತ್ರ ಈ ನಾಟಕದ ರಸಾನುಭವ ಸಾಧ್ಯ."

ಶ್ರೀ ಜಿ.ಟಿ. ನಾರಾಯಣರಾವ್ ಅವರು ೧೯೭೭ರಲ್ಲಿ ಬರೆದ ಲೇಖನವೊಂದರಲ್ಲಿ ರಾಜಶೇಖರ ಭೂಸನೂರಮಠರ ವೈಜ್ಞಾನಿಕ ಸಾಹಿತ್ಯದ ಬಗ್ಗೆ ಬರೆಯುತ್ತ "ಕನ್ನಡದಲ್ಲಿ ವೈಜ್ಞಾನಿಕ ಕಥೆಕಾದಂಬರಿಗಳ ಪ್ರಕಾರಕ್ಕೆ ನಾಂದಿ ಹಾಕಿದ್ದಾರೆ. ಅವರ ಕಲ್ಪನೆಗಳೂ ನೇಯ್ಗೆಗಳೂ ಬಲು ರಮ್ಯವಾಗಿವೆ. ಆದರೆ ಕನ್ನಡದ ಸಮಕಾಲೀನ ವಿಜ್ಞಾನ ಪ್ರಜ್ಞೆಯನ್ನು ಗಮನಿಸುವಾಗ ಭೂಸನೂರಮಠರು ತಮ್ಮ ಕಾಲಕ್ಕಿಂತಲೂ ಮೊದಲೇ ಬಂದಿರುವವರು ಎನಿಸುತ್ತದೆ" ಎಂದಿರುವುದು ಗಮನಾರ್ಹವಾಗಿದೆ.

ಒಟ್ಟಿನಲ್ಲಿ ಭೂಸನೂರಮಠರದು ಅಪೂರ್ವವಾದ ವೈಜ್ಞಾನಿಕ ಸೃಜನಶೀಲ ಪ್ರತಿಭೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

('ವೈಭವಿ' ೨೦೧೩)

ತಂದೆಯವರನ್ನು ನೆನೆಯುತ್ತ.....

ತಂದೆ ನಸುಕಿನೊಳೆದ್ದು 'ಅನುಭವಾಮೃತ' ಓದೆ
ಸಕ್ಕರೆಯ ನಿದ್ದೆಯಲಿ ಸವಿಯುತಿದ್ದೆ;
ಮುಂಜಾವ ತನ್ನ ಗುಂಜಾರವದಿ ಕಿವಿ ತುಂಬೆ
ನಾದಲಹರಿಯ ನೂಲನೆಳೆಯುತಿದ್ದೆ ('ಭಾವಜೀವಿ')

ನನ್ನ ತಂದೆಯವರಿಗೆ ನಸುಕಿನಲ್ಲಿ ಎದ್ದು ಓದುವ ರೂಢಿ. ಮಹಲಿಂಗ ರಂಗನ 'ಅನುಭವಾಮೃತ,' ಚಿದಾನಂದಾವಧೂತರ 'ಜ್ಞಾನಸಿಂಧು', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ', ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯ ದರ್ಪಣ', ಮೊದಲಾದವುಗಳಲ್ಲಿಯ ಪದ್ಯಗಳನ್ನು ಸರಾಗವಾಗಿ ಓದಿಕೊಳ್ಳುತ್ತಿದ್ದರು. ಆ ಚಿಕ್ಕ ವಯಸ್ಸಿನಲ್ಲಿ ಒಂದೆರಡು ಶಬ್ದಗಳು ಮಾತ್ರ ನೆನಪಿನಲ್ಲಿ ಉಳಿಯುತ್ತಿದ್ದವು. ಆದರೆ ನಾದ ಮಾತ್ರ ಕಿವಿಯನ್ನು ತುಂಬಿಕೊಂಡಿರುತ್ತಿತ್ತು.

ಗದಗ ತಾಲೂಕಿನ ಒಂದು ಚಿಕ್ಕ ಹಳ್ಳಿ ಶಿರುಂಜ ಅಥವಾ ಶಿರುಂದ. ಅಲ್ಲಿ ನನ್ನ ತಂದೆ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಕನ್ನಡ ಮುಲ್ಕಿ ಪರೀಕ್ಷೆ ಪಾಸಾಗಿ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಒಂದು ವರ್ಷ ಮಾತ್ರ ತರಬೇತಿ ಪಡೆದಿದ್ದರು. ಅದು ಏಕೋಪಾಧ್ಯಾಯ ಶಾಲೆ. ನಾಲ್ಕನೆಯ ಇಯತ್ತೆವರೆಗೆ ಮಾತ್ರ ಶಿಕ್ಷಣ ಲಭ್ಯ. ಮೊದಲ ಎರಡು ವರ್ಷ ಮಕ್ಕಳು ಸಣ್ಣ ಬಿನ್ ಇಯತ್ತೆ, ದೊಡ್ಡ ಬಿನ್ ಇಯತ್ತೆಯಲ್ಲಿ ಪಾಟಿಪೇಣೆ ಹಿಡಿದು ನಾಲ್ಕು ಅಕ್ಷರ ಬರೆಯಲು ಕಲಿತು ರೂಢಿಯಾದ ಮೇಲೆ ಒಂದನೆಯ ಇಯತ್ತೆ ಪ್ರಾರಂಭ. ಮನೆಯಲ್ಲಿ ನನಗೆ ಅಕ್ಷರಾಭ್ಯಾಸ ಮಾಡಿಸಿದ್ದರಿಂದ ಐದು ವರ್ಷ ಮುಗಿದೊಡನೆ ನೇರವಾಗಿ ಮೊದಲನೆಯ ಇಯತ್ತೆಗೆ ಹೆಸರು

ಪಚ್ಚೆಲಾಯಿತು. ನನಗೆ ಮಸುಕುಮಸುಕು ನೆನಪು. ಶಾಲೆ, ಮೊದಲು ಊರಿನ ಹನುಮಂತ ದೇವರ ಗುಡಿಯಲ್ಲಿ ನಡೆಯುತ್ತಿತ್ತು. ನಾನು ಕಲಿಯುವ ಹೊತ್ತಿಗೆ ಒಂದು ಬೇರೆ ಕಟ್ಟಡದಲ್ಲಿ ಪ್ರಾರಂಭವಾಯಿತು. ಆದರೂ ಶಾಲೆಗೆ ಜನರು 'ಸಾಲಿಗುಡಿ' ಎಂದೇ ಕರೆಯುತ್ತಿದ್ದರು.

ಎರಡು ಕುರ್ಚಿ, ಒಂದು ಮೇಜು ಒಂದು ಬಾಕು (ಬೆಂಚು) ಮೇಜಿನ ಮೇಲೆ ಒಂದು ರೂಲು ಕಟ್ಟಿಗೆ, ಮಸಿದೌತಿ, ಒಂದೆರಡು ಖಡು (ಸೀಮೆಸುಣ್ಣ). ಫಳಾ (ಕರಿಹಲಗೆ)ದ ಮೇಲೆ ಖಡುವಿನಿಂದ ಅಕ್ಷರಗಳನ್ನೂ, ಅಂಕಿಗಳನ್ನೂ ದುಂಡಗೆ ಬರೆದು ತಂದೆಯವರು ಚಿಕ್ಕಮಕ್ಕಳಿಗೆ ಕಲಿಸುತ್ತಿದ್ದರು. ಮೇಲಿನ ವರ್ಗದವರಿಗೆ ಮಗ್ಗಿ, ಲೆಕ್ಕ, ವಾಚನಪಾಠ ಓದುವುದು ಇತ್ಯಾದಿ. ನಾಲ್ಕೂ ಇಯತ್ತೆಯ ಬಾಲಕರಿಗೆ ಕ್ರಮವಾಗಿ ಶಾಲೆಯಲ್ಲಿ ಒಬ್ಬರೇ ಅವರವರ ಅಭ್ಯಾಸ ನಡೆಸುತ್ತಿದ್ದುದನ್ನು ಈಗ ನೆನಪು ಮಾಡಿಕೊಂಡರೆ ಆಶ್ಚರ್ಯ ವೆನಿಸುತ್ತದೆ. ಹುಡುಗರು ಮೇಲೆ ಮೇಲೆ ತಪ್ಪು, ಮಾಡಿದರೆ, ಪರಸ್ಪರ ಜಗಳಾಡಿದರೆ ತಂದೆಯವರಿಗೆ ಸಿಟ್ಟು ಬರುತ್ತಿತ್ತು. ಆಗ ಬೆತ್ತದ ಪ್ರಯೋಗ ಅನಿವಾರ್ಯವಾಗುತ್ತಿತ್ತು. ಸುದ್ದುಬರ (ಶುದ್ಧ ಬರೆಹ)ಕ್ಕೆ ಹೆಚ್ಚು ಲಕ್ಷ್ಯಕೊಡಲಾಗುತ್ತಿತ್ತು. ನಾಲ್ಕನೆಯ ಇಯತ್ತೆಯವರು ವಾರಕ್ಕೊಮ್ಮೆ ಗಲಗಿನಿಂದ ಕಿತ್ತೆ ತೀಡುತ್ತಿದ್ದರು (ಕಾಪಿ). ಗೋಡೆಯ ಮೇಲೆ ಗದಗ ತಾಲೂಕು ಹಾಗೂ ಧಾರವಾಡ ಜಿಲ್ಲೆಯ ನಕಾಶೆಗಳನ್ನು ತೂಗುಹಾಕಿ ಭೂಗೋಲದ ಪಾಠ ಮಾಡುತ್ತಿದ್ದರು.

ಪ್ರತಿಯೊಂದು ತಾಲೂಕಿನ ಊರುಗಳ ಹೆಸರನ್ನು ಬಾಯಿಪಾಠ ಮಾಡಬೇಕಾಗುತ್ತಿತ್ತು. (ಗದಗ, ಬೇಟಗೇರಿ, ಡಂಬಳ, ಹೊಂಬಳ, ಹುಲಕೋಟಿ, ಕುರ್ತಕೋಟಿ– ಹೀಗೆ ಪ್ರಾಸಬದ್ಧವಾಗಿರುತ್ತಿದ್ದವು). ಹಾಜರಿ ಪುಸ್ತಕ ಹಾಗೂ ಶಾಲೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸುರಕ್ಷಿತವಾಗಿ ಸಂದೂಕದಲ್ಲಿ (ಪೆಠಾರಿ) ಇಡಲಾಗುತ್ತಿತ್ತು. ಅದರ ಕೀಲಿ ಹಾಗೂ ಇತರ ವಸ್ತುಗಳ ಬಗ್ಗೆ ತಂದೆಯವರು ವಿಶೇಷ ಕಾಳಜಿ ವಹಿಸುತ್ತಿದ್ದರು. ಯಾಕೆಂದರೆ ಸಾದಿಲ್ವಾರ್ (ಶಾಹಿ, ಕಾಗದ ಮತ್ತು ಚಿಲ್ಲರೆ) ಖರ್ಚು ಎಂದು ತಿಂಗಳಿಗೆ ೨ ರೂ. ಮಾತ್ರ ಸಿಗುತ್ತಿತ್ತು.

ನಾಲ್ಕನೆಯ ವರ್ಗದ ವಿದ್ಯಾರ್ಥಿಗಳು ರಾತ್ರಿ ಓದಲು ನಮ್ಮ ಮನೆಗೇ ಬರುತ್ತಿದ್ದರು. ಅವರಿಗಾಗಿ ಮನೆಯಲ್ಲಿ ಒಂದೆರಡು ಕಂದೀಲುಗಳನ್ನು ಹೆಚ್ಚಿಗೆ ಇಡುತ್ತಿದ್ದರು. ಅವರು ಬಾಯಿ ಮಾಡಿ ಓದುವಾಗ ತಪ್ಪಿದರೆ ಆಗಲೇ ತಿದ್ದುತ್ತಿದ್ದರು. ಬಹಳ ವರ್ಷಗಳಿಂದ ತಂದೆಯವರು ಅದೇ ಊರಿನಲ್ಲಿ ಶಿಕ್ಷಕರಾಗಿದ್ದುದರಿಂದ ಇವರ ಕೈಯಲ್ಲಿ ಕಲಿತವರೇ ಹೆಚ್ಚಾಗಿದ್ದರು. 'ಸಕ್ರಪ್ಪ ಮಾಸ್ತರು' ಎಂದರೆ ಊರಿನ ಗೌಡ, ಶ್ಯಾನುಭೋಗರಿಂದ ಹಿಡಿದು ರೈತಾಪಿ ಜನರೆಲ್ಲರೂ ಗೌರವದಿಂದ ಕಾಣುತ್ತಿದ್ದರು. ಶಾಲೆಗೆ ಹೋಗುವಾಗ ಇಲ್ಲವೆ ಹೊರಗೆಲ್ಲಿಗಾದರೂ ಹೋಗುವಾಗ ಉಡುಗೆ ತೊಡುಗೆಯಲ್ಲಿ ಯಾವ ಬದಲಾವಣೆಯೂ ಇರುತ್ತಿರಲಿಲ್ಲ. ಬಿಳಿಯಂಗಿ, ಧೋತರ, ಕೋಟು. ತಲೆಗೆ ಬಿಳಿರುಮಾಲು. ಕೊರಳಿಗೆ ಸೆಲ್ಲೆ, ಕಾಲಲ್ಲಿ ಸಾದಾ ಚಪ್ಪಲಿ. ಸಂಜೆ ತಪ್ಪದೆ ತಿರುಗಾಡಲು ಹೋಗಿ ಬರುತ್ತಿದ್ದರು. ದಾರಿಯಲ್ಲಿ ಭೇಟಿಯಾದ ಗ್ರಾಮಸ್ಥರು. 'ಶರಣು' ಎಂದೇ ಮುಂದುವರಿಯುತ್ತಿದ್ದರು. ಲಗ್ನ, ಹಬ್ಬ,

ಹುಣ್ಣಿಮೆ ಮುಂತಾಗಿ ಮುಹೂರ್ತ ಕೇಳಲು ಅನೇಕರು ನಮ್ಮ ಮನೆಗೆ ಬಂದಾಗ ತಂದೆಯವರು ಪಂಚಾಂಗ ನೋಡಿ ಹೇಳುತ್ತಿದ್ದರು. ಒಕ್ಕಲಿಗರು ತಮ್ಮಹೊಲ, ತೋಟಗಳಲ್ಲಿ ಬೆಳೆದ ಹಣ್ಣು, ಕಾಯಿ, ಕಾಯಿಪಲ್ಲೆಗಳನ್ನು ಸ್ವಲ್ಪಾದರೂ ಮಾಸ್ತರ ಮನೆಗೆ ಮುಟ್ಟಿಸಿದಾಗಲೇ ಅವರಿಗೆ ಸಮಾಧಾನ.

ಮನೆಯ ಕೆಲಸಗಳನ್ನೆಲ್ಲ ಅವ್ವ ಪಾರ್ವತಮ್ಮ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಅಡಿಗೆ, ಬಾವಿಯಿಂದ ನೀರು ತರುವುದು, ಬಟ್ಟೆ ಒಗೆಯುವುದು ಎಲ್ಲ ಕೆಲಸಗಳನ್ನು ಬೇಸರುಪಟ್ಟುಕೊಳ್ಳದೆ ನೋಡಿಕೊಳ್ಳುತ್ತಿದ್ದರು. ತಂದೆಯವರು ರವಿವಾರ ದಿನ ಹತ್ತಿರದ ಶಿರಹಟ್ಟಿಗೋ ಇಲ್ಲವೆ ಗದಗಿಗೋ ಹೋಗಿ ಸಂತೆ ಮಾಡಿಕೊಂಡು ಮನೆಗೆ ಬೇಕಾಗುವ ಸಾಮಾನುಗಳನ್ನೆಲ್ಲ ತರುತ್ತಿದ್ದರು. ಪಗಾರ ಕಡಿಮೆ ಇದ್ದರೂ ಯಾವುದಕ್ಕೂ ಕೊರತೆಯಾಗದಂತೆ ಸಂಸಾರ ಸಾಗಿಸುತ್ತಿದ್ದರು. ಇಬ್ಬರು ಅಣ್ಣಂದಿರು, ಒಬ್ಬ ಅಕ್ಕ, ನಾನೇ ಚಿಕ್ಕವನು. ಶಿರುಂಜದಲ್ಲಿ ಶಾಲೆ ನಾಲ್ಕನೆಯ ವರ್ಗಕ್ಕೆ ಸೀಮಿತವಾಗಿದ್ದರಿಂದ ಇಬ್ಬರು ಅಣ್ಣಂದಿರು ಹೊಂಬಳದ ಅಜ್ಜಿಯ (ತಾಯಿಯ ತಾಯಿ) ಬಳಿಯಲ್ಲೇ ಇದ್ದು ಕಲಿಯುವುದನ್ನು ಮುಂದುವರಿಸಿದ್ದರು. ತಂದೆಯವರು ಇಡೀ ತಮ್ಮ ಶಿಕ್ಷಕ ವೃತ್ತಿಯಲ್ಲಿ ರಜೆ ತೆಗೆದುಕೊಂಡದ್ದು ಒಂದೇ ಸಲ; ಅದು ನಮ್ಮ ಅಕ್ಕನ ಮದುವೆಯ ಸಂದರ್ಭದಲ್ಲಿ. ತಂದೆಯವರಿಗೆ ಪಿತ್ರಾರ್ಜಿತ ಆಸ್ತಿ ಯಾವುದೂ ಇರಲಿಲ್ಲ. ಎರಡು ಮೂರು ಬಾಡಿಗೆ ಮನೆಯಲ್ಲಿದ್ದು ಕೊನೆಕೊನೆಗೆ ಒಂದು ಮನೆಯನ್ನು ಕೊಂಡು ಅದನ್ನೇ ಇದ್ದುದರಲ್ಲಿ ಸುಧಾರಿಸಿಕೊಂಡಿದ್ದರು.

ಮಣ್ಣಿನ ಮಾಳಿಗೆಯ ಮನೆಗಳಾದ್ದರಿಂದ ಜರಿ, ಶತಪದಿ, ಚೇಳು ಮೊದಲಾದ ಹುಳುಹುಪ್ಪಡಿಗಳು ಜಂತಿಯಿಂದ ಬೀಳುತ್ತಿದ್ದವು. ರಾತ್ರಿ ಮಲಗಿದಾಗ ಕಿವಿಯಲ್ಲಿ ಹೋಗಬಾರದೆಂದು ಎಂಥ ಬೇಸಿಗೆಯಲ್ಲಿಯೂ ಮಂಗನ ಟೋಪಿ ನಮಗೆ ಕಡ್ಡಾಯವಾಗಿರುತ್ತಿತ್ತು. ತಂದೆಯವರಿಗೆ ನಿದ್ದೆ ಹತ್ತಿದ ಮೇಲೆ ನಾನು ಮೆಲ್ಲಗೆ ಟೊಪ್ಪಿಗೆ ತೆಗೆದು ಮಲಗುತ್ತಿದ್ದೆ.

ವಾರ್ಷಿಕ ಪರೀಕ್ಷೆಗೆ ಸಾಲೀ ಸಾಹೇಬರು ಬಂದಾಗ ಊರಿನ ಗೌಡರು, ಪಂಚರು ಶಾಲೆಗೆ ಬಂದು ಕುಳಿತುಕೊಳ್ಳುತ್ತಿದ್ದರು. ಹುಡುಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗುತ್ತಿದ್ದುದರಿಂದ ಮಾಸ್ತರರ ಬಗ್ಗೆ ಅವರಿಗೆ ಅಭಿಮಾನ. ಸಾಲೀ ಸಾಹೇಬರು ತಂದೆಯವರ ಬಗ್ಗೆ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರಲ್ಲದೆ ಸುತ್ತು-ಮುತ್ತಿನ ಹಳ್ಳಿಗಳ ಶಾಲೆಗಳ ಪರೀಕ್ಷೆಗೆ ಹೋಗುವಾಗ ಇವರನ್ನೂ ತಮ್ಮ ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ತಿಂಗಳಿಗೊಮ್ಮೆ ಊರೂರಿಗೆ ಬಂದು ಶಿಕ್ಷಕರ ಸಂಬಳ ಹಂಚುತ್ತಿದ್ದವನಿಗೆ 'ಪಗಾರ ಶಿಪಾಯಿ' ಎಂದು ಕರೆಯಲಾಗುತ್ತಿತ್ತು. ನಮ್ಮ ಊರಿಗೆ ಬರುವದೆಂದರೆ ಅವನಿಗೆ ಖುಷಿ. ತಂದೆಯವರು ಅವನಿಗೆ ನಮ್ಮ ಮನೆಯಲ್ಲಿಯೇ ಊಟ, ವಸತಿಯ ಏರ್ಪಾಡು ಮಾಡುತ್ತಿದ್ದುದಲ್ಲದೆ ಅವನ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಅವನು ತನ್ನ ಕಛೇರಿಯ ಕೆಲಸವನ್ನು ಕಥೆ ಮಾಡಿ ಹೇಳುತ್ತಿದ್ದನು. ವಾರಕ್ಕೊಮ್ಮೆ ಬರುತ್ತಿದ್ದ

ಅಂಚೆಯವನು ಶಾಲೆಯ ಪತ್ರಗಳೊಂದಿಗೆ ಊರಿನ ಉಳಿದವರ ಪತ್ರಗಳನ್ನು ತಂದೆಯವರ ಕೈಯಲ್ಲಿಯೇ ಕೊಡುತ್ತಿದ್ದನು. ಅವನ್ನು ಸಂಬಂಧಪಟ್ಟವರಿಗೆ ಇವರೇ ಮುಟ್ಟಿಸುವ ಏರ್ಪಾಡು ಮಾಡುತ್ತಿದ್ದರು. ಅನಕ್ಷರಸ್ಥರಿದ್ದರೆ ಅವರಿಗೆ ಪತ್ರದ ವಿಷಯವನ್ನು ಓದಿ ಹೇಳುತ್ತಿದ್ದರು. ಕೆಲವು ಸಲ ಉತ್ತರಗಳನ್ನು ಇವರಿಂದಲೇ ಬರೆಯಿಸುತ್ತಿದ್ದರು. ಆ ವಿಷಯದಲ್ಲಿ ತಂದೆಯವರು ಎಂದೂ ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ.

ಹಳ್ಳಿ ಎಂದರೂ ಸಾಮಾನ್ಯವಾಗಿ ಎಲ್ಲ ವೃತ್ತಿಯ ಜನರೂ ಶಿರುಂಜದಲ್ಲಿ ವಾಸವಾಗಿದ್ದರು. ಒಕ್ಕಲುತನ ಮುಖ್ಯ ಉದ್ಯೋಗ. ಸುಗ್ಗಿಯ ಸಂದರ್ಭದಲ್ಲಿ ಮಕ್ಕಳನ್ನು ಹೊಲ, ಮನೆಯ ಕೆಲಸಗಳಿಗೆ ಉಪಯೋಗಿಸುತ್ತಿದ್ದುದರಿಂದ ಶಾಲೆಯಲ್ಲಿ ಹುಡುಗರ ಗೈರು ಹಾಜರಿ ಹೆಚ್ಚಿರುತ್ತಿತ್ತು. ಆದರೂ ತಂದೆಯವರು ಅವರ ತಂದೆತಾಯಿಗಳ ಮನ ಒಲಿಸಿ, ಒಮ್ಮೊಮ್ಮೆ ಒತ್ತಾಯ ಮಾಡಿ ಮಕ್ಕಳು ಅಭ್ಯಾಸದಲ್ಲಿ ಹಿಂದೆ ಬೀಳದಂತೆ ಪ್ರಯತ್ನಿಸುತ್ತಿದ್ದರು. ತಂದೆಯವರದು ಸಾತ್ವಿಕ ಆಹಾರ. ಅವ್ವ ಎಂದಾದರೊಮ್ಮೆ ತವರು ಮನೆಗೆ ಹೋಗುವ ಪ್ರಸಂಗ ಬಂದಾಗ ಮನೆಯಲ್ಲಿ ಇವರೇ ಅಡಿಗೆ ಮಾಡುತ್ತಿದ್ದರು. ತಾವು ಶಾಲೆ ಕಲಿಯುವಾಗ ಒಬ್ಬ ಶಿಕ್ಷಕರ ಮನೆಯಲ್ಲಿದ್ದು ಮನೆಯ ಕೆಲಸಗಳ ಜೊತೆಗೆ ಅಡಿಗೆ ಮಾಡುವುದನ್ನೂ ಕಲಿತಿದ್ದರಂತೆ. ಆ ಶಿಕ್ಷಕರ ಸದ್ಗುಣಗಳನ್ನು ನಮ್ಮೆದುರು ಆಗಾಗ ನೆನಸಿಕೊಳ್ಳುತ್ತಿದ್ದರು. ತಂದೆಯವರಿಗೆ ಆಕಳ ಹಾಲು ಇಷ್ಟವಾದ್ದರಿಂದ ಮನೆಯಲ್ಲಿ ಯಾವಾಗಲೂ ಆಕಳನ್ನು ಸಾಕಲಾಗಿತ್ತು. ಅವ್ವ ಸ್ವತಃ ಶ್ರಮಜೀವಿಯಾಗಿದ್ದುದರಿಂದ ಅದನ್ನು ಚೆನ್ನಾಗಿಯೇ ಜೋಪಾನ ಮಾಡುತ್ತಿದ್ದಳು. ಅದು ಕರುಹಾಕಿದಾಗ ಬೆಳೆ ಬೆಳೆದಂತೆ ನಾನು ಅದನ್ನು ಮಗುವಿನಂತೆ ಎತ್ತಿಕೊಂಡು ಮುದ್ದಾಡುತ್ತಿದ್ದೆ. ಒಂದು ವರ್ಷ ಮಳೆ ಬಾರದೆ ಬರಗಾಲ ಕಾಲಿಕ್ಕಿತು. ಕಾಳು, ಕಡ್ಡಿ, ಮೇವು, ಹೊಟ್ಟು ಎಲ್ಲ ತುಟ್ಟಿಯಾದವು. ಹೊಂಬಳದಲ್ಲಿ ನಮ್ಮ ಅಜ್ಜಿಯದು ಸ್ವಲ್ಪ ಹೊಲವಿತ್ತು. ಅಲ್ಲಿ ಅದಕ್ಕೆ ಮೇವಿನ ಕೊರತೆಯಾಗದೆಂದು ಭಾವಿಸಿ ಅಲ್ಲಿಗೆ ಸಾಗ ಹಾಕಿದ್ದರು. ಆಗ ಸುಗ್ಗಿಯಿದ್ದುದರಿಂದ ಅದನ್ನು ಹೊಲದಲ್ಲಿಯೇ ಕಟ್ಟಿರುತ್ತಿದ್ದರಂತೆ. ನಾಲ್ಕಾರು ದಿನಗಳ ನಂತರ ಒಂದು ಮುಂಜಾವು ಅವ್ವ ಅಂಗಳದ ಕಸ ಉಡುಗಲು ಬಾಗಿಲು ತೆಗೆದಾಗ ಅಲ್ಲಿ ಆಕಳು ಮಲಗಿಕೊಂಡಿತ್ತು. ನನ್ನ ಎಳೆಯ ಮನಸ್ಸಿಗಂತೂ ಅದೊಂದು ದೊಡ್ಡ ಸೋಜಿಗ. ಅದನ್ನು ಮನೆಬಿಟ್ಟು ಕಳಿಸಿದ್ದಕ್ಕೆ ತಂದೆಯವರೂ ಪಶ್ಚಾತ್ತಾಪಪಟ್ಟರು. ಊರಿಗೆ ಒಮ್ಮೆ ಪ್ಲೇಗು ಬಂದಾಗ ಜನರೆಲ್ಲ ಹೊಲದಲ್ಲಿ ಗುಡಿಸಲು ಹಾಕಿಕೊಂಡು ತಿಂಗಳೊಪ್ಪತ್ತು ಇರಬೇಕಾಯಿತು. ಆಗಲೂ ಒಂದು ಮರದ ನೆರಳಿನಲ್ಲಿ ಮಕ್ಕಳನ್ನು ಕೂಡಿಸಿಕೊಂಡು ಶಾಲೆಯನ್ನು ನಡೆಸುವುದನ್ನು ತಂದೆಯವರು ತಪ್ಪಿಸಲಿಲ್ಲ. ಊರಿನ ಶಾಲೆಗಿಂತ ಈ ಬಯಲು ಶಾಲೆಯೇ ನನಗೆ ಹೆಚ್ಚು ಹಿಡಿಸಿತ್ತು.

ಕಪ್ಪತಗುಡ್ಡ ಗಿಡಮೂಲಿಕೆಗಳಿಗೆ ಪ್ರಸಿದ್ಧವಾಗಿತ್ತು. (ಈಗಲೂ ಪ್ರಸಿದ್ಧ.) ಶಿರುಂಜ ಆ ಗುಡ್ಡದ ಸಾಲಿನ ಸೆರಗಿನಲ್ಲಿದ್ದ ಊರು. ಹೀಗಾಗಿ ನಮ್ಮೂರ ಗುಡ್ಡದಲ್ಲಿಯೂ ಔಷಧೀಯ ಸಸ್ಯಗಳಿರುತ್ತಿದ್ದವು. ತಂದೆಯವರು ಸ್ವತಃ ಅಂಥ ಮೂಲಿಕೆಗಳನ್ನು ಹುಡುಕಿ ತಂದು

ತಮಗೆ ಬೇಕಾದ ಔಷಧಗಳನ್ನು ಮಾಡಿಕೊಳ್ಳುತ್ತಿದ್ದರು. ನೀಲಗಿರಿ ಎಣ್ಣೆ, ಕಸ್ತೂರಿ ಮಾತ್ರೆಗಳು ಮನೆಯಲ್ಲಿ ಯಾವಾಗಲೂ ಇರುತ್ತಿದ್ದವು. ಚಹಾ, ಕಾಫಿ, ಸೇವಿಸುತ್ತಿರಲಿಲ್ಲ. ತಂದೆಯವರಿಗೆ ಅಡ್ಡಾಟ ಬಹಳವಾಗುತ್ತಿದ್ದುದರಿಂದ ಕಾಲು ಹರಿಯುತ್ತಿದ್ದವೆಂದು ತೋರುತ್ತದೆ. ಸೂಟಿಯ ದಿನಗಳಲ್ಲಿ ಮಧ್ಯಾಹ್ನ ನನ್ನಿಂದ ಕಾಲು ಹಿಚುಕಿಸಿಕೊಂಡು ಜಂಪು ನಿದ್ದೆ ಮಾಡುತ್ತಿದ್ದರು. ಅವರಿಗೆ ಜಂಪು ಹತ್ತಿದೊಡನೆ ನಾನು ಹೊರಗೆ ಆಟವಾಡಲು ಹೋಗಿಬಿಡುತ್ತಿದ್ದೆ. ಉಳಿದ ಹೊತ್ತಿನಲ್ಲಿ ಯಾವಾಗಲೂ ಅಭ್ಯಾಸ ಮಾಡಲು ಹಚ್ಚುತ್ತಿದ್ದರು.

ಶಿರುಂಜದ ಶಾಲೆಯಲ್ಲಿ ನಾನು ನಾಲ್ಕನೇ ಇಯತ್ತೆಯಲ್ಲಿದ್ದಾಗ ತಂದೆಯವರು ನಿವೃತ್ತರಾದರು. ಆಗ ಅವರಿಗೆ ಬರುತ್ತಿದ್ದ ಪಿಂಚಣಿ (ಪೆನ್ಶನ್) ೧೮ರೂ. ಮಾತ್ರ. ಹಿಂದಿನ ವರ್ಷವೇ 'ಮುಲ್ಕಿ ಪರೀಕ್ಷೆ' ಪಾಸು ಮಾಡಿದ ನಮ್ಮ ಹಿರಿಯಣ್ಣನನ್ನು ಆ ಜಾಗೆಗೆ ಶಿಕ್ಷಕನಾಗಿ ನೇಮಿಸಲಾಯಿತು. ನಾನು ಮುಂದಿನ ಶಿಕ್ಷಣಕ್ಕಾಗಿ ಧಾರವಾಡದ ಹತ್ತಿರದ ಗರಗಕ್ಕೆ ಹೋದೆ. ಅಲ್ಲಿ ನಮ್ಮ ಭಾವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಪಕರಾಗಿದ್ದರು. ತಂದೆಯವರ ಆರೋಗ್ಯ ಮೊದಲಿನಂತೆ ಇರಲಿಲ್ಲ. ಹವಾ ಬದಲಾವಣೆಗೆಂದು ನಮ್ಮ ತಾಯಿಯೊಡನೆ ಗರಗದಲ್ಲಿ ಕೆಲದಿನ ಬಂದು ಇರುತ್ತಿದ್ದರು. ನಾನು ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಗೆ ಪ್ರಥಮ ರ‍್ಯಾಂಕ್ ಪಡೆದು ಪಾಸಾದದ್ದು ಅವರಿಗೆ ಬಹಳ ಸಂತೋಷವನ್ನುಂಟು ಮಾಡಿತ್ತು. ನಾನೂ ಪ್ರಾಥಮಿಕ ಶಾಲಾ ಶಿಕ್ಷಕನಾದರೆ ಸಾಕು ಎಂದು ಬಗೆದಿದ್ದ ಅವರು, ಈ ದೆಸೆಯಿಂದ ನಾನು ಹಾಯ್‌ಸ್ಕೂಲಿಗೆ ಸೇರಲು ಅನುಮತಿಸಿದರು. ಏಕೋಪಾಧ್ಯಾಯ ಶಾಲೆಯ ಮಟ್ಟದಲ್ಲಿಯೇ ಅವರ ಶಿಕ್ಷಕವೃತ್ತಿ ಸೀಮಿತಗೊಂಡು ಬಿಟ್ಟಿದ್ದರಿಂದ ಹೈಸ್ಕೂಲ್, ಕಾಲೇಜುಗಳ ಶಿಕ್ಷಣ ಪದ್ಧತಿಗೆ ಅವರು ತೀರ ಅಪರಿಚಿತರಾಗಿದ್ದರು. ಅವರಿಗೆ ಯಾವುದೇ ಬಗೆಯ ಆರ್ಥಿಕ ತೊಂದರೆಯಾಗದಂತೆ ನಾನು 'ಶಿಷ್ಯವೇತನ' ಇತ್ಯಾದಿಗಳ ನೆರವಿನಂದ ಎಂ.ಎ. ಮುಗಿಸಿದ್ದರಿಂದ ಅವರು ನನ್ನ ವಿಷಯದಲ್ಲಿ ನಿಶ್ಚಿಂತರಾಗಿದ್ದರು.

ನನ್ನ ಪ್ರಥಮ ಕವನ ಸಂಗ್ರಹ 'ಕಾವ್ಯಾಕ್ಷಿ' (೧೯೪೯) 'ನನ್ನ ಪೂಜ್ಯ ತಾಯಿತಂದೆಗಳಿಗೆ ಸಮರ್ಪಿತ'ವಾಗಿತ್ತು. ಅವರಿಗೆ ಪರಿಚಿತವಾಗಿದ್ದ ಹಿಂದಿನ ಕಾವ್ಯ ಮತ್ತು ಅನುಭಾವದ ಪದಗಳಿಗಿಂತ ಇದರಲ್ಲಿನ ಭಾವಗೀತೆಗಳು ಭಿನ್ನವಾಗಿ ಕಂಡರೂ ಆಸ್ಥೆಯಿಂದ ಓದಿ ಮಗುವಿನ ಮುಗ್ಧತೆಯನ್ನು ವ್ಯಕ್ತಪಡಿಸಿದ್ದು ನನ್ನನ್ನೂ ಮುಗ್ಧನನ್ನಾಗಿ ಮಾಡಿತು. ೧೯೫೨ರಲ್ಲಿ ನಾನು ಎಂ.ಎ. ಮುಗಿಸಿ, ಶಾಂತಾದೇವಿಯ ಕೈಹಿಡಿದು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೌಕರಿ ಪ್ರಾರಂಭಿಸಿದ ಮೇಲೆ ಧಾರವಾಡದಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದು ತಂದೆ ತಾಯಂದಿರನ್ನು ಜೊತೆಯಲ್ಲಿರಲು ಕರೆಯಿಸಿಕೊಂಡೆ. ಅವರಿಗೆ ವಯಸ್ಸು ಎಪ್ಪತ್ತರ ಮೇಲಾಗಿತ್ತು. ಅನಾರೋಗ್ಯ ಹಾಗೂ ಮುಪ್ಪಾವಸ್ಥೆಯಿಂದ ಹಣ್ಣಾಗಿದ್ದರು. ಬೆಳಿಗ್ಗೆ ಎದ್ದು ತಿರುಗಾಡಿಕೊಂಡು ಬಂದು, ಸ್ನಾನ, ಪೂಜೆ ಮುಗಿಸಿ (ಪೂಜೆಯೆಂದರೆ ತಮ್ಮ ಇಷ್ಟಲಿಂಗದ ಪೂಜೆ ಮಾತ್ರ) ಲಘು ಆಹಾರ ಸೇವಿಸಿಯಾದ ಮೇಲೆ ಏನಾದರೂ ಒಂದಿಷ್ಟು ಓದಿ ವಿಶ್ರಾಂತಿ ಪಡೆಯುತ್ತಿದ್ದರು. ಔಷಧವೆಂದರೆ ಟಾನಿಕ್ಕು

ಮಾತ್ರ. ಮನೆ ಮಾಡಿದ ಮೇಲೆ ರೇಡಿಯೋ ಖರೀದಿಸಿದ್ದೆ. ೧೯೫೦ರಲ್ಲಿಯೇ ಧಾರವಾಡದಲ್ಲಿ ಬಾನುಲಿ ಕೇಂದ್ರ ಸ್ಥಾಪನೆಗೊಂಡಿತ್ತು. ರೇಡಿಯೋ ಕೂಡ ತಂದೆ ಯವರಿಗೆ ಒಂದು ಅಚ್ಚರಿಯ ವಸ್ತುವೆನಿಸಿತ್ತು. ಮಳೆಗಾಲದಲ್ಲಿ ಧಾರವಾಡದ ತಂಪು ಅವರಿಗೆ ತಡೆಯುತ್ತಿರಲಿಲ್ಲವಾದ್ದರಿಂದ ಮತ್ತೆ ಊರಿಗೆ ಕಳಿಸಿ ಬರುತ್ತಿದ್ದೆ. ಅಲ್ಲಿ ತಿಂಗಳಿಗೊಮ್ಮೆ ಗದಗಿನ ತಾಲೂಕು ಕಛೇರಿಗೆ ಹೋಗಿ ಸಂಬಳ ತರುವುದೊಂದನ್ನು ಬಿಟ್ಟರೆ ಹೊರಗೆಲ್ಲಿಯೂ ವಿಶೇಷ ಹೋಗುತ್ತಿರಲಿಲ್ಲ.

ತಂದೆಯವರು ತಮ್ಮ ಗ್ರಾಮವಾದ ಗುಂಜಳದಿಂದ ಧಾರವಾಡ ಜಿಲ್ಲೆಯ ಮುಳುಗುಂದ ಗ್ರಾಮಕ್ಕೆ ಬಂದು ಅಲ್ಲಿಯ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದರು. ಚೆನ್ನವೀರಯ್ಯ ಪುರಾಣಿಕಮಠರು ಅಲ್ಲಿಯೇ ಇವರ ಸಹಶಿಕ್ಷಕರಾಗಿದ್ದರು. ಇಬ್ಬರಿಗೂ ಆಧ್ಯಾತ್ಮಿಕ ವಿಷಯದಲ್ಲಿ ಆಸಕ್ತಿಯಿದ್ದುದರಿಂದ ಒಳ್ಳೆಯ ಸ್ನೇಹಿತರಾದರು. ಹಿರಿಯರಾದ ಚೆನ್ನವೀರರವರೇ ಮುಂದೆ ನಿಂತು ಹೊಂಬಳದ ಪಾರ್ವತವ್ವನೊಡನೆ ಇವರ ಮದುವೆ ಮಾಡಿದರು. ಮುಳಗುಂದದಲ್ಲಿದ್ದಾಗಲೇ ಹಿರಿಯಣ್ಣ ವಿರೂಪಾಕ್ಷಪ್ಪ ಹಾಗೂ ಅಕ್ಕ ಸಾವಿತ್ರಕ್ಕ ಹುಟ್ಟಿದರು. ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯದರ್ಪಣದ ಹಾಡುಗಳು ಆ ಕಾಲಕ್ಕೆ ಆಗಲೇ ಜನಜನಿತವಾಗಿದ್ದವು. ಚೆನ್ನವೀರಯ್ಯನವರು ಕನ್ನಡ, ಸಂಸ್ಕೃತಗಳೆರಡರಲ್ಲಿಯೂ ಸ್ವತಂತ್ರವಾದ ಅಭ್ಯಾಸದಿಂದ ಪ್ರಭುತ್ವ ಪಡೆದಿದ್ದರು. ಸ್ವತಃ ತತ್ವಪದಗಳನ್ನೂ ಷಟ್ಪದಿ ಕಾವ್ಯವನ್ನೂ ಬರೆದಿದ್ದರು. ತಂದೆಯವರಿಗೆ ಪುರಾಣ ಪಠಣ ಮಾಡುವ ಹವ್ಯಾಸವಿತ್ತು. ಚೆನ್ನವೀರಯ್ಯನವರು ಅದಕ್ಕೆ ವ್ಯಾಖ್ಯಾನ ಮಾಡುತ್ತಿದ್ದರು. ಶ್ರಾವಣ ಮಾಸದಲ್ಲಿ ಮುಳಗುಂದದ ಶಂಕರಲಿಂಗ ದೇವಸ್ಥಾನದಲ್ಲಿ ಇವರ ಕಾರ್ಯಕ್ರಮ ನಡೆಯುತ್ತಿತ್ತೆಂದು ಮುಳಗುಂದದವರೇ ಆದ ಡಾ. ಎಂ.ಎಸ್. ಸುಂಕಾಪುರ ಒಂದೆಡೆ ಬರೆದಿದ್ದಾರೆ. ಅವರಿನ್ನೂ ಹೇಳುತ್ತಾರೆ: "ಪುರಾಣಿಕಮಠದ ಚೆನ್ನವೀರಯ್ಯನವರು ಉತ್ತಮ ಶಿಕ್ಷಕರು. ಅವರ ಕೈಯಲ್ಲಿ ಕಲಿಯುವ ಭಾಗ್ಯ ಪ್ರಾಥಮಿಕ ಶಾಲೆಯಲ್ಲಿ ನನಗೆ ಒದಗಿತ್ತು. ಅವರ ಸದಾಚಾರ, ವಿದ್ಯಾಪ್ರೇಮ, ಬಾಲಕರ ಮೇಲಿನ ಮಮತೆ, ಸಮಯ ನಿಷ್ಠೆ, ನಾಡು ನುಡಿಯ ಅಭಿಮಾನ, ಸಾಹಿತ್ಯಾಭಿರುಚಿ ಅನುಪಮವಾಗಿದ್ದವು. ಮಳೆ ಬಾರದಾಗ ಹರಿಶ್ಚಂದ್ರ ಕಾವ್ಯವನ್ನು ಓದಿಸಿ ಕೇಳಿ ಮಳೆರಾಯನನ್ನು ಕರೆಯಿಸಿಕೊಳ್ಳುವುದು ನಮ್ಮೂರ ಸಂಪ್ರದಾಯ. ಆ ಕಾವ್ಯವನ್ನು ಚೆನ್ನವೀರಯ್ಯ ಮಾಸ್ತರಿಂದಲೇ ಕೇಳಬೇಕು. ಪುರಾಣ ಸಮಾಪ್ತಿಗೆ ಮಳೆ ಬಂದೇ ಬರುತ್ತಿತ್ತು. ಚೆನ್ನವೀರಯ್ಯನವರು ಹಾಗೂ ಸಕ್ರಪ್ಪ ಮಾಸ್ತರರ ಜೋಡಿಯನ್ನು ಮರೆಯಲು ಸಾಧ್ಯವಿಲ್ಲ."

ಮೂರುನಾಲ್ಕು ವರ್ಷಗಳ ನಂತರ ತಂದೆಯವರಿಗೆ ಶಿರುಂಜ ಗ್ರಾಮಕ್ಕೆ ವರ್ಗ ವಾಯಿತು. ಅಧ್ಯಾತ್ಮ ವಿಷಯದಲ್ಲಿ ಇವರಿಗೆ ಆಸ್ಥೆ ಹುಟ್ಟಿಸಿದ ಚೆನ್ನವೀರಯ್ಯನವರಂಥ ಹಿರಿಯ ಸ್ನೇಹಿತರನ್ನು ಆಗಲಿ ಇರುವುದು ಅವರಿಗೆ ಸಾಧ್ಯವಾಗಲಿಲ್ಲ. ಅವರಿಂದ ಲಿಂಗ ದೀಕ್ಷಾ ಬೋಧೆಯನ್ನು ಪಡೆದು ಅವರನ್ನು ಗುರುಗಳೆಂದು ಭಕ್ತಿಯಿಂದ ಸ್ವೀಕರಿಸಿದರು.

ತಾಯಿಯೂ ಅವರನ್ನು ಅನುಸರಿಸಿದರು. ಮುಂದೆ ನಾಲ್ಕು ವರ್ಷಗಳ ನಂತರ ನಾನು ಹುಟ್ಟಿದಾಗ ಗುರುಗಳೇ ನಾಮಕರಣ ಮಾಡಿ ಜಾತಕವನ್ನು ಬರೆದುಕೊಟ್ಟರಂತೆ. ತಂದೆಯವರು ಗುರುಗಳ ಹೆಸರನ್ನೇ ನನಗೆ ಇಟ್ಟು ಸಂತಸಪಟ್ಟರು.

ಶಿರುಂಜದಲ್ಲಿ ನಾನು ಪ್ರಾಥಮಿಕ ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಮನೆಯಲ್ಲಿ ಸಂಜೆಯ ಮುಂದೆ ನಮ್ಮೆಲ್ಲರನ್ನೂ ಕೂಡಿಸಿಕೊಂಡು ತಂದೆಯವರು ಪ್ರಾರ್ಥನೆ ಮಾಡಿಸುತ್ತಿದ್ದರು. ಆಗ ಹಾಡುತ್ತಿದ್ದ ನಿಜಗುಣ ಶಿವಯೋಗಿ ('ಕೋಗಿಲೆ ಚೆಲ್ವ ಕೋಗಿಲೆ', 'ಶ್ರೀ ಗುರು ಚನೋಪದೇಶ', ಜೊತೆಗೆ ಅವರದೇ ಹರನಾಮಾವಳಿ, ಪಾರ್ವತಿ ನಾಮಾವಳಿ ಸ್ತೋತ್ರ), ಬಾಲಲೀಲಾ ಮಹಾಂತ ಶಿವಯೋಗಿ ('ಲಾಲಿ ಲಾಲಿಯು ಪರಬ್ರಹ್ಮದ ಶಿಶುವೆ' 'ಮಗನ ತೂಗಿರೋ')ಗಳ ಹಾಡುಗಳು ಇಂದಿಗೂ ನನಗೆ ನೆನಪಿನಲ್ಲುಳಿದಿವೆ. ಚೆನ್ನವೀರಯ್ಯ ಗುರುಗಳು ರಚಿಸಿದ ತತ್ವಪದಗಳನ್ನು ತಂದೆಯವರು ತಮ್ಮ ಪುಸ್ತಕದಲ್ಲಿ ದುಂಡಗಿನ ಅಕ್ಷರದಲ್ಲಿ ಬರೆದಿಟ್ಟುಕೊಂಡಿದ್ದರು. ರವಿವಾರ ತಪ್ಪದೆ ಮಳಗುಂದಕ್ಕೆ ಹೋಗಿ ಗುರುಗಳೊಡನೆ ಮಾತುಕತೆಯಾಡಿ, ಹೆಚ್ಚಿನ ಉಪದೇಶ ಪಡೆದು ಬರುತ್ತಿದ್ದರು. ಶಾಲೆಯ ಹಾಗೂ ಮನೆಯ ನಿತ್ಯದ ಕೆಲಸ-ಕರ್ತವ್ಯದೊಡನೆ ಗುರುವಿನ ಧ್ಯಾನವನ್ನು ಮರೆಯುತ್ತಿರಲಿಲ್ಲ. ಎರಡೂ ಹೊತ್ತು ಸ್ನಾನ, ಇಷ್ಟಲಿಂಗ ಪೂಜೆಯ ನಂತರವೇ ಊಟ. ಎರಡು ಊಟದ ನಡುವೆ ಏನೂ ತೆಗೆದುಕೊಳ್ಳುತ್ತಿರಲಿಲ್ಲ. ಊರಿನ ಜನರು ಇವರ ಆಚಾರ-ವಿಚಾರಗಳನ್ನು ಕಂಡು ಶರಣರೆಂದೇ ಗೌರವಿಸುತ್ತಿದ್ದರು.

ಹೃದಯಾಘಾತದಿಂದ ೧೯೪೮ರಲ್ಲಿ ಚೆನ್ನವೀರಯ್ಯ ಗುರುಗಳು ಲಿಂಗೈಕ್ಯರಾದ ಮೇಲೆ ತಂದೆಯವರು ತೀವ್ರ ಏಕಾಕಿತನವನ್ನನುಭವಿಸತೊಡಗಿದರು. ಶಿರುಂಜದ ಶಾಲೆಯಿಂದ ನಮ್ಮ ಅಣ್ಣನಿಗೆ ವರ್ಗವಾಗಿದ್ದರಿಂದ ಅಲ್ಲಿಯ ಮನೆಯನ್ನು ಮಾರಿ (೩೨೦ ರೂ.ಗಳಿಗೆ) ತಾಯಿಯ ತವರುಮನೆ ಹೊಂಬಳದಲ್ಲಿಯೇ ಬಂದು ಇರತೊಡಗಿದರು. ಅಜ್ಜಿಯೂ ಒಬ್ಬಳೇ ಇದ್ದುದರಿಂದ ಅವಳಿಗೂ ಇದರಿಂದ ನೆರವಾಯಿತು. ವರುಷಕ್ಕೊಮ್ಮೆಯಾದರೂ ನಾವೆಲ್ಲರೂ ಮುಳಗುಂದಕ್ಕೆ ಹೋಗಿ ಗುರುಗಳ ಸಮಾಧಿಗೆ ಪೂಜೆ ಮಾಡಿ, ನಂತರ ಮನೆಯಲ್ಲಿ ಚಿಕ್ಕ ದಾಸೋಹ ಮಾಡಿ ಬರುತ್ತಿದ್ದೆವು. ನಾನು ಬಲ್ಲಂತೆ ಗುರುಗಳು ಒಳ್ಳೆಯ ಸದ್ಗೃಹಸ್ಥರು, ಅನುಭಾವಿಗಳು, ಕಾರ್ಯನಿಷ್ಠರು. ಎಕ್ಕಾಗಾಡಿಯನ್ನು ಊರ ಮುಂದಿನ ಹಳ್ಳಕ್ಕೆ ತಾವೇ ಹೊಡೆದುಕೊಂಡು ಹೋಗಿ ಒರತೆಗಳಿಂದ ನಾಲ್ಕಾರು ಕೊಡ ಸಿಹಿ ನೀರನ್ನು ತರುತ್ತಿದ್ದರು. ಸಾಕಿದ ಆಕಳಿನ ಸೆಗಣಿಯನ್ನು ತೆಗೆದು ಹಕ್ಕೆ ಸ್ವಚ್ಛ ಮಾಡುತ್ತಿದ್ದರು. ತಂದೆಯವರ ಮುಂಗೋಪದ ಬಗ್ಗೆ, ಅವರ ನಿಷ್ಠುರವಾದ ಕೆಲವು ಆಚರಣೆಗಳ ಬಗ್ಗೆ ಅವ್ವ, ಅವರೆದುರು ತಕರಾರು ಹೇಳಿದಾಗ ತಂದೆಯವರಿಗೆ ತಿಳಿ ಹೇಳುತ್ತಿದ್ದರು. ಆಹಾರ-ವಿಹಾರದಲ್ಲಿ ಪೂಜೆ ಪುನಸ್ಕಾರಗಳಲ್ಲಿ ಹೆಚ್ಚಿನ ನಿಬಂಧನೆಗಳನ್ನು ಹೇರಿಕೊಳ್ಳಬಾರದೆನ್ನುವುದು ಅವರ ಅಭಿಪ್ರಾಯವಾಗಿತ್ತು.

ಅನಾರೋಗ್ಯದಿಂದಾಗಿ ಬಹಳ ದಿನಗಳಲ್ಲಿ ಮುಳಗುಂದಕ್ಕೆ ಗುರುಗಳ ಸಮಾಧಿ ದರ್ಶನಕ್ಕೆ ತಂದೆಯವರಿಗೆ ಹೋಗಿ ಬರುವುದಾಗಿರಲಿಲ್ಲ. ನಮ್ಮ ಹಿರಿಯ ಮಗ

ಶಿವಾನಂದ ಒಂದು ವರ್ಷದವನಾದಾಗ ಅವನ ಜವುಳ ತೆಗೆಸಲು ಮುಳಗುಂದಕ್ಕೆ ಹೋಗುವುದಾಗಿ ನಿಶ್ಚಯಿಸಲಾಯಿತು. ಬಿಜಾಪುರದಲ್ಲಿ ಅಕ್ಕನ ಮನೆಯಲ್ಲಿದ್ದ ತಂದೆಯವರನ್ನು ಕರೆಸಿಕೊಂಡು ಬಂಧು-ಬಳಗದವರೊಂದಿಗೆ ಗದಗಿನಿಂದ ವ್ಯಾನಿನಲ್ಲಿ ಮುಳಗುಂದಕ್ಕೆ ಹೋದಾಗ ಸಂಜೆಯಾಗಿತ್ತು. ಎಲ್ಲರೂ ಗುರುಗಳ ಮನೆಯೊಳಗೆ ಪ್ರವೇಶಿಸಿದ್ದರು. ಅಶಕ್ತರಾಗಿದ್ದ ತಂದೆಯವರನ್ನು ಕೈಹಿಡಿದುಕೊಂಡು ನಿಧಾನವಾಗಿ ನಾನು ಹೊಸ್ತಿಲು ದಾಟಿ ಒಳಗೆ ಬಂದೆ. ಒಂದು ನಿಮಿಷ ಧ್ಯಾನಸ್ಥರಾಗಿ ನಿಂತು ಮರುಕ್ಷಣವೇ ನನ್ನ ಕೈಯಲ್ಲಿ ಕುಸಿದರು. ಆಯಾಸವಾಗಿರುವುದೆಂದು ಒಳಗೆ ಕಟ್ಟೆಯ ಮೇಲೆ ಮಲಗಿಸಿದೆ. ಮುಚ್ಚಿದ ಕಣ್ಣು ಮತ್ತೆ ತೆರೆಯಲಿಲ್ಲ (೧೯೫೪).

ಶಿರುಂಜದಲ್ಲಿ ಶಿಕ್ಷಕರಾಗಿ, ಹಳ್ಳಿಯ ಜನಕ್ಕೆ ನೈತಿಕ ಮಾರ್ಗದರ್ಶಕರಾಗಿ ತಂದೆಯವರು ಬಹಳ ವರ್ಷ ಸೇವೆ ಗೈದಿದ್ದನ್ನು ನೆನೆದು ಅಲ್ಲಿಯ ಗೌಡರು ಹಾಗೂ ಹಿರಿಯರು ಶಿರುಂಜದಲ್ಲಿಯೇ ಅವರ ಅಂತ್ಯಕ್ರಿಯೆ ಜರುಗಿಸಬೇಕೆಂದು ಬಯಸಿದರು. ಆದರೆ ಮುಳಗುಂದದ ಹಿರಿಯರು, ಚೆನ್ನವೀರಯ್ಯನವರ ಹಾಗೂ ಸಕ್ರಪ್ಪ ಮಾಸ್ತರರ ಗಾಢವಾದ ಗುರು ಶಿಷ್ಯ ಸಂಬಂಧವನ್ನು ಪ್ರತ್ಯಕ್ಷ ಕಂಡವರಾಗಿದ್ದರಿಂದ ಗುರುಗಳ ಸಮಾಧಿಯ ಪಕ್ಕದಲ್ಲಿಯೇ ತಂದೆಯವರ ಸಮಾಧಿಯನ್ನು ಎಲ್ಲರ ಸಮ್ಮತಿಯೊಂದಿಗೆ ನೆರವೇರಿಸಿದರು.

ತಮ್ಮ ಗುರುಗಳು ರಚಿಸಿದ ಅನೇಕ ಅನುಭಾವ ಹಾಡುಗಳನ್ನೂ, ಚಿಕ್ಕ-ಪುಟ್ಟ ಕಾವ್ಯಗಳನ್ನೂ ತಂದೆಯವರು ತಮ್ಮ ಸುಂದರವಾದ ಕೈಬರಹದಲ್ಲಿ ಬರೆದಿಟ್ಟು ಕೊಂಡಿದ್ದರು. ಅವುಗಳಲ್ಲಿ 'ಚೆನ್ನವೀರೇಶ್ವರ ಶತಕ'ದ ಹಸ್ತಪ್ರತಿ ನನ್ನ ಮನ ಸೆಳೆಯಿತು. ಭಾಷೆ ಹಾಗೂ ಬಂಧದಲ್ಲಿ ನಮ್ಮ ಹಿಂದಿನ ಶತಕಗಳಿಗಿಂತ ಇದು ಯಾವ ದೃಷ್ಟಿಯಿಂದಲೂ ಕಡಿಮೆಯದಲ್ಲವೆನಿಸಿತು. ೧೯೭೦ರಲ್ಲಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರೊ. ಎಂ.ಎಸ್. ಸುಂಕಾಪುರ (ಮುಳಗುಂದದ ಪ್ರಾಥಮಿಕ ಶಾಲೆಯಲ್ಲಿ ಚೆನ್ನವೀರಯ್ಯನವರು ಸುಂಕಾಪುರ ಅವರಿಗೆ ಕಲಿಸಿದ ಶಿಕ್ಷಕರು) ತಮ್ಮ ಮುನ್ನುಡಿಯಲ್ಲಿ ಹೀಗೆ ಬರೆದರು: "ಶ್ರೀ ಚೆನ್ನವೀರ ಕವಿಗಳು ಧರ್ಮವನ್ನು, ಕಾವ್ಯಧರ್ಮವನ್ನು ಎಡೆಬಿಡದೆ ನಡೆಸಿಕೊಂಡು ಬಂದವರು. ಅವರದು ಶರಣ ಜೀವನ, ಶಿಕ್ಷಕ ವೃತ್ತಿಯೇ ಕಾಯಕ. ಈ ಶತಕವು ಕಿರಿಯ ಕೃತಿಯಾದರೂ ಹಿರಿಮೆಯಿಂದ ಕೂಡಿದೆ. ವೀರಶೈವ ತತ್ವ ಜ್ಞಾನವನ್ನು ಸ್ವಲ್ಪದರಲ್ಲಿಯೇ ಸ್ವಾರಸ್ಯ ಬರುವ ಹಾಗೆ ಈ ಕೃತಿಯಲ್ಲಿ ಬಿತ್ತರಿಸಲಾಗಿದೆ." ಒಂದೆರಡು ನುಡಿಗಳನ್ನಿಲ್ಲಿ ಉದಾಹರಿಸಬಹುದು.

ಅಸಮಾಕ್ಷಂ ಪ್ರಭುದೇವ ಚನ್ನಬಸವಂ ಷಡ್‌ಬ್ರಹ್ಮ ಸುಜ್ಞಾನಿಗಳ್
ಬಸವಾಧೀಶ ಮಹಾ ಗಣೇಂದ್ರ ಶರಣರ್ ಕೂಡಿರ್ದು ಸಂಪ್ರೀತಿಯಿಂ
ದೊಸೆದಾನಂದದಿ ಪಾಡಿ ಪೇಳ್ದ ನುಡಿಯಂ ಲೋಕಕ್ಕೆ ಮತ್ತೊರ್ಮೆ ನೀ
ನುಸಿರೆಂದಾಜ್ಞೆಯ ಮಾಡಿ ಪೇಳಿಸಿದರೈ ಶ್ರೀ ಚೆನ್ನವೀರೇಶ್ವರಾ ॥

ತನುವೇ ಶ್ರೀ ಗುರು ಭಾವ ಜಂಗಮವು ಮೇಣ್ ತತ್ಪ್ರಾಣವೇ ಲಿಂಗವೈ
ಘನವಾದೀ ತ್ರಿವಿಧತ್ವಮಂ ತಿಳಿದು ತಾಮೇಕತ್ವದಿಂ ಕಾಣಲಾ
ತನೆ ಜನ್ಮಾಬ್ಧಿಯ ದಾಂಟಿ ಲಿಂಗ ಕೃಪೆಯಂ ಲಿಂಗೈಕ್ಯಮಂ ತೋರುವಂ
ಘನ ಲಿಂಗಾಂಗಿಗೆ ಸಾಟಿಯುಂಟೆ ಧರೆಯೊಳ್ ಶ್ರೀ ಚೆನ್ನವೀರೇಶ್ವರಾ ॥

ತಂದೆಯವರ ನಿತ್ಯದ ಓದಿಗೆ ಒಳಪಟ್ಟ ಗ್ರಂಥಗಳಲ್ಲಿ 'ಜ್ಞಾನಸಿಂಧು'ವೂ ಒಂದಾಗಿತ್ತು ಎಂಬುದನ್ನು ಲೇಖನದ ಪ್ರಾರಂಭದಲ್ಲಿಯೇ ಹೇಳಿದ್ದೇನಲ್ಲವೆ? ತೀರ ಚಿಕ್ಕವನಿದ್ದಾಗ ಅವರು ಓದುವಾಗ ತೆಳ್ಳಗೆ ಹಳದಿಬಣ್ಣದ ಅದರ ಪುಟಗಳು ಮಾತ್ರ ನನ್ನ ಕಣ್ಣಿಗೆ ಕಾಣಿಸಿದ್ದವು. ಬೆಳೆದ ಮೇಲೆ ಕಾವ್ಯಾಭ್ಯಾಸಕ್ಕೆ ತೊಡಗಿದರೂ ನಾನು ಆ ಗ್ರಂಥದ ಬಗ್ಗೆ ಆಸ್ಥೆ ವಹಿಸಿರಲಿಲ್ಲ. ಈಚೆಗೆ ೧೯೯೦ರಲ್ಲಿ ಸ್ನೇಹಿತರಾದ ಡಾ. ಗುರುಲಿಂಗ ಕಾಪಸೆಯವರು ಅದರ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಿದಾಗಲೇ ಅದನ್ನು ನೋಡುವ ಅವಕಾಶ ಒದಗಿತು. ಒಂದು ಶತಮಾನದ ಮೇಲೆ ಪರಿಷ್ಕಾರಗೊಂಡು ಅದು ಪ್ರಕಟವಾಗುತ್ತಿರುವುದನ್ನು ಅವರು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. 'ಜ್ಞಾನಸಿಂಧು' ಯೋಗ ಮಾರ್ಗಾವಲಂಬಿಯಾದ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ಅದ್ವೈತ ಸಿದ್ಧಿಯ ಕಡೆಗೆ ಬೆರಳು ಮಾಡಿ ತೋರಿಸುತ್ತದೆ. ಮಹಲಿಂಗರಂಗನ ಅನುಭವಾಮೃತದ ಪ್ರಭಾವಕ್ಕೆ ಒಳಗಾದ ಚಿದಾನಂದಾವಧೂತರು (ಕವಿಯ ಮೂಲ ಹೆಸರು ಝುಂಕಪ್ಪ. ಸ್ಥಳ : ಆದವಾನಿ ತಾಲೂಕಿನ ಪರಿವಾಣ ಗ್ರಾಮ. ಕಾಲ: ಸುಮಾರು ೧೭೫೦) ಈ ಬೃಹತ್ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ಆಧ್ಯಾತ್ಮಿಕ ವಿಷಯವನ್ನು ವ್ಯಾಪಕವಾಗಿ ಸಮಾಲೋಚಿಸುವ ಅಥವಾ ಬೋಧಿಸುವ ಈ ಕಾವ್ಯ ಶ್ರದ್ಧಾವಂತರ ಅಧ್ಯಯನದ ಹಾಗೂ ಪಾರಾಯಣದ ಗ್ರಂಥವಾಗಿತ್ತು. ಅದ್ವೈತ ವೇದಾಂತಕ್ಕೆ ಸಂಬಂಧಿಸಿದ ಯಾವ ವಿಷಯವೂ ಕೈತಪ್ಪಿ ಹೋಗದಂತೆ ಚಿದಾನಂದಾವಧೂತರು ತನ್ಮಯತೆಯಿಂದ ನಿರೂಪಿಸಿರುವುದು ಒಂದು ಮಹತ್ವದ ಸಾಧನೆಯೆಂದು ಡಾ. ಕಾಪಸೆಯವರು ಗುರುತಿಸುತ್ತಾರೆ. ಒಂದು ಕಾಲದಲ್ಲಿ ಜಿಜ್ಞಾಸುಗಳು, ಮುಮುಕ್ಷುಗಳು ಹಳ್ಳಿ ಹಳ್ಳಿಗಳಲ್ಲಿ ಓದಿ ತಮ್ಮ ಆಧ್ಯಾತ್ಮಿಕ ಸಾಧನೆಗೆ ಬೆಳಕು ಪಡೆದುಕೊಂಡ ಕೃತಿ ಇದು. ಹುಬ್ಬಳ್ಳಿಯ ಸಿದ್ಧಾರೂಢ ಪರಂಪರೆಯವರು, ಗದುಗಿನ ಶಿವಾನಂದ ಸ್ವಾಮಿಗಳ ಪರಂಪರೆಯವರು, ನಿಜಗುಣ ಶಿವಯೋಗಿಗಳ ಕೃತಿಯೊಂದಿಗೆ 'ಜ್ಞಾನಸಿಂಧು'ವನ್ನು ಅಭ್ಯಸಿಸಿ ಅದ್ವೈತಾನಂದದಲ್ಲಿ ತನ್ಮಯರಾಗುತ್ತಿದ್ದರಂತೆ. ತಂದೆಯವರು ನಿಜಗುಣರ ಕೃತಿಗಳೊಂದಿಗೆ ಜ್ಞಾನಸಿಂಧುವನ್ನೂ ಓದುತ್ತಿದ್ದುದರ ಮರ್ಮ ನನಗೆ ಈಚೆಗೆ ತಿಳಿದು, ತಡವಾಗಿಯಾದರೂ ನನ್ನ ಕುತೂಹಲವನ್ನು ತಣಿಸಿತು. "ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು" ಎಂದು ಮಹಲಿಂಗರಂಗ ಕವಿ ಹೇಳಿದ್ದರೆ, "ಮಾತು ಕನ್ನಡವೆಂದು ಸಂಸ್ಕೃತ ಮಾತನರಿದವನು ಹಳಿವುದು ನೀತಿಯಲ್ಲವು" ಎಂದು ಚಿದಾನಂದಾವಧೂತರು 'ಜ್ಞಾನಸಿಂಧು'ವಿನ ಪೀಠಿಕೆಯಲ್ಲಿ ಹೇಳಿರುವುದು ಗಮನಾರ್ಹವಾಗಿದೆ.

('ಎರಡು ತಲೆಮಾರು'– ೨೦೦೯)

ನಾನು ಕಂಡಂತೆ ನನ್ನವಳು

ನಿಶ್ಚಯ ಕಾರಣದ ಎರಡು ವರ್ಷಗಳ ನಂತರ ನಾವು ಮದುವೆಯಾಗಿದ್ದರಿಂದ ಪತ್ರವ್ಯವಹಾರದ ಮೂಲಕ ಪರಸ್ಪರ ಅಭಿರುಚಿಗಳನ್ನು ತಿಳಿದುಕೊಳ್ಳಲು ಅನುಕೂಲವಾಯಿತು. ಆದರೂ ಓದುವ ಹವ್ಯಾಸದಲ್ಲಿದ್ದ ನನ್ನವಳಿಗೆ ಅಡಿಗೆ ಮಾಡುವ ಅಭ್ಯಾಸವಿರಲಿಲ್ಲ. ನಾನು ಎಂ.ಎ. ಪಾಸಾಗಿ, ಮದುವೆಯಾಗಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕೆಲಸ ಪ್ರಾರಂಭಿಸಿದ್ದು ಎಲ್ಲವೂ ೧೯೫೨ರಲ್ಲಿಯೇ. ಧಾರವಾಡದಲ್ಲಿ ಮನೆ ಮಾಡಿದಾಗ ವರ್ಷೊಪ್ಪತ್ತು ನಾವಿಬ್ಬರೇ ಇದ್ದೆವು. ಎಲ್ಲವನ್ನೂ ಬೇಗ ಕಲಿತುಕೊಂಡಳು–ರೊಟ್ಟಿ ಮಾಡುವುದನ್ನು ಕೂಡ. ಆಮೇಲೆ ನನ್ನ ತಾಯಿ–ತಂದೆ ನಮ್ಮ ಜೊತೆಗೆ ಇರತೊಡಗಿದ್ದರಿಂದ ಕೆಲಸ ಹಗುರಾಯಿತು. ಬರುವ ಅಲ್ಪ ಸಂಬಳವನ್ನು ಆಕೆಯ ಕೈಗೆ ಕೊಟ್ಟುಬಿಡುತ್ತಿದ್ದೆ. ಅಂದಿನಿಂದಲೂ ಮನೆಯನ್ನು ನಿಭಾಯಿಸುವ ಹೊಣೆ ಅವಳದೇ ಆಗಿಬಿಟ್ಟಿತ್ತು. (ಈಗಲೂ ನನಗೆ ಪಿಂಚಣಿ ಎಷ್ಟು ಬರುತ್ತದೆನ್ನುವುದು ಸರಿಯಾಗಿ ಗೊತ್ತಿಲ್ಲ.) ಮಿತವ್ಯಯದಿಂದ ಎಲ್ಲವನ್ನೂ ತೂಗಿಸಿಕೊಂಡು ಹೋಗುತ್ತಿದ್ದುದರಿಂದ ನಾನು ನಿರಾಳವಾಗಿದ್ದೆ. ಆ ಜಾಣ್ಮೆ ಅವಳ ತಾಯಿ ಭಾಗೀರಥಿಯವರಿಂದ ಬಂದದ್ದು. ಪ್ರಾಥಮಿಕ ಶಾಲಾಶಿಕ್ಷಕರ ಮಗನಾಗಿದ್ದರಿಂದ ನಾನೂ ಖರ್ಚಿಕನಾಗಿರಲಿಲ್ಲ. ಸಂತೆ ಮಾಡಿ ರೂಢಿಯಿದ್ದುದರಿಂದ ಮನೆಯ ಸಾಮಾನು, ಕಾಯಿಪಲ್ಲೆ ಇತ್ಯಾದಿಗಳನ್ನು ನಾನೇ ತರುತ್ತಿದ್ದೆ. ಆಗೀಗ ಒಳ್ಳೆಯ ಸಿನೆಮಾ ಗಳಿಗೆ ಹೋಗುತ್ತಿದ್ದೆವು. ಆಯ್ಕೆ ಹೆಚ್ಚಾಗಿ ಅವಳದೇ ಆಗಿರುತ್ತಿತ್ತು. ಮನೆಯಲ್ಲಿ ಪುಸ್ತಕಗಳಿಗೆ, ಪತ್ರಿಕೆಗಳಿಗೆ ಮಾತ್ರ ಯಾವ ಕೊರತೆಯೂ ಇರಲಿಲ್ಲ.

ನನ್ನ ಮಾವಂದಿರಾದ ಎಸ್.ವಿ. ಗಿಡ್ನವರ ಸಾಹಿತ್ಯಪ್ರಿಯರಾಗಿದ್ದರಿಂದ ಮನೆಯ ಗ್ರಂಥಾಲಯವನ್ನು ದೊಡ್ಡದಾಗಿ ಬೆಳೆಸಿಕೊಂಡಿದ್ದರು. ಅದರ

ಉಪಯೋಗವನ್ನು ಉಳಿದವರಿಗಿಂತ ಈಕೆಯೇ ಚೆನ್ನಾಗಿ ಮಾಡಿಕೊಂಡಿದ್ದಳು. ಕನ್ನಡ ಕಥೆ, ಕಾದಂಬರಿಗಳ ಜೊತೆಗೆ ಜೇನ್ ಆಸ್ಟೆನ್‌ಳಿಂದ ಪ್ರಾರಂಭಿಸಿ ಸ್ಕಾಟ್, ಹಾರ್ಡಿ, ಟಾಲ್‌ಸ್ಟಾಯ್ ಮೊದಲಾದವರ ಕೆಲವು ಕಾದಂಬರಿಗಳನ್ನು ಮ್ಯಾಟ್ರಿಕ್ ಪಾಸಾಗು ವಷ್ಟರಲ್ಲಿಯೇ ಓದಿದ್ದರಿಂದ ಕಥಾಸಾಹಿತ್ಯವೇ ಇವಳಿಗೆ ಪ್ರಿಯವಾಗಿತ್ತು. ತಂದೆಯ ಸಂಗೀತ ಪ್ರೀತಿ ಈಕೆಗೆ ಹಾಡುವುದಕ್ಕೂ ಪ್ರೇರಣೆ ಒದಗಿಸಿತು. ಅಲ್ಲದೆ, ಬೇಂದ್ರೆ, ಮಧುರಚೆನ್ನ, ಸಿಂಪಿಲಿಂಗಣ್ಣ, ರಂ.ಶ್ರೀ. ಮುಗಳಿ ಮೊದಲಾದ ಸಾಹಿತಿಗಳು ಗಿಡ್ನವರ ಮನೆಗೆ ಆಗಾಗ ಬರುತ್ತಿದ್ದುದರಿಂದ ಸಾಹಿತ್ಯಿಕ ವಾತಾವರಣ ತಾನಾಗಿ ನಿರ್ಮಾಣವಾಗಿತ್ತು.

ಮದುವೆಗೆ ಮುನ್ನವೇ ವಚನ, ಭಕ್ತಿಗೀತೆ, ಭಾವಗೀತೆಗಳನ್ನು ಹಾಡುತ್ತಿದ್ದಂತೆಯೇ ನನ್ನ ಕೆಲವು ಭಾವಗೀತೆಗಳಿಗೂ ತಾನೇ ಧಾಟಿ ಹಚ್ಚಿ ಹಾಡಿದ್ದುಂಟು. ಆಮೇಲೆ ಧಾರವಾಡ ಆಕಾಶವಾಣಿಯಲ್ಲಿ ಕಾವ್ಯಗಾಯನ ಹಾಗೂ ಜಾನಪದ ಗೀತಗಾಯನ ಕಾರ್ಯಕ್ರಮಕ್ಕೂ ಅವಕಾಶ ಒದಗಿತ್ತು. ಮುಂದೆ ಧ್ವನಿ ಪರೀಕ್ಷೆ ಕಡ್ಡಾಯವಾದ ಮೇಲೆ ಆಕಾಶವಾಣಿಯ ಉಸಾಬರಿಗೆ ಹೋಗಲಿಲ್ಲ. ತೀ.ನಂ.ಶ್ರೀ.ಯವರು ಕ.ವಿ.ವಿ.ಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾಗ ತಮ್ಮ ಮನೆಗೆ ಬಂದಿದ್ದ ಎಲ್. ಗುಂಡಪ್ಪನವರ ಮೂವರು ಹೆಣ್ಣುಮಕ್ಕಳ (ಸುಮಿತ್ರ, ವಿಮಲಾ, ಕಮಲಾ) ಜಾನಪದ ಗೀತಗಾಯನ ಕಾರ್ಯಕ್ರಮವನ್ನು ಊರಲ್ಲಿ ಏರ್ಪಡಿಸಿ ಮೈಸೂರ ಕಡೆಯ ಧಾಟಿಯನ್ನು ಪರಿಚಯಿಸಿದ್ದರು. ಮರುದಿನ ಆ ಮೂವರೂ ನಮ್ಮ ಮನೆಗೆ ಬಂದಾಗ ಈ ಕಡೆಯ ಧಾಟಿ ಹಾಗೂ ವಿವಿಧ ಬಗೆಯ 'ಸೊಲ್ಲು'ಗಳನ್ನು ಇವಳಿಂದ ಹಾಡಿಸಿ ತಿಳಿದು ಸಂತೋಷಪಟ್ಟರು.

ಮಕ್ಕಳು ಬೆಳೆಯುತ್ತಿದ್ದಂತೆ ಅವರಲ್ಲಿ ಶಿಸ್ತು, ಸದಾಚಾರ, ಅಭ್ಯಾಸಪ್ರವೃತ್ತಿ, ಅಚ್ಚುಕಟ್ಟು ತನಗಳನ್ನು ಬೆಳೆಸಿದ ಶ್ರೇಯಸ್ಸು ಹೆಚ್ಚಾಗಿ ಈಕೆಗೇ ಸಲ್ಲಬೇಕು. ನನ್ನದು ಕೆಲಮಟ್ಟಿಗೆ ಸಂಕೋಚದ ಮೃದುಸ್ವಭಾವ, ಆದರೆ ನನ್ನವಳು ಬಿಡೆಭಾರವಿಲ್ಲದೆ ನಿಷ್ಠುರವಾಗಿ ವರ್ತಿಸಬಲ್ಲಳು. ಯಾವುದಕ್ಕೂ ಒತ್ತಾಯ ಅವಳಿಗೆ ಸೇರುವುದಿಲ್ಲ. ಪ್ರವಾಸವೆಂದರೆ ಪ್ರೀತಿ, ಪ್ರೇಕ್ಷಣೀಯ ಸ್ಥಳಗಳಿಗೆ ಜೊತೆಯಾಗಿ, ಮಕ್ಕಳೊಂದಿಗೆ ಆಗಾಗ ಹೋಗುತ್ತಿದ್ದೆವು. ಈಗ ಆಕೆಗೆ ವಯಸ್ಸಾಗಿದ್ದರಿಂದ (೮೧ ವರ್ಷ) ಹೊರಬೀಳುವದು ಕಡಿಮೆ. ಅಲ್ಲದೆ ಕಳೆದ ಇಪ್ಪತ್ತು ವರ್ಷಗಳಿಂದ ಮಧುಮೇಹ, ರಕ್ತದೊತ್ತಡ ಇತ್ಯಾದಿಗಳ ಬಾಧೆಯನ್ನು ಕಷ್ಟಪಟ್ಟು ಸಹಿಸಿಕೊಂಡಿದ್ದಾಳೆ. ಹಾಗೆ ನೋಡಿದರೆ ನನ್ನ ಪ್ರಕೃತಿ ಹೆಚ್ಚು ಸೂಕ್ಷ್ಮ. ನೌಕರಿಯಲ್ಲಿದ್ದಾಗ ಗ್ಯಾಸ್ಟ್ರಿಕ್ ತೊಂದರೆಯಿಂದ ಆರೋಗ್ಯ ಆಗಾಗ ಬಿಗಡಾಯಿಸುತ್ತಿತ್ತು. ಅಪ್ರಿಷ್ಟಕ್ಕೆ ಅಂಜಿ ಅಳುಕುತ್ತಿದ್ದ ನನಗೆ ಇವಳೇ ಧೈರ್ಯ ತುಂಬುತ್ತಿದ್ದಳು.

"ಯಾವುದೇ ಸಿನಿಮಾ ನೋಡಲಿ, ಕಥೆ ಕಾದಂಬರಿಗಳನ್ನೋದಲಿ ಅವುಗಳ ಕಥೆಯನ್ನು ಯಾವ ಸಣ್ಣ ವಿವರವನ್ನೂ ಬಿಡದಂತೆ ಶಾಂತು ಹೇಳುತ್ತಿದ್ದಳು" ಎಂದು ಅವರ ತಾಯಿ ಮೆಚ್ಚುಗೆಯಿಂದ ಹೇಳುತ್ತಿದ್ದರು. ಹೀಗೆ ಕಥನಕಲೆ ಈಕೆಗೆ ಸಹಜವಾಗಿಯೇ ಒಲಿದು ಬಂದಿದೆ. ಮದುವೆಗೆ ಮುನ್ನ ಒಂದೆರಡು ಕಥೆ ಬರೆದದ್ದನ್ನೂ ನಾನು ನೋಡಿದ್ದೆ. ಈಗ ನನ್ನ ಪ್ರೋತ್ಸಾಹವಂತೂ ಇದ್ದೇ ಇತ್ತು. ಮನೆಗೆಲಸ, ಮಕ್ಕಳ ಲಾಲನೆಪಾಲನೆಯಲ್ಲಿ

ಬಿಡುವು ಮಾಡಿಕೊಂಡು ಬರೆಯುವ ಹವ್ಯಾಸ ಬೆಳೆದಂತೆ ಒಳ್ಳೊಳ್ಳೆ ಕಥೆಗಳೇ ಬಂದವು. ಕೆಳವರ್ಗ ಹಾಗೂ ಮಧ್ಯಮವರ್ಗದ ಜನರ ಜೀವನಚಿತ್ರಗಳೊಂದಿಗೆ ಅವರ ಆಡು ಭಾಷೆಯ ಮೇಲಿನ ಹಿಡಿತ ಸಾಧಿಸಿದ್ದು ಒಂದು ಹೆಚ್ಚುಗಾರಿಕೆ. ಬರೆಯಲು ಕುರ್ಚಿ ಮೇಜು ಬೇಕೆಂದೇನೂ ಇಲ್ಲ. ಎಷ್ಟೋ ಸಲ ಅಡುಗೆಮನೆ, ನಡುಮನೆ, ಮಲಗುವ ಕೋಣೆಗಳಲ್ಲಿ ಕುಳಿತು ಬರೆದದ್ದುಂಟು. ನನ್ನ ಹಾಗೆ ಏಕಾಂತಸ್ಥಳವೇ ಬೇಕೆಂದಿಲ್ಲ. ಬರೆದ ಮೇಲೆ ಓದಲು ಕೊಟ್ಟು ಶೀರ್ಷಿಕೆಯ ಬಗ್ಗೆ ನನ್ನ ಸಲಹೆ ಕೇಳುತ್ತಾಳೆ, ಅಷ್ಟೆ. ಇದುವರೆಗೆ ಪ್ರಕಟವಾಗಿರುವ ಎಂಟು ಕಥಾಸಂಗ್ರಹಗಳಲ್ಲಿ ನೂರಕ್ಕೂ ಮಿಕ್ಕಿ ಕಥೆಗಳಿದ್ದು ಆಮೇಲೆ ಬರೆದ ಕಥೆಗಳನ್ನು ಒಳಗೊಂಡ ಸಮಗ್ರ 'ಕಥಾಮಂಜರಿ' ಸಪ್ನಾದವರಿಂದ ಇಷ್ಟರಲ್ಲಿಯೇ ಪ್ರಕಟವಾಗಲಿದೆ.

'ಸುಧಾ' ವಾರಪತ್ರಿಕೆ ಪ್ರಾರಂಭವಾಗುವಾಗ (೧೯೬೫) ಸಂಪಾದಕರು ಧಾರವಾಡಕ್ಕೂ ಬಂದು ಲೇಖಕರನ್ನು ಭೇಟಿಯಾಗಿ, ಲಘುಬರೆಹ, ಹರಟೆಗಳನ್ನು ಬರೆದು ಕಳಿಸಲು ಇವಳಿಗೂ ಕೇಳಿಕೊಂಡರು. 'ಅಜಗಜಾಂತರ' (೧೯೮೩) ಅದರ ಫಲ. 'ಹರಟೆ ಹೊಡೆಯುತ್ತಲೆ ಕಥೆ ಹೇಳಿಬಿಡುತ್ತಾರೆ' ಎಂದು ಮುನ್ನುಡಿಯಲ್ಲಿ ಎನ್ಕೆಯವರು ಹೇಳಿದ್ದುಂಟು. ಕಥೆಯ ವಸ್ತು ತಲೆಯೊಳಗಿದ್ದರೂ ಸಂಪಾದಕರು ಕೇಳಿದಾಗಲೆ ಬರೆಯುವದು ಅಭ್ಯಾಸವಾಗಿಬಿಟ್ಟಿದೆ. ದೀಪಾವಳಿ ವಿಶೇಷಾಂಕಗಳಲ್ಲಿ ಬಂದಿರುವ ಕಥೆಗಳು ಸಾಮಾನ್ಯವಾಗಿ ಹಾಗೆ ಬರೆದವುಗಳೇ. ಕಥಾಸಂಗ್ರಹಗಳಿಗೆ ಬಹುಮಾನ, ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿ, ಬೇರೆ ಭಾಷೆಗಳಿಗೆ ಅನುವಾದ ಇತ್ಯಾದಿ ಸಂದರ್ಭಗಳಲ್ಲಿ ಸಹಜವಾಗಿಯೇ ಸಂತೋಷಪಟ್ಟರೂ ಅತ್ಯುತ್ಸಾಹಕ್ಕೆ ಇಂಬು ಗೊಟ್ಟುದನ್ನು ನಾನು ಕಂಡಿಲ್ಲ. ಇತ್ತೀಚೆ ರಾಜ್ಯಸರ್ಕಾರ 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ' ನೀಡಿ ಜೊತೆಗೆ ಮೂರು ಲಕ್ಷ ರೂ.ಗಳನ್ನು ಕೊಟ್ಟಾಗ ತನಗಾಗಿ ಎಷ್ಟನ್ನೂ ಇಟ್ಟುಕೊಳ್ಳದೆ ಎಲ್ಲವನ್ನೂ ಆರು ವಿವಿಧ ಸಂಘ ಸಂಸ್ಥೆಗಳಿಗೆ ಸದ್ವಿನಿಯೋಗವಾಗುವಂತೆ ಹಂಚಿಬಿಟ್ಟಳು. ಇದೆಲ್ಲ ಸ್ವಯಂ ಪ್ರೇರಣೆಯಿಂದಲೇ ನಡೆದದ್ದು.

ಕೈ ಖಾಲಿ ಇರುವಂತೆಯೇ ಇಲ್ಲ. ಪುಸ್ತಕ ತಪ್ಪಿದರೆ ಕಸೂತಿ ಇಲ್ಲವೆ ಹೆಣಿಕೆ ಇರಬೇಕು. ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮರಿಮಕ್ಕಳಿಗೆ ಕಾಲಕಾಲಕ್ಕೆ ಉಣ್ಣೆಯ ಅಂಗಿ, ಟೊಪ್ಪಿಗೆ ಸಿದ್ಧಗೊಳ್ಳುವದು ತಪ್ಪಿಲ್ಲ. ದೊಡ್ಡವರಿಗೆ ಅವರು ಬಯಸಿದ ಬಣ್ಣದ ಸ್ವೆಟರುಗಳು. ಇದರಲ್ಲಿ ತಮ್ಮವರು, ಬೇರೆಯವರು ಎಂಬ ಬೇಧವಿಲ್ಲ. ಈಗ ನಾನು ಹಾಕಿಕೊಳ್ಳುವ ಎರಡು-ಮೂರು ಸ್ವೆಟರುಗಳು ಹೀಗೆ ಸಿದ್ಧವಾದವುಗಳೇ. ಹೀಗೆ ಹೆಣಿಕೆಯ ಕೆಲಸ ಮಾಡುತ್ತಿರುವಾಗಲೇ ಮನಸ್ಸಿನಲ್ಲಿ ಕಥೆಗಳ ಹೆಣಿಕೆಯೂ ನಡೆಯುತ್ತಿರಬಹುದೆಂದು ನನ್ನ ಅನಿಸಿಕೆ. ಯಾಕೆಂದರೆ ಎರಡೂ ಸೃಜನಶೀಲ ಕಲೆಗಳೇ. ಇವಳ ಇಬ್ಬರು ತಂಗಿಯರು ಈ ಕಲೆಯಲ್ಲಿ ಹೆಚ್ಚಿನ ನೈಪುಣ್ಯವನ್ನು ಸಂಪಾದಿಸಿದ್ದರು. (ಈಚೆಗೆ ಅವರಿಬ್ಬರೂ ತೀರಿಕೊಂಡಾಗ ಇವಳ ದುಃಖ ಹೇಳತೀರದು.)

ಒಮ್ಮೊಮ್ಮೆ ಅವಸರದಲ್ಲಿ ನಾನು ಅರಿವೆ ಅಂಚಡಿಗಳನ್ನು ಹರವಿ ಬಿಡುವದುಂಟು. ಮುಂದೆ ಕೆಲಹೊತ್ತಿನಲ್ಲಿ ಅವೆಲ್ಲ ವ್ಯವಸ್ಥಿತವಾಗಿ ಕಪಾಟಿನಲ್ಲಿ ಹೊಂದಿಸಲ್ಪಟ್ಟಿರುವುದನ್ನು

ಕಂಡಿದ್ದೇನೆ. ಹೀಗೆ ಬಂಧು-ಬಳಗ, ಮಕ್ಕಳುಮರಿ ಪರಸ್ಪರ ಪ್ರೀತಿ-ಬಾಂಧವ್ಯದಿಂದ ಹೊಂದಿಕೊಂಡಿರುವುದು ಅವಳಿಗೆ ಇಷ್ಟ. ಹೃದಯವಂತ ಗೃಹಿಣಿಯ ಹೊಂದಾಣಿಕೆಯ ಈ ಗುಣಲಕ್ಷಣಗಳನ್ನೇ ಬಹುಶಃ ಅವಳ ಕಥೆಗಳೂ ಪ್ರತಿಪಾದಿಸುವಂತೆ ತೋರುತ್ತದೆ.

ಸಭೆ ಸಮಾರಂಭಗಳಿಗೆ ಹೋದಾಗ ಆದಷ್ಟು ಹಿಂದಿನ ಸಾಲಿನಲ್ಲಿ ಕುಳಿತುಕೊಳ್ಳಲು ಇಚ್ಛಿಸುತ್ತಾಳೆ. ವೇದಿಕೆಯ ಮೇಲಿಂದ ಭಾಷಣ ಮಾಡಿದ್ದಂತೂ ತೀರ ಅಂದರೆ ತೀರ ಕಡಿಮೆ. ಅಂಥ ಒಂದು ಸಂದರ್ಭ ಬಂದಾಗ ಹೇಳಿದಳು: "ನಾವಿಬ್ಬರೂ ಒಂದು ಒಪ್ಪಂದ ಮಾಡಿಕೊಂಡಿದ್ದೇವೆ. ಸಭೆಯಲ್ಲಿ ಅವರು ಮಾತನಾಡಬೇಕು, ನಾನು ಕೇಳಬೇಕು. ಮನೆಯಲ್ಲಿ ನಾನು ಮಾತಾಡಬೇಕು ಅವರು ಕೇಳಬೇಕು. ಹೀಗಾಗಿ ನಾವು ಜಗಳವಾಡಿದ್ದು ಬಹಳ ಕಡಿಮೆ." ಇದು ತಮಾಷೆ ಎನಿಸಿದರೂ ಇದರಲ್ಲಿ ನಿಜಾಂಶ ಇಲ್ಲದೆ ಇಲ್ಲ. ನಮ್ಮ ನಡುವೆ ಸಣ್ಣ ಪುಟ್ಟ ವಾದ ವಿವಾದಗಳೂ ಮಾತಿನ ಚಕಮಕಿಗಳೂ ನಡೆಯುವದಿಲ್ಲವೆಂತಲ್ಲ. ಆದರೆ ಮುಂದೆ ಸ್ವಲ್ಪ ಹೊತ್ತಿನಲ್ಲಿ ಇಬ್ಬರೂ ಅದನ್ನು ಮರೆತುಬಿಡುತ್ತೇವೆ.

ನಮಗೆ ಐವರು ಮಕ್ಕಳು, ಒಂಬತ್ತು ಜನಮೊಮ್ಮಕ್ಕಳು, ನಾಲ್ವರು ಮರಿ ಮಕ್ಕಳು. ಅವರವರ ಜನ್ಮದಿನಾಂಕಗಳನ್ನು ಆದಷ್ಟು ನೆನಪಿಟ್ಟುಕೊಂಡು – ಹಾಗೆಯೇ ನನಗೂ ನೆನಪಿಸಿ ಅವರ ಹುಟ್ಟುಹಬ್ಬಕ್ಕೆ ಶುಭ ಕೋರುತ್ತಾಳೆ. ಕಳೆದ ಮೇ ೧೨ರಂದು ಅವರೆಲ್ಲರೂ ಧಾರವಾಡಕ್ಕೆ ಬಂದು ನಮ್ಮ ದಾಂಪತ್ಯದ ಅರುವತ್ತನೆಯ ವರ್ಷವನ್ನು ಹಬ್ಬದಂತೆ ಆಚರಿಸಿ, ತಾವು ನಮ್ಮ ಬಗ್ಗೆ ಬರೆದ ಲೇಖನಗಳ ಹಾಗೂ ಚಿತ್ರಗಳ ಕಟ್ಟನ್ನು (A bouquet of loving memories) ನೀಡಿ ತಾವೂ ಸಂತೋಷಪಟ್ಟು ನಮ್ಮನ್ನೂ ಸಂತೋಷ ಗೊಳಿಸಿದರು. ಎಲ್ಲರನ್ನೂ ಸಮಾನವಾಗಿ ಪ್ರೀತಿಸುವ ನನ್ನವಳು ಆ ಸಂದರ್ಭದಲ್ಲಿ ಅಂತಃಕರಣದ ಮೂರ್ತಿಮಂತ ಪ್ರತೀಕವಾಗಿ ಕಂಗೊಳಿಸಿದಳು.

ನನ್ನ ಈ ಬರೆಹದಲ್ಲಿ ಅವಳು, ಇವಳು, ಈಕೆ ಮುಂತಾದ ಪದ ಪ್ರಯೋಗಗಳಿದ್ದರೂ ನಾವಿಬ್ಬರೂ 'ಏನ್ರಿ' ಎಂದೇ ಪರಸ್ಪರ ಮಾತಿಗೆ ತೊಡಗುತ್ತೇವೆ.

('ಲೋಕದರ್ಶನ' ದೀಪಾವಳಿ ಸಂಚಿಕೆ : ೨೦೧೨)

ಭಾಗ : ೨

ಅವಗಾಹನೆ

(ಭಾಷಣಗಳು – ಲೇಖನಗಳು)

ಜಿ.ಎಸ್. ಶಿವರುದ್ರಪ್ಪನವರ ಕಾವ್ಯ: ಒಂದು ನೋಟ

೧

ವಿಶಾಲ ಪಥದಲಿ ಜೀವನ ರಥದಲಿ
ನಿನ್ನಯ ಕರುಣೆಯ ಸಾರಥ್ಯದಲಿ
ನೀಲ ವಿತಾನದ ಹಂದರದಡಿಯಲಿ
ಮರ್ತ್ಯದ ಮಣ್ಣಿನ ಧೂಳಿಯಲಿ
ಹಗಲು ಇರುಳುಗಳ ಬೆಳಕಿನಲಿ
ನಡೆಯುತ್ತಿದೆ ಈ ಜೀವರಥ
ವಿಶಾಲವಾಗಿದೆ ನನ್ನ ಪಥ...[೧]

ಶ್ರೀ ಜಿ.ಎಸ್.ಶಿವರುದ್ರಪ್ಪನವರ ಕಾವ್ಯ ಪ್ರಾರಂಭದಲ್ಲಿಯೇ, ತನ್ನನ್ನು ಹಿಡಿದು ಹಿಂದೆಳೆಯಬಹುದಾದ ಕೆಲವು ಸಂಕುಚಿತ ಮೇರೆಗಳನ್ನು ಮೀರಿ, ವಿಶಾಲ ಪಥದಲ್ಲಿ ಧೈರ್ಯದ ಹೆಜ್ಜೆಗಳನ್ನಿಡುತ್ತ ಬಂದಿದೆ. ಹಾಗೆ ನಡೆದು ಬರುತ್ತಿರುವಂತೆಯೇ ತನ್ನ ಗೊತ್ತು-ಗುರಿಗಳನ್ನೂ ಕೆಲಮಟ್ಟಿಗೆ ಗುರುತಿಸಿಕೊಂಡಿದೆ. ದೈವೀಕರುಣೆಯಲ್ಲಿ ನಂಬಿಕೆ, ಮರ್ತ್ಯದ ಮಣ್ಣು ತನ್ನ ಜೀವನಕ್ಕೆ ಹಾಗೆಯೇ ಕಾವ್ಯಕ್ಕೆ ತೀರ ಹತ್ತಿರವಾದುದು ಎಂಬ ಅರಿವು, ಹಗಲಿನಂತೆ ಇರುಳಿನಲ್ಲಿಯೂ ಬೆಳಕಿನ ಕಿರಣಗಳನ್ನು ಕಾಣುವ ದೃಷ್ಟಿ- ಎಲ್ಲಕ್ಕೂ ಹೆಚ್ಚಾಗಿ ತನ್ನ ದಾರಿ ವಿಶಾಲವಾಗಿದೆ, ಯಾರ ಭಿಡೆ ಭಾರಗಳಿಗೂ ಒಳಗಾಗದೆ ತಾನು ಪ್ರಾಮಾಣಿಕನಾಗಿ ಅಲ್ಲಿ ಸಾಗಬಹುದು ಎಂಬ ಧೈರ್ಯ ಅವರ ಕಾವ್ಯವನ್ನು ಮುನ್ನಡೆಸಿಕೊಂಡು ಬಂದಿದೆ. ಜೀವನದ ನೋವು- ನಲಿವುಗಳನ್ನು ಸವಿದು, ಸುಮಧುರ ಒಲವನ್ನು ಹೀರಿ, ಸೃಷ್ಟಿಯ ಚೆಲುವಿಗೆ ತನ್ನ ಎದೆಯನ್ನು ನೀಡಿದೆ. "ಗರ್ಗರ ನಾದದ ಗಾಲಿಯ ವೇಗ,

ಅನಂತಯಾತ್ರೆಗೆ ಬಂಧುರ ರಾಗ" ಎಂಬುದು ಜೀವನದ ಸುಖ-ದುಃಖಗಳನ್ನು ಸುಲಭವಾಗಿ ಒಪ್ಪಿಕೊಂಡುದಾಗಿರದೆ ತಾನು ಬದುಕಿ ಬಾಳುತ್ತಿರುವ ಸಂಸ್ಕೃತಿಯನ್ನು ಸೂಚಿಸಿದೆ. ಶಿವರುದ್ರಪ್ಪನವರ ಕಾವ್ಯ ಈ ಎಳೆಯನ್ನು ಕೊನೆಯವರೆಗೂ ಹುರಿಗೊಳಿಸಿ ಕೊಂಡು ಬಂದಿದೆ. 'ದಾರಿ ನೂರಾರಿವೆ ಬೆಳಕಿನರಮನೆಗೆ' ಎಂಬ ಮಾತು ಅವರ ಕಾವ್ಯಕ್ಕೆ ತಕ್ಕ 'ಹಿನ್ನುಡಿ'ಯಾಗಿದೆ:

ಬೇಡ ನನಗೆ ಸಿದ್ಧಾಂತಗಳ ರಾದ್ಧಾಂತ;
ನನಗಿಲ್ಲ, ಇದೇ ಸರಿ ಇಷ್ಟೇ ಸರಿ ಎನ್ನುವ ಪಂತ,
ನಾ ಬಲ್ಲೆ, ಇವು ಎಲ್ಲ ಏರುವೆಯ
ಒಂದೊಂದು ಹಂತ.[೨]

ಇಂಥ ತಿಳುವಳಿಕೆಯುಳ್ಳ ಕವಿ ಯಾವ ಪ್ರಲೋಭನೆಗೂ ಒಳಗಾಗದೆ, ತಾತ್ಕಾಲಿಕವಾದ ರಂಗು ರಭಸಗಳಿಗೆ ವಶನಾಗದೆ, ಪರಿಸರ ಸಂವೇದಿಯಾಗಿ, ಸುತ್ತಲಿನ ಆಗು-ಹೋಗುಗಳ ಚಿಂತನೆಯೊಡನೆ ತನ್ನನ್ನು ಅರ್ಥಮಾಡಿಕೊಳ್ಳುತ್ತ, ತನ್ನ ಅಭಿವ್ಯಕ್ತಿಗೆ ಶಕ್ತಿಯನ್ನೂ, ಹೊಳಪನ್ನೂ ತಂದುಕೊಳ್ಳುತ್ತ, ತನ್ನ ನಿಲವನ್ನು ನಿಧಾನವಾಗಿಯಾದರೂ ಸಮರ್ಥವಾಗಿ ದೃಢಗೊಳಿಸುತ್ತಾನೆ. ಶಿವರುದ್ರಪ್ಪನವರ ಕಾವ್ಯದ ಬೆಳವಣಿಗೆ ಈ ಬಗೆಯದು. ಹಾವಸೆ ಹಬ್ಬಿ ಕೊಳೆವ ಕೊಳವಾಗದೆ 'ಲಲಿತ ನಿರ್ಮಲ ಜಲದ ಕಾಸಾರ'ವಾಗುವ ಬಯಕೆ ಅದರ ಆಂತರ್ಯದಲ್ಲಿ ಮೊದಲಿನಿಂದಲೂ ಮಿಡಿಯುತ್ತಿದೆ. ಅದೇ ಹೊತ್ತಿಗೆ, ತೀರ ದೂರದ ಆದರ್ಶಕ್ಕೆ ಕೈಚಾಚದೆ ತನ್ನ ಕರ್ತವ್ಯದ ವಾಸ್ತವಪ್ರಜ್ಞೆಯನ್ನು ಅದು ಉಳಿಸಿಕೊಂಡಿದೆ:

ಸದ್ಯಕ್ಕೆ ಬೇಡ ಬಿಡು ದೂರ ಗಿರಿ ನೆತ್ತಿಗಳ
ಮಂಜಿನಾಚೆಗೆ ನಿಂತು ಕರೆವ ತಾರೆ,
ಇರುವ ಹಣತೆಗೆ ಮೊದಲು ಎಣ್ಣೆ ಬತ್ತಿಯನೂಡು,
ಹಳೆಯ ಪಣತದ ಕಾಳ ಮಾಡದಿರು ಸೂರೆ[೩]

ತನ್ನ ಶಕ್ತಿಯನ್ನು ಹತ್ತು ದಿಕ್ಕಿಗೆ ಹರಿಸಿ, ಅದನ್ನು ಅಲ್ಲಲ್ಲಿ ಇಂಗಿಸಿ ವ್ಯರ್ಥಗೊಳಿಸದೆ ಒಮ್ಮುಖವಾಗಿ ಸಾಗುವ ಏಕಾಗ್ರತೆಯನ್ನೂ ಇಲ್ಲಿ ಕಾಣುತ್ತೇವೆ:

ಕಣಿವೆ ತಳದೊಳು ಕೊಳೆವ ಜೊಂಡಾಗದಿರು ಮಗುವೆ,
ಬೆಟ್ಟಗುಡ್ಡದ ಹೀರಿ ತೇಗವಾಗು,
ತಲೆಯ ಬಾಗದೆ ನಿಂತು, ಕೊಂಬೆರೆಂಬೆಯ ಚಾಚಿ
ಮಳೆ-ಬಿಸಿಲು-ಗಾಳಿಗಳ ತೊಟ್ಟಿಲಾಗು[೪]

ನವೋದಯ-ನವ್ಯಮಾರ್ಗಗಳ ಕೃತ್ರಿಮವಾದ ತಿಕ್ಕಾಟದಲ್ಲಿ ಇವರ ಕಾವ್ಯ ಯಾವ ಅಬ್ಬರವೂ ಇಲ್ಲದೆ ತನ್ನ ನಿಯತಗತಿಯನ್ನು ಕಾಯ್ದುಕೊಂಡು ಬಂದಿರುವುದು ಇವರ ಜೀವನದ, ಹಾಗೆಯೇ ಕಾವ್ಯದ ಧೋರಣೆಯೂ ಆಗಿದೆ:

ಸೂರುಲ್ಕೆಯ ರಭಸಮತಿಯ
ಅಬ್ಬರಗಳ ನಡುವೆಯೂ
ನಿಯತಗತಿಯ ತಾರಗೆಯೊಲು
ನೇರವಿರಿಸು ನನ್ನನು.[೫]

೨

ಶಿವರುದ್ರಪ್ಪನವರ ಕಾವ್ಯದ ಸಮಗ್ರ ಸಮೀಕ್ಷೆಗೆ ಇಲ್ಲಿ ಕೈಹಾಕದೆ, ಅವರ ಕಾವ್ಯದ ಒಂದು ಪ್ರಮುಖ ಲಕ್ಷಣವಾದ ಆಶ್ಚರ್ಯಭಾವವನ್ನು ಕುರಿತು, ಅದು ಅವರ ಕಾವ್ಯದುದ್ದಕ್ಕೂ ಬೆಳೆದು ವೈಭವಗೊಂಡಿರುವ ರೀತಿಯನ್ನು, ಹಾಗೂ ಪ್ರಕೃತಿಸೌಂದರ್ಯ ಚಿತ್ತ ಸೌಂದರ್ಯದಲ್ಲಿ ನೆಲೆಗೊಂಡು ಅದರ ಆಚೆಗೆ ಆಗಾಗ ದೃಷ್ಟಿಹಾಯಿಸುವ ಪರಿಯನ್ನು ಅವರ ಪದ್ಯಗಳಿಂದಲೇ ನಿರೂಪಿಸುವದು ನನ್ನ ಉದ್ದೇಶವಾಗಿದೆ.

ನಿಸರ್ಗದ ನೂರು ದೃಶ್ಯಗಳು, ಜೀವನದಲ್ಲಿ ಆಕಸ್ಮಿಕವಾಗಿ ಒದಗುವ ಘಟನೆಗಳು, ಸುತ್ತುಮುತ್ತಲಿನ ವ್ಯಕ್ತಿಗಳ ನಡವಳಿಕೆಗಳು, ಯಾವುದಾದರೊಂದು ವಸ್ತುವಿನ ಬಗೆಗೆ ನಾವಿಟ್ಟುಕೊಂಡಿರುವ ಭಾವನೆ, ವಾಸ್ತವವಾಗಿ ಅದು ಇರುವ ರೀತಿ–ಹೀಗೆ ಹಲವು ಬಗೆಯ ಅಚ್ಚರಿಗಳು ನಮ್ಮ ನಿತ್ಯ ಜೀವನದಲ್ಲಿ ನಮಗೆ ಕಾದಿರುತ್ತವೆ. ಬಾಲ್ಯದಲ್ಲಿ ಈ ಆಶ್ಚರ್ಯಭಾವ ಪ್ರಬಲವಾಗಿರುವಷ್ಟು, ವಯಸ್ಸಾದಂತೆ, ವಾಸ್ತವತೆಯ ಅರಿವು ಹೆಚ್ಚಾದಂತೆ ಕಡಮೆಯಾಗುತ್ತ ಹೋಗುತ್ತದೆ. ಆದರೆ ಕವಿಯಲ್ಲಿ ಅದು ಒಂದಿಲ್ಲ ಒಂದು ರೀತಿಯಲ್ಲಿ ಉಳಿದುಕೊಂಡು, ಕಾಲಕಾಲಕ್ಕೆ ಆಯಾ ಅನುಭವದೊಡನೆ ಅಲ್ಪಸ್ವಲ್ಪ ಮಾರ್ಪಾಟುಗೊಂಡು ಅವನ ಕಾವ್ಯಕ್ಕೆ ಮೆರುಗನ್ನು ತಂದುಕೊಡುತ್ತದೆ. ನಿಷ್ಕಲ್ಮಷ ಹೃದಯದ ಮಗುವಿನ ಬೆರಗುಗಣ್ಣು ಅವನ ಬೆಳೆದ ಮನಸ್ಸಿನ ಹಿಂದೆ ಎವೆತೆರೆದಿಕ್ಕುತ್ತಲೇ ಇರುತ್ತದೆ.[೬] ಈ ಲೋಕದ ಹಲಬಗೆಯ ಚೆಲುವು ಕವಿಯಲ್ಲಿ ಪ್ರೇರಿಸುವ ಬೆರಗೇ ಅವನ ಪರಿಭಾವನೆಯ ವಸ್ತುವಾಗುತ್ತದೆ. ಮೊದಲು ಯಾವುದೊ ರೂಢಿಗೊಳಪಟ್ಟ, ಸಾಮಾನ್ಯವೆನಿಸುವ ಒಂದು ಸಂಗತಿ–ಕವಿ ಅದನ್ನು ಕುರಿತು ಬರೆದ ಮೇಲೆ ನಮಗೆ ಹೊಸ ಲೋಕವೊಂದು ಗೋಚರಿಸುತ್ತದೆ. ಕವಿಯ ಈ ಅನುಭವದಿಂದ ನಮ್ಮ ಪ್ರಪಂಚದ ಅರಿವು ವಿಸ್ತಾರಗೊಂಡು, ಭಾವಗಳಾಗಿ ಹೊಸ ಚೆಲುವನ್ನೂ, ಒಲವನ್ನೂ ನಮಗೆ ಗಳಿಸಿಕೊಡುತ್ತದೆ.

ಪ್ರಕೃತಿಸೌಂದರ್ಯ, ಬಾಲ್ಯದ ನೆನಹುಗಳು, ಮಗುವಿನ ಮುಗ್ಧತೆ–ಇವು ಸಮರಸಗೊಂಡು ಶಿವರುದ್ರಪ್ಪನವರ ಕಾವ್ಯ ಸೃಷ್ಟಿಯ ಸೋಜಿಗವನ್ನು ಸೆರೆಹಿಡಿದು ನಮ್ಮ ವಿಸ್ಮಯಾನಂದವನ್ನು ಹೆಚ್ಚಿಸುತ್ತದೆ:

ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರು ಗಿಡದಿಂ–
ದೆಂತು ಮೂಡಿತೊ ಬೆಳ್ಳಗೆ![೭]

ಇದು ಹಚ್ಚಹಸುರಿನ ಗಿಡದಲ್ಲಿ ಬೆಳ್ಳಗೆ ಹೊಳೆಯುತ್ತಿರುವ ಹೂವಿನ ಚೆಲುವಿಕೆಯನ್ನು ಮಾತ್ರ ಕುರಿತದ್ದಾಗಿರದೆ, ಹಚ್ಚಹಸುರಿನಲ್ಲಿ ಇಷ್ಟು ಬೆಳ್ಳಗೆ ಅದು ಹೇಗೆ ಮೂಡಿತೊ ಎನ್ನುವ ರಹಸ್ಯ ಚಿಂತನೆಯಿಂದ ಅವ್ಯಕ್ತದ ಬಗೆಗೆ ನಮ್ಮ ಆಲೋಚನೆಯನ್ನು ಅದು ಕುದುರಿಸುತ್ತದೆ. ಹೀಗೆ ಸಾಮಾನ್ಯವಾಗಿ ಕಾಣುವ ಒಂದು ವಸ್ತುವಿನಲ್ಲಿಯ ಅಸಾಮಾನ್ಯವಾದ ಗುಣವೊಂದನ್ನು ಕಂಡ ಸಂತೋಷಾಶ್ಚರ್ಯದಿಂದ ತನ್ನ ಹೃದಯದಲ್ಲಿ ಹೊಮ್ಮಿದ ಬೆಳಕನ್ನು ಕವಿ ಕಾವ್ಯದಲ್ಲಿ ಕಾಣಿಸಿದ್ದಾನೆ.

ಬಾನು ತನ್ನೆದೆಯನ್ನು ತೆರೆದು ಬೆಳಕೆಲ್ಲವನ್ನು ಹೊರಗೆ ತುಳುಕಿಸಿದಂತೆ ಬೆಳುದಿಂಗಳ ಹಾಲಿನಲ್ಲಿ ಜಗತ್ತು ಮಿಂದಿರುವಾಗ ಶಿಶು ಮೊಲೆ ಕುಡಿಯುವಾಗ ಬಿಸುಟಿದ ಆಟದ ವಸ್ತುಗಳಂತೆ ಊರೆಲ್ಲ ತೋರುತ್ತದೆ. ಕವಿಯ ಕಣ್ಣಿಗೆ ಬಾನು-ಬುವಿಗಳನ್ನು ತಾಯಿ-ಮಗುವಿನ ಪ್ರತಿಮೆಯಲ್ಲಿ ಹೀಗೆ ಕಂಡರಿಸಿ "ಬೆಳಕು ತುಳುಕುವ ಬಾನಿನಡಿಯಲ್ಲಿ ಜಗವೆನಿತು ಕಿರಿದಾಗಿದೆ."[೮] ಎಂದಾಗ ಕವಿಯ ನಿರೂಪಣೆಯಲ್ಲಿಯ ರಸಾಂಶ ನಮ್ಮ ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಒಂದು ಸುಂದರ ಹೂವನ್ನು ಅರಳಿಸಿದ ಲತೆಯಂತೆ ನಸು ನಗುವ ಕಂದನೊಡನೆ ತಾಯಿ ಮಗ್ನಳಾಗಿರುವಾಗ ಒಲವಿನ ಹಿರಿಮೆಗೆ ಕವಿಯ ಮನಸ್ಸು ಮತ್ತದೇ ಬೆರಗನ್ನು ಪಡೆಯುತ್ತದೆ:

> **ಜಗವನಾಳುವ ಒಲವು ಮೈದೋರಿದೀ ಪರಿಗೆ**
> **ಬೆರಗು ಮೌನದೊಳಿರುವೆ ಬಾನಿನಂತೆ!**[೯]

ಕತ್ತಲೆಯ ರಾತ್ರಿಯಲ್ಲಿ ಮಿನುಗುವ ನಕ್ಷತ್ರಮಾಲೆಯನ್ನು ಕಂಡಾಗ ಕವಿಯ ಮನಸ್ಸು ಅಚ್ಚರಿಗೊಳ್ಳುವದು ಅವುಗಳ ಹೊಳಪಿಗಲ್ಲ-

> **ಇಂಥ ರತ್ನಾಭರಣಲೋಕವನು ಆ ಹಗಲು ತನ್ನ ಒಳಗೆ**
> **ಮುಚ್ಚಿದಚ್ಚರಿಗೀಗ ಮನವು ಬೆರಗು!**[೧೦]

ಕವಿಯ ಮನಸ್ಸಿನಲ್ಲಿ ಆಗಾಗ ಮೂಡುವ ಭಾವಗಳು ಮತ್ತು ಆ ಭಾವತನ್ಮಯತೆಯಲ್ಲಿ ಪ್ರಕೃತಿಯ ಚೆಲುವನ್ನು ಸವಿದು ಮಗುವಿನ ಅನಂತ ಚಟುವಟಿಕೆಗಳೊಂದಿಗೆ ಆ ಚಿತ್ರಗಳನ್ನು ಅನ್ವಯಿಸುವಾಗ ಸಹಜವಾದ ಸ್ವಭಾವೋಕ್ತಿಯಿಂದ ಇವರ ಕಾವ್ಯ ಸೊಗಯಿಸಿ, ತಕ್ಕ ವಾತಾವರಣವನ್ನು ಸೃಷ್ಟಿಸಿ ತನ್ನ ವೈಶಿಷ್ಟ್ಯವನ್ನು ಮೆರೆಯುತ್ತದೆ.

ಈ ದೃಷ್ಟಿಯಿಂದ ಮುಂದಿನ ಪದ್ಯಭಾಗಗಳನ್ನು ಇಲ್ಲಿ ಅವಲೋಕಿಸಬಹುದು: ಮನೆಯ ಹೆಂಚಿನ ಮೇಲೆ ಪಟ ಪಟ ಹನಿಯುದುರಿ ಎಲ್ಲೆಡೆಗೂ ಮಳೆ ಧುಮುಕಿದಾಗ-

> **ಅಲ್ಲೂ ಹೋದರು ಇಲ್ಲೂ ಹೋದರು**
> **ಎಲ್ಲರನೂ ಮಾತಾಡಿಸುವಾಸೆ !**
> **ಮರದಡಿ ಗಿಡದಡಿ ಹಸುರಿನಲಿ**
> **ಕಡೆಗಾ ಚರಂಡಿ ಕೊಳಚೆಯಲಿ**

ಹರಿದಾಡುವ ಮುಗಿಲಿನ ಮಕ್ಕಳಿಗೆ
ಈ ನೆಲವೆಂದರೆ ಎನಿತಾಸೆ ![೧೧]

ಕುಲುಕುಲು ನಗೆಯಲ್ಲಿ ಸುಳಿಗಾಳಿಯ ಕಿವಿಯಲ್ಲಿ ಏನೊ ಮಾತಾಡುತ್ತಿರುವಂತೆ ತೋರುವ ಕೆರೆಯ ತೆರೆಗಳನ್ನು ಸಂಬೋಧಿಸುವಾಗ–

ಸರಸಿ ಪಡೆದ ಮುಗುಳುನಗೆಯ
ಸುಳಿದಾಡುವ ಮಕ್ಕಳೇ
ಕೆರೆಯ ಮನಸು ದಡಕೆ ನುಡಿದ
ತುಂಬೊಲವಿನ ನುಡಿಗಳೇ[೧೨]

ಮರದಲ್ಲಿ ಬಂದು ಕುಳಿತ ಹಕ್ಕಿಗಳ ಧ್ವನಿ ಕೇಳಿದಾಗ–

ಮನೆ ಸುತ್ತ ಕೊಡೆನಿಂತ ಮರದ ಕೊಂಬೆಯ ತುಂಬ
ಚಿಲಿಪಿಲಿ ಸೊಲ್ಲು
ಮರಮರದಲ್ಲು ನಡೆದಿದೆ ಪ್ರೈಮರೀ ಸ್ಕೂಲು ![೧೩]

ಸಂಜೆ ಪಾರ್ಕಿನಲ್ಲಿ ಕುಳಿತು ಬದಿಯ ಮರದಲ್ಲಿಯ ಹಕ್ಕಿಯಿಂಚರ ಕೇಳಿದಾಗ ಆ ಮರವನ್ನು ಕುರಿತು ಹೊಸ ಪ್ರತಿಮೆಯೇ ಮೈದಾಳುತ್ತದೆ–

ಈ ಪಾರ್ಕಿನ ಮರಮರವೂ
ನೂರು ಹಕ್ಕಿಯಿಂಚರದಲಿ
ಗಿಲಿಗಿಚ್ಚಿಗಳಾಗಿವೆ ![೧೪]

ಹುಣ್ಣಿಮೆಯ ಚಂದ್ರ ಉದಯಿಸಿದ್ದಾನೆ. ಕ್ಷಿತಿಜದಲ್ಲಿ ಗುಡ್ಡಗಳ ಸಾಲು ಮಸು ಮಸುಕಾಗಿ ಗೋಚರಿಸುತ್ತಿದೆ. ತೆಂಗು ಅಡಕೆಗಳು ಆ ನೆಳಲು–ಬೆಳಕಿನಲ್ಲಿ ಎತ್ತರವಾಗಿ ಕಾಣುತ್ತಿವೆ. ಮಗುವೊಂದು 'ಚಂದುಮಾಮ ಬಾ' ಎಂದು ತನ್ನ ಪುಟ್ಟ ಕೈಗಳನ್ನು ಆಕಾಶದ ಕಡೆಗೆ ಬೀಸುತ್ತಿದೆ. ಇಂಥ ಒಂದು ವಾತಾವರಣದಲ್ಲಿ ಕವಿ ಮೂಡಿಸಿದ ಚಿತ್ರ ಎಷ್ಟೊಂದು ಹೊಚ್ಚ ಹೊಸತಾದದ್ದು!–

ಯಾರು ಕೊಟ್ಟರೋ ಬಾನಿಗೊಂದು ಬಂಗಾರದ ಮೆಡಲು!
ಸಂಜೆ ಬೆಳಕಿನಲಿ ಸಾಲು ಗುಡ್ಡಗಳು
ಅನಂತತೆಯ ಮೊದಲು!
ತೆಂಗು ಅಡಕೆಗಳು ಜಿರಾಫೆ ಕೊರಳನು
ಮೇಲಕೆತ್ತಿ ನಿಲಲು[೧೫]

ಬಾನ ತುಂಬ ಹರಡಿದ ಮೋಡದಲ್ಲಿ ಚಂದಿರ ಸ್ವಲ್ಪ ಮರೆಯಾದಾಗ:

ಬಾನ ಬಟ್ಟೆಗುಜ್ಜೆ ಉಜ್ಜೆ ಮುರುಕು ಸೋಪಿನಂತೆ
ತೆಳ್ಳಗಾದ ಚಂದಿರ
ಮೈಲಿಗೆಯೊಳು ತೇಲುತಿಹನು ಕವಿದ ಹಾಗೆ ಮಂಪರ.[೧೬]

ಹೀಗೆ ನವೋನವವಾಗಿ ಮೂಡಿದ ಪ್ರಕೃತಿ ಚಿತ್ರಗಳು ಎಳೆ ಮಗುವಿನ ಬೆರಗುಗಣ್ಣಿನ ಮೂಲಕ ನಿರಹಂಕಾರದ ಆನಂದವನ್ನು ಓದುಗನಿಗೆ ಒದಗಿಸುತ್ತವೆ.

೩

ಮೊದಲಿನ ಮುಗ್ಧಸ್ನಿಗ್ಧ ಬೆರಗು, ಕವಿಯು ಬೆಳೆದಂತೆ ಅನುಭವ ದಟ್ಟವಾಗುತ್ತ ಪ್ರಬುದ್ಧ ಪರಿಭಾವನೆಗೆ ಎಡೆಗೊಟ್ಟು ಮಾನವ-ಪ್ರಕೃತಿ-ಜೀವನಗಳ ಸಂಗಮದಲ್ಲಿ ಮುಳುಗಿ ಬೇರೊಂದು ಮೆರುಗನ್ನು ಪಡೆಯುತ್ತದೆ. ಸಂತೋಷಾಶ್ಚರ್ಯ, ಚಿಂತನೆಯಿಂದ ಸಖೇದಾಶ್ಚರ್ಯವಾಗಿ ಪರಿಣಮಿಸುತ್ತದೆ. 'ಜಡೆ' ಕವಿತೆಯಲ್ಲಿ ಅದು ಈ ಹಿಂದೆಯೇ ಹೊಳಹುಗೊಂಡಿತ್ತು:

ಎಲ್ಲವೂ ರಮ್ಯವೆಲ್ಲ !
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
ಕಾಣದಲ್ಲ ![೧೭]

ಚಿರನೂತನವಾದ ಚಿರಂತನ ಸೌಂದರ್ಯದ ದರ್ಶನವಿನ್ನೂ ನಮಗೆ ಆಗಿಲ್ಲ. ನಮಗೀಗ ಕಂಡಿರುವದು ಅದರ ಬೇರೆ ಬೇರೆ ವಿಲಾಸಗಳು. ಅದನ್ನು ಕಾಣುವವರೆಗೂ ಮನಸ್ಸಿನ ಕಾತರ, ಎದೆಯ ತುಡಿತ ಇದ್ದದ್ದೇ. ಕವಿತೆಯನ್ನು ಓದುತ್ತ ಹೋದಂತೆ ಸಾಮಾನ್ಯ ಭಾವಸ್ಥಿತಿ ಹೀಗೆ ಭವ್ಯತೆಯಲ್ಲಿ ನಿಂತು ಹೊಸ ದರ್ಶನವನ್ನು ಪಡೆಯುತ್ತದೆ.

ಪ್ರಕೃತಿಯಲ್ಲಿ ಪ್ರತ್ಯಕ್ಷವಾದ ಪ್ರತೀಕಗಳು ಭಾವಪ್ರತೀಕಗಳಾಗಿ ಮಾರ್ಪಟ್ಟು, ಭಾವಸಾಂದ್ರತೆಯಿಂದ ಸಂಕೀರ್ಣಾನುಭವಗಳ ಅಭಿವ್ಯಕ್ತಿಗೆ ದಾರಿಮಾಡಿಕೊಟ್ಟಿವೆ. ಇರುಳಿನಲ್ಲಿ ಸುರಿವ ಮಳೆಯ ಪ್ರತಿಮೆಯ ಮೂಲಕ ಶ್ರೀಕೃಷ್ಣನ ಜೀವನದ ಅಗಮ್ಯತೆ ಹಾಗೂ ಉದ್ದೇಶದ ಪ್ರತೀತಿಯುಂಟಾಗುತ್ತದೆ:

ಮತ್ತೆ ಮತ್ತೆ ಅಂಧಕಾರ
ಮಳೆ ಹನಿಗಳ ಪಂಜರ
ದೈತ್ಯಸೆರೆಯ ಕಂಬಿಯೊಳಗೆ
ಬಂತು ದೇವಕುಂಜರ[೧೮]

ಮನೆ ಮನೆಯ ಮುಂದೆ ಕುಡಿಯಾಡಿಸುವ ದೀಪಾವಳಿಯ ಕಿರುಹಣತೆಗಳು 'ಕತ್ತಲ ಗೋವರ್ಧನವನ್ನೆತ್ತುವ ಸಾಸಿರ ಶ್ರೀಕೃಷ್ಣನ ಬೆರಳು'ಗಳಂತೆ ಯುಗಯುಗದವತಾರದ ಭವ್ಯಸ್ಮೃತಿಯನ್ನು ಉದ್ದೀಪನಗೊಳಿಸುತ್ತವೆ. ಬೆಳಕಿನ ಆ ಉತ್ಸಾಹ ಉಲ್ಲಾಸದಿಂದ

ಹಣತೆಯ ಹಡಗಾಗಿವೆ ಮನೆ ಮನೆಯೂ
ಕತ್ತಲ ಕಡಲೊಳಗೆ[೧೯]

ಪ್ರಕೃತಿಸೌಂದರ್ಯ ಹಾಗೂ ಜೀವನ ಸೌಂದರ್ಯಗಳು ಒಂದರೊಳಗೊಂದು ಬೆಸೆದುಕೊಂಡು ಮೂರ್ತಿಗೊಳ್ಳುವ ದೇವಶಿಲ್ಪವನ್ನು ಕವಿಯ ಪ್ರಬುದ್ಧ ಪರಿಭಾವನೆ ಗುರುತಿಸಿ, ಇರುಳಿನಲ್ಲಿ

ಮೊಗ್ಗಿ ನೆದೆಯ ಗರ್ಭಗುಡಿಯ
ಅತಿನಿಗೂಢ ಗಹನದಲ್ಲಿ
ಚೆಲುವು ಶಿಲ್ಪ ಕೆತ್ತುತಿರಲು
ಜಾನ ಕಮಂಡಲುವಿನಿಂದ
'ಓಂ ಸ್ವಸ್ತಿ' ತುಳುಕಲು[೨೦]

ಅರಳಿ ನಿಂತ ಹೂವು ಚೆಲುವೊಂದೇ ಗೆಲುವುದರ ಪ್ರತೀಕವಾಗಿ ನಿಲ್ಲುತ್ತದೆ. ಬೆಳಕು–ಕತ್ತಲೆಯ ಸಮರ ಇಂದಿಗೂ ಕೊನೆಗಾಣದೆ ಸಾಗಿರುವಾಗಲೂ

ಇರುಳ ನಭದಲಿ ಬೆಳಕು ತಾರೆಯ ನೂರು ಧ್ವಜವನು ನಟ್ಟಿದೆ[೨೧]

ಎಂಬ ತಿಳುವಳಿಕೆಯನ್ನು ಈ ಚಿತ್ರಗಳು ನಮಗೆ ನೀಡುತ್ತವೆ. 'ಗರಿ ಮೂಡಿದ ಕನಸಿನಂತೆ ಬೆಳ್ಳಕ್ಕಿಯ ಮಾಲೆ' 'ದಿವ್ಯಸುಂದರ ಕವನದೊಂದು ಸಾಲಿ'ನಂತೆ ಸೃಷ್ಟಿಯ ಚೆಲುವಿನ ಒಂದೊಂದೇ ಪುಟವನ್ನು ನಮ್ಮ ಕಣ್ಣೆದುರು ತೆರೆಯುತ್ತ ನಮ್ಮ ಮನಸ್ಸನ್ನು ಹದಗೊಳಿಸುತ್ತವೆ.

ಜೀವನದ ಚೆಲುವು–ಒಲವಿಗೆ, ನಯ ವಿನಯಕ್ಕೆ ಪ್ರಕೃತಿ ಪುಟವಿಟ್ಟಂತೆ ಆಳವಾದ ನೋವಿನ ಅನುಭವಕ್ಕೂ ಅದು ಪ್ರತಿಮೆಯಾಗಿ ನಿಲ್ಲದಿಲ್ಲ. ನೆರಳಿಲ್ಲದ ದಾರಿಯಲ್ಲಿ ಪಯಣ ಸಾಗಿದಾಗ.

ನೀಲಿಯ ನಿರ್ಭಾವದ ಬಾನೋ
ಬಿರು ಬಿಸಿಲಿನ ಗೋರಿ[೨೨]

ಎನಿಸಿದರೆ ಆಶ್ಚರ್ಯವಿಲ್ಲ. ಹಿಂದಿನ ಜೀವನದಲ್ಲಿ ಸುತ್ತಲೂ ಅನ್ಯಾಯಗಳ ಸಂತೆ ಸಾಗಿರುವಾಗ, ಹಗಲೊ ರಾತ್ರಿಯೊ ಇವನ ಬಾಳನ್ನು ತಿವಿಯುತ್ತ, ಗಾಸಿಗೊಳಿಸುತ್ತಿರುವಾಗ ನೊಂದವರ ಪ್ರತಿನಿಧಿಯಂತಿರುವ ಈ ವ್ಯಕ್ತಿಯನ್ನು

ಬೆಂಕಿ ಬಾಯನು ತೆರೆದು ನಗುವ ಮೂಡಲ ಬಾನು
ನೂರು ತೂತಿನ ಛತ್ರಿ ಬಿಚ್ಚುವಿರುಳಿನ ಬಾನು
ನಿಡುಸುಯ್ಲಿನೊಲು ನಡೆದ ಗಾಳಗಳ ಹೊನಲು...
ಎಲ್ಲವೂ ಇವನನ್ನು ಅರೆಯುತಿಹವು[೨೩]

ವ್ಯಕ್ತಿ ವ್ಯಕ್ತಿಯ ನಡುವೆ ಅಸೂಯೆ, ಅಹಂಕಾರ, ತಪ್ಪು ತಿಳುವಳಿಕೆಗಳ ಗೋಡೆಗಳನ್ನೆಬ್ಬಿಸಿಕೊಂಡು ಬದುಕುತ್ತಿರುವ ಮನುಷ್ಯಜಾತಿಯ ಸ್ವಭಾವವನ್ನು ಕಂಡು ಕವಿಗೆ ಆಶ್ಚರ್ಯವೆನಿಸುತ್ತದೆ. ಪರಸ್ಪರ ಅರಿವು, ಆತ್ಮೀಯತೆಗಳಿಗೆ ಹೊರತಾದ ಆವರಣದಲ್ಲಿ ಸಿಕ್ಕುಬಿದ್ದ ಜೀವದ ವೇದನೆಯನ್ನು ಯಾರು ಅರ್ಥಮಾಡಿಕೊಳ್ಳುತ್ತಾರೆ?

ಸದಾ ಹೊಯ್ಯುವ ಮಳೆ, ಸುಯ್ಯುವ ಗಾಳಿ ನನ್ನ ನಿನ್ನ ನಡುವೆ
ಉರಿಯುವ ಬೇಸಗೆ, ಕೆಂಡದ ಹಾಸುಗೆ ನನ್ನ ನಿನ್ನ ನಡುವೆ
ಉದುರುವ ಎಲೆ, ಉರಿಯುವ ಚಿತೆ ನನ್ನ ನಿನ್ನ ನಡುವೆ
ಹದ್ದಿನ ರೆಕ್ಕೆಯ ನೆರಳೂ, ಬೇಟೆ ನಾಯಿಗಳ ಬೊಗಳೂ ನನ್ನ ನಿನ್ನ ನಡುವೆ.[೨೪]

ಲೋಕದ ದುರ್ನಡತೆಗೆ ಕವಿ ತೋರಿಸುವ ಇಂಥ ವಿಷಾದಪೂರ್ಣ ಪ್ರತಿಕ್ರಿಯೆಯಲ್ಲಿ ಹೊಯ್ಯುವ ಮಳೆ, ಸುಯ್ಯುವ ಗಾಳಿ, ಉರಿಯುವ ಬೇಸಗೆ, ಉದುರುವ ಎಲೆ–ಇವೇ ಮೊದಲಾದ ಪ್ರಕೃತಿಯ ಋತುಮಾನದ ಕ್ರಿಯೆಗಳನ್ನು ಎಷ್ಟೊಂದು ಸಮರ್ಥವಾಗಿ ಜ್ವಲಂತರೂಪಕವಾಗಿ ಭಾವತೀವ್ರತೆಗೆ ಕವಿ ಬಳಸಿಕೊಂಡಿದ್ದಾನೆಂಬುದು ಗಮನಾರ್ಹ ವಾಗಿದೆ. ಜೀವನಾನುಭವದೊಂದಿಗೆ ಪ್ರಕೃತಿಯ ರೌದ್ರ ಮುಖವೂ ಇಲ್ಲಿ ಕಾಣಿಸಿಕೊಂಡು ಕಾವ್ಯಾಭಿವ್ಯಕ್ತಿಗೆ ಕಸುವನ್ನೂ ಕಾವನ್ನೂ ನೀಡಿದೆ.

ಪ್ರಕೃತಿ, ಜೀವನದ ಪ್ರತೀಕವಾಗಿ ಮೊದಲಿನ ಮುಗ್ಧವಾದ ಬೆರಗು ಈಗ ಪ್ರಬುದ್ಧ ಚೇತನದ ನಿಬ್ಬೆರಗಾಗಿದೆ:

ಎಷ್ಟೊಂದು ಸಿಹಿನೀರ ಹೊಳೆ ಹರಿದರೂ ತೀರದಿದೆ
ಉಪ್ಪು ಕಡಲಿನ ಕಪ್ಪು ಬಾಯಾರಿಕೆ[೨೫]

ಅಕ್ಕಮಹಾದೇವಿಯ ಮಹಾವ್ಯಕ್ತಿತ್ವ ಸಾಧನೆಯನ್ನು ಚಿತ್ರಿಸುತ್ತ, ಆಕೆಯ ಅಮೃತ ಮುಹೂರ್ತದ ಸಿದ್ಧಿಯನ್ನು ನಿಸರ್ಗದ ನಿಲವಿನಲ್ಲಿಯೇ ಕವಿ ಭವ್ಯವಾಗಿ ನಿತಾಂತ ರಮಣೀಯವಾಗಿ ನಿಲ್ಲಿಸಿದ್ದಾನೆ:

ಬೆಳಕುಮ್ಮೆ ನಡೆದಿತ್ತು ಕತ್ತಲೆಯ ಮುಡಿಗೆದರಿ
ಚಿಕ್ಕೆ ಹೆಜ್ಜೆಯನಿಟ್ಟು ಬಾನ ತುಂಬ!
ಬೆಳಗು ಬೆಳಗೊಳು ಬೆರೆದು ಒಲವಿನಲಿ ಮೂಡಿತ್ತು
ಶ್ರೀಶೈಲ ಜೂಟದಲಿ ಚಂದ್ರಬಿಂಬ ![೨೬]

ಅದೇ ರೀತಿ ರವೀಂದ್ರರ ಕಾವ್ಯದ ವ್ಯಾಪ್ತಿಯನ್ನೂ ಘನತೆಯನ್ನೂ ಸೂಚಿಸುವ ಮಾತು ಸಾರವತ್ತಾಗಿ ಅರ್ಥವತ್ತಾಗಿ ಹೊಳೆಯುತ್ತವೆ:

ಮಿರುಗುವಿಬ್ಬನಿಯಿಂದ ಉರಿವ ಚಿಕ್ಕೆಯ ತನಕ
ಇರುವ ಬೆರಗಿನ ತಂತಿಯೆಲ್ಲವನು ಮಿಡಿದವನು[೨೭]

ಇಂದಿನ ಕವಿಯ ಜೀವನವೂ, ಸೃಷ್ಟಿಯೂ ವಿಶಾಲವಾಗುತ್ತ ನಡೆದಂತೆ ಸುತ್ತು ಮುತ್ತು ನಡೆದ ವಿದ್ಯಮಾನಗಳೆಲ್ಲ ಕಾವ್ಯಾನುಭವಕ್ಕೆ ಒಳಪಟ್ಟು ಹೊಸ ಭಾವ ಮೌಲ್ಯಗಳನ್ನು ನಿರ್ಮಿಸಬಲ್ಲವು. ರಾಕೆಟ್ಟಿನ ಸಾಧನೆ ಉಪಗ್ರಹಗಳನ್ನು ಆಕಾಶಕ್ಕೆ ಏರಿಸುತ್ತಿರುವಾಗ ನೆಲವನ್ನೆ ವಾಹನವನ್ನಾಗಿಸಿ ಜನಮನಗಳ ಹಾದಿಯಲ್ಲಿ ನಡೆದು ಮೆಲ್ಲನೆ ನುಡಿವ ವಿನೋಬಾ ಒಂದು ವ್ಯಕ್ತಿಯಲ್ಲ, ಶಕ್ತಿ. ಬಹಿರಂಗವನ್ನು ಗೆಲ್ಲುವ ರಭಸದಟ್ಟಹಾಸ ಸ್ಪೂಟ್ನಿಕ್ಕಿನ ಮುಖದಲ್ಲಿ ಜ್ವಲಿಸುತ್ತಿದ್ದರೆ, ಒಳಬಗೆಗಳನೊಲಿದು ಗೆಲುವ ಚಂದ್ರಹಾಸ ಇವನ ಕಣ್ಣುಗಳಲ್ಲಿ ಮಿನುಗುವುದನ್ನು ಕವಿ ಕಂಡಿದ್ದಾನೆ. ವಿಜ್ಞಾನದ ಅದ್ಭುತ ಸಾಧನೆಯೊಂದೇ ಸೋಜಿಗದ ವಸ್ತುವಲ್ಲ–

ಅಗೊ ಸ್ಪೂಟ್ನಿಕ್, ಇಗೊ ವಿನೋಬ,
ಈ ಎರಡೂ ಸೋಜಿಗ,

ಬಾನೊಳೊಂದು ಬುವಿಯೊಳೊಂದು;
ಬೆರಗಾಗಿದೆ ಈ ಜಗ[೨೮]

ಜಗತ್ತು ಬೆರಗುಗೊಂಡಿತೊ ಇಲ್ಲವೊ, ಆದರೆ ಸೂಕ್ಷ್ಮ ಸಂವೇದಿಯಾದ ಹಾಗೂ ಜೀವನದ ಮೌಲ್ಯಗಳನ್ನು ಶೋಧಿಸಿ ತೆಗೆಯುವ ಕವಿಯ ಮನಸ್ಸು ಮಾತ್ರ ಮೊದಲಿನಿಂದಲೂ ಅದರ ಅನುಸಂಧಾನದಲ್ಲಿದೆ. ಇಷ್ಟೇ ಅಲ್ಲ, ಅದು ಒಮ್ಮೊಮ್ಮೆ ಅನುಭಾವದ ಹೊಂಬೆಳಕನ್ನೂ ನಮ್ಮ ಅಂತರಂಗಕ್ಕೆ ಹಾಯಿಸುತ್ತದೆ:

ಟಗರು ಮೈಯ ಬೆಟ್ಟಗಳಲಿ
ಹೆಪ್ಪು ನಿಂತ ಹಸುರುಗಳಲಿ
ಬಿಸಿಲ ನೆನಪು ತೂರಿ ಬಂದು
ಬೆರಗಾಗಿಸೆ ಮೌನವ,
ನೂರು ಹಕ್ಕಿಯಿಂಚರಗಳ
ಲಾಳಿಯಾಡಿ ನೇಯುತಲಿದೆ
ಕಾಣದ ದೇವಾಂಗವ![೨೯]

ಹೆಪ್ಪು ನಿಂತ ಹಸುರಿನಲಿ ಬಿಸಿಲ ನೆನಪು ತೂರಿ ಬರುವದೂ, ಮೌನವನ್ನೇ ಬೆರಗಾಗಿಸುವದೂ ಜೀವನದಲ್ಲಿ ಆಗೀಗ ಒದಗಬಹುದಾದ ಆಧ್ಯಾತ್ಮಿಕ ಅನುಭವದ ಬೆಳಕನ್ನು ಸೂಚಿಸುವುದಲ್ಲದೆ ಕೊನೆಯ ಮೂರು ಸಾಲುಗಳು ಪ್ರಕೃತಿಯ ಮೂಲಕ ಕವಿಯು ಅನುಭವಿಸುವ ಅವ್ಯಕ್ತ ಸೌಂದರ್ಯವನ್ನು ಅದ್ಭುತವಾಗಿ ಪ್ರತಿಮಿಸುತ್ತವೆ. 'ದೇವಾಂಗ' ಪದದ ಶ್ಲೇಷೆ ಇಲ್ಲಿ ಎಷ್ಟೊಂದು ಧ್ವನಿಪೂರ್ಣವಾಗಿದೆಯೆನ್ನುವದನ್ನು ಗಮನಿಸಬಹುದು.

ಬಿದಿಗೆ ಚಂದಿರ ಮುಳುಗುತ್ತಿರುವ ಒಂದು ಸಂಜೆಯ ಚಿತ್ರದೊಂದಿಗೆ ಶಕುಂತಲೆಯ ಜೀವನದ ಒಂದು ಚಿಕ್ಕ ಘಟನೆಯ ಪರಿಣಾಮದಾರುಣತೆಯನ್ನು ಸುಂದರವಾಗಿ ಸೃಷ್ಟಿಸುತ್ತದೆ 'ಶಾಕುಂತಲ ಸಂಧ್ಯೆ' ಎಂಬ ಚಿಕ್ಕ ಪದ್ಯ :

ಸಂಜೆ ಬಾನಿನಂಚಿನಲಿ
ಬಿದ್ದ ಬಿದಿಗೆ ಚಂದಿರ
ಶಚೀತೀರ್ಥದಾಳದಲ್ಲಿ
ಶಕುಂತಲೆಯ ಉಂಗುರ
ದುರ್ವಾಸರ ಶಾಪವಿಗೋ
ಕವಿಯುತಿಹುದು ಸುತ್ತಲೂ
ಕಂಡುದೆಲ್ಲ ಜಾರುತಿಹುದು
ಮೆಲ್ಲನಿರುಳ ತಮದೊಳು
ಅಸಹಾಯಕ ತಾರೆಬಳಗ
ಹನಿಗಣ್ಣೊಳು ನೀರವ
ಸುಯ್ವುಗಾಳಿ ತಡೆಯುತಿಹುದು
ಉಕ್ಕಿ ಬರುವ ದುಃಖವ.[೩೦]

ಈ ಪೌರಾಣಿಕ ಪ್ರಸಂಗವನ್ನು ಪ್ರಕೃತಿಯ ತಕ್ಕ ಸನ್ನಿವೇಶದೊಂದಿಗೆ ತಾದಾತ್ಮ್ಯಗೊಳಿಸಿದಾಗ ಉಂಟಾಗುವ ರಸಾನುಭವ ಸದ್ದಿಲ್ಲದೆ ನಡೆಯುವಂಥದು.

ತನ್ನ ಜೀವನದಲ್ಲಿ ಅನಿರೀಕ್ಷಿತವಾಗಿ ನುಗ್ಗುವ ಅಪಾಯವೊಂದನ್ನು ಕವಿ ಊಹಿಸಿ ಅದಕ್ಕೆ ನೀಡುವ ಎಚ್ಚರಿಕೆ ಅಥವಾ ಅದನ್ನು ಕುರಿತ ಸಂವೇದನೆ ಉಲ್ಕೆಯ ವಸ್ತು ಪ್ರತಿರೂಪದಲ್ಲಿ ಸಮರ್ಥವಾಗಿ ಬೆಳೆದು ಬಂದಿದೆ:

ಬಾರದಿರು ಉಲ್ಕೆಯಾಗಿ
ನೀನು ನನ್ನ ಬಾನಿಗೆ–
ಬೆಂಕಿ ಪೊರಕೆಯಿಂದ ಗುಡಿಸಬೇಡ ನೀನು ನನ್ನ
ನೀಲ ಪಥದ ಮೌನವ
ಇಲ್ಲಿ ಎಲ್ಲ ನಡೆಯುತಲಿವೆ
ಹಿಡಿದು ಮಿಡಿದು ಯಾವುದೋ ಒಂದು ರಾಗ ತಾಳವ.[೬೧]

ನಗರ ಜೀವನದ ಗಡಿಬಿಡಿ ಗದ್ದಲಗಳಲ್ಲಿ ಬರುವ ಭಾನುವಾರದ ವಿರಾಮದ ಸೊಗಸೆಂಥದು!

ಈ ದಿನ ಭಾನುವಾರ–

ಹರಿವ ಹೊಳೆ ತಟ್ಟನೆ ನಿಂತು ಮಡುವಾಗಿ,
ನನ್ನ ದಡದಲ್ಲಿರುವ ಗಿಡಮರಬಳ್ಳಿ
ಪ್ರತಿಫಲಿಸಿ
ಏನೋ ಸಮಾಧಾನ[೬೨]

ತಾನೇ ತಾನಾಗಿರುವ ಇಂಥ ಒಂದು ಕ್ಷಣವನ್ನೆ ಸಂತಸಿದ್ಧರ ಮನಸ್ಸು ನಿತ್ಯವಾಗಿರಿಸಿಕೊಂಡಿರಬಹುದೆ? ಎಂದುಕೊಳ್ಳುತ್ತಾನೆ ಕವಿ. ಈ ಒಂದು ಕ್ಷಣದಲ್ಲಿ 'ನಾನೂ ಒಬ್ಬ ಸಿದ್ಧ, ಅಥವಾ ಸ್ವಲ್ಪ ಕೆಳಗಿನ ಬುದ್ಧ!' ಎಂದು ಅವನಿಗೆನಿಸಿದರೆ ಆಶ್ಚರ್ಯವಿಲ್ಲ.

ಕೊಂಬೆ ಕೊಂಬೆಗಳಲ್ಲಿ ಹಕ್ಕಿಗೂಡುಗಳು. ನಗರದಲ್ಲಿ ಕೇರಿಯುದ್ದಕ್ಕೂ ಮನೆಗಳು, ಮಹಡಿಗಳು. ಸಂಜೆಯಾದೊಡನೆಯೇ ಜನ ಬಂದು ಮನೆ ಸೇರಿಕೊಂಡು ಸಾಗುತ್ತದೆ ಸಂಸಾರ. ಬೆಳಗಾಗುತ್ತಲೇ–

ಹೊತ್ತಾರೆ ಕತ್ತಲೆಯ ಮೊಟ್ಟೆ ಒಡೆದು
ಬೆಳಕು ಗರಿ ಬಿಚ್ಚಿ ಕೂತಾಗ
ರೆಕ್ಕೆಗಳು, ಕಾಲುಗಳು, ಗಾಲಿಗಳು
ಮತ್ತೆ ಯಥಾಪ್ರಕಾರ ಚಲಿಸತೊಡಗುತ್ತವೆ.[೬೩]

ಹೀಗೆ ಬಿಡಿಯಾಗಿ ಚಿತ್ರವಾಗಿ, ರೂಪಕವಾಗಿ, ಪ್ರತಿಮೆಯಾಗಿ, ಪ್ರತೀಕವಾಗಿ ಕಾವ್ಯದಲ್ಲಿ ಹಾಸುಹೊಕ್ಕಾಗಿರುವ ಪ್ರಕೃತಿ ಹಲವಾರು ಕವಿತೆಗಳಲ್ಲಿ ಇಡಿಯಾಗಿ, ಸಾವಯವ ಸಂಪೂರ್ಣವಾಗಿ, ಕಾವ್ಯಶಿಲ್ಪವಾಗಿ ಪರಿಣಮಿಸಿರುವುದು ಶಿವರುದ್ರಪ್ಪನವರ ಕಾವ್ಯದ

ಬೆಳವಣಿಗೆಯನ್ನು ಸೂಚಿಸುತ್ತದೆ. ಉತ್ತಮ ಸಿತಾರ್‌ವಾದನ ಅಂತರಂಗದಲ್ಲಿ ಮೂಡಿಸುವ ವಿವಿಧ ಭಾವನೆಗಳನ್ನು 'ಇದುವರೆಗೆ ನೀವು ಕೇಳಿದ್ದು' ಕವಿತೆ ಪ್ರಕೃತಿಯ ಚಿತ್ರಗಳ ಮೂಲಕವೇ ಪ್ರಭಾವಶಾಲಿಯಾಗಿ ಮನಸ್ಸನ್ನು ಮುಟ್ಟುತ್ತದೆ. ಇಡಿಯ ವರುಷದ ಋತುಗಳ ಲಕ್ಷಣಗಳನ್ನು ಕ್ರಿಯಾಶಾಲಿಯಾಗಿ ಬಾಲ್ಯದಿಂದ ವೃದ್ಧಾಪ್ಯದವರೆಗಿನ ಹೆಣ್ಣಿನ ರೂಪದಲ್ಲಿ ಮೈದೋರುವಂತೆ ಚಿತ್ರಿಸಿರುವ ಕೌಶಲವನ್ನು 'ಶಾರದೆ'ಯಲ್ಲಿ ದೃಶ್ಯಮಯವಾದ ಶೈಲಿಯಲ್ಲಿ ಕಾಣಬಹುದು. 'ವ್ಯಕ್ತಿಯ ಇಡೀ ಜೀವಮಾನವನ್ನು ಒಂದು ದಿನಮಾನದಲ್ಲಿ ಹಾಗೂ ಋತುಮಾನದಲ್ಲಿ ಅಡಕಗೊಳಿಸಿ ನೋಡಿದ ನಿರೂಪಣೆ' 'ಮಬ್ಬಿನಿಂದ ಮಬ್ಬಿಗೆ'ಯಲ್ಲಿ ಪ್ರತಿಮಾರೂಪವಾಗಿದೆ. ಸುತ್ತಣ ನೆಲದ ಹಸುರಿನನುಭವದ ಪ್ರಜ್ಞೆಯೆ ಇಲ್ಲದಿರುವ ಕುಂಡದ ಗಿಡದ ಮೂಲಕ ಆಧುನಿಕ ವ್ಯಕ್ತಿಯ ಅನಾಥಪ್ರಜ್ಞೆ ಅನುಕಂಪದಿಂದ ಚಿತ್ರಿತವಾಗಿದೆ 'ಪ್ರಜ್ಞೆ'ಯಲ್ಲಿ.

ಶಿವರುದ್ರಪ್ಪನವರ ಕಾವ್ಯೋದಯಕ್ಕೆ ಕಾರಣವಾದ ವಿಸ್ಮಯ ಭಾವ (ಸಂತೋಷ-ಖೇದ ಎರಡರಲ್ಲೂ) ಪ್ರಕೃತಿಯಲ್ಲಿ, ಜೀವನದಲ್ಲಿ, ಎರಡರ ಸಮರಸದಲ್ಲಿ, ಅನುಭವ ಹಾಗೂ ಆಲೋಚನೆಯ ಮಟ್ಟದಲ್ಲಿ ದಟ್ಟೈಸಿ ನಿಂತು ಅವರ ಕಾವ್ಯಕ್ಕೆ ಹೊಸ ರುಚಿಯನ್ನು, ದೃಷ್ಟಿಯನ್ನು ತಂದುಕೊಟ್ಟಿದೆ. ನಿಸರ್ಗ ಹಾಗೂ ಮಾನವ ಜೀವನದ ಸಂಪರ್ಕವನ್ನು ನಿಕಟಗೊಳಿಸಿ ಬಾಳಿಗೆ ಪೂರ್ಣತೆಯನ್ನೂ, ಅರ್ಥಪೂರ್ಣತೆಯನ್ನೂ ತಂದುಕೊಡುವ ಪ್ರಯತ್ನದಲ್ಲಿ ಗೆಲುವಾಗಿದೆ. ಜಡೆಯಾಚೆಗಿರುವ ವಿಶ್ವಮಾತೆಯ ಮುಖವನ್ನು ಕಾಣುವ ಹಂಬಲವನ್ನು ಹುಟ್ಟಿಸಿದೆ. ಇಂದ್ರಿಯ ಸೌಂದರ್ಯವನ್ನು ಗ್ರಹಿಸುತ್ತ ಆತ್ಮಸೌಂದರ್ಯದ ಹೊಳಪನ್ನು ಅಲ್ಲಲ್ಲಿ ಕಾಣಿಸಿದೆ. ಬಿಡಿಯಾದ ಚಿತ್ರದ ಕೆತ್ತನೆಯಿಂದ ಇಡಿಯಾದ ಸಂಕೀರ್ಣಾನುಭವದವರೆಗೆ ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಂಡಿದೆ. ಹಾಗೆ ನೋಡಿದರೆ ಕಾವ್ಯ ಸಜೀವವಾಗಿರುವುದೇ ಆನಂದದ ಒಂದು ಬೆರಗಿನಲ್ಲಿ.[೩೧] ಅದರ ಅಂತರಂಗದ ಬೆಳಕು ಹೊರಸೂಸುವುದನ್ನೇ ಕವಿ ಕಾಯ್ದುಕೊಂಡಿರುತ್ತಾನೆ. ನಮಗೆ ಸಂಜೆಯಾದಾಗ ಇನ್ನೊಂದಕ್ಕೆ ಬೆಳಗಾಗಿರುತ್ತದೆ. ಈ ಸೋಜಿಗವನ್ನು ಅರಿತು, ಆನಂದಿಸಿ, ಅಭಿವ್ಯಕ್ತಿಗೊಳಿಸುವ ಕವಿ ನಿಜಕ್ಕೂ ಕೃತಾರ್ಥನಾಗುತ್ತಾನೆ:

ಹಗಲೆಲ್ಲಾ ಬೇಯಿಸಿ ಸತಾಯಿಸಿದ ಈ ಸೂರ್ಯ ಮುಳುಗಿದ
ನಮಗೆ ಸಂಜೆಯಾಯಿತು.
ಬಾನಿನ ತುಂಬ ಒಂದೊಂದೇ ಕಣ್ ಬಿಡುವ ಈ
ನಕ್ಷತ್ರಗಳಿಗೆ ಬೆಳಗಾಯಿತು
ಬೆಳಕು ಬೆಳಕನ್ನೇ ನುಂಗಿ ನಿಂತಿದ್ದ ಸೋಜಿಗದ
ಬೆಳಗಾಯಿತು[೩೨]

('ಸ್ನೇಹಕಾರ್ತೀಕ': ೧೯೭೭)

ಅಡಿಟಿಪ್ಪಣಿ

೧. ರಥಯಾತ್ರೆ : ಸಾಮಗಾನ, ೧೯೫೧.

೨. ಹಿನ್ನುಡಿ : ದೀಪದ ಹೆಜ್ಜೆ, ೧೯೫೯.

೩. ಹಾರೈಕೆ : ಅನಾವರಣ, ೧೯೬೩

೪. ಅದೇ

೫. ಶಕ್ತಿಯ ಕೊಡು: ಕಾರ್ತೀಕ, ೧೯೬೧.

೬. "The poet is one who carries the simplicity of childhood into the powers of manhood; who, with a soul unsubdued by habit, unshackled by custom, contemplates all things with the freshness and the wonder of a child" -S.T. Coleridge.

Coleridge's Shakespearaen Criticism II

೭. ಮಲ್ಲಿಗೆ : ಚೆಲುವು-ಒಲವು, ೧೯೫೩.

೮. ಒಂದಿರುಳು : ಚೆಲುವು-ಒಲವು.

೯. ತಾಯಿಗೆ : ಚೆಲುವು-ಒಲವು.

೧೦. ಒಂದು ಸಂಜೆ : ಚೆಲುವು-ಒಲವು.

೧೧. ಮಳೆ : ಚೆಲುವು-ಒಲವು

೧೨. ಅಲೆಗಳು : ಚೆಲುವು-ಒಲವು

೧೩. ಅರೆಮುಗಿದ ಕವನ : ದೀಪದ ಹೆಜ್ಜೆ, ೧೯೫೯.

೧೪. ಪಾರ್ಕಿನಲ್ಲಿ ಒಂದು ಸಂಜೆ : ಕಾರ್ತೀಕ, ೧೯೬೧.

೧೫. ಒಂದು ಚಿತ್ರ : ದೀಪದ ಹೆಜ್ಜೆ.

೧೬. ಮಬ್ಬಿನಿರುಳು : ದೀಪದ ಹೆಜ್ಜೆ.

೧೭. ಜಡೆ : ಚೆಲುವು-ಒಲವು.

೧೮. ಕೃಷ್ಣಶಕ್ತಿ : ದೇವಶಿಲ್ಪ, ೧೯೫೯.

೧೯. ದೀಪಾವಳಿ : ದೇವಶಿಲ್ಪ.

೨೦. ಗೆಲುವು : ದೇವಶಿಲ್ಪ.

೨೧. ಮುರಿದ ಒಲುಮೆಗೆ : ದೇವಶಿಲ್ಪ.

೨೨. ನೆರಳಿಲ್ಲದ ದಾರಿ : ದೀಪದ ಹೆಜ್ಜೆ.

೨೩. ಇವನು : ದೀಪದ ಹೆಜ್ಜೆ.

೨೪. ನನ್ನ ನಿನ್ನ ನಡುವೆ : ಗೋಡೆ, ೧೯೭೨.

೨೫. ಗಡಿಯಾರದಡಿಯಲ್ಲಿ : ದೀಪದ ಹೆಜ್ಜೆ.

೨೬. ಅಮೃತ ಮುಹೂರ್ತ : ದೀಪದ ಹೆಜ್ಜೆ.

೨೭. ಕವಿ ರವೀಂದ್ರರನ್ನು ಕುರಿತು : ತೆರೆದ ದಾರಿ, ೧೯೬೬.

೨೮. ಸ್ಪೂಟ್ನಿಕ್-ವಿನೋಬಾ : ದೀಪದ ಹೆಜ್ಜೆ.

೨೯. ಮಲೆನಾಡಿನಲ್ಲಿ : ಕಾರ್ತೀಕ.

೩೦. ಶಾಕುಂತಲ ಸಂಧ್ಯೆ : ತೆರೆದ ದಾರಿ.

೩೧. ಬಾರದಿರು ಉಲ್ಕೆಯಂತೆ : ತೆರೆದ ದಾರಿ.

೩೨. ಭಾನುವಾರ : ಗೋಡೆ.

೩೩. ದೈನಂದಿನ : ಗೋಡೆ.

೩೪. To be sure, all poetry lives by wonder, by the delight of discovery and the exaltation which it brings" - C.M. Bowra : The Romantic Imagination, 1957, p. 285.

೩೫. ಬೈಗಿನಲ್ಲಿ ಬೆಳಗು : ತೆರೆದ ದಾರಿ.

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಕಾವ್ಯ : ಒಂದು ಮರು ಓದು

ಎಲ್ಲರಿಗೂ ನಮಸ್ಕಾರ,

'ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಅವರ ಕಾವ್ಯ' ಕುರಿತ ವಿಚಾರ ಸಂಕಿರಣಕ್ಕೆ ನನ್ನನ್ನು ಉದ್ಘಾಟಕನನ್ನಾಗಿ ಬರಮಾಡಿಕೊಂಡು ಗೌರವಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಮಂಡ್ಯ ಕರ್ನಾಟಕ ಸಂಘ ಹಾಗೂ ವಿಜಯ ಪ್ರಥಮ ದರ್ಜೆ ಕಾಲೇಜು–ಈ ಮೂರೂ ಸಂಸ್ಥೆಗಳಿಗೆ ಹಾಗೂ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಹಾಗೂ ಶಿವರುದ್ರಪ್ಪನವರ ಗೆಳೆತನ ಅರುವತ್ತು ವರ್ಷಗಳಷ್ಟು ಸುದೀರ್ಘವಾದದ್ದು. ನಾವಿಬ್ಬರೂ ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದ್ದು ನವೋದಯದ ಉತ್ಕರ್ಷದ ಕಾಲದಲ್ಲಿ. ಅವರು ಕುವೆಂಪು ಕಾವ್ಯದ ಮೈಸೂರಿನ ಪ್ರಭಾವ ವಲಯದಲ್ಲಿ, ನಾನು ಬೇಂದ್ರೆ–ಮಧುರಚೆನ್ನರ ಧಾರವಾಡದ ಗೆಳೆಯರ ಗುಂಪಿನ ಪರಿಸರದಲ್ಲಿ ಕವಿತೆ ಬರೆಯುತ್ತ ಕನ್ನಡ ಸಾಹಿತ್ಯದ ಉಜ್ವಲವಾದ ಕಾಲಮಾನಗಳನ್ನು ಹಾದು ಬಂದಿದ್ದೇವೆ. ಸಮಾನವಾದ ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಿದ್ದೇವೆ. ನಾವಿನ್ನೂ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ನಮ್ಮ ಕವಿತೆಗಳು ಮಾಸ್ತಿಯವರ 'ಜೀವನ', ಬೆಟಗೇರಿ ಕೃಷ್ಣಶರ್ಮರ 'ಜಯಂತಿ' ಪತ್ರಿಕೆಗಳಲ್ಲಿ ಪ್ರಕಟವಾದದ್ದುಂಟು. ನನ್ನ ಪ್ರಥಮ ಕವನಸಂಗ್ರಹ 'ಕಾವ್ಯಾಕ್ಷಿ' ಪ್ರಕಟವಾದದ್ದು ೧೯೪೯ರಲ್ಲಿ ಬೇಂದ್ರೆಯವರ ಮುನ್ನುಡಿಯೊಂದಿಗೆ. ಶಿವರುದ್ರಪ್ಪನವರ ಪ್ರಥಮ ಸಂಗ್ರಹ 'ಸಾಮಗಾನ' ಪ್ರಕಟವಾದದ್ದು ೧೯೫೧ರಲ್ಲಿ ಕುವೆಂಪು ಮುನ್ನುಡಿಯೊಂದಿಗೆ. ನಮ್ಮಿಬ್ಬರ ಒಡನಾಟ, ಪತ್ರವ್ಯವಹಾರ ಪ್ರಾರಂಭವಾದದ್ದು ಈ ಬಗೆಯ ಕಾವ್ಯಪ್ರೀತಿಯಿಂದ.

ಜಿ.ಎಸ್.ಎಸ್. ಅವರದು ಬಹುಮುಖ ಪ್ರತಿಭೆ. ಕನ್ನಡದ ಇಂದಿನ ಸಂದರ್ಭದಲ್ಲಿ ಕೇವಲ ಸಾಹಿತ್ಯಕೃತಿಗಳಿಂದ ಮಾತ್ರವಲ್ಲದೆ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತಮ್ಮ ವ್ಯಕ್ತಿತ್ವದ ಹಿರಿಮೆಯನ್ನು ಸಾಧಿಸಿದ ಕೆಲವೇ ಗಣ್ಯವ್ಯಕ್ತಿಗಳಲ್ಲಿ ಶಿವರುದ್ರಪ್ಪನವರೂ ಒಬ್ಬರು. ಸೃಜನ, ವಿಮರ್ಶೆ, ಮೀಮಾಂಸೆ, ಅಧ್ಯಯನ, ಅಧ್ಯಾಪನ, ಆಡಳಿತ, ಸಂಘಟನೆ– ಹೀಗೆ ಹಲವು ಬಗೆಯ ಸಾಂಸ್ಕೃತಿಕ ನೆಲೆಗಳಲ್ಲಿ ತಮ್ಮನ್ನು ಬಿಡುವಿಲ್ಲದೆ ತೊಡಗಿಸಿಕೊಂಡು ಕನ್ನಡದ ಮುನ್ನಡೆಗೆ ಅವರು ತಮ್ಮ ಕಾಣಿಕೆ ಸಲ್ಲಿಸುತ್ತ ಬಂದಿದ್ದಾರೆ. 'ಹಣತೆ' ಅವರ ಕಾವ್ಯಲೋಕದ ಸ್ಥಾಯೀ ಪ್ರತೀಕವಾಗಿರುವಂತೆಯೇ ಸಾಂಸ್ಕೃತಿಕ ಲೋಕದಲ್ಲಿ ಅವರು ನಿರ್ವಹಿಸುತ್ತ ಬಂದಿರುವ ಪಾತ್ರಕ್ಕೂ ಸಲ್ಲುತ್ತದೆಂಬುದನ್ನು ನಮ್ಮ ಸಾಹಿತ್ಯ ಪ್ರಪಂಚ ಗುರುತಿಸಿದೆ ಹಾಗೂ ಅವರು ಅದರ ಪ್ರಮುಖ ವಕ್ತಾರರೆಂದರೂ ತಪ್ಪಾಗಲಾರದು.

ತಣ್ಣಗೆ ಉರಿದ
ಸಣ್ಣ ಹಣತೆಯ ಕಣ್ಣ ಬೆಳಕಿನಲ್ಲಿ
ಜಗತ್ತಿನ ತೇಜಸ್ಸೆಲ್ಲವೂ ತುಂಬಿಕೊಂಡಿದೆ
ಒಂದೇ ಒಂದು ಹಣತೆಯ ಕಣ್ಣಿನಲ್ಲಿ! *('ಪ್ರತಿಮೆಗಳು')*

ನಕ್ಷತ್ರ ಖಚಿತ ನಭವಾಗಿ ತಬ್ಬಿಕೊಂಡಿದ್ದೀರಿ
ನನ್ನ ಸುತ್ತ
ಪಟ ಬಿಚ್ಚಿ ದೋಣಿಯನ್ನೇರಿ ಕುಳಿತಿದ್ದೇನೆ
ನೀವಿತ್ತ ಹೊಸ ಹುಟ್ಟುಗಳ ಹಾಕುತ್ತ *(ಶ್ರೀ ಕುವೆಂಪು ಅವರಿಗೆ)*

ಕುವೆಂಪು ಪರಂಪರೆಯ ಒಳ್ಳೆಯದೆಲ್ಲವನ್ನು ಹೀರಿಕೊಂಡು ಪರಿಪುಷ್ಟವಾಗಿ ಬೆಳೆದು ಜಿ.ಎಸ್.ಎಸ್. ಅಲ್ಲಿಯೇ ಸ್ಥಗಿತಗೊಳ್ಳದೆ ಚಲನಶೀಲತೆಯಿಂದ ಆ ಪರಂಪರೆಯನ್ನು ದಾಟಿ ನಿಂತುದನ್ನು ನಾವು ಅವಶ್ಯವಾಗಿ ಗಮನಿಸಬೇಕು. ಅವರ ಕಾವ್ಯ ಹಾಗೂ ವಿಮರ್ಶೆಗಳೇ ಅದಕ್ಕೆ ಸಮರ್ಥ ಉದಾಹರಣೆಗಳು.

ಜಿ.ಎಸ್.ಎಸ್. ಅವರ ನೆಲದ ಪ್ರೀತಿ, ದೈನಂದಿನ ಸಾಧಾರಣ ಸಂಗತಿಗಳು– ಎಲ್ಲದರಲ್ಲೂ ಮನುಷ್ಯತ್ವವನ್ನು ಕಾಣುವದೇ ಅವರ ಕಾವ್ಯದ ಮುಖ್ಯ ಆಶಯ. ಸುತ್ತಲಿನ ಜಗತ್ತನ್ನು ಒಂದು ಸಾಮಾಜಿಕ ಪ್ರಯೋಗಲೋಕವಾಗಿ ಅವರು ಕಾಣುತ್ತಾರೆ. 'ಸಮನ್ವಯ ಕವಿ' ಎಂಬ ಮಾತು ಬಂದಾಗ ಡಾ. ಯು.ಆರ್.ಅನಂತಮೂರ್ತಿಯವರು ಈಚೆಗೆ ಒಂದೆಡೆ ಹೇಳಿದ್ದಾರೆ: "ಇರೋರೆಲ್ಲರಿಗಿಂತಾ ದೊಡ್ಡವರು ಎನ್ನಲೂ ಸಮನ್ವಯವನ್ನು ಬಳಸಬಹುದು. ಒಬ್ಬ ಒಳ್ಳೆಯ ಸಾಹಿತಿ, ಯಾವ ಕಾಲದಲ್ಲೇ ಇರಲಿ, ಅವನು ಬೇರೆ ಬೇರೆ ರೀತಿಯ ಸಮನ್ವಯವನ್ನು ಮಾಡಿಯೇ ಇರುತ್ತಾನೆ. ಅದು ಎಲ್ಲ ಕಾಲದ ಕಾವ್ಯಕ್ಕೂ ಇರಬೇಕಾದ ಒಂದು ಗುಣ."

ಜಿ.ಎಸ್.ಎಸ್. ಅವರ ವ್ಯಾಸಂಗ ಕೇವಲ ಕನ್ನಡಕ್ಕೆ ಸೀಮಿತವಾಗದೆ ಎಲ್ಲ ದೇಶ- ಭಾಷೆಗಳ ಸಾಹಿತ್ಯಾಭ್ಯಾಸವನ್ನು ಒಳಗೊಂಡು ಫಲವತ್ತಾಯಿತು. 'ನವ್ಯತೆ'ಯ ಬಗ್ಗೆ ನನಗೆ

ಬರೆದ ಒಂದು ಪತ್ರದಲ್ಲಿ (೨೪-೦೪-೧೯೫೩) ಈ ಮಾತುಗಳಿವೆ: "ನವ್ಯತೆಯ ಬಗ್ಗೆ ನನಗೆ ರೋಮಾಂಚಕತೆಯಿಲ್ಲ. ಏಕೆಂದರೆ ನವ್ಯತೆ ಒಂದು ರಚನೆಯಲ್ಲ, ವಿಕಾಸ ಎಂಬುದನ್ನು ಕಂಡುಕೊಂಡವರಲ್ಲಿ ನಾನೊಬ್ಬ. ನನ್ನ ಒಳಗಿನ 'ನವ್ಯಕವಿ' ತಾನೊಬ್ಬ ಭಾರತೀಯ ಎಂಬುದನ್ನು ಎಂತಹ ಹೊತ್ತಿನಲ್ಲೂ ಮರೆಯುವುದಿಲ್ಲ. ಎಂತಹ ಕಷ್ಟಕಾರ್ಪಣ್ಯಗಳಲ್ಲೂ ಏನೋ ಒಂದು ಅದಕ್ಕೂ ಮೀರಿದ ಆನಂದ ಆದರ್ಶವನ್ನು ಕಾಣಬಲ್ಲ."

"ಕವಿ-ವಿಮರ್ಶಕ ಪರಂಪರೆಯಲ್ಲಿ ಜಿ.ಎಸ್.ಎಸ್. ಒಂದು ಎತ್ತರದ ಶಿಖರ" ಎಂಬ ಸಿ.ಎನ್.ರಾಮಚಂದ್ರನ್ ಅವರ ಮಾತಿನಲ್ಲಿ ಸಾಕಷ್ಟು ತಥ್ಯವಿದೆ. ಹದಿನಾಲ್ಕು ಕವನ ಸಂಗ್ರಹಗಳನ್ನು, ಅಷ್ಟೇ ಸಂಖ್ಯೆಯ ವಿಮರ್ಶಾಗ್ರಂಥಗಳನ್ನು ಅವರು ಹೊರತಂದಿದ್ದಾರೆ. ಕನ್ನಡ ಕಾವ್ಯ ಪರಂಪರೆ, ಕನ್ನಡ ಸಾಹಿತ್ಯ ಚಳವಳಿಗಳು, ವಿಮರ್ಶೆಯ ಸ್ವರೂಪ, ಭಾರತೀಯ-ಪಾಶ್ಚಾತ್ಯ ಮಹಾಕಾವ್ಯಗಳು – ಇತ್ಯಾದಿಗಳ ಬಗ್ಗೆ ಆಳವಾಗಿ ಚಿಂತಿಸಿ, ಅವುಗಳ ಕೂಲಂಕಷ ಚರ್ಚೆಗಳನ್ನು ಇವರ ವಿಮರ್ಶಾಕೃತಿಗಳಲ್ಲಿ ಕಾಣುತ್ತೇವೆ. ಆದ್ದರಿಂದಲೇ ತತ್ಕಾಲೀನ ಪಂಥ-ಪ್ರವೃತ್ತಿಗಳಿಂದ ಪಾರಾಗುವದು ಅವರಿಗೆ ಸಾಧ್ಯವಾಗಿದೆ. ಸದ್ಯದ ವಿಚಾರ ಸಂಕಿರಣ ಮುಖ್ಯವಾಗಿ ಅವರ ಕಾವ್ಯವನ್ನು ಕುರಿತಾಗಿದ್ದರೂ ಅದಕ್ಕೆ ಹಿನ್ನೆಲೆಯಾಗಿ ಈ ಕೆಲವು ಮಾತುಗಳನ್ನು ಹೇಳಲೇಬೇಕಾಯಿತು.

ಸಾಹಿತ್ಯದ ಆಧುನಿಕತೆಯ ಒಂದು ಎದ್ದುಕಾಣುವ ಲಕ್ಷಣವೆಂದರೆ ಮಾಧ್ಯಮದ ಬಗ್ಗೆ ವಿಶೇಷವಾದ ಅರಿವು ಮತ್ತು ಜಿಜ್ಞಾಸೆ ಎನ್ನುತ್ತಾರೆ ಡಾ. ಜಿ.ಎಸ್.ಎಸ್. ಕಾವ್ಯಚಿಂತನೆ ಅವರ ಬೌದ್ಧಿಕ ಆಸ್ಥೆಯಷ್ಟೇ ಆಗಿರದೆ ಅವರ ಕಾವ್ಯದ ವಿಷಯವೂ ಆಗಿದೆ. ಕಾವ್ಯದ ಮಾಧ್ಯಮವನ್ನು ಕುರಿತು ಅವರು ಅನೇಕ ಪದ್ಯಗಳನ್ನು ಬರೆದಿದ್ದಾರೆ.

ಯಾವತ್ತಿನಿಂದಲೋ ಸುರಿದ ಜಡಿಮಳೆ ಇಳಿದು
ಒಳಗಿನ ಕುದಿಗೆ ಹದವಾಗಿ ಮಿದುವಾಗಿ
ಮಲಗಿರುವಾಗ
ಬಾವಿಯ ತೋಡಿ, ಯಾತವ ಹೊಡೆದು
ತಂದದ್ದು ಈ ರಾಗ *(ಈ ಕವಿತೆ)*

ಇವುಗಳಿಂದ ನಮಗೆ ಕಂಡು ಬರುವುದೇನೆಂದರೆ, ಮೊದಲನೆಯದು ಅವರ ಅಚಲವಾದ ಕಾವ್ಯಶ್ರದ್ಧೆ. ಎರಡನೆಯದು ನವೋದಯ, ನವ್ಯ ಮತ್ತು ನವ್ಯೋತ್ತರ ಸಂದರ್ಭಗಳಲ್ಲಿ ಅವರ ಸೃಜನಶೀಲತೆ ಎದುರಿಸಬೇಕಾಗಿ ಬಂದ ಸಂದರ್ಭಗಳು ಮತ್ತು ಅದಕ್ಕೆ ಕಂಡುಕೊಂಡ ಪರಿಹಾರಗಳು. ಒಟ್ಟಾರೆ ನೋಡಿದಾಗ ಶಿವರುದ್ರಪ್ಪನವರ ಕಾವ್ಯಶ್ರದ್ಧೆಯಲ್ಲಿ ಭಾವುಕತೆ ಕಡಿಮೆ ಪ್ರಮಾಣದಲ್ಲಿದ್ದು ವೈಚಾರಿಕತೆಯ ಅಂಶಗಳೇ ಹೆಚ್ಚಾಗಿರುವುದನ್ನು ಕಾಣಬಹುದು. ನವೋದಯ ಮತ್ತು ನವ್ಯ ಲೇಖಕರ ಪ್ರಮುಖ ಕಾಳಜಿಗಳು ಇವರಿಗೂ ಇವೆ. ಆದರೂ ಶಿವರುದ್ರಪ್ಪನವರು ಬೇರೆಯಾಗಿಯೇ

ಕಾಣುತ್ತಾರೆ. ವಾಸ್ತವ ಪ್ರಜ್ಞೆ ಬರಬರುತ್ತ ಅವರ ಕಾವ್ಯಪ್ರಕೃತಿಯ ಮೂಲ ಗುಣವಾಗಿ ಪರಿಣಮಿಸಿದ್ದೇ ಇದಕ್ಕೆ ಕಾರಣವೆನ್ನಬಹುದು. ಈ ಬಗೆಯ ವಾಸ್ತವ ಪ್ರಜ್ಞೆಯಲ್ಲಿಯೂ ಅವರು ವಿವೇಕಶಾಲಿಗಳಾಗಿರುವುದರಿಂದ ನಮ್ಮ ಸಾಹಿತ್ಯದಲ್ಲಿ ತಲೆದೋರಿದ ಚಳವಳಿಗಳ ಅತಿರೇಕಗಳಿಂದ ತಮ್ಮನ್ನು ರಕ್ಷಿಸಿಕೊಂಡರು.

ಸಾಮಾನ್ಯ ಮನುಷ್ಯನ ಜೀವನವನ್ನು ಅವರು ಆಸ್ಥೆಯಿಂದ ನಿರೀಕ್ಷಿಸುವುದರಿಂದ ಆ ನೆಲೆಯಿಂದಲೇ ಅವರ ಕಾವ್ಯ ಹೊರಡುವಂಥದು. ಇಡಿಯಾಗಿ ಮನುಷ್ಯರ ಮನಸ್ಸನ್ನು ತಿದ್ದಿ ತೀಡಿ, ಅಂತಃಕರಣವನ್ನು ಜಾಗೃತಗೊಳಿಸಿ ಅದು ರೂಪುಗೊಳಿಸುವಂಥದು. ಮಾನವಪರವಾಗಿ ನಿಲ್ಲುವಂಥದು. ಅವರ ಹೆಚ್ಚಿನ ಕವಿತೆಗಳು ಒಳಸಮ್ಮುಖವಾಗಿ ಸಂವಹನಶೀಲ ಗುಣವನ್ನು ಪಡೆದಿರುವಂಥವು. "ಎಲ್ಲರೂ ಕಾಣಬಹುದಾದ ಆದರೆ ಕಾಣದೆ ಇರುವ ಸಂಗತಿಗಳ ಕಡೆಗೆ ಗಮನ ಸೆಳೆಯುವದು ಅವರ ಕವಿತೆಗೆ ಸಾಧ್ಯವಾಗುತ್ತದೆ. ಅತ್ಯಂತ ಉನ್ಮಾದದಲ್ಲಿ ಮೈಮರೆಸುವಂಥ ಕವಿತೆಗಳನ್ನು ಅವರು ಬರೆದದ್ದು ಬಹಳ ಕಡಿಮೆ" ಎಂಬ ವಿಮರ್ಶಕರ ಮಾತು ಬಹುಮಟ್ಟಿಗೆ ನಿಜ. ಯಾಕೆಂದರೆ ಭಾವ ಮತ್ತು ಬುದ್ಧಿ ಕೂಡಿಯೇ ಅಲ್ಲಿ ಕೆಲಸ ಮಾಡುತ್ತವೆ.

ಆದರೆ ಮೂಲತಃ ಅವರು ಭಾವಜೀವಿ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಶಾಸ್ತ್ರಸಿದ್ಧಾಂತಗಳ ಕಡೆಗೆ ಅವರ ಒಲವು ವಿಶೇಷವಾಗಿಲ್ಲ. 'ಕಾವ್ಯಕ್ಕೆ ಶಾಸ್ತ್ರವೇಕೆ?' ಎಂಬುದು ಅವರ ಪ್ರಶ್ನೆ.

ಅಳುಬರುತ್ತದೆ ನನಗೆ ಪಂಡಿತರೆ ನಿಮ್ಮ
ಈ ಲೇಖನ ಕಲೆಯ ನೋಡಿದಾಗೆಲ್ಲ
ಎಂಥ ಆಕ್ಟೋಪಸ್ ಹಿಡಿತ ನಿಮ್ಮದು! ತುಂಬಿದ್ದ
ಮೈಮಾಂಸ ರಕ್ತ ಎಲ್ಲವನ್ನೂ ಹೀರಿ
ಬರೀ ಮೂಳೆಯಷ್ಟನ್ನೇ ಉಳಿಸಿ ಪಟ್ಟಿ ಹಾಕಿದ್ದೀರಿ
ಕವಿಯನ್ನು ಸಲೀಸಾಗಿ ಜೀರ್ಣಿಸಿಕೊಂಡು! *(ಪಂಡಿತರಿಗೆ)*

ಈ ಭೂಮಿಯ ಬದುಕಿನಲ್ಲಿ ಮೂಡಿರುವ ಸಾಮಾಜಿಕ ಪ್ರಜ್ಞೆಯ 'ದೀಪದ ಹೆಜ್ಜೆ'ಗಳನ್ನು ಅವರು ಗುರುತಿಸುತ್ತಾರೆ.

ಅಲ್ಲೊಂದು ಇಲ್ಲೊಂದು ನಿಂತಿಹವು
ನಿನ್ನ ಬೆಳಕನೆ ಹೊತ್ತು ಮುಡಿಯ ತುಂಬ!
ನಂಬಿರುವೆ ಮೂಡಿಯೇ ಮೂಡುವದು ಶಾಂತಿ ಸರ್ವೋದಯದ
ಚಂದ್ರಬಿಂಬ! *(ಕಂಡದ್ದು ಮೂರುಸಲ-ಗಾಂಧಿ)*

ಆದರೂ ನೋವಿನ ದನಿಗಳ ಹುಯ್ಯಲು ಅವರನ್ನು ಒಳಗೊಳಗೆ ಕಾಡುತ್ತಲೇ ಇರುತ್ತದೆ. ಆ 'ಮಗು' ಯುಗಯುಗಗಳ ಯಾತನೆಯೇ ಮೂರ್ತೀಭವಿಸಿದಂತಿದೆ.

ಮಗು ಅಳುತಾ ಇದೆ ಎಲ್ಲೋ
ಒಂದೇ ಸಮನೆ
ಗುಡಿ–ಮಠ–ಚರ್ಚಿನ ಗಣಗಣ ಗಂಟೆಯ
ಧೂಪ ದೀಪಗಳ ಉದ್ದಕ್ಕೂ
ದೇಶೋದ್ಧಾರದ ರಾಜಕಾರಣದ
ಜೇಡನ ಬಲೆಗಳ ಅಗಲಕ್ಕೂ
ನಗರಾರಣ್ಯದ ಗಗನ ಚುಂಬಿಗಳ
ಹುತ್ತದ ನೆಲೆಗಳೆತ್ತರಕ್ಕೂ
ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ *(ಎಲ್ಲೋ ಮಗು ಅಳುತಾ ಇದೆ)*

ಹಾಗೆಯೇ ಶತಮಾನಗಳಿಂದ ಹತಭಾಗ್ಯರಾಗಿ ಕೆಳಕ್ಕೆ ಉರುಳಿ ಬಿದ್ದ ಈ ಜನ 'ಬಲವಿದ್ದೂ ಬಾಗಿದವರು'.

ತೆನೆ ತುಂಬಿದ ಹೊಲಗದ್ದೆಬದಿಗೆ ಹಸಿವಿನಿಂದ ಸತ್ತಜನರು
ಮಹಲು ಕಾರುಗಳ ಕೆಂಪುಟೇಪುಗಳ ಉರುಳಿನಲ್ಲಿ ನರಳಿದವರು
ಸಾಧು–ಸಂತ ಮಠ ದೇಗುಲ ಮಾರ್ಗದ ಅಜಗರ ಪೀಡಿತ ಜನವೇ
ಮುಗ್ಧ ಶ್ರದ್ಧೆಯಲಿ ಮಂಡೆಯನೊಪ್ಪಿಸಿ ಬತ್ತಲಾದ ಜನವೇ

ಶೋಷಿತರ ಈ ಬಗೆಯ ಯಾತನೆಗೆ ಅನೇಕ ಕಾರಣಗಳಿದ್ದರೂ ಅದರಲ್ಲಿ ತನ್ನದೂ ಪಾಲಿದೆ ಎಂದು ಪಶ್ಚಾತ್ತಾಪ ಪಡುವ ಕವಿ ಶ್ರೀಸಾಮಾನ್ಯನ ಬದುಕಿನೊಂದಿಗೆ ತನ್ನನ್ನು ಗುರುತಿಸಿಕೊಂಡು ವಿಚಾರಕ್ರಾಂತಿಗೆ ಅನುವಾಗುತ್ತಾರೆ.

ನಾಡಿನ ಗತವೈಭವ, ಪುರಾಣ ಮತ್ತು ಚರಿತ್ರೆಗಳೆಲ್ಲ ಮೇಲ್ವರ್ಗದವರು ಮೆಲುಕು ಹಾಕುವಂಥವು. ಅವುಗಳಲ್ಲಿ ಬದುಕುವುದಕ್ಕಿಂತ ಈ ಕವಿಗೆ ವಾಸ್ತವದಲ್ಲಿ ಬದುಕುವದು ಮುಖ್ಯವೆನಿಸುತ್ತದೆ:

ಬಹುದೊಡ್ಡ ಮಾತನಾಡುತ್ತ
ದಿನ ದಿನದ ಸರಳ ಸಾಧಾರಣ ಬದುಕಿ
ಗಪಮಾನ ಮಾಡುವವರನ್ನು ಕಂಡರೆ
ನನಗೆ ಆಗುವುದಿಲ್ಲ.

ನಿಸರ್ಗ ಜಿ.ಎಸ್.ಎಸ್. ಅವರಿಗೆ ನಿರಂತರ ಸ್ಫೂರ್ತಿದಾಯಕ ನೆಲೆ. ಅದಕ್ಕೆ ವಿದೂರವಾದ ನೆಲೆಗಳನ್ನು ಕಂಡಾಗ ವಿಷಾದಗೊಳ್ಳುತ್ತಾರೆ.

ಸುತ್ತ ಮುತ್ತ ಮನೆ ಮಠಗಳು
ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು
ನಿಟ್ಟುಸಿರೊಳು ತೇಲುವಲ್ಲಿ
ಯಾವ ಹಾಡ ಹಾಡಲಿ? *(ಯಾವ ಹಾಡ ಹಾಡಲಿ?)*

ನಿಸರ್ಗ ಸಹಜವಾದ ಪ್ರೀತಿ ಇಲ್ಲದೆ ಅನುಕಂಪವಿಲ್ಲದೆ ಬರಿಮಾತಿನ ಜಾಲ, ಶೋಷಣೆಗಳ ಶೂಲ ವಂಚನೆಗಳ ಸಂಚು ನಡೆದಿರುವಾಗ ಯಾವ ಹಾಡಿನಿಂದ ಜನಕ್ಕೆ ಕ್ಷಣಕಾಲವಾದರೂ ಸಮಾಧಾನವಾದೀತು?

ಧಾರ್ಮಿಕ ಮೂಲಭೂತವಾದ, ಮೂಢನಂಬಿಕೆ, ಜಾತೀಯತೆ, ಮಾತೃಭಾಷೆಯ ಬಗೆಗಿನ ಅನಾಸಕ್ತಿ ಮುಂತಾದವುಗಳ ಬಗ್ಗೆ ಸಾಕಷ್ಟು ಗಟ್ಟಿಯಾಗಿಯೇ ಜಿ.ಎಸ್.ಎಸ್. ತಮ್ಮ ಕಾವ್ಯದಲ್ಲಿ, ಬೇರೆ ಬರೆಹಗಳಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಆದರೂ ವಿರೋಧಿಗಳ ಜೊತೆಗೆ ಸಹನೆಯಿಂದ ಸಂವಾದ ನಡೆಸುವ ಸಹಿಷ್ಣುತೆಯೂ ಅವರಿಗಿದೆ.

ಆಧುನಿಕ ಜೀವನದ ಒರಟುತನ, ಬಿಕ್ಕಟ್ಟು, ಆತಂಕ, ತಲ್ಲಣಗಳ ಅನುಭವವನ್ನು ತೀವ್ರವಾಗಿ ತಮ್ಮ ಕಾವ್ಯದಲ್ಲಿ ಚಿತ್ರಿಸಿಯೂ ನವೋದಯ ಕಾಲದ ಉತ್ಸಾಹವನ್ನೂ, ಉಲ್ಲಾಸವನ್ನೂ, ಇವರು ಮತ್ತೆ ಮತ್ತೆ ಬದುಕಬಯಸುತ್ತಾರೆ. ಭಾವಗೀತಾತ್ಮಕತೆ ಇವರ ಕಾವ್ಯ ಜೀವನದುದ್ದಕ್ಕೂ ಹರಿದು ಬಂದಿರುವುದನ್ನು ಕಾಣಬಹುದು.

ದೀಪವಿರದ ದಾರಿಯಲ್ಲಿ
ತಡವರಿಸುವ ನುಡಿಗಳೇ
ಕಂಬನಿಗಳ ತಲಾತಲದಿ
ನಂದುತಿರುವ ಕಿಡಿಗಳೇ
ಉಸಿರನಿಡುವೆ
ಹೆಸರ ಕೊಡುವೆ
ಬನ್ನಿ ನನ್ನ ಹೃದಯಕೆ *(ಬನ್ನಿ ನನ್ನ ಹೃದಯಕೆ)*

ಕಳೆದ ಐದಾರು ದಶಕಗಳಿಂದ ನಿರಂತರವಾಗಿ ಕಾವ್ಯರಚನೆ ಮಾಡುತ್ತ 'ಹಾಡುವುದು ಅನಿವಾರ್ಯ ಕರ್ಮ ಎನಗೆ' ಎಂದುಕೊಂಡವರು ಜಿ.ಎಸ್.ಎಸ್. ಇತ್ತೀಚೆಗೆ ಅನಿವಾರ್ಯವಾಗಿ ಮೊದಲಿನ ಹಾಗೆ ಕವಿತೆ ಬರೆಯುವದು ಅವರಿಗೆ ಸಾಧ್ಯವಾಗುತ್ತಿಲ್ಲ. "ಆದರೆ ನನ್ನ ಸುತ್ತ ನಡೆಯುತ್ತಿರುವ ಸಾಹಿತ್ಯಿಕ ಚಟುವಟಿಕೆಗಳನ್ನು ಗಮನಿಸುವ, ಅವುಗಳೊಂದಿಗೆ ಸಂವಾದಿಸುವ, ಆ ಕಾರಣಕ್ಕೆ ಸಂತೋಷ ತರುವ ಮನಃಸ್ಥಿತಿಗೆ ಯಾವ ಕೊರತೆಯೂ ಇಲ್ಲ" ಎಂದು ಅವರೇ ಹೇಳಿಕೊಂಡದ್ದುಂಟು ('ಅಗ್ನಿಪರ್ವ' ೨೦೦೮).

ದೂರದರ್ಶನದ 'ಎದೆತುಂಬಿ ಹಾಡುವೆನು' ಕಾರ್ಯಕ್ರಮದ ಶೀರ್ಷಿಕೆಯೇ ಅವರ ಭಾವಗೀತೆಯ ಸಾಲಾಗಿರುವದು ಅವುಗಳ ಜನಪ್ರಿಯತೆಯನ್ನು ಸಾರುತ್ತದೆ. ಕನ್ನಡ ಜನತೆ ಅವರ ಕವಿತೆಗಳನ್ನು ಅನೇಕ ಸುಮಧುರ ಕಂಠಗಳಿಂದ ಕೇಳುತ್ತ ಬಂದಿದ್ದಾರೆ. ವಿಮರ್ಶಕರು ತಮ್ಮ ರೀತಿಯಲ್ಲಿ ಅವರ ಕಾವ್ಯದ ವಿಮರ್ಶೆಯನ್ನು ಮಾಡುತ್ತಲೇ ಇದ್ದಾರೆ. ಕಾವ್ಯಪ್ರೇಮಿಗಳಾದ ರಸಿಕರು ತಾವು ಮೆಚ್ಚಿದ ಗೀತೆಗಳನ್ನು ತಮ್ಮ ಸ್ವಂತ ಆಸ್ತಿಯಾಗಿ ಮಾಡಿಕೊಳ್ಳುತ್ತಲೇ ಇರುತ್ತಾರೆ. ಅವರ ಕಾವ್ಯದ ಸರಳ ಸುಭಗತೆ, ಸಂವೇದನಾಶೀಲತೆ, ಅನುಭವಕ್ಕೆ ಪ್ರಾಮಾಣಿಕ ಅಭಿವ್ಯಕ್ತಿ ಕೊಡುವ ತುಡಿತ– ಇವು ಅವರ ಜನಪ್ರಿಯತೆಗೆ ಕಾರಣವೆಂದರೆ ತಪ್ಪಾಗದು. "ವ್ಯಷ್ಟಿ ಮತ್ತು ಸಮಷ್ಟಿಯ ಅನ್ಯೋನ್ಯತೆಯನ್ನು ಸದಾ

ಹಾರೈಸುವ ಅವರ ಕಾವ್ಯ ಜನಪ್ರಿಯವಾದದ್ದರಲ್ಲಿ ಆಶ್ಚರ್ಯವಿಲ್ಲ" ಎಂದು ಸಹೃದಯ ವಿಮರ್ಶಕರೂ ಕಂಡುಕೊಂಡಿದ್ದಾರೆ.

ಜಿ.ಎಸ್.ಎಸ್. ಅವರ ಪ್ರೀತಿಯ ಕಲ್ಪನೆ ವಿಶ್ವವಿಶಾಲವಾದದ್ದು. ನೆಲಕ್ಕೆ ಹನಿಯೊಡೆದು ಹಸಿರು ಮೂಡುವದಕ್ಕೂ ಮಾತು ಪದ್ಯವಾಗುವದಕ್ಕೂ ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ ಕೈಸ್ತರ ಕರುಣೆ ಅರ್ಥವಾಗುವುದಕ್ಕೂ ಸಿಡಿಗುಂಡುಗಳ ಕದನ ನಿಲ್ಲುವುದಕ್ಕೂ ಪ್ರೀತಿಯೇ ಕಾರಣವೆಂಬ ದೃಢ ವಿಶ್ವಾಸ ಕವಿಯದು. ಗೋಷ್ಠಿಗಳಲ್ಲಿ ಜಿ.ಎಸ್.ಎಸ್. ಕಾವ್ಯ ಕುರಿತು ಇನ್ನೂ ಐದಾರು ಜನ ವಿದ್ವಾಂಸರು ತಮ್ಮ ವಿಚಾರಗಳನ್ನು ಮಂಡಿಸಲಿರುವುದರಿಂದ ನನ್ನ ಮಾತುಗಳನ್ನು ಹೆಚ್ಚು ಬೆಳೆಸುವುದಿಲ್ಲ.

ಜಿ.ಎಸ್.ಎಸ್. ಕಾವ್ಯದ ಬೆಳವಣಿಗೆಯನ್ನು ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆ ಯೆಂದೇ ಕಾವ್ಯಾಸಕ್ತರು ಗುರುತಿಸುತ್ತ ಬಂದಿದ್ದಾರೆ. "ಹೀಗೆ ಪುನರ್ ಜನ್ಮಗಳನ್ನು ಪಡೆಯಬಲ್ಲ ಶಕ್ತಿ ಪ್ರತಿಭಾವಂತ ಕವಿಗಳಿಗೆ ಮಾತ್ರ ಸಾಧ್ಯ. ಜಿ.ಎಸ್.ಶಿವರುದ್ರಪ್ಪನವರು ಈ ರೀತಿಯ ಕವಿ ಎಂಬುದಕ್ಕೆ ಉದ್ದಕ್ಕೂ ಸಮರ್ಥನೆಗಳು ಸಿಗುತ್ತವೆ" (ಡಿ.ಆರ್. ನಾಗರಾಜ). ಸಂದರ್ಶನವೊಂದರಲ್ಲಿ ಜಿ.ಎಸ್.ಎಸ್. ಹೇಳಿರುವಂತೆ– ಒಬ್ಬ ಸಾಹಿತಿ ನಿಜವಾದ ಸಾಹಿತಿಯಾಗುವುದು ತನ್ನನ್ನು ತಾನು ಮೀರುವದರಿಂದಲೇ. ಎಲ್ಲ ಬಗೆಯ ಜಾತಿ, ಮತ, ಧರ್ಮಗಳಿಂದ ತನ್ನನ್ನು ಬಿಡಿಸಿಕೊಂಡು ನಿಲ್ಲುವದೇ ಸೃಜನಶೀಲತೆಯ ಲಕ್ಷಣ.

ಹೀಗೆ ಅವರ ಕಾವ್ಯದ ಮರುಓದು ಅನೇಕ ಬಗೆಯ ಹೊಸ ಚಿಂತನೆಗೆ ನಮ್ಮನ್ನು ತೊಡಗಿಸಬಹುದು.

(೫-೧೦-೨೦೧೦)

ಬಾಬಾ ಫರೀದ್

ಭಾರತದಲ್ಲಿ ಸೂಫಿ ತತ್ತ್ವದ ಪ್ರವೇಶಕ್ಕೂ ಈ ದೇಶಕ್ಕೆ ಇಸ್ಲಾಮನ್ನು ತಂದ ಐತಿಹಾಸಿಕ ಸಂಗತಿಗಳಿಗೂ ಹೆಚ್ಚು ಸಂಬಂಧವಿದೆ. ಕ್ರಿ.ಶ. ೯೯೮ರಲ್ಲಿ ಭಾರತದಲ್ಲಿ ಪ್ರವೇಶಿಸಿದ ಘಜನಿ ಮಹಮೂದ್‌ನ ಆ ಮೇಲಿನ ಹಲವು ದಂಡಯಾತ್ರೆಗಳು ಭಾರತದ ಇತಿಹಾಸವನ್ನು ಬದಲಿಸಿದವು. ಉತ್ತರ ಭಾರತದಲ್ಲಿ ಮುಸಲ್ಮಾನರ ಆಧಿಪತ್ಯವನ್ನು ಸ್ಥಾಪಿಸಿದವನು ೧೧೮೬ರಲ್ಲಿ ಲಾಹೋರ ಮತ್ತು ಮುಲ್ತಾನ್‌ಗಳನ್ನು ಗೆದ್ದ ಮುಹಮ್ಮದ್ ಘೋರಿ. ಇವನಿಂದ ಪಂಜಾಬದಲ್ಲಿ ಘಜನಿಗಳ ಆಳ್ವಿಕೆ ಕೊನೆಗೊಂಡಂತಾಯಿತು. ಪರ್ಶಿಯಾದ ಮೇಲೆ ಚೆಂಗೀಜಖಾನನ ದಾಳಿಯಾಗುವುದಕ್ಕಿಂತ ಪೂರ್ವದಲ್ಲಿಯೂ ಭಾರತಕ್ಕೆ ವಲಸೆ ಬರುವುದು ನಡೆದೇ ಇದ್ದಿತು. ಕಾಬೂಲಿನಿಂದ ಬಂದ ನಿರಾಶ್ರಿತರಲ್ಲಿ ಖಾಜಿಷು. ಆಯಿಬ್ ಎಂಬ ಪಂಡಿತನೂ ಇದ್ದನು. ಅವನು ಕೇವಲ ವಿದ್ವಾಂಸನಷ್ಟೇ ಆಗಿರದೆ ಉನ್ನತ ಧಾರ್ಮಿಕ ಪುರುಷನೂ ಆಗಿದ್ದನು. ತನ್ನ ಮೂವರು ಮಕ್ಕಳೊಂದಿಗೆ ಷು ಆಯಿಬ್‌ನು ಕ್ರಿ.ಶ. ೧೧೫೭ರ ಸುಮಾರಿಗೆ ಲಾಹೋರ ತಲುಪಿದನು. ಕುರಾನ್ ಸಾಹಿತ್ಯದಲ್ಲಿ ಅವನು ಹೆಚ್ಚು ಪರಿಣಿತನಾಗಿದ್ದನಲ್ಲದೆ ಅಫಘಾನಿಸ್ಥಾನವನ್ನು ಬಿಡುವ ಮೊದಲು ಅವನು ಯಾವುದೋ ಒಂದು ಉನ್ನತ ಅಧಿಕಾರದಲ್ಲಿದ್ದನು.

ಲಾಹೋರದ ಥಳುಕಿನ ಜೀವನಕ್ಕಿಂತ ಶಾಂತವಾದ ದೇವತಾ ಶಾಸ್ತ್ರದ ಅಭ್ಯಾಸದಲ್ಲಿ ಅವನು ಹೆಚ್ಚು ಆಸ್ಥೆಯುಳ್ಳವನಾಗಿದ್ದರಿಂದ ಲಾಹೋರ ಬಿಟ್ಟು ಕಸೂರಿಗೆ ತೆರಳಿದನು. ಅವನಿಗೆ ಮನಸ್ಸಿಲ್ಲದಿದ್ದರೂ ಅಲ್ಲಿಯ ಸುಲ್ತಾನ್ ಷು ಆಯಿಬ್‌ನನ್ನು ಪಂಜಾಬದ ಮುಲ್ತಾನ್ ಜಿಲ್ಲೆಯ ಖೋತವಾಲ್‌ದ ಖಾಜಿಯಾಗಿ ನೇಮಿಸಿದನು. ಇವನ ಮೂವರು ಮಕ್ಕಳಲ್ಲಿ ಒಬ್ಬನಾದ

ಜಮಾಲ್ ಉದ್ದೀನನ ಮದುವೆ ಖೋಜೆರಡಿಯ ಷೇಕ್ ವಜೀಬ್ ಉದ್ದೀನ್‌ನ ಮಗಳು ಕಾರ್ಸುಮ್ ಬೀಬಿಯೊಡನೆ ನೆರವೇರಿತು. ಈ ದಂಪತಿಗಳಿಗೆ ಫರೀದ್ ಮಸೂದ್ ೧೧೭೩ರಲ್ಲಿ ಜನಿಸಿದನು. ಸಂತನಾಗಿ, ಚಿಸ್ತಿ ಸಿಲ್‌ಸಿಲಾದ ಮೂರನೆಯ ಅಧಿಪತಿಯಾಗಿ ಅವನು ಷೇಕ್-ಫರೀದ್-ಉದ್ದೀನ್, ಗಂಜ್-ಐ-ಷಕರ್ ಎಂದು ಹೆಸರಾದನು. ಸೂಫಿಸಂತ ಫರೀದ್ ಉದ್ದೀನ್ ಅತ್ತಾರ್‌ನ ನಂತರ ಇವನಲ್ಲಿ ಕಂಡುಬಂದ ಉನ್ನತಮಟ್ಟದ ಆಧ್ಯಾತ್ಮಿಕ ಸಾಧನೆಯನ್ನು ಗುರುತಿಸಿ ಅವನಿಗೆ ಫರೀದ್-ಉದ್-ದಿನ್ ಎಂಬ ಗೌರವ ಸೂಚಕ ಪದವಿಯನ್ನು ನೀಡಲಾಯಿತು. ಇದಕ್ಕೆ ಕಾರಣವೆಂದರೆ ಅವನ ಜೀವನದಲ್ಲಿ ನಡೆದ ಹಾಗೂ ಅವನೇ ಮಾಡಿ ತೋರಿಸಿದನೆನ್ನಲಾದ ಪವಾಡಗಳು. ಎಲ್ಲ ಜನರ ಜೊತೆಗೆ ಅವನು ಆಡಿದ ಸವಿನುಡಿಗಳು, ತೋರಿದ ದಯಾಪರತೆ, ವ್ಯಕ್ತಪಡಿಸಿದ ಪ್ರೀತಿ-ಇವೂ ಬಹುಮಟ್ಟಿಗೆ ಇದಕ್ಕೆ ಕಾರಣವೆನ್ನಬಹುದು. ಪೂಜ್ಯ ಭಾವನೆಯಿಂದಲೂ ಜನಾದರಣೆಯ ಮೂಲಕವೂ ಬಾಬಾ ಫರೀದ್ ಎಂದೇ ಅವನು ಜನಮನದಲ್ಲಿ ಉಳಿದುಕೊಂಡಿದ್ದಾನೆ.

ಮುಲ್ತಾನ್ ಜಿಲ್ಲೆಯ ಖೋತ್‌ವಾಲದಲ್ಲಿಯೇ ಫರೀದರ ಮೊದಲ ಪಾಠ ಪ್ರವಚನಗಳು ಪ್ರಾರಂಭವಾದವು. ಪರ್ಶಿಯನ್, ಅರಬ್ಬೀ ಭಾಷೆಗಳನ್ನು, ಕುರಾನಿಗೆ ಸಂಬಂಧಪಟ್ಟ ಪ್ರಾಥಮಿಕ ತತ್ತ್ವಗಳನ್ನು ಅವನು ಅಲ್ಲಿಯೇ ಕಲಿತನು. ಹದಿನೆಂಟನೇ ವಯಸ್ಸಿನಲ್ಲಿ ಮುಲ್ತಾನಿಗೆ ಹೋಗಿ ಮೌಲಾನಾ ಮಿನ್ನಜ್‌ಉದ್ದೀನ್ ತಿರ್ಮಿಧಿಯ ಮಸೀದಿಯಲ್ಲಿಯ ಮದ್ರಸಾಹ್ (ಮಹಮ್ಮದೀಯ ಪ್ರೌಢವಿದ್ಯಾಶಾಲೆ)ವನ್ನು ಸೇರಿದನು. ಇಲ್ಲಿ ಅವನು ಕುರಾನ್, ಇಸ್ಲಾಮಿ ನ್ಯಾಯ, ತತ್ತ್ವಶಾಸ್ತ್ರ ಹಾಗೂ ಅದಕ್ಕೆ ಸಂಬಂಧಿಸಿದ ಉಳಿದ ವಿಷಯಗಳನ್ನು ಅಭ್ಯಸಿಸಿದನು. ಕುರಾನ್‌ವನ್ನು ಅವನು ಪೂರ್ಣ ಬಾಯಿಪಾಠ ಮಾಡಿದ್ದನಲ್ಲದೆ ದಿವಸಕ್ಕೊಂದು ಸಲ ಅದನ್ನು ಕಂಠೋಕ್ತವಾಗಿ ಹೇಳುತ್ತಿದ್ದನಂತೆ. ಮತಧರ್ಮ ಶಾಸ್ತ್ರದ ಬಗ್ಗೆ ಅವನ ವ್ಯಾಸಂಗ ಹಾಗೂ ಶ್ರದ್ಧೆ ಎದ್ದುಕಾಣುತ್ತಿತ್ತು. ಅವನ ಪ್ರಾರ್ಥನಾ ಪರವಶತೆಯನ್ನು ನೋಡಿ "ಖಾಜಿ ಬಚ್ಚಾ ದಿವಾನಾ" - ಖಾಜಿಯ ಉನ್ಮತ್ತ ಮಗ - ಎಂಬ ಉಪನಾಮ ಅವನಿಗೆ ಬಂದುಬಿಟ್ಟಿತು. ಇವನೊಬ್ಬ ದೊಡ್ಡ ಅನುಭಾವಿಯಾಗಲಿರುವನೆಂಬ ಪ್ರಸಿದ್ಧಿ ಆಗಲೇ ಊರಲ್ಲಿ ಹರಡಿದ್ದಿತು. ಅವನ ಈ ಪ್ರಸಿದ್ಧಿಯನ್ನು ಕೇಳಿ. ಷೇಕ್ ಬಹಾಉದ್ದೀನ್ ಝುಕಾರಿಯಾ ಮತ್ತು ಖ್ವಾಜಾ ಕುತುಬುದ್ದೀನ್ ಬಖ್ತಿಯಾರ್ ಕಾಕಿ ಈ ಇಬ್ಬರಿಗೂ ಸಮೀಪದ ಒಡನಾಡಿಯಾಗಿದ್ದ ಷೇಕ್ ಜಲಾವುದ್ದೀನ್ ತಬ್ರಿಝಿ ಸಹ ಫರೀದನನ್ನು ಹೋಗಿ ಭೇಟಿಯಾದನು.

ಮುಲ್ತಾನದ ಮಸೀದಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೇ ಫರೀದ್ ತನ್ನ ಮುಂದಿನ ಬೋಧಕನಾದ ಖ್ವಾಜಾ ಕುತುಬುದ್ದೀನ್ ಬಖ್ತಿಯಾರ್ ಕಾಕಿಯನ್ನು ಭೇಟಿಯಾದನು. ಅದು ಎರಡು ಸಮಾನ ಲಕ್ಷಣವುಳ್ಳ ಆತ್ಮಗಳ ಸಂಗಮವಾಗಿತ್ತು. ಆಧ್ಯಾತ್ಮಿಕ ಪಥದಲ್ಲಿ ತನ್ನನ್ನು ಮುನ್ನಡೆಸಬಲ್ಲ ಮಾರ್ಗದರ್ಶಕ ಹಾಗೂ ಗುರುವನ್ನು ಫರೀದ್ ಅವನಲ್ಲಿ ಕಂಡುಕೊಂಡನು. ಫರೀದನಿಗೆ ಆಧ್ಯಾತ್ಮಿಕ ವ್ಯಾಸಂಗದ ಬಗೆಗಿರುವ ಉತ್ಸಾಹ,

ಆಸಕ್ತಿಗಳನ್ನು ಮನಗಂಡು ಅವನ ಈ ಭವಿಷ್ಯದ್ಗುರುವಿನ ಮನಸ್ಸು ಕರಗಿಹೋಯಿತು. ಅವನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಳ್ಳುವ ವಚನವಿತ್ತನು. ಆದರೆ, ಸದ್ಯಕ್ಕೆ ಅಭ್ಯಾಸವನ್ನು ಮುಂದುವರೆಸಲು ಅವನಿಗೆ ಸಲಹೆ ನೀಡಿ, ಅಧ್ಯಯನ ಮುಗಿಸಿದ ಮೇಲೆ ದಿಲ್ಲಿಗೆ ಬರಲು ತಿಳಿಸಿದನು. ಯಾಕೆಂದರೆ, ಸೂಫಿ ತತ್ತ್ವದ ಇನ್ನೂ ಹೆಚ್ಚಿನ ಆಧ್ಯಾತ್ಮಿಕ ತರಬೇತಿಗೆ ಆಗ ಅವನಲ್ಲಿ ತಕ್ಕ ಸಿದ್ಧತೆಯಾಗಿರುತ್ತದೆ. ಮುಂದೆ ಹೆಚ್ಚಿನ ಅಭ್ಯಾಸಕ್ಕೆ ಫರೀದ್ ಕಂದಹಾರಕ್ಕೆ ತೆರಳಿ ಅಲ್ಲಿ ಐದು ವರ್ಷ ಉಳಿದನು. ಆಮೇಲೆ ಅವನು ಇರಾಣ, ಇರಾಕ್, ಖುರಸಾನ್‌ಗಳ ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿದ್ದಲ್ಲದೆ ಮಕ್ಕಾದ ದರ್ಶನವನ್ನೂ ಪಡೆದನೆಂದು ತಿಳಿದುಬರುತ್ತದೆ. ಸಂತರು, ಸಾಧುಗಳು, ಫಕೀರರು, ಮತ್ತು ಮುಮುಕ್ಷುಗಳು ಹೆಚ್ಚಾಗಿ ಪ್ರಯಾಣನಿರತರು – ಅದರಲ್ಲೂ ಬಹು ಸಂಖ್ಯೆಯಲ್ಲಿ ಜನ ಸೇರುವ ಹಬ್ಬಗಳ ಕಾಲಕ್ಕೆ ಅಥವಾ ವಾರ್ಷಿಕೋತ್ಸವಗಳ ಸಂದರ್ಭದಲ್ಲಿ.

ಇದರಿಂದ ಜನರ ಮನಸ್ಥಿತಿಯನ್ನು ತಿಳಿದುಕೊಳ್ಳಲು ಇವರಿಗೆ ಅನುಕೂಲ ವಾಗುವುದು. ವಿವಿಧ ಸಮುದಾಯಗಳ, ಪಂಥ ಪಂಗಡಗಳ ಸಂಪರ್ಕ ದೊರೆಯುವುದು. ಇನ್ನುಳಿದ ಧರ್ಮಶಾಸ್ತ್ರಜ್ಞರನ್ನೂ ಆತ್ಮಸಾಧಕರನ್ನೂ ಬೇಟಿಯಾಗಿ ಅವರೊಡನೆ ವಿಚಾರ ವಿನಿಮಯಕ್ಕೆ ಅವಕಾಶ ಒದಗುವುದು. ಇವೆಲ್ಲಕ್ಕೂ ಮಿಗಿಲಾದ ಇನ್ನೊಂದು ಮಹತ್ವದ ಸಂಗತಿಯೆಂದರೆ ಸಂಚಾರದಿಂದ ವಿರಕ್ತಿಯುಂಟಾಗುತ್ತದೆ. ಅನುಭಾವಿ ಜಗತ್ತಿಗೆ ಯೋಗ್ಯನಾಗಲು ಯಾವುದೇ ಒಂದು ಸ್ಥಳಕ್ಕೆ ತನ್ನನ್ನು ಕಟ್ಟಿ ಹಾಕಿಕೊಳ್ಳದೆ ಇಡಿಯ ಜಗತ್ತೇ ಅವನ ಕಾರ್ಯಕ್ಷೇತ್ರವಾಗಬಹುದು. ಇದೇ ಹುಮ್ಮಸ್ಸಿನಿಂದ ಫರೀದ್ ದೂರ ಸ್ಥಳಗಳಿಗೆ ಸಂಚಾರ ಮಾಡಿ ಕೆಲವು ಪ್ರಮುಖ ಧಾರ್ಮಿಕ ಮುಖಂಡರನ್ನು ಮತ್ತು ಅನುಭಾವಿಗಳನ್ನು ಭೇಟಿಯಾದನೆಂದು ಹೇಳಲಾಗುತ್ತದೆ. ತನಗೆ ಸೂಕ್ತ ಕಂಡಲ್ಲಿ ಶಾಂತಿಯನ್ನರಸಲು ಅವನು ಸ್ವತಂತ್ರ.

ವ್ಯಾಪಕವಾದ ಪ್ರವಾಸ ಮತ್ತು ಉನ್ನತ ವ್ಯಾಸಂಗವನ್ನು ಮುಗಿಸಿಕೊಂಡು ಫರೀದ್ ಭಾರತಕ್ಕೆ ಮರಳಿದಾಗ ಅವನು ಅತ್ಯಂತ ಸುಸಂಸ್ಕೃತ ವ್ಯಕ್ತಿಯಾಗಿ, ಸುಲ್ತಾನರ ಕೆಲಸದಲ್ಲಿ ಅತ್ಯುನ್ನತವಾದ ಅಧಿಕಾರ ಸ್ಥಾನಕ್ಕೆ ಯೋಗ್ಯನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಆದರೆ ಫರೀದನ ವಿಚಾರ ಬೇರೆಯೇ ಆಗಿತ್ತು. ಅವನಿಗೆ ಲೌಕಿಕ ಜಗತ್ತಿನ ಅಧಿಕಾರ ಇಲ್ಲವೆ ಸಂಪತ್ತಿನ ಅವಶ್ಯಕತೆ ಇರಲಿಲ್ಲ. ಅವನದು ಆತ್ಮಶೋಧನೆಯ ಕಾರ್ಯ. ದಿಲ್ಲಿಯನ್ನು ತಲುಪಿದೊಡನೆ ಅವನು ಖ್ವಾಜಾ ಕುತುಬುದ್ದೀನ್ ಭಖ್ತಿಯಾರ್ ಕಾಕಿಯ ಖಾಂಕಾಹ್ (ಸನ್ಯಾಸಿ ಆಶ್ರಮ)ಗೆ ಹೋಗಿ ಶಿಷ್ಯನ ಸರಳವಾದ ನಮ್ರ ಜೀವನವನ್ನು ಪ್ರಾರಂಭಿಸಿದನು.

೨

ಸೂಫಿಯಾಗಿ ಫರೀದನ ಆಧ್ಯಾತ್ಮಿಕ ತರಬೇತಿಯನ್ನರಿಯುವ ಮೊದಲು ಮೂರು ಪ್ರಧಾನ ಪ್ರಭಾವಗಳು ಅವನ ಜೀವನವನ್ನು ರೂಪಿಸಿದ ವಿಷಯವನ್ನು ಇಲ್ಲಿ ಉಲ್ಲೇಖಿಸಬಹುದು. ಮೊಟ್ಟಮೊದಲಿನ ಶ್ರೇಷ್ಠ ಪ್ರಭಾವ ಅವನ ತಾಯಿ ಕಾರ್‌ಸುಮ್

ಬೀಬಿಯದೇ. ಆಕೆ ಇವನಲ್ಲಿ ನಿಯಮಿತವಾಗಿ ಹಾಗೂ ಕ್ರಮವಾಗಿ ಪ್ರಾರ್ಥನೆ ಸಲ್ಲಿಸುವುದರ ಮಹತ್ವವನ್ನು ಬಿಂಬಿಸಿದಳು. ಫರೀದನಲ್ಲಿ ಆಳವಾದ ಧಾರ್ಮಿಕ ಭಾವನೆಗಳನ್ನು, ಸರ್ವಶಕ್ತನಾದ ದೇವರ ಬಗ್ಗೆ ಸರ್ವಾರ್ಪಣ ಭಾವವನ್ನು ಬಿತ್ತಿದಳು. ಬಾಲ್ಯದಿಂದಲೇ ಈ ಆದರ್ಶವನ್ನು ಅವನ ತಾಯಿ ಎಷ್ಟರಮಟ್ಟಿಗೆ ಅವನಲ್ಲಿ ಅಚ್ಚೊತ್ತಿದ್ದಳೆಂದರೆ ಮುಂದೆ ಅದೇ ಅವನ ಏಕೈಕ ಗುರಿಯಾಗಿ ಇಡೀ ಜೀವನದ ಸಾಧನೆಯಾಗಿ ಪರಿಣಮಿಸಿತು. ಎರಡನೆಯ ಪ್ರಭಾವ ಅವನ ತಂದೆ ಜಮಾಲುದ್ದೀನನದು. ಕುರಾನ್ ಬಗ್ಗೆ ತಕ್ಕ ಪಾಂಡಿತ್ಯ ಗಳಿಸಿದ್ದ ಇವನು ನಂತರ ಕೋತ್‌ವಾಲದ ಕಾಜಿಯಾದನು. ಫರೀದನಲ್ಲಿ ಅಧ್ಯಯನಾಸಕ್ತಿಯನ್ನು, ಇಸ್ಲಾಮಿ ತತ್ತ್ವಾಭ್ಯಾಸದಲ್ಲಿ ಶ್ರದ್ಧೆಯನ್ನು ಹುಟ್ಟಿಸಿದನು. ಫರೀದನ ಮನೆ ಧರ್ಮಶ್ರದ್ಧೆ ಹಾಗೂ ಪಾಂಡಿತ್ಯದ ಆಗರವಾಯಿತು. ಅವನನ್ನು ಬೇಟಿಯಾಗಲು ಬರುವವರೆಲ್ಲ ಹೆಚ್ಚಾಗಿ ಸೂಫಿಗಳು ಹಾಗೂ ಧರ್ಮಶಾಸ್ತ್ರ ಬಲ್ಲಿದರು, ಅಥವಾ ಇಸ್ಲಾಮಿ ನ್ಯಾಯತತ್ವದಲ್ಲಿ ಆಸ್ಥೆಯುಳ್ಳವರು. ಹೀಗಾಗಿ ಫರೀದ್ ಆತ್ಮಾನ್ವೇಷಣೆಯ ಕಡೆಗೆ ಸಹಜವಾದ ಒಲವಿನಿಂದ ತನ್ನ ಜೀವನವನ್ನು ಧರ್ಮಶಾಸ್ತ್ರದ ಅಭ್ಯಾಸಕ್ಕೆ ಮೀಸಲಿಡಲು ದೃಢ ಸಂಕಲ್ಪಗೈದುದರಲ್ಲಿ ಆಶ್ಚರ್ಯವೇನಿಲ್ಲ. ಮೂರನೆಯ ಪ್ರಭಾವವಂತೂ ಅವನ ಗುರು ಖ್ವಾಜಾ ಕುತುಬುದ್ದೀನ್ ಬಖ್ತಿಯಾರ್ ಕಾಕಿಯವರದು. ತನ್ನ ಸಂಚಾರವನ್ನೆಲ್ಲ ಮುಗಿಸಿದ ಮೇಲೆ ಫರೀದ್ ಗುರುವಿನ ಆಶ್ರಮವನ್ನು ಸೇರಿದನು. ಬಖ್ತಿಯಾರ್ ಕಾಕಿ ತನ್ನ ಕಾಲದ ಪ್ರಮುಖ ಅನುಭಾವಿಯಾಗಿದ್ದು ದಿಲ್ಲಿಯಲ್ಲಿ ತನ್ನ ಸತ್ರವನ್ನು ಸ್ಥಾಪಿಸಿದನು. ಕಟ್ಟುನಿಟ್ಟಾದ ಆದರ್ಶದಲ್ಲಿ ಬದುಕನ್ನು ವ್ಯವಸ್ಥಿತಗೊಳಿಸಲು ಸತ್ರಗಳು ಅಧ್ಯಾತ್ಮ ಸಾಧಕರಿಗೆ ಒಂದು ಬಗೆಯ ಛಾತ್ರಾನಿಲಯಗಳಾಗಿದ್ದವು. ಇವು ಮೂರು ಮಾದರಿಯಲ್ಲಿದ್ದವು. ಮೊದಲನೆಯದು ಅನುಭಾವಿಗಳಿಗೂ ಸಂದರ್ಶಕರಿಗೂ ಪ್ರತ್ಯೇಕ ಕೋಣೆಗಳನ್ನು ನಿಗದಿಪಡಿಸಿದ 'ದೊಡ್ಡ' ಖಾಂಕಾಗಳು. ಶಿಷ್ಯರು ಗುಂಪಾಗಿ ಕೂಡಿ ವಾಸಿಸುವ ಜಮಾಯತ್ ಖಾನಾಗಳು ಎರಡನೆಯ ಬಗೆಯವು. ಅನುಭಾವಿಗಳು ಪ್ರತ್ಯೇಕವಾಗಿ ವಾಸಿಸುವ 'ಝುವಿಯಾ' ಎಂಬ ಹೆಸರಿನ ಸಣ್ಣ ಮನೆಗಳದು ಮೂರನೆಯ ಪ್ರಕಾರ. ಅಲ್ಲಿಯ ನಿವಾಸಿಗಳು ಧರಿಸಬೇಕಾದ ಬಟ್ಟೆಬರೆ, ಆಹಾರವನ್ನು ಹಂಚಿಕೊಳ್ಳುವ ವೇಳೆ, ಅತಿಥಿಗಳನ್ನು ಸ್ವಾಗತಿಸುವ ರೀತಿ ನೀತಿ, ಷೇಕ್ ಮತ್ತು ಇತರ ಹಿರಿಯರನ್ನು ಸಂಬೋಧಿಸುವ ಬಗೆ, ಪ್ರಾರ್ಥನಾ ಸಮಯದ ಪಾಲನೆ, ದೇಹದಂಡನೆಯ ಸ್ವರೂಪ – ಇವೆಲ್ಲಕ್ಕೂ ನಿರ್ದಿಷ್ಟ ನಿಯಮಗಳಿದ್ದವು. ಕ್ರಮತಪ್ಪಿ ನಡೆದವರಿಗೆ ತಕ್ಕ ಶಿಕ್ಷೆ ವಿಧಿಸಲ್ಪಡುತ್ತಿತ್ತು. ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ, ಭಾವಪೂರ್ಣವಾಗಿ ಹಾಡುವದು, ಪುಣ್ಯತಿಥಿಗಳನ್ನು ಆಚರಿಸುವುದು. ಹಾಗೂ ಲಂಗರ್ – ಅಂದರೆ ಸಾಮೂಹಿಕ ಭೋಜನ ವ್ಯವಸ್ಥೆ ಇರುತ್ತಿದ್ದವು.

ಖಾಂಕಾದಲ್ಲಿಯ ಜೀವನಕ್ರಮ ಅದರ ಸಂಘಟಕನಾದ ಷೇಕ್‌ನ ಸುತ್ತು ತಿರುಗುತ್ತಿತ್ತು. ಅಲ್ಲಿಯ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನಕ್ಕೆ ಅವನೇ ನಿರ್ದೇಶಕ. ಕೇವಲ ಮುಸಲ್ಮಾನರಷ್ಟೇ ಅಲ್ಲ, ಹಿಂದುಗಳು ಮತ್ತು ಇತರರು ಕೂಡ ಖಾಂಕಾಕ್ಕೆ ಬಂದು

ಮಾರ್ಗದರ್ಶನವನ್ನು ಆಶೀರ್ವಾದವನ್ನು ಕೋರುತ್ತಿದ್ದರು. ಬೇರೆ ಪಂಥಗಳ ಯೋಗಿಗಳು ಮತ್ತು ಸಂತರು ಬ್ರಹ್ಮಜ್ಞಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಬರುತ್ತಿದ್ದರು. ಸೂಫಿಗಳೂ ಸಹ ಇಸ್ಲಾಂ ಧರ್ಮದ ಪ್ರಚಾರಕರಾಗಿ ಕೆಲಸಮಾಡಿ ಪ್ರವಾದಿ ಮಹಮ್ಮದನ ಸಂದೇಶವನ್ನು ಸಾರಿದರು.

ಬೀಳುಬಿದ್ದ ಭೂಮಿಯನ್ನು ಕೃಷಿಗೊಳಿಸುವುದರ ಮೂಲಕ, ಇಲ್ಲವೆ ಕಾಣಿಕೆಗಳಿಂದ ಅಥವಾ ಬೇರೆಯವರು ತಾವಾಗಿಯೇ ನೀಡಿದ ದಾನದಿಂದ ಸೂಫಿಗಳು ತಮ್ಮ ಜೀವನ ಸಾಗಿಸುತ್ತಿದ್ದರು. ಶಿಷ್ಯರಿಗೆ ಭಿಕ್ಷೆ ಎತ್ತಲಿಕ್ಕೂ ಅನುಮತಿ ನೀಡಲಾಗಿತ್ತು. ಯಾವ ರೀತಿಯ ದಾನವನ್ನು ಸ್ವೀಕರಿಸಿದರೂ ಅಲ್ಲಿಯ ನಿವಾಸಿಗಳಲ್ಲಿ ಅದನ್ನು ಹಂಚಲಾಗುತ್ತಿತ್ತು. ರಾಜರಿಂದ ಇಲ್ಲವೆ ಶ್ರೀಮಂತ ವರ್ತಕರಿಂದ ಬಂದ ದೊಡ್ಡ ದೊಡ್ಡ ಕಾಣಿಕೆಗಳನ್ನು ಸಂಗ್ರಹಿಸಿಡದೆ ಅದನ್ನು ಆಗಿಂದಾಗಲೇ ಬಡವರಿಗೆ ಹಂಚಿಬಿಡಲಾಗುತ್ತಿತ್ತು. ಸ್ಥಿರಾಸ್ತಿಯನ್ನು ಇಲ್ಲವೆ ನಿಯಮಿತವಾಗಿ ಸಲ್ಲಿಸುವ ಹಣವನ್ನು ಸ್ವೀಕಾರ ಮಾಡುತ್ತಿರಲಿಲ್ಲ. ಸುಹರವರ್ದಿಗಳ ಮಾತಿರಲಿ, ಉಳಿದ ಸಿಲ್ ಸಿಲಾಹ್‌ರು ರಾಜನ ಘೋಷಣೆಯನ್ನು ನಿರಾಕರಿಸಿದರು. ವೈರಾಗ್ಯವೇ ಬದುಕಿನ ಸಾಮಾನ್ಯ ಪದ್ಧತಿಯಾಗಿತ್ತು. ಬಡತನ ಮತ್ತು ತಪಸ್ಸು ಆಧ್ಯಾತ್ಮಿಕ ಮುನ್ನಡೆಗೆ ಅಗತ್ಯವಾದ ಸಹಭಾವಗಳೆಂದು ಪರಿಗಣಿಸಲಾಗಿತ್ತು.

ಸೂಫಿಗಳು ಸಾಮಾನ್ಯವಾಗಿ ತಲೆ ಬೋಳಿಸಿಕೊಂಡು, ಹರಿದು ತೇಪೆ ಹಚ್ಚಿದ ನಿಲುವಂಗಿಗಳನ್ನು ತೊಡುತ್ತಿದ್ದರು. ಷೇಕ್‌ನ ನಿಲುವಂಗಿ, ಪ್ರಾರ್ಥನಾಕಂಬಳಿ, ಆವುಗೆಗಳು, ಊರುಗೋಲು ಮತ್ತು ಜಪಮಾಲೆ – ಇವು ಆ ಪೂಜ್ಯ ವ್ಯಕ್ತಿಯ ಪವಿತ್ರಲಾಂಛನಗಳೆಂದು ಭಾವಿಸಲಾಗುತ್ತಿತ್ತು. ಅವನು ತೀರಿಕೊಂಡ ಮೇಲೆ ಅವುಗಳನ್ನು ಅವನ ಉತ್ತರಾಧಿಕಾರಿಗೆ(ಖಲೀ) ಕೊಡಲಾಗುತ್ತಿತ್ತು. ಷೇಕ್ ಕೂಡ ಖಿಲಾಸತ್‌ನಾಮಾ ಎಂಬ ಹೆಸರಿನ ಮೃತ್ಯುಪತ್ರವನ್ನು ಬಿಟ್ಟು ಹೋಗುತ್ತಿದ್ದನು. ಆ ಮೂಲಕ ತನ್ನ ಉತ್ತರಾಧಿಕಾರಿಯನ್ನು ನಿಯಮಿಸಿ ಪ್ರಚಾರಕಾರ್ಯವನ್ನು ಮುಂದುವರಿಸುವ ಹೊಣೆಯನ್ನು ಅವನಿಗೆ ವಹಿಸಿಕೊಡಲಾಗುತ್ತಿತ್ತು. ಸೂಫಿಯ ಅಂತಿಮ ಗುರಿ ದೇವರೊಡನೆ ಒಂದಾಗುವ (ಪಸ್ಲ್)ದೆಂಬುದನ್ನು ಮರೆಯುವಂತಿಲ್ಲ. ಹೃದಯವನ್ನು ಪರಮಸತ್ಯದೊಡನೆ ಸಾಂಗತ್ಯಗೊಳ್ಳುವಂತೆ ಮಾಡುವ ತರಬೇತಿಯ ಪ್ರತಿಯೊಂದು ರೀತಿಯನ್ನು ಉಪಯೋಗಿಸಲಾಗುತ್ತಿತ್ತು.

ಫರೀದನು ತನ್ನ ಗುರುವಿನ ಕಣ್ಣರಿಕೆಯಲ್ಲಿ ಮತ್ತು ಅವನ ಸ್ಫೂರ್ತಿದಾಯಕ ಮಾರ್ಗದರ್ಶನದಲ್ಲಿ ಬಖ್ತಿಯಾರ್ ಕಾಕಿಯ ಕಾಂಖಾವನ್ನು ಸೇರಿದನು. ತನ್ನ ದೈವಿಕ ಗುರಿಯನ್ನು ತಲುಪುವುದಕ್ಕಾಗಿ ಏಕಾಕಿಯಾಗಿ ದೀರ್ಘಕಾಲದವರೆಗೆ ನಿರೀಕ್ಷೆಯಲ್ಲಿ ಕಳೆಯಬೇಕಾಗುತ್ತದೆಂಬುದನ್ನು ಅವನು ಸಂತೋಷದಿಂದಲೇ ಸ್ವೀಕರಿಸಿದನು. ಉಪವಾಸ, ದೇಹದಂಡನೆ ಮತ್ತು ಅವುಗಳಿಂದ ಉಂಟಾಗುವ ದೈಹಿಕ ಬಾಧೆಗಳನ್ನು ಅವನು ಸ್ವಸಂತೋಷದಿಂದಲೇ ಸಹಿಸಿಕೊಂಡನು. ದೈವಿಕ ಜ್ಞಾನೋದಯಕ್ಕಾಗಿ ದೈಹಿಕ ರಾಗದ್ವೇಷಗಳನ್ನು ವಿರಕ್ತಭಾವದಿಂದ ನಿಗ್ರಹಿಸಬೇಕಾಗುತ್ತದೆಂಬ ವಿಚಾರವನ್ನು

ಸೂಫಿಗಳು ಭಾರತದ ಯೋಗಿಗಳಿಂದ ತಿಳಿದುಕೊಂಡಿದ್ದರು. ಅನುಭಾವ ಮಾರ್ಗದ ದೀಕ್ಷೆ ಪಡೆದವರಿಗೆ ಯೌಗಿಕ ಸಾಧನೆಗಳು ಅವಶ್ಯವಾದ ನಿಯಮಗಳೆಂಬುದು ಒಪ್ಪಿತ ವಿಷಯವಾಗಿತ್ತು. ಉಸಿರನ್ನು ಗಟ್ಟಿಹಿಡಿಯುವುದಕ್ಕೆ, ಇಂದ್ರಿಯಗಳ ಸಂಯಮಕ್ಕೆ ಸುತ್ತಲಿನ ಜಗತ್ತಿನ ಪ್ರಜ್ಞೆಯಿಂದ ಸಂಪೂರ್ಣ ಹಿಂದೆಗೆಯುವುದಕ್ಕೆ ಮತ್ತು ಮನಸ್ಸಿನ ಏಕಾಗ್ರತೆಗೆ ಬೇರೆ ಬೇರೆ ಅಂಗಸಾಧನೆಗಳಿದ್ದವು. ಯೋಗಿಗಳು ಕೂಡ ಧ್ಯಾನದಿಂದ ಪ್ರಾರಂಭಿಸುತ್ತಿದ್ದರು. ಒಂದೇ ವಸ್ತುವಿನಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸುವುದರಿಂದ ಹಿಡಿದು ಅದು ಸಮಾಧಿಯಲ್ಲಿ ಕೊನೆಗೊಳ್ಳುತ್ತಿತ್ತು. ಆಳವಾದ ಚಿತ್ತೈಕಾಗ್ರತೆಯೇ ಬಾಹ್ಯ ಜಗತ್ತಿನ ಅರಿವಿನಿಂದ ಮುಕ್ತವಾದ ದೈವೀ ಜೀವನದ ಹೊಸತಿಲ ಬಳಿಗೆ ಕರೆದೊಯ್ಯುತ್ತದೆ. ಅದರ ಧ್ಯಾನವು ಮೇಲಿನ ಹಂತದ್ದಾಗಿದ್ದು, ಅಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯವೆಂಬುದೆಲ್ಲ ಇಲ್ಲವಾಗಿ ಕಾಲ ತಟಸ್ಥವಾಗುತ್ತದೆ, ಮತ್ತು ಸಾಂತ ಹಾಗೂ ಅನಂತ ಒಂದೇ ಆಗಿ ಬಿಡುತ್ತವೆ. ಇರುವುದು ಮತ್ತು ಆಗುವುದು ಎರಡೂ ಏಕೀಭವಿಸುತ್ತವೆ. ವ್ಯಕ್ತಿಯು ವ್ಯಕ್ತಿಯಾಗಿ ಉಳಿಯದೆ ವಿಶ್ವಾತ್ಮಕ ಭಾಗವಾಗಿಬಿಡುತ್ತಾನೆ. ಇದರ ಪರಿಣಾಮವೆಂದರೆ ಚಿರಂತನ ಶಾಂತಿ, ಮನಸ್ಸಿನಲ್ಲಿ ಒಂದು ಬಗೆಯ ಬೆಳಕು ವ್ಯಾಪಿಸಿ, ಎಲ್ಲ ಬಗೆಯ ಭಯಗಳು, ಉದ್ವೇಗಗಳು ಮತ್ತು ದೈಹಿಕ ವೇದನೆಗಳು ಮತ್ತು ಎಲ್ಲ ಇತಿಮಿತಿಗಳು ಮರೆಯಾಗಿಬಿಡುತ್ತವೆ. ಎಲ್ಲ ಅನುಭಾವಿಗಳು ಹುಡುಕುವುದು ಇದೇ ದೈವೀ ಅನುಭವವನ್ನು. ಫರೀದನು ಇದನ್ನೇ ಸಂನ್ಯಾಸ ಹಾಗೂ ಧ್ಯಾನದ ಮೂಲಕ ಸಾಧಿಸಬಯಸಿದನು. ಅವನು ತನ್ನೊಳಗೇ ಹುದುಗಿಕೊಂಡು ತನ್ನ ಗುರು ಹೇಳಿದ ಆಸನದಲ್ಲಿ ಕುಳಿತು, ಅಲ್ಲಾನ ನಾಮವನ್ನು ಜಪಿಸುತ್ತ ಬಹಳ ಹೊತ್ತು ತನ್ನಷ್ಟಕ್ಕೆ ಇರತೊಡಗಿದನು. ಚಿಲ್ಲಾಹ್‌ವನ್ನು ಅವನು ಆಚರಿಸಿದನು – ಎಂದರೆ ನಾಲ್ವತ್ತು ದಿನಗಳವರೆಗೆ ಒಂದು ಏಕಾಂತವಾದ ಸಣ್ಣ ಕೋಣೆಯಲ್ಲಿಯೇ ದೇವರ ನಾಮವನ್ನು ಜಪಿಸುತ್ತ ಇದ್ದನು. ಫರೀದನು ಚಿಲ್ಲಾಹ್ ಐ–ಮಾಕೂಸ್, ಅಂದರೆ ತಲೆಕೆಳಗಾಗಿ ನೇತಾಡುವುದನ್ನು ಆಚರಿಸಿದನೆಂದು ಹೇಳಲಾಗುತ್ತದೆ. ಈ ಚಿಲ್ಲಾಹ್ ನಾಲ್ವತ್ತು ರಾತ್ರಿಗಳವರೆಗೆ ಇರುತ್ತದೆ. ಗುರು ಗ್ರಂಥಸಾಹಿಬ್‌ದಲ್ಲಿ ಕಾಪಾಡಿಕೊಂಡು ಬಂದಿರುವ ಅವನ ಕೆಲವು ಪದ್ಯಗಳಲ್ಲಿ ಇದಕ್ಕೆ ಪರೋಕ್ಷ ಸಾಕ್ಷಿ ದೊರೆಯುತ್ತದೆ. ಅವನು ತನ್ನ ಜೀವನದ ಯಾವ ಅವಧಿಯಲ್ಲಿ ಚಿಲ್ಲಾಹ್–ಐ–ಮಾಕೂಸ್ ಅನ್ನು ಆಚರಿಸಿದನೆಂಬುದು ಅಷ್ಟು ಮುಖ್ಯವಲ್ಲ. ಆದರೆ ಸಂನ್ಯಾಸಿಯಾಗಿ ತನ್ನ ಗುರಿಯನ್ನು ಸಾಧಿಸಲು ಅವನು ಹೆಚ್ಚಿನ ಉಗ್ರ ಪರೀಕ್ಷೆಗೆ ಒಳಗಾದನೆಂಬುದು ಒತ್ತಿ ಹೇಳಲೇಬೇಕಾದ ಅಂಶವಾಗಿದೆ. ಫರೀದನಿಗೆ ಮಾತ್ರ ಸಂನ್ಯಾಸ ದೇವನೊಂದಿಗೆ ಸ್ಪಷ್ಟವಾದ ತುಡಿತದ ಸ್ಥಿರೀಕರಣದೊಂದಿಗೆ ಜೊತೆಗೂಡಿದ್ದಾಗಿದೆ. "ನಾನು ನಿನಗಾಗಿ ಬದುಕುತ್ತೇನೆ, ನಿನಗಾಗಿ ಸಾಯುತ್ತೇನೆ– ಇವು ಸದಾ ಅವನ ತುಟಿಯ ಮೇಲಿದ್ದ ಶಬ್ದಗಳು. ಯೋಗಿಗಳ ಹಾಗೆ ಜಗತ್ತನ್ನು ಬಿಟ್ಟುಕೊಟ್ಟು ಜನರ ಬಗ್ಗೆ ಏನೂ ಹಚ್ಚಿಕೊಳ್ಳದೆ ಅರಣ್ಯವಾಸ ಮಾಡುವುದರಲ್ಲಿ ಅವನಿಗೆ ನಂಬಿಕೆ ಇರಲಿಲ್ಲ. ದೇವನಿಗಾಗಿ ಅವನು ಬದುಕಿದ್ದು ಮತ್ತು ಸತ್ತದ್ದು; ಹಾಗಿದ್ದರೂ ಜನತೆಯೊಡನೆ ಅವನು ಗಾಢವಾದ ಸಂಪರ್ಕವಿಟ್ಟುಕೊಂಡು ದೈವಿಕ ಮೌಲ್ಯಗಳ ಪ್ರಕಾರ ಅವರ ಸೇವೆಗೆ

ಹಾಗೂ ಉದ್ಧಾರಕ್ಕೆ ಶ್ರಮಿಸಿದನು. ದೇವನಲ್ಲಿ ಸಮರಸಗೊಳ್ಳುವುದು ಮತ್ತು ಜನತೆಯ ಸೇವೆ ಮಾಡುವುದು – ಈ ಎರಡೂ ಗುರಿಗಳು ಫರೀದನ ಜೀವನದ ಮುಖ್ಯ ಉದ್ದೇಶಗಳಾಗಿದ್ದವು.

ಬಖ್ತಿಯಾರ್ ಕಾಕಿಯ ಖಾಂಕಾದಲ್ಲಿದ್ದಾಗ ಫರೀದ್ ಪ್ರಾರ್ಥನೆ ಹಾಗೂ ತಪಸ್ಸಿನ ಪರಿಣಾಮವಾಗಿ ತನ್ನ ಸುತ್ತಲೂ ಒಂದು ಬಗೆಯ ದಿವ್ಯಪ್ರಭೆ ಪಡೆದುಕೊಂಡಿರುವಂತೆ ತೋರಿತು. ಭಾರತದಲ್ಲಿ ಚಿಸ್ತಿಸಿಲ್‌ಸಿಲಾದ ಸ್ಥಾಪಕನಾದ ಅಜಮೀರದ ಖ್ವಾಜಾ ಮೊಹಿಯುದ್ದೀನ್ ಒಮ್ಮೆ ತನ್ನ ಶಿಷ್ಯ ಬಖ್ತಿಯಾರ್ ಕಾಕಿಯ ಖಾಂಕಾಕ್ಷಕ್ಕೆ? ಭೇಟಿಯಿತ್ತನು. ಅಲ್ಲಿ ಅವನು ಫರೀದನನ್ನು ನೋಡಿ ಹೀಗೆ ಹೇಳಿದನು: "ಬಾಬಾ ಬಖ್ತಿಯಾರ್, ನೀನು ಒಂದು ಶ್ರೇಷ್ಠ ಡೇಗೆಯನ್ನು ಹಿಡಿದಿರುವಿ; ಅದು ಸ್ವರ್ಗದ ಪವಿತ್ರ ಗಿಡವನ್ನುಳಿದು ಬೇರೆಲ್ಲಿಯೂ ತನ್ನ ಗೂಡು ಕಟ್ಟಲಾರದು. ದರವೇಶಗಳ ಸಿಲ್‌ಸಿಲಾವನ್ನು ಬೆಳಗುವ ದೀಪ ಫರೀದ್."

ಇಂಥ ಎದ್ದು ಕಾಣುವ ದಿವ್ಯ ವ್ಯಕ್ತಿತ್ವದಿಂದ, ನಿಷ್ಠೆ, ತಪಸ್ಸು, ಪ್ರಾರ್ಥನೆಗಳ ಕೀರ್ತಿಯಿಂದ ಫರೀದನ ಹೆಸರು ಜನರಲ್ಲಿ ಬಹುಬೇಗ ಹಬ್ಬಿಬಿಟ್ಟಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಕುತುಬುದ್ದೀನ್‌ನ ಖಾಂಕಾದಲ್ಲಿ ಜನರು ಗುಂಪು ಗುಂಪಾಗಿ ಬಂದು ತಮ್ಮ ಸಲುವಾಗಿ ತಾವಿಜ್ (ತಾಯಿತ) ಬರೆಯಲು, ಪ್ರಾರ್ಥನೆ ಮಾಡಿಸಲು ಫರೀದನಿಗೆ ದುಂಬಾಲು ಬೀಳತೊಡಗಿದರು. ಈ ತಾಯಿತಗಳು ಕೇಡನ್ನು ದೂರಗೊಳಿಸುತ್ತವೆಂದೂ, ತಾವು ಬಹು ದಿನಗಳಿಂದ ನರಳುತ್ತಿದ್ದ ರೋಗಗಳನ್ನು ನಿವಾರಿಸುತ್ತವೆಂದೂ ಹಳ್ಳಿಗಾಡಿನ ಜನರು ನಂಬಿದ್ದರು. ಇದರಿಂದ ಫರೀದನಿಗೆ ಪ್ರಾರ್ಥನೆಗೆ ಹಾಗೂ ಧ್ಯಾನಕ್ಕೆ ಅಡ್ಡಿಯುಂಟಾಯಿತು. ಅವನು ತನ್ನ ಗುರುವಿನ ಸಲಹೆ ಕೇಳಿದಾಗ ಕುತುಬುದ್ದೀನ್ ಸೂಫಿಗೆ ತಕ್ಕುದಾದ ವಿಶಿಷ್ಟ ರೀತಿಯಲ್ಲಿ ಉತ್ತರಿಸಿದನು. "ನೋಡು ಇದು ಈಗ ನಮ್ಮ ಕೈಯಲ್ಲಿಲ್ಲ. ನಾವು ಉಪಕರಣಗಳು ಮಾತ್ರ, ನೀವು ಬರೆಯುವ ತಾವಿಜ್ ದೇವರ ಹೆಸರನ್ನು ಹೊಂದಿದ್ದು ಪರಿಹಾರಕನು ಅವನೇ. ಆದುದರಿಂದ ಬರೆಯುತ್ತ ಹೋಗು." ಫರೀದ್ ಬರೆಯುವುದನ್ನು ಮುಂದುವರಿಸಿ ಅಗತ್ಯವಿದ್ದವರಿಗೆ ತಾಯಿತಗಳನ್ನು ಕೊಡ ತೊಡಗಿದನು.

೩

ಅನುಭಾವಿಯಾಗಿ ಫರೀದನ ಸಾಧನೆ ಮುಕ್ತಾಯಗೊಂಡಾಗ ಅವನ ಮುರ್ಷಿದ್ ಕುತುಬುದ್ದೀನ್ ಬಖ್ತಿಯಾರ್ ಕಾಕಿ ಹನ್ಸಿಗೆ ಹೋಗಿ ಅಲ್ಲಿ ಧರ್ಮಪ್ರಸಾರ ಕೇಂದ್ರವನ್ನು ತೆರೆಯಲು ಅವನಿಗೆ ಸಲಹೆ ನೀಡಿದನು. ಹನ್ಸಿ ಒಂದು ಪ್ರಶಾಂತ ಸ್ಥಳವಾಗಿದ್ದು, ಅಲ್ಲಿಗೆ ಹೋದರೆ ತನಗೆ ಸಾಧ್ಯವಿದ್ದ ರೀತಿಯಲ್ಲಿ ಜನರಿಗೆ ಸಹಾಯ ಮಾಡಿದಂತಾಗುವುದಲ್ಲದೆ, ದಿಲ್ಲಿಯ ಜನರ ಗದ್ದಲದಿಂದ ಪಾರಾಗಿ ಹೆಚ್ಚು ಸಮಯವನ್ನು ಪ್ರಾರ್ಥನೆ ಮತ್ತು ಧ್ಯಾನದಲ್ಲಿ ವಿನಿಯೋಗಿಸಲು ಅನುಕೂಲವಾಗುವುದೆಂದು ಫರೀದ್ ಭಾವಿಸಿದನು.

ಅವನು ಹೊರಡುವ ಮೊದಲು ಕುತುಬುದ್ದೀನ್ ಫತಿಹಾಹ್‌ವನ್ನು ವಾಚಿಸಿ, ತನ್ನ ಮರಣದ ನಂತರ ಫರೀದ್ ಉದ್ದೀನ್-ಗಂಜ-ಐ-ಷಕರ್ ತನ್ನ ಉತ್ತರಾಧಿಕಾರಿಯಾಗುವನೆಂದು ಸಾರಿದನು. ಮತ್ತು ಅವನಿಗೆ ತನ್ನ ಪ್ರಾರ್ಥನಾ ಕಂಬಳಿ ಮತ್ತು ದಂಡವನ್ನು ದಯಪಾಲಿಸಿದನು.

ಹನ್ಸಿ, ಫರೀದ್ ತಿಳಿದುಕೊಂಡಷ್ಟು ಹಿಂದುಳಿದ ಸ್ಥಳವಾಗಿರಲಿಲ್ಲ. ಅದು ಹಿಸ್ಸಾರ್ ಜಿಲ್ಲೆಯಲ್ಲಿ ದಂಡಿನ ಸ್ಥಳವಾಗಿದ್ದು ತುರ್ಕರು ಮತ್ತು ರಜಪೂತರ ನಡುವೆ ನಡೆದ ಯುದ್ಧಗಳಲ್ಲಿ ಹೆಸರು ಪಡೆದ ಐತಿಹಾಸಿಕ ಸ್ಥಳವೂ ಆಗಿತ್ತು. ಫರೀದ್ ಹನ್ಸಿಯಲ್ಲಿ ಅನೇಕ ವರ್ಷ ವಾಸಿಸಿದನು. ತನ್ನ ಮಾನವೀಯತೆ, ನಿಷ್ಠೆ ಹಾಗೂ ಜನರ ಮೇಲಿನ ಪ್ರೀತಿಯಿಂದ ಫರೀದ್ ಹನ್ಸಿ ಮತ್ತು ಸುತ್ತಮುತ್ತಿನ ಪ್ರದೇಶದ ಜನರಿಗೆ ಅತ್ಯಂತ ಆತ್ಮೀಯನಾದನು. ಈ ಅವಧಿಯಲ್ಲಿ ಫರೀದನು ಅನೇಕ ಪವಾಡಗಳನ್ನು ಮೆರೆದಿರಬೇಕೆಂದು, ಸಾಧುಸಂತರ ಜೀವನ ಚರಿತ್ರೆಗಳನ್ನು ಬರೆದಿಡುವ ಕೆಲವು ಲೇಖಕರು ಹೇಳುತ್ತಾರೆ. ಫರೀದ್‌ನಂಥ ಮಹಾಪುರುಷರಿಗೆ ತಮ್ಮ ಆಧ್ಯಾತ್ಮಿಕ ಸ್ಥಾನವನ್ನು ಪ್ರತಿಷ್ಠಾಪಿಸಲು ಪವಾಡಗಳ ಅವಶ್ಯಕತೆಯೇನೂ ಇರುವುದಿಲ್ಲ. ಸೂಫಿಯನ್ನು ಜನತೆಯ ದೇವತಾಮೂರ್ತಿಯಾಗಿ ಮತ್ತು ದೇವರ ಪ್ರೇಮಿಯಾಗಿ ರೂಪಿಸಿದ ಎಲ್ಲ ಸದ್ಗುಣಗಳೂ ಅವನಲ್ಲಿದ್ದವು. "ನದಿಯ ಔದಾರ್ಯ, ಸೂರ್ಯನ ಉಪಕಾರಬುದ್ಧಿ, ಭೂಮಿಯ ಆತಿಥ್ಯಗುಣವುಳ್ಳವರು" ಯಾರೇ ಆದರೂ ದೇವರು ಅವರನ್ನು ಪ್ರೀತಿಸುತ್ತಾನೆ ಎಂದು ಷೇಕ್ ಮೊಹಿಯುದ್ದೀನ್ ಈ ಸದ್ಗುಣಗಳನ್ನು ವ್ಯಾಖ್ಯಾನಿಸಿದ್ದಾನೆ. ಫರೀದ್ ಸ್ವತಃ ದಟ್ಟ ದಾರಿದ್ರ್ಯದಲ್ಲಿದ್ದು ಎಷ್ಟೋ ಸಲ ಆಹಾರವಿಲ್ಲದೆ ಉಪವಾಸ ಬೀಳುವ ಸ್ಥಿತಿ ಇತ್ತು. ಆದರೂ ಅವನ ಖಾಂಕ್ ಎಲ್ಲರಿಗೂ ಮುಕ್ತವಾಗಿದ್ದು, ಅಲ್ಲಿಗೆ ಬರುವ ಪ್ರತಿಯೊಬ್ಬರಿಗೂ ಫರೀದಿಲ್ಯಾಂಗರ್‌ನಲ್ಲಿ ತಿನ್ನಲು ಏನಾದರೂ ಸಿಕ್ಕೇ ಸಿಗುತ್ತಿತ್ತು. ಮುಸಲ್ಮಾನರಷ್ಟೇ ಅಲ್ಲದೆ, ಉಳಿದ ಮತೀಯರೂ ಅವನ ಖಾಂಕಾಕ್ಕೆ ಬಂದು ಅವನ ಆಶೀರ್ವಾದ ಪಡೆಯುತ್ತಿದ್ದರು ಮತ್ತು ತಮ್ಮನ್ನು ಕಾಡುತ್ತಿರುವ ಸಂದೇಹಗಳಿಗೆ, ಭಯಗಳಿಗೆ ಅಲ್ಲಿ ಪರಿಹಾರ ಪಡೆಯುತ್ತಿದ್ದರು. ಯೋಗಿಗಳೂ ಸಾಧುಗಳೂ ಚರ್ಚೆ ಮಾಡಲು ಮತ್ತು ಆಧ್ಯಾತ್ಮಿಕ ಸಮಸ್ಯೆಗಳ ಬಗ್ಗೆ ತಿಳಿವಳಿಕೆ ಪಡೆಯಲು ಅಲ್ಲಿಗೆ ಬರುತ್ತಿದ್ದರು. ಮುಸಲ್ಮಾನರು ಮತ್ತು ಹಿಂದುಗಳ ನಡುವೆ ಅವನು ಯಾವ ಭೇದಭಾವವನ್ನೂ ತೋರಿಸುತ್ತಿರಲಿಲ್ಲ. ಮುಸಲ್ಮಾನರಲ್ಲದವರನ್ನು ಕಾಫಿರ್‌ರೆಂದು ಕಾಣುವ ಸಂಪ್ರದಾಯಸ್ಥ ಉಲ್ಲೇಮಾರ ರೀತಿ ಅವನಿಗೆ ಸರಿಯೆನಿಸಿರಲಿಲ್ಲ. ಅದೂ ಅಲ್ಲದೆ ಸೂಫಿಯಾಗಿ ಜನರನ್ನು ಮತಾಂತರಗೊಳಿಸುವುದು ಅವನ ಕೆಲಸವಾಗಿರಲಿಲ್ಲ. 'ಧರ್ಮದಲ್ಲಿ ಒತ್ತಾಯವೆಂಬುದಿಲ್ಲ' ಎಂಬ ಕುರಾನಿನ ತತ್ತ್ವವನ್ನು ಅವನು ಪಾಲಿಸಿದನು. ಬೇರೆಬೇರೆ ನಂಬಿಕೆ ಹಾಗೂ ಸಂಪ್ರದಾಯಗಳಿಗೆ ಜನರ ಪರಸ್ಪರ ಸಹಿಷ್ಣುತೆ ಹಾಗೂ ತಿಳುವಳಿಕೆಯ ಪ್ರತೀಕವಾಗಿ ಫರೀದ್ ಆದರಣೀಯ ವ್ಯಕ್ತಿಯಾಗಿದ್ದನು. ಒಮ್ಮೆ ಫರೀದನಿಗೆ ಜೋಡಿ ಕತ್ತರಿಗಳನ್ನು ಅರ್ಪಿಸಲಾಯಿತು. ಆಗ ಅವನು "ನನಗೊಂದು ಸೂಜಿ ಕೊಡಿ, ನಾನು ಹೊಲಿಯುತ್ತೇನೆ. ನಾನು ಕತ್ತರಿಸುವ ಕೆಲಸ ಮಾಡುವುದಿಲ್ಲ"

ಎಂದು ಹೇಳಿದನು. ಈ ಸಂಗತಿಯನ್ನು ಅಮ್ರಿಹಸನ್ ಸಿಜ್ಜಿ ಫಾವಾ-ಈದ್-ಉಲ್-ಫಾಉದ್‌ದಲ್ಲಿ ಉಲ್ಲೇಖಿಸಿದ್ದಾರೆ. ಧಾರ್ಮಿಕ ನಂಬಿಕೆಗಳ ಪರಸ್ಪರ ತಿಳಿವಳಿಕೆಯ ಮೂಲಕ ಜನರನ್ನು ಹತ್ತಿರ ತರಲು ಅವನು ಬಯಸಿದನೇ ಹೊರತು, ಒಂದು ಧರ್ಮ ಮತ್ತೊಂದಕ್ಕಿಂತ ಹೆಚ್ಚಿನದೆಂಬ ಭಾವನೆಯಿಂದ ಪರಸ್ಪರ ವೈಷಮ್ಯ ಹಾಗೂ ಮತದ್ವೇಷವನ್ನು ಬೆಳೆಸಲೆಂದಲ್ಲ. ಶರೀಯತ್ (ಪವಿತ್ರ ನಿಯಮಗಳು) ಬಗ್ಗೆ ಫರೀದನ ಆಳವಾದ ಶ್ರದ್ಧೆಯೇ ತರೀಕತ್ (ಮಾರ್ಗ)ನ ತಳಹದಿಯಾಯಿತು. ಜೀವನದುದ್ದಕ್ಕೂ ಪ್ರೀತಿಯ ದಾರಿಯನ್ನೇ ಅವನು ಅನುಸರಿಸಿದ್ದು ಅದೇ ಸೂಫಿ ತತ್ತ್ವಪಂಥಕ್ಕೆ ತಳಹದಿಯಾಗಿ ಪರಿಣಮಿಸಿತು. ಈ ಪ್ರೀತಿಯು ದೇವರ ಮೇಲಿನ ಹಾಗೂ ಅವನು ಸೃಷ್ಟಿಸಿದ ಪ್ರಾಣಿಗಳ ಮೇಲಿನ ಪ್ರೀತಿಗಳೆರಡನ್ನೂ ಒಳಗೊಂಡಿತ್ತು. ದೇವರನ್ನು ಪ್ರೀತಿಸುವ ಏಕೈಕ ಮಾರ್ಗ ತನ್ನ ಜನರನ್ನು ಪ್ರೀತಿಸುವ ಮೂಲಕವೇ ಎಂಬುದನ್ನು ಫರೀದ್ ಒತ್ತಿ ಹೇಳುತ್ತಿದ್ದ. ಈ ಮಾನವೀಯತೆ ಹಾಗೂ ಕರ್ಮಮೋಕ್ಷವಾದ ಸೂಫಿಸಂತರ ಮತವಾಗಿ ಹಿಂದೂ, ಮುಸಲ್ಮಾನ ಮತ್ತು ಶೀಖರ ಪ್ರೀತಿಯನ್ನು ಇಂದಿಗೂ ಅವರು ಉಳಿಸಿಕೊಂಡು ಬರುವಂತಾಯಿತು. ಅಂದಿನ ಅಸ್ಥಿರತೆಯ ಹಾಗೂ ಕಳವಳಕಾರಿ ದಿನಗಳಲ್ಲಿಯ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯನ್ನು ಪರಿಶೀಲಿಸಿದರೆ, ಫರೀದ್ ಜನತೆಯಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದನೆಂದು ಹೇಳಬಹುದು.

ಇಷ್ಟರಲ್ಲಿ ಕುತುಬುದ್ದೀನ್ ಬಖ್ತಿಯಾರ್ ಕಾಕಿ ಮರಣ ಹೊಂದಿದ ಸುದ್ದಿ ಬಂದೊಡನೆ ಫರೀದ್ ದಿಲ್ಲಿಗೆ ಹೋದನು. ಆಗ ಅವನಿಗೆ ಯೋಗಿಯ ವಿಶೇಷಾಧಿಕಾರಗಳನ್ನು, ಲಾಂಛನಗಳನ್ನು ನೀಡಿ ಅವನನ್ನು ಚಿಸ್ತಿ ಸಿಲ್‌ಸಿಲಾದ ಮುಖ್ಯಸ್ಥನೆಂದು ಸಾರಲಾಯಿತು. ದಿಲ್ಲಿಯ ಜೀವನ ಹನ್ಸಿಯಲ್ಲಿನದಕ್ಕಿಂತ ತೀರ ಭಿನ್ನವಾಗಿತ್ತು. ಸಾಮಾಜಿಕ ಕಾರ್ಯಕಲಾಪಗಳು ಹಾಗೂ ಧಾರ್ಮಿಕ ಸಮ್ಮೇಳನಗಳಿಂದ ಅಲ್ಲಿ ಬಿಡುವಿಲ್ಲದಾಗಿತ್ತು. ಫರೀದನನ್ನು ಪ್ರತ್ಯಕ್ಷ ನೋಡಲೇಬೇಕೆಂದು ಉನ್ನತ ಸ್ಥಾನದಲ್ಲಿರುವ ಸಂದರ್ಶಕರು ಸಾಲುಗಟ್ಟಿ ಬರತೊಡಗಿದರು. ರಾಜಕೀಯ ಒಳಸಂಚಿನ ಗುಪ್ತ ಕಾರಸ್ಥಾನವೂ ಅಲ್ಲಿ ನಡೆಯುತ್ತಿತ್ತಲ್ಲದೆ ಆಗಾಗ ಧಾರ್ಮಿಕ ಮುಖಂಡರೂ ಅದರಲ್ಲಿ ಭಾಗವಹಿಸುತ್ತಿದ್ದರು. ಇಸ್ಲಾಂ ರಾಜ್ಯದಲ್ಲಿ ನ್ಯಾಯಶಾಸ್ತ್ರ ಧರ್ಮದ ಭಾಗವಾಗಿರುವುದರಿಂದ ರಾಜಕೀಯ ಮತ್ತು ಧರ್ಮ ಕಲಬೆರಕೆಗೊಳ್ಳುತ್ತವೆ. ಧಾರ್ಮಿಕ ಮುಖಂಡರು ರಾಜಕೀಯ ಅಧಿಕಾರಿಗಳಿಗೆ ಅಧೀನ ಪಾತ್ರ ವಹಿಸುವ ಒತ್ತಾಯಕ್ಕೆ ಒಳಗಾಗುತ್ತಾರೆ. ಆದ್ದರಿಂದ ಸರಕಾರದೊಡನೆ ಸಂಪ್ರದಾಯಸ್ಥ ಬ್ರಹ್ಮಜ್ಞಾನಿಗಳು ನಡೆದುಕೊಳ್ಳುವ ರೀತಿಗೂ ಸೂಫಿಗಳ ರೀತಿಗೂ ವ್ಯತ್ಯಾಸ ಕಂಡುಬರುತ್ತದೆ. ದೇಶದ ಧರ್ಮವನ್ನು ಪ್ರತಿನಿಧಿಸುವ ಉಲ್ಲೇಮಾಗಳ ಹಾಗೂ ಸೂಫಿಗಳ ನಡುವೆ ಇರುವ ವೈರತ್ವಕ್ಕೆ ಕೆಲವು ಆಧ್ಯಾತ್ಮಿಕ ಕಾರಣಗಳಿದ್ದವೆಂಬುದು ನಿಜ. ದೇವರ ನೇರ ದರ್ಶನದ ಬಗ್ಗೆ ಸೂಫಿಗಳು ಒತ್ತುಕೊಡುತ್ತಿದ್ದರಲ್ಲದೆ ಆತ್ಮಸಾಧನೆಯ ಪ್ರಯತ್ನದ ಮೂಲಕ ಈ ಭೂಲೋಕದಲ್ಲಿಯೂ ಈ ಜನ್ಮದಲ್ಲಿಯೇ ದೇವರೊಡನೆ ಐಕ್ಯಹೊಂದುವ ಸಾಧನೆ

ಅವರದಾಗಿತ್ತು. ದೇವರು ನಡೆಸುವ ಅಂತಿಮ ವಿಚಾರಣೆಯ ದಿನದಂದು ಸ್ವರ್ಗ ಅಥವಾ ನರಕದ ಪ್ರತಿಫಲದಲ್ಲಿ ನಂಬಿಕೆಯಿಟ್ಟ ಉಲೇಮಾಗಳು, ಈ ಜೀವನದಲ್ಲಿ ಅಂಥ ದರ್ಶನದ ಕಲ್ಪನೆಯನ್ನು ತೀವ್ರವಾಗಿ ತಿರಸ್ಕರಿಸಿದರು. ಮನುಷ್ಯ ಯಾವ ರೀತಿಯಲ್ಲಿಯೂ ದೇವರೊಡನೆ ಆತ್ಮೀಯ ಸಂಬಂಧವನ್ನು ಪಡೆಯಲಾರ, ಅದು ಪ್ರವಾದಿಗಳ ವಿಶೇಷ ಹಕ್ಕು ಎಂಬುದು ಅವರ ಹೇಳಿಕೆ. ಆದುದರಿಂದ ದೇವರ ದರ್ಶನ ಪಡೆಯುವುದಾಗಲಿ ಅಥವಾ ಅವನನ್ನು ಕೂಡುವುದಾಗಲಿ, ಅವನೊಡನೆ ಐಕ್ಯವಾಗುವುದಾಗಲಿ, ಇವುಗಳ ಪ್ರಶ್ನೆಯೇ ಉದ್ಭವಿಸದು. ಹೆಚ್ಚೆಂದರೆ ದೇವರ ದಯೆ, ಅನುಗ್ರಹ ಮತ್ತು ದೇವಲೋಕದಲ್ಲಿಯ ಆನಂದಮಯ ಜೀವನ ಇವುಗಳ ಬಗ್ಗೆ ಆಶೆಯಿಟ್ಟುಕೊಳ್ಳಬಹುದು, ಅಷ್ಟೆ. ಆದರೆ ದೇವರ ದರ್ಶನವಿಲ್ಲದೆ ಒಂದು ನಿಮಿಷವೂ ಬದುಕಿರಲಾರದ ವ್ಯಕ್ತಿಗಳು ತಮ್ಮ ಗುಂಪಿನಲ್ಲಿರುವರೆಂದು ಯೋಗಿಗಳು ಖಂಡಿತವಾಗಿ ನುಡಿಯುತ್ತಿದ್ದರು. ಅಷ್ಟೇ ಅಲ್ಲದೆ, ಸೂಫಿಗಳು ಇಹಲೋಕದ ಸಂಪತ್ತಿನ ಬಗೆಗಾಗಲಿ, ಪರಲೋಕದ ಸ್ವರ್ಗ–ನರಕಗಳ ಬಗೆಗಾಗಲಿ ಎಷ್ಟೂ ಆಸ್ಥೆ ತಾಳಿರಲಿಲ್ಲ.

ಸರಕಾರದ ಸಂಬಂಧವನ್ನು ಸಂಪೂರ್ಣ ತೊಡೆದಿರಬೇಕೆಂದು ಚಿಸ್ತಿಸಿಲ್‌ಸಿಲಾ ಒತ್ತಾಯಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಸರಕಾರದ ಕೈಯಲ್ಲಿಯೇ ಎಲ್ಲ ಶಕ್ತಿಯೂ ಇದ್ದಾಗ ಅದರ ಸಂಬಂಧಗಳನ್ನು ಸಂಪೂರ್ಣವಾಗಿ ಕೈಬಿಡುವುದು ಬಹಳ ಕಷ್ಟ. ಸರಕಾರದೊಡನೆ ಸ್ವತಃ ಫರೀದನ ಸಂಬಂಧ ಹೇಗಿತ್ತು ಎಂಬುದಕ್ಕೆ ಒಂದು ಘಟನೆ ಉತ್ತಮ ನಿದರ್ಶನವನ್ನು ಒದಗಿಸುತ್ತದೆ. ಸುಲ್ತಾನ್ ಬಲ್ಬನ್ ನಾಲ್ಕು ಹಳ್ಳಿಗಳನ್ನು ಹಾಗೂ ಕೆಲವೊಂದು ಹಣವನ್ನೊಳಗೊಂಡ ಕಾಣಿಕೆಯನ್ನು ಕಳಿಸಿಕೊಟ್ಟಾಗ ಫರೀದ್ ಹಣವನ್ನು ಸ್ವೀಕರಿಸಿ ಬಡವರಿಗೆ ಅದನ್ನೆಲ್ಲ ಹಂಚಿದನು, ಹಾಗೂ ಹಳ್ಳಿಗಳ ಕೊಡುಗೆಯನ್ನು ನಿರಾಕರಿಸಿದನು. ಹಳ್ಳಿಗಳನ್ನು ಸ್ವೀಕರಿಸಿದರೆ ತಾನೊಬ್ಬ ಜಹಗೀರದಾರನಾಗಬಹುದೇ ಹೊರತು ಸೂಫಿಯಾಗಲಾರ ಮತ್ತು ದರವೇಶಿಗಳಲ್ಲಿ ತನಗೆ ಸ್ಥಾನವಿಲ್ಲದಾಗುತ್ತದೆಂದು ಹೇಳಿದನು. ಈ ಸಂದರ್ಭದಲ್ಲಿ ಶಿಷ್ಯರಿಗೆ ಫರೀದ್‌ನ ಉಪದೇಶ ನಿಸ್ಸಂಧಿಗ್ಧವಾಗಿದೆ: "ನಿಮ್ಮ ಆತ್ಮಸಾಧನೆಯ ಹಂತದಲ್ಲಿ ಮೇಲ್ಮಟ್ಟವನ್ನು ಬಯಸುವುದಾದರೆ ರಾಜನ ಕುಟುಂಬದವರೊಡನೆ ಕೂಡಿಕೊಳ್ಳಬೇಡಿ."

೪

ದಿಲ್ಲಿಯ ಜೀವನ ಹಾಗೂ ರಾಜಕೀಯದಿಂದ ಮನಸ್ಸಿಗೆ ನೆಮ್ಮದಿ ಇಲ್ಲದಂತಾಗಿ ಫರೀದ್ ಹನ್ಸಿಗೆ ಹಿಂದಿರುಗಿದನು. ಅದರೆ ಇಲ್ಲಿಯೂ ಕೂಡ ತಾನು ಇಚ್ಛಿಸಿದ ಶಾಂತಿ ಅವನಿಗೆ ದೊರೆಯಲಿಲ್ಲ. ಅವನು ಹೋದ ಹೋದಲ್ಲೆಲ್ಲ ಜನರ ಗುಂಪೇ ನೆರೆಯುತ್ತಿತ್ತು. ಇದರಿಂದ ಅವನಿಗೆ ವೇಳೆ ಹಾಗೂ ಬಿಡುವು ಇಲ್ಲದಂತಾಯಿತು. ಹನ್ಸಿಯನ್ನು ಬಿಟ್ಟು ಬೇರೊಂದು ಪ್ರಶಾಂತವಾದ, ನಿರ್ಜನ ಹಾಗೂ ಏಕಾಂತ ಸ್ಥಳಕ್ಕೆ ಹೋಗಲು ಅವನ ಅಂತರಂಗ ಪ್ರಚೋದಿಸಿತು. ಅಂಥ ಸ್ಥಳದಲ್ಲಿ ಮಾತ್ರ ಧ್ಯಾನಸ್ಥನಾಗಿ ಎಲ್ಲ ಆಧ್ಯಾತ್ಮಿಕ ಸಾಧನೆಗಳ ಸರ್ವಸ್ವವಾದ ದೈವೀ ಸಾಮರಸ್ಯವನ್ನು ಅವನು ಈಡೇರಿಸಿಕೊಳ್ಳಬಲ್ಲ.

ಹನ್ಸಿಖಾಂಕಾದ ಅಧಿಕಾರವನ್ನು ತನ್ನ ಶಿಷ್ಯನೊಬ್ಬನಿಗೆ ವಹಿಸಿಕೊಟ್ಟು ಫರೀದ್ ಪಾಕಿಸ್ತಾನದಲ್ಲಿಯ ಮಾಂಟ್ಗೊಮೇರಿ ಜಿಲ್ಲೆಯ ಅಜೋಧನ್‌ಗೆ (ಪವಿತ್ರ ಡೋಣಿ) – ಈಚಿನ ಹೆಸರು – ಪಾಕತುಟ್ಟನ್‌ಗೆ ತೆರಳಿದನು.

ಅಜೋಧನ್‌ದ ಹೊರವಲಯದಲ್ಲಿ ನಿರ್ಜನವಾದ ಏಕಾಂತ ಸ್ಥಳವನ್ನು ಆಯ್ಕೆ ಮಾಡಿ ಫರೀದ್ ಅಲ್ಲಿಯ ಗಿಡಗಳ ತೋಪಿನ ಕೆಳಗೆ ತನಗಾಗಿ ಒಂದು ಚಿಕ್ಕ ಗುಡಿಸಲನ್ನು ಕಟ್ಟಿಕೊಂಡನು. ಆ ಸ್ಥಳದ ಸುತ್ತಲೂ ಎಷ್ಟೋ ಮೈಲುಗಳವರೆಗೆ ಬರೀ ಮರಳ ದಿನ್ನೆಗಳೂ, ಕುರುಚಲು ಗಿಡಗಳೂ ಇದ್ದವಲ್ಲದೆ ಕಾಡುಪ್ರಾಣಿಗಳಿಂದಲೂ ಹುಳು–ಹುಪ್ಪಡಿಗಳಿಂದಲೂ ಅದು ತುಂಬಿಕೊಂಡಿತ್ತು. ಸ್ವತಃ ಫರೀದನಿಗೇ ಅಲ್ಲಿ ಒಮ್ಮೆ ಹಾವು ಕಚ್ಚಿತಲ್ಲದೆ ಅವನ ತಾಯಿಯನ್ನು ಕಾಡುಪ್ರಾಣಿಯೊಂದು ನುಂಗಿಬಿಟ್ಟಿತು. ಕೆಲವು ದಿನಗಳವರೆಗೆ ಫರೀದ್ ತನ್ನೆಲ್ಲ ವೇಳೆಯನ್ನು ಪ್ರಾರ್ಥನೆ ಹಾಗೂ ಧ್ಯಾನಕ್ಕಾಗಿ ಮೀಸಲಿಟ್ಟನು. ಆದರೆ ಆಮೇಲೆ, ಸಂದರ್ಶಕರಿಗೆ ತನ್ನ ಗುಡಿಸಲನ್ನು ತೆರೆದಿಟ್ಟನು. ದೊಡ್ಡ ಸಂತನೊಬ್ಬ ಯಾವುದಾದರೂ ಒಂದು ಸ್ಥಳಕ್ಕೆ ಬಂದು ವಾಸಮಾಡತೊಡಗಿದರೆ ಆ ಸ್ಥಳಕ್ಕೆ ಲೋಹಚುಂಬಿಕ ಶಕ್ತಿ ಒದಗಿಬಿಡುತ್ತದೆ. ಅದು ಶಿಷ್ಯರನ್ನು ಅನುಯಾಯಿಗಳನ್ನು ತನ್ನೆಡೆಗೆ ಆಕರ್ಷಿಸಿ, ಅಲ್ಲಿ ಒಂದು ಊರೇ ಬೆಳೆದುಬಿಡುವುದು ಸ್ವಾಭಾವಿಕ. ಸ್ವಲ್ಪ ದಿನಗಳಲ್ಲಿಯೇ ಅಲ್ಲಿ ಒಂದು ಖಾಂಕಾ ಮತ್ತು ಜಮಾಯತ್ ಖಾನಾಗಳನ್ನು ಕಟ್ಟಲಾಯಿತು. ದೂರದೂರದಿಂದ ಜನರು ಫರೀದ್‌ನಿಗೆ ತಮ್ಮ ಗೌರವ ಸಲ್ಲಿಸಲು ಬರುತ್ತಿದ್ದರು. ಬಾಬಾ ಫರೀದನ ಈ ಕೀರ್ತಿ ಮತ್ತು ಪ್ರಸಿದ್ಧಿ ಅಜೋಧನ್ ಕಾಜಿಯ ವೈರಕ್ಕೆ ಹಾಗೂ ಮತ್ಸರಕ್ಕೆ ಕಾರಣವಾಯಿತು. ಅವನ ಪ್ರಚೋದನೆಯಿಂದ ಸ್ಥಳೀಯ ಜಾಗೀರದಾರರು ಮತ್ತು ಅಧಿಕಾರಿಗಳು ಫರೀದ್ ಹಾಗೂ ಅವನ ಕುಟುಂಬದವರಿಗೆ ಕಿರುಕುಳ ಕೊಡತೊಡಗಿದರು. ಫರೀದನನ್ನು ಕೊಲ್ಲಲು ಕೊಲೆಗಡುಕನೊಬ್ಬನಿಗೆ ಹಣಕೊಟ್ಟು ನಿಯಮಿಸುವುದಕ್ಕೂ ಕಾಜಿ ಹೇಸಲಿಲ್ಲ. ಆದರೆ, ಷೇಕ್ ನಿಜಾಮುದ್ದೀನ್ ಔಲಿಯಾ ಅವರ ಪ್ರಕಾರ, ಕೊಲೆಗಡುಕನು ಫರೀದನಿಗೆ ತನ್ನ ಉದ್ದೇಶ ಗೊತ್ತಾಗಿದೆಯೆಂದು ತಿಳಿದೊಡನೆ ಅಲ್ಲಿಂದ ಪಲಾಯನ ಮಾಡಿದನು. ಖಾಂಕಾದ ನಿವಾಸಿಗಳು ಗಾಯನ, ನೃತ್ಯಗಳಲ್ಲಿ ತೊಡಗಿ, ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವರೆಂದು ಕಾಜಿ ರಾಜಪ್ರತಿನಿಧಿಗೆ ವರದಿ ಮಾಡಿದನು. ರಾಜಪ್ರತಿನಿಧಿಯು ಫರೀದನಿಗೆ ಅವನ ಮಕ್ಕಳಿಗೆ ಸಾಕಷ್ಟು ತೊಂದರೆ ಕೊಟ್ಟನು. ಆದರೆ ತಾಳ್ಮೆ ಹಾಗೂ ಸಹನೆಯಿಂದ ಫರೀದ್ ಕೊನೆಗೆ ಎಲ್ಲ ವಿರೋಧವನ್ನು ಸಹಿಸಿದನು. ರಾಜಪ್ರತಿನಿಧಿಯು ಯಾವುದೋ ವ್ಯಾಧಿಯಿಂದ ಬಳಲಿ ಅಲ್ಪಾವಧಿಯಲ್ಲಿಯೇ ತೀರಿಕೊಂಡನೆಂದು ಹೇಳಲಾಗುತ್ತದೆ.

ಅಜೋಧನ್‌ದಲ್ಲಿದ್ದ ಈ ವರ್ಷದಲ್ಲಿ ಫರೀದನು ಮದುವೆಯಾಗಿ ದೊಡ್ಡ ಕುಟುಂಬದ ಪೋಷಣೆ ಮಾಡಿದನು. ಅವನಿಗೆ ಮೂವರು ಹೆಂಡರಿದ್ದರೆಂದು ನಂಬಲಾಗಿದ್ದು ಅವರಲ್ಲಿ ಒಬ್ಬಳು ಸುಲ್ತಾನ್ ಬಲ್ಬನ್‌ನ ಮಗಳೆಂದು ಹೇಳಲಾಗಿದೆ. ಆದರೆ ಇದಕ್ಕೆ ಐತಿಹಾಸಿಕ ಆಧಾರವಿಲ್ಲ. ಸುಲ್ತಾನ್ ಮತ್ತು ಅಧಿಕಾರಿಗಳ ಆಡಳಿತದೊಡನೆ

ಯಾವುದೇ ಸಂಬಂಧವನ್ನು ಬಯಸದ ಫರೀದ್ ರಾಜಕುಮಾರಿಯನ್ನು ಮದುವೆಯಾಗಲು ಒಪ್ಪುವುದು ಎಂದೂ ಸಾಧ್ಯವಿರಲಿಲ್ಲ. ಇದೆಲ್ಲ ಅಲಿ ಅಸ್ಕರ್ ಚಿಸಿಯ ಭ್ರಾಂತ ಕಲ್ಪನೆ. ಅವನಿಂದ ರಚಿತವಾದ 'ಜವಾಹಿರ್–ಐ–ಫರೀದ್' ಪವಾಡಗಳಿಂದಲೂ ಅಘಟಿತ ಘಟನೆಗಳಿಂದಲೂ ತುಂಬಿಕೊಂಡಿದೆ.

ಬಾಬಾ ಫರೀದ್‌ನ ಕೀರ್ತಿ ಮತ್ತು ಪ್ರಭಾವ ದೇಶದ ಉದ್ದಗಲಕ್ಕೂ ವ್ಯಾಪಿಸಿದ್ದಕ್ಕೆ ಅವನ ಜಮಾಯಿತ್‌ಖಾನಾ ಎಲ್ಲ ವೃತ್ತಿಗಳ ಜನರನ್ನು ಆಕರ್ಷಿಸಿದ್ದೇ ಸಾಕ್ಷಿ. ಅವನ ಶಿಷ್ಯರಲ್ಲದೆ ಈ ಆಧ್ಯಾತ್ಮಿಕ ಕೇಂದ್ರಕ್ಕೆ ವಿದ್ವಾಂಸರು, ವರ್ತಕರು, ಅಧಿಕಾರಿಗಳು ತಮ್ಮ ವೃತ್ತಿಗಳನ್ನು ಸಂಪೂರ್ಣವಾಗಿ ಇಲ್ಲವೆ ತಾತ್ಕಾಲಿಕವಾಗಿ ತೊರೆದು ಬಂದು, ಆತ್ಮಸಾಧನೆಯ ಮುನ್ನಡೆಗಾಗಿ ತಾಪಸ ಜೀವನವನ್ನು ನಡೆಸತೊಡಗಿದರು. ಅನೇಕ ಪ್ರಸಿದ್ಧ ವ್ಯಕ್ತಿಗಳು ಅಲ್ಲಿಗೆ ನಮ್ರ ಸೇವಕರಾಗಿ ಆಗಮಿಸಿ ತಮಗೆ ಅಗತ್ಯವಾದ ಶಾಂತಿ ಸಮಾಧಾನಗಳನ್ನು ಪಡೆದುಕೊಂಡ ಬಗ್ಗೆ ಇತಿಹಾಸದಲ್ಲಿ ಉಲ್ಲೇಖಗಳಿವೆ.

ಫರೀದನ ಇಂಥ ಅಪರಿಮಿತ ಜನಪ್ರಿಯತೆಗೆ ಕಾರಣಗಳೇನು? ಸಂತರು ಎಲ್ಲ ಕಡೆಗೂ ಜನಪ್ರಿಯರಾಗಿರುತ್ತಾರೆ. ಅವರ ಪೂಜ್ಯತೆ ಹಾಗೂ ಆಧ್ಯಾತ್ಮಿಕ ಸಿದ್ಧಿಗಳು ಸ್ವೀಕಾರಾರ್ಹವಾಗಿ ಒಮ್ಮೆ ಕಂಡು ಬಂದೊಡನೆ ಬಹುಬೇಗ ಅವನ ಅನುಯಾಯಿಗಳ ಸಂಖ್ಯೆ ಬೆಳೆದುಬಿಡುತ್ತದೆ. ಭಾರತದಲ್ಲಂತೂ ಸಂತರ ಪರಂಪರೆ ಅತ್ಯಂತ ಪ್ರಾಚೀನವಾದದ್ದು. ಮರ್ತ್ಯಜೀವಿಯಾದ ಸಾಮಾನ್ಯಮಾನವ ನೋವು, ಸಂಕಟ, ದುಃಖ ಮತ್ತು ನಾನಾ ಬಗೆಯ ಉದ್ವೇಗಗಳಿಗೆ ಈಡಾಗುವುದುಂಟು. ಮನಸ್ಸಿನ ಸಮಾಧಾನ ಹಾಗೂ ಬೆಂಬಲಕ್ಕಾಗಿ ಅವನು ತನ್ನ ಸುತ್ತಲೂ ನೋಡುತ್ತಾನೆ. ಅದನ್ನು ದೊರಕಿಸಲು ಯಾರ ಬಳಿಗಾದರೂ ಹೋಗಲು ಸಿದ್ಧನಾಗಿರುತ್ತಾನೆ. ಜಗತ್ತು ನಿರ್ಲಕ್ಷವಾಗಿದ್ದು ಭೌತಿಕ ಲಾಭದಲ್ಲಿಯೇ ಮುಳುಗೇಳುತ್ತಿರುವುದನ್ನು ಕಂಡು ಅವನು ಸೂಫಿಗಳ ಹಾಗೂ ಸಂತರ ಕಡೆಗೆ ಹೊರಳುತ್ತಾನೆ. ಪ್ರಪಂಚವನ್ನು ಸಾಕಷ್ಟು ಅನುಭವಿಸಿ ಸಂಪತ್ತಿನ ಬೆನ್ನು ಹತ್ತುವುದರ ನಿರರ್ಥಕತೆಯನ್ನು, ವೈಭವಾಡಂಬರದ ಟೊಳ್ಳನ್ನು ಹಾಗೂ ಮಾನವ ಜೀವನದ ಕ್ಷಣಿಕತೆ, ಅಸ್ಥಿರತೆಗಳನ್ನು ಕಂಡುಕೊಂಡ ಇನ್ನು ಕೆಲವರು ಅಂತರಂಗದ ಶಾಂತಿಗಾಗಿ, ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಕಾತರಿಸುತ್ತಾರೆ. ಸಾಧುಸಂತರ ಆಶ್ರಮಗಳನ್ನು ಬಿಟ್ಟರೆ ಅವರೆಲ್ಲಿಗೆ ಹೋಗಬೇಕು? ಚಿಸ್ತಿ ಸಿಲ್‌ಸಿಲಾದ ಮುಖ್ಯಸ್ಥನಾಗಿ ಮತ್ತು ನಿಷ್ಠೆ, ತಪಸ್ಸು ಹಾಗೂ ಪ್ರಾರ್ಥನೆಗಳಿಂದ ಒಳ್ಳೆಯ ಹೆಸರು ಪಡೆದು, ಎಲ್ಲರಿಗೂ ತೆರೆದ ಬಾಗಿಲಾಗಿ, ಬಡಜನರ ಸಹಾಯಕ್ಕೆ ಸಿದ್ಧನಾಗಿ, ಅವರ ಸಲುವಾಗಿ ಪ್ರಾರ್ಥನೆಗೈಯಲು ಆತುರವುಳ್ಳವನಾಗಿ– ಇವಕ್ಕೂ ಮಿಗಿಲಾಗಿ ನಮ್ರತೆ ಹಾಗೂ ದಯಾನಿಧಿಯಾಗಿ ಭಾರತದಲ್ಲಿರುವ ಮುಸಲ್ಮಾನ್ ಸಂತರಲ್ಲಿಯೇ ಫರೀದ್ ಅತ್ಯಂತ ಪ್ರೀತಿಪಾತ್ರನಾದವನಾಗಿದ್ದನು.

೫

ಉರ್ದು ಮತ್ತು ಪಂಜಾಬಿಯ ಪ್ರಾಚೀನ ರೂಪವಾದ ಹಿಂದಿವಿ ಅಲ್ಲಿಯ ಜನತೆಯ ಭಾಷೆಯಾಗಿತ್ತು. ಫರೀದ್ ಉಪಯೋಗಿಸುತ್ತಿದ್ದ ಭಾಷೆಯೂ ಅದೇ ಆಗಿದ್ದರಿಂದ ಸಾಮಾನ್ಯ ಜನತೆಗೆ ಇನ್ನೂ ಹತ್ತಿರದವನಾದನು. ಉಲೇಮಾಗಳು ಹಾಗೂ ಅಧಿಕಾರದಲ್ಲಿದ್ದವರು ಪರ್ಶಿಯನ್‌ದಲ್ಲಿ ತಮ್ಮ ವ್ಯವಹಾರ ಸಾಗಿಸುತ್ತಿದ್ದರೆ, ಫರೀದ್ ತನ್ನ ಸಭಿಕರಿಗೆ ಅವರಿಗೆ ತಿಳಿಯುವ ಅವರದೇ ಎನಿಸುವ ಭಾಷಾಮಾಧ್ಯಮವನ್ನು ಉಪಯೋಗಿಸುತ್ತಿದ್ದನು. ಫರೀದ್ ಪಂಜಾಬಿಯ ದೊಡ್ಡ ಕವಿಯೂ ಆಗಿದ್ದ. ಜನರ ನುಡಿಗಟ್ಟಿನಲ್ಲಿ ಆಧ್ಯಾತ್ಮಿಕ ಅನ್ವೇಷಣೆ ಕುರಿತು ಹಾಡಿದವರಲ್ಲಿ ಅವನೇ ಮೊದಲಿಗನು. ಜನರು ಅವನ ಪದ್ಯಗಳನ್ನು, ಅವನ ಶ್ಲೋಕಗಳನ್ನು ಹೇಳುತ್ತ, ಹಾಡಿಕೊಳ್ಳುತ್ತ ಆನಂದಪರವಶರಾಗುತ್ತಿದ್ದರು. ಇದಕ್ಕೂ ಹೆಚ್ಚಿನ ಸಂಗತಿಯೆಂದರೆ ಕೂಲಿಗಳ ಮತ್ತು ಗಜಲ್‌ಗಳ ಹಾಡುಗಾರಿಕೆ ಮತ್ತು ವಿವಿಧ ಸಂದರ್ಭಗಳಲ್ಲಿ ನಡೆಯುತ್ತಿದ್ದ ಸಾಮುದಾಯಕ ನೃತ್ಯ – ಇವೆಲ್ಲವೂ ಸಮರಸಗೊಂಡು ಕೊನೆಯಲ್ಲಿ ಸೃಷ್ಟಿಸುತ್ತಿದ್ದ ಭಾವೋತ್ಕಟತೆ – ಇವು ಮುರ್ಶಿದ್ ಮತ್ತು ಮುರದ್‌ರನ್ನು ಮತ್ತು ಪ್ರತಿಯೊಬ್ಬ ಸಹಭಾಗಿಯನ್ನು ಒಂದು ಸಮರೂಪದಲ್ಲಿ ಇಡಿಯಾಗಿ, ಯೋಗ್ಯವಾಗಿ ಒಂದುಗೂಡಿಸಿದವು. ಯಾವ ತಾರತಮ್ಯವೂ ಇಲ್ಲದೆ ನಂಬಿಕೆ ಮತ್ತು ಅಂತಃಕರಣದಲ್ಲಿ ಅವರು ತಾವೆಲ್ಲರೂ ಒಂದು ಎಂದು ಭಾವಿಸಿದರು. ಮಾನವಕುಲದ ಸಮಾನತೆಯಲ್ಲಿಯ ನಿಷ್ಠೆಯ ಪರಾಕಾಷ್ಠೆ ಇಲ್ಲಿ ಕಂಡು ಬಂದಿತು.

ಫರೀದ್ ಮಹಾವಿದ್ವಾಂಸನಾಗಿದ್ದಂತೆಯೇ ಉನ್ನತ ಮಟ್ಟದ ಬೋಧಕನೂ ಆಗಿದ್ದ. ಬ್ರಹ್ಮಜ್ಞಾನದ ಸಮಸ್ಯೆಗಳನ್ನು ಅವನೊಡನೆ ಚರ್ಚಿಸಲು ದೂರ ದೂರದ ಪ್ರದೇಶಗಳಿಂದ ಪಂಡಿತರು ಬರುತ್ತಿದ್ದರು, ಹಾಗೂ ಬೌದ್ಧಿಕ ವಿಚಾರ ವಿನಿಮಯದಿಂದ ಸಂತುಷ್ಟರಾಗುತ್ತಿದ್ದರು. ಗುರುವಾಗಿ ತನ್ನ ಶಿಷ್ಯರ ಗೌರವಕ್ಕೆ ಅವನು ಪಾತ್ರನಾಗಿದ್ದನಲ್ಲದೆ ಜನ ಹೆಚ್ಚು ಸಂಖ್ಯೆಯಲ್ಲಿ ಅವನ ಬಳಿಬಂದು ಸೂಫಿತತ್ತ್ವದ ರಹಸ್ಯಗಳ ದೀಕ್ಷೆ ಪಡೆಯತೊಡಗಿದರು. ನುಡಿದಂತೆ ನಡೆಯುವ ಹಿರಿಮೆ ಅವನದಾಗಿತ್ತು.

ಹೀಗೆ ಭಾರತೀಯ ಜನಸಾಮಾನ್ಯರೊಂದಿಗೆ ಫರೀದ್ ಸಮರಸನಾಗಿಬಿಟ್ಟನಲ್ಲದೆ ಸೂಫಿ ತತ್ತ್ವವನ್ನು ಭಾರತೀಯದ್ದಾಗಿ ಮಾಡಿದನು. ಭಾರತದಲ್ಲಿಯ ಇನ್ನುಳಿದ ಸೂಫಿಗಳೊಂದಿಗೆ ಅವನು ವೇದಾಂತ, ಬೌದ್ಧತತ್ತ್ವ ಹಾಗೂ ಭಕ್ತಿ ಚಳವಳಿಗಳಿಂದ ಅನೇಕ ಗುಣಗಳನ್ನು ಎರವಲು ಪಡೆದುಕೊಂಡನು. ಯೋಗಿಗಳ ಉದಾಹರಣೆಗಳನ್ನುನು ಸರಿಸಿ ಸೂಫಿಗಳು ಕಠಿಣವಾದ ವೈರಾಗ್ಯವನ್ನು ಆಚರಣೆಗೆ ತಂದರು. ಬೌದ್ಧರ ಹಾಗೆ ಆಹಾರ ಪಡೆಯಲು ಭಿಕ್ಷುಗಳಾಗಿ ಹೊರಟರು. ಭಕ್ತಿಪಂಥದ ಪ್ರತಿಪಾದಕರಂತೆ ಪ್ರೇಮಿಗಳ ಭಾವೋನ್ಮಾದದಲ್ಲಿ ಹಾಡಿ ಕುಣಿದರು. ಇದೂ ಅಲ್ಲದೆ, ಜನತೆಯ ಭಾಷೆಯನ್ನು ತಮ್ಮದಾಗಿಸಿಕೊಂಡು ತಮ್ಮ ಸಂದೇಶವನ್ನು ಅವರಿಗೆ ಮುಟ್ಟುವಂತೆ ಮಾಡಿದರು. ಜಾತಿ, ಮತ, ಪಂಥ, ಪ್ರದೇಶ ಇದಾವುದರ ಭೇದವನ್ನು ಎಣಿಸದೆ ಭಕ್ತರಂತೆ ತೆರೆದ ತೋಳಿನಿಂದ

ಕೆಳಜಾತಿಯ ಹೆಣ್ಣು-ಗಂಡುಗಳನ್ನು ತಮ್ಮ ವಾತ್ಸಲ್ಯದ ತೆಕ್ಕೆಯಲ್ಲಿ ತೆಗೆದುಕೊಂಡರು. ಸೂಫಿತತ್ತ್ವ ಮತ್ತು ಭಕ್ತಿಪಂಥದಲ್ಲಿ ಇನ್ನೂ ಒಂದು ಹೋಲಿಕೆಯಿದೆ. ಮದುವೆಯ ವ್ಯವಸ್ಥೆಯಲ್ಲಿ ಸೂಫಿಗಳು ವಿಶ್ವಾಸ ತಾಳಿದರು. ಅವರು ಮದುವೆಯಾಗಿ ಮಕ್ಕಳನ್ನು ಪಡೆದಿದ್ದರು.

ಅವರ ವೈರಾಗ್ಯ ಮತ್ತು ಪಾರಮಾರ್ಥಿಕ ಚಿಂತನೆ ಜಗತ್ತಿನಿಂದ ನಿವೃತ್ತಿ ಪಡೆಯುವುದಾಗಲಿ ಅಥವಾ ಬಿಡುಗಡೆ ಹೊಂದುವುದಾಗಲಿ ಆಗಿರಲಿಲ್ಲ. ತಮ್ಮ ಸಂಗಾತಿಗಳ ಭವಿಷ್ಯದಲ್ಲಿ ಅವರು ನಿರ್ಲಕ್ಷ್ಯ ತಾಳಿರಲಿಲ್ಲ. ದೇವರನ್ನು ಅವನ ಸೃಷ್ಟಿಯನ್ನು ಅವರು ಪ್ರೀತಿಸಿದರು. ಅವೆರಡರ ಪ್ರೀತಿಯೇ ಅವರ ಆಧ್ಯಾತ್ಮಿಕ ಜೀವನದ ತಳಹದಿಯಾಗಿತ್ತು. ಇಷ್ಟೇ ಅಲ್ಲ, ಜೀವನದ ವಿಧಾನದ ಬಗ್ಗೆ ಅವರು ಒತ್ತುಕೊಟ್ಟರೇ ಹೊರತು ಅದರ ತಾತ್ತ್ವಿಕತೆ ಇಲ್ಲವೇ ಬೌದ್ಧಿಕ ಕಸರತ್ತಿಗಲ್ಲ. ಭಕ್ತಿಪಂಥದಂತೆ ಸೂಫಿಪಂಥವೂ ತ್ಯಾಗ ಮತ್ತು ಭಕ್ತಿ ಎರಡರ ಸಮನ್ವಯಕ್ಕಾಗಿ ಪ್ರಯತ್ನಿಸಿತು. ಎಲ್ಲಕ್ಕೂ ಮಹತ್ವದ್ದೆಂದರೆ, ದೇವರಲ್ಲಿ ಐಕ್ಯವಾಗುವ ಪ್ರಾಚೀನ ವೇದಾಂತ ತತ್ತ್ವವನ್ನು, ಸಾಂತವು ಅನಂತದಲ್ಲಿ ಬೆರೆಯುವುದನ್ನು ಅವರು ದೃಢೀಕರಿಸಿದರು. ಅವರ ಹಾದಿ (ತರೀಕತ್) ಪ್ರೇಮದ ಹಾದಿಯಾಗಿತ್ತು ಮತ್ತು ಅಂತಿಮ ದರ್ಶನ ದೈವೀ ಪ್ರೇಮಕ್ಕೆ ಸಮಾನಾರ್ಥಕವಾಗಿತ್ತು.

ತನ್ನ ಜೀವನದ ಕೊನೆಯ ಅವಧಿಯನ್ನು ಫರೀದ್ ಬಹಳ ಬಡತನದಲ್ಲಿ ಕಳೆದನು. ಅಷ್ಟೊಂದು ಅನುಯಾಯಿಗಳಿದ್ದು, ಅಷ್ಟೊಂದು ಜನಪ್ರಿಯತೆಯನ್ನು ಪಡೆದಿದ್ದರೂ ಖಾಂಕಾಕ್ಕೆ ಬರುತ್ತಿದ್ದ ಉತ್ಪನ್ನ ಅಥವಾ ಕಾಣಿಕೆಗಳೆಲ್ಲ ಹೇಗೆ ಮಾಯವಾದವೆಂಬುದು ಪ್ರಶ್ನಾರ್ಹವಾಗಿಯೇ ಉಳಿದಿದೆ. ಕೊನೆ ಕೊನೆಗಂತೂ ಬಾಬಾ ಫರೀದ್ ಮತ್ತು ಅವನ ಕುಟುಂಬದ ಪೋಷಣೆಗೆ ಮನೆಯಲ್ಲಿ ಏನೂ ಉಳಿದಿರಲಿಲ್ಲವೆಂದು ಕಂಡುಬರುತ್ತದೆ. ಆದರೆ ಇದಾವುದೂ ದಿನನಿತ್ಯದ ಕಟ್ಟುನಿಟ್ಟಾದ ಪ್ರಾರ್ಥನೆ, ಉಪವಾಸ ಹಾಗೂ ದೇಹದಂಡನೆಯ ವ್ರತಗಳಿಂದ ಅವನನ್ನು ವಿಚಲಿತಗೊಳಿಸಲಿಲ್ಲ. ೧೨೬೫, ಅಕ್ಟೋಬರ್ ೧೫ರಂದು ಮೂರುಸಲ ಪ್ರಾರ್ಥನೆ ಮುಗಿಸಿದ ಮೇಲೆ ಅವನು ಕೊನೆಯುಸಿರೆಳೆದನು. ಮಧ್ಯಯುಗದ ಮಹಾಸಂತನೊಬ್ಬನ ಜೀವನ ಈ ರೀತಿ ಕೊನೆಗೊಂಡಿತು.

ಫರೀದನ ಉಪದೇಶಗಳು ಮೂರು ಮೂಲತತ್ತ್ವಗಳಿಂದ ಹೊರಹೊಮ್ಮಿವೆ. ದೇವರ ಮೇಲಿನ ಪ್ರೇಮ, ಮನಶ್ಶುದ್ಧಿ ಹಾಗೂ ಸಿರಿ ಸಂಪತ್ತು ಮತ್ತು ಭೌತಿಕ ಉತ್ಕರ್ಷಗಳಿಂದ ದೂರ ಇರುವಿಕೆ. ದೇವರ ಮೇಲಿನ ಪ್ರೇಮ ಇಡೀ ಮಾನವ ಕುಲದ ಪ್ರೇಮಕ್ಕೆ ದಾರಿಮಾಡಿಕೊಡುವುದಲ್ಲದೆ ದಯಾಪರತೆ, ಸೌಜನ್ಯ, ಔದಾರ್ಯ, ನಡತೆಯ ಘನತೆ – ಇವುಗಳ ಮೂಲಕ ಅದು ವ್ಯಕ್ತವಾಗುತ್ತದೆ. ಮನಸ್ಸು ಶುದ್ಧವಾದ ಮೇಲೆ ಅದು ಅಹಂಕಾರ, ಅಭಿಮಾನ, ಕ್ರೋಧ, ಕಾಮ ಮತ್ತು ದುರಾಸೆಗಳಿಂದ ಬಿಡುಗಡೆ ಹೊಂದುತ್ತದೆ. ಬಾಹ್ಯ ಜಗತ್ತಿನ ಮೋಹದಿಂದಲೂ ಅದು ಮನಸ್ಸನ್ನು ತಿರುಗಿಸಿ ಅಂತರಂಗದ ಶಾಂತಿಯ ಶೋಧನೆಗೆ ತೊಡಗಿಸುತ್ತದೆ. ಪಾರಮಾರ್ಥಿಕ ಸಾಧನೆಯತ್ತ ಅದು ಪ್ರಥಮ

ಹೆಜ್ಜೆಯಾಗಿದೆ. ದೇವರಿಗೆ ಅಂಜಿ ನಡೆಯುವುದರ ಮೇಲೆ ಫರೀದ್ ಹೆಚ್ಚು ಒತ್ತುಕೊಟ್ಟನು. ಯಾಕೆಂದರೆ, ಅದು ವ್ಯಕ್ತಿಗಳನ್ನು ತಾವು ಗೈದ ಕೃತ್ಯಗಳ ಪರೀಕ್ಷೆಗೆ ತೊಡಗಿಸುತ್ತದೆ ಹಾಗೂ ದೇವರು ನಡೆಸುವ ಅಂತಿಮ ವಿಚಾರಣೆಯನ್ನು ನೆನಪಿನಲ್ಲಿಡುವಂತೆ ಮಾಡುತ್ತದೆ. ನೈತಿಕ ಜೀವನಕ್ಕೆ ಅದು ಪರೋಕ್ಷವಾಗಿ ಮೆಟ್ಟಿಲಾಗಿ ಪರಿಣಮಿಸುತ್ತದೆ. ಆಚಾರ ನೀತಿಯ ಹಾಗೂ ನೈತಿಕ ಬದುಕಿನ ಆಳವಾದ ಪ್ರಶ್ನೆಯಿಲ್ಲದೆ ಅನುಭಾವಮಾರ್ಗ ತೆರೆಯಲಾರದು. ಧರ್ಮಶಾಸ್ತ್ರದ ಉನ್ನತಮಟ್ಟದ ಜ್ಞಾನ ಮತ್ತು ಅನುಭಾವ ಎಂದೂ ಕೈ ಕೈ ಹಿಡಿದು ಸಾಗುತ್ತವೆ. ಬಡತನದ ಜೀವನ ಸಾಗಿಸುವ ಬಗ್ಗೆ, ಧನ ದೌಲತ್ತುಗಳನ್ನು ತಿರಸ್ಕರಿಸಿ ಭೌತಿಕ ಆಶೆ ಆಕಾಂಕ್ಷೆಗಳಿಂದ ದೂರವಾಗುವುದರ ಬಗ್ಗೆ ಫರೀದ್ ಪದೇ ಪದೇ ಒತ್ತಿ ಹೇಳುತ್ತಿದ್ದನು. ಕ್ಷಣಿಕವಾದ ಅಶಾಶ್ವತ ಜಗತ್ತಿಗೆ ಅಂಟಿಕೊಂಡದ್ದಾದರೆ ಬೇರೆ ಮಾರ್ಗವೇ ಇಲ್ಲ. ಜೀವನದ ಕೊನೆಯ ಗುರಿ ತನ್ನ ಪ್ರಿಯಕರನೊಂದಿಗೆ ಒಂದಾಗುವುದು ಎಂಬುದನ್ನು ಫರೀದ್ ಒಂದು ಕ್ಷಣವೂ ಮರೆತಿರಲಿಲ್ಲ. ಆದುದರಿಂದ ಪ್ರೇಮದ ಹಾದಿ ಹಿಡಿಯುವಂತೆ ಜನರಿಗೆ ಪ್ರೇರಣೆ ನೀಡಿದ. ಮನಸ್ಸಿನಲ್ಲಿ ಸ್ಥಿರವಾಗಿರಿಸಿಕೊಂಡು ಬಂದ ಗುರಿಯನ್ನು ತಲುಪಲು ಅದೊಂದೇ ಮಾರ್ಗ ಎಂಬುದನ್ನು ಸೂಚಿಸಿದ. ಬಡತನದ ಜೀವನ ಹಾಗೂ ದೇಹದಂಡನೆಯನ್ನು ಆಚರಿಸಲು ಮತ್ತು ಬಡವರ ಹಾಗೂ ಕಂಗಾಲರ ಸೇವೆಯ ಮೂಲಕ ತಮ್ಮ ದೈವಭಕ್ತಿಯನ್ನು ವ್ಯಕ್ತಪಡಿಸಲು ಅವನು ತನ್ನ ಶಿಷ್ಯರಿಗೆ ಬೋಧಿಸಿದ. ಯಾವುದೇ ತತ್ತ್ವಜ್ಞಾನವನ್ನು ಫರೀದ್ ಮಂಡಿಸಲಿಲ್ಲ. ಜೀವನ ವಿಧಾನವನ್ನು ಮತ್ತು ನೀತಿಸಂಹಿತೆಯನ್ನು ಅವನು ಎತ್ತಿಹಿಡಿದ. ಶರೀಯತ್ ನಿಯಮಗಳ ಕಟ್ಟುನಿಟ್ಟಾದ ಪಾಲನೆಯಿಂದ ಹಿಡಿದು, ದೀಕ್ಷಾಬದ್ಧರಾದವರನ್ನು ತರೀಕತ್, ಮಾರೀಫತ್ ಮತ್ತು ಕೊನೆಯದಾಗಿ ಹಕೀಕತ್‌ಗಳ ಕಡೆಗೆ ಮೆಟ್ಟಿಲು ಮೆಟ್ಟಿಲಾಗಿ ಮುನ್ನಡೆಸಿದನು. ಪ್ರತಿಯೊಂದು ಹಂತಕ್ಕೂ ಅದರದೇ ಆದ ಶಿಸ್ತು, ಕಠಿಣ ತಪಶ್ಚರ್ಯೆಗಳಿದ್ದವು. ಈ ಪ್ರಕಾರ ಜೀವನಶುದ್ಧಿ ಹಾಗೂ ಪರಮಸತ್ಯ ಮತ್ತು ಅನಂತದ ಶೋಧನೆಯ ಹಂಬಲವನ್ನು ಅವರಲ್ಲಿ ತುಂಬಲು ಯತ್ನಿಸಿದನು.

ಜನರ ಮತಧರ್ಮಗಳನ್ನು ಎಣಿಸದೆ ಎಲ್ಲರೂ ದೇವರೆದುರು ಸಮಾನರೆಂಬುದನ್ನು ಫರೀದ್ ಸಾರಿ ಹೇಳಿದನು. ಫರೀದಿಲ್ಯಾಂಗರ್ (ಎಲ್ಲರಿಗೂ ಒಂದೇ ಮೇಜಿನ ಮೇಲೆ ಭೋಜನ)ನ್ನು ಜಾರಿಗೆ ತಂದುದು ಎಲ್ಲ ಬಗೆಯ ಭೇದಭಾವನೆಗಳನ್ನು ಹೋಗಲಾಡಿಸುವ ಮತ್ತೊಂದು ವಿಧಾನವಾಗಿತ್ತು.

ಅವನ ಬೋಧನೆಯಲ್ಲಿ ಆಧುನಿಕತೆಯ ಸ್ಪರ್ಶವಿರುವ ಮತ್ತೊಂದು ಅಂಶವಿದೆ. ಮಧ್ಯಯುಗದ ಆ ಬಿಡುವುಳ್ಳ ಕಾಲದಲ್ಲಿ. ಅನುಭಾವಿಯ ಮತ್ತು ದರವೇಶನ ಬಳಿಯಲ್ಲಿರುವ ಅತ್ಯಂತ ಬೆಲೆಯುಳ್ಳ ವಸ್ತುವೆಂದರೆ ಕಾಲ ಎಂದು ಅವನು ಉಪದೇಶಿಸಿದನು. ಜೀವನ ಹ್ರಸ್ವವಾದದ್ದು, ಅನುಭಾವಿಯ ಪ್ರಯಾಣ ದೀರ್ಘವಾದದ್ದು. ಆದುದರಿಂದ ಅವನಿಗಿರುವ ವೇಳೆಯ ಸದುಪಯೋಗವನ್ನು ಮಾಡಿಕೊಳ್ಳಲೇಬೇಕು.

ಅವನ ಖಾಂಕಾದಲ್ಲಿ ಶಿಸ್ತಿನ ನಿಯಮ ಕಟ್ಟುನಿಟ್ಟಿನದಾಗಿತ್ತು. ಹಾಗೆಯೇ ವಿವಿಧ ಕರ್ತವ್ಯಗಳನ್ನು ನೆರವೇರಿಸುವಲ್ಲಿ ನಿಷ್ಠುರವಾದ ನಿಯಮಿತತನವನ್ನು ಪಾಲಿಸಲಾಗುತ್ತಿತ್ತು.

ಕುರಾನಿನಲ್ಲಿ ಆಜ್ಞೆಯಾಗಿರುವ ಜಕಾತ್ (ದಾನ) ಬಗ್ಗೆ ಫರೀದ್ ಹೆಚ್ಚು ಒತ್ತುಕೊಟ್ಟನು. ಜನರು ತಮ್ಮ ಆದಾಯದ ಕೆಲವೊಂದು ಭಾಗವನ್ನು ದಾನವಾಗಿ ಕೊಡತಕ್ಕದ್ದು. ತನ್ನಲ್ಲಿರುವುದನ್ನು ತ್ಯಾಗಮಾಡುವುದೇ ಅತ್ಯುತ್ತಮ ದಾನವೆನಿಸುತ್ತದೆ. ಆಧ್ಯಾತ್ಮಿಕ ಜೀವನಕ್ಕೆ ಆಸ್ತಿ ಆತಂಕಕಾರಿ, ಹೆಚ್ಚು ದಾನ ಕೊಟ್ಟವನು ಹೆಚ್ಚು ಒಳ್ಳೆಯವನಾಗುತ್ತಾನೆ.

ಫರೀದ್ ಆಚರಿಸಿದ ಮತ್ತು ಉಪದೇಶಿಸಿದ ನೀತಿಸಂಹಿತೆ, ಮಹಾಸಂತನೊಬ್ಬನು ಪಡೆದ ಜೀವನದ ಅರ್ಥ ಮತ್ತು ತಿಳಿವಳಿಕೆಯ ಸಾರಸಂಗ್ರಹವಾಗಿದೆ. ಮುಖ್ಯವಾದ ಸಂಗತಿಯೆಂದರೆ ಫರೀದ್ ಅದೆಲ್ಲವನ್ನೂ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಅದನ್ನು ಜೀವಂತ ವಾಸ್ತವವಾಗಿಸಿದನು.

ಫರೀದ್ ಅರೇಬಿಕ್, ಪರ್ಶಿಯನ್, ಉರ್ದು, ಹಿಂದಿ ಮತ್ತು ಪಂಜಾಬಿ ಮೊದಲಾದ ಕೆಲವು ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಪದ್ಯಗಳನ್ನು ಬರೆದನೆಂದು ಪ್ರತಿಪಾದಿಸಲಾಗುತ್ತದೆ. ಆದರೆ, ಅರೇಬಿಕ್, ಪರ್ಶಿಯನ್ ಮತ್ತು ಉರ್ದು ಭಾಷೆಯಲ್ಲಿಯ ಕೆಲವೇ ಕೆಲವು ಅನಿಯತ ದ್ವಿಪದಿಗಳು ನಮ್ಮ ಕೈಗೆ ದೊರೆತಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಫರೀದನ ಉತ್ತರಾಧಿಕಾರಿಗಳಾಗಲಿ, ಅವನ ಅನುಯಾಯಿಗಳಾಗಲಿ ಯಾರೂ ಅವನ ಬರವಣಿಗೆಗಳನ್ನು ಕಾದಿಡುವ ಗೋಜಿಗೆ ಹೋಗಲಿಲ್ಲ. ಆದರೆ, ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದ ಫರೀದನ ಪಂಜಾಬಿ ಪದ್ಯಗಳು ಗುರುನಾನಕನ ಮೆಚ್ಚುಗೆಯನ್ನು ಪಡೆದುಕೊಂಡವು. ಅವನು ತನ್ನ ಬರವಣಿಗೆಗಳ ಜೊತೆಗೆ ಅವುಗಳನ್ನು ಕಾಳಜಿಪೂರ್ವಕ ಕಾದಿಟ್ಟು ತನ್ನ ಉತ್ತರಾಧಿಕಾರಿಯಾದ ಗುರು ಅಂಗದ್‌ನಿಗೆ ಸಾಗಿಸಿದನು. ಕ್ರಿ.ಶ. ೧೬೦೦ಳರಲ್ಲಿ ಗುರು ಅರ್ಜುನದೇವ (೧೫೬೨–೧೬೦೬) ಆದಿ ಗ್ರಂಥವನ್ನು ಸಂಕಲಿಸಿದಾಗ ಅದರಲ್ಲಿ "ಶ್ಲೋಕೆ ಷೇಕ್ ಫರೀದ್ ಕೆ" ಎಂಬ ಹೆಸರಿನಲ್ಲಿ ಆ ಪದ್ಯಗಳನ್ನು ಸೇರಿಸಲಾಯಿತು. ಈ ರೀತಿ ಶೀಖರ ಪವಿತ್ರ ಬರವಣಿಗೆಗಳಾದ ಗುರ್ಬಾನಿಯಂತೆ ಅವು ಅಮರವಾಗಿಯೂ ಪವಿತ್ರವಾಗಿಯೂ ಉಳಿದವು. ಹಿಂದೂ ಧರ್ಮ ಇಲ್ಲವೆ ಇಸ್ಲಾಂದೊಡನೆ ತನ್ನನ್ನು ಸಮೀಕರಿಸಿಕೊಳ್ಳದ ಗುರುನಾನಕನಿಗೆ ಇವುಗಳಲ್ಲಿ ಜೀವದ ಸಮಾನ ಲಕ್ಷಣ, ಮನೋವೈಶಾಲ್ಯ ಹಾಗೂ ಮಾನವೀಯತೆಗಳು ಕಂಡುಬಂದುದರಲ್ಲಿ ಆಶ್ಚರ್ಯವಿಲ್ಲ. ಅವನ ಮನಸ್ಸಿನ ಮೇಲೆ ಇವು ಎಷ್ಟೊಂದು ಪರಿಣಾಮ ಬೀರಿದವೆಂದರೆ, ಅವನು ಫರೀದನ ಈ ಪದ್ಯಗಳನ್ನು ಲಿಖಿತಗೊಳಿಸಿ ಮುಂದಿನ ಪೀಳಿಗೆಯ ಒಳಿತಿಗಾಗಿ ಉಳಿಯುವಂತೆ ನೋಡಿಕೊಂಡನು. ಬಾಬಾ ಫರೀದ್‌ನಿಂದ ಸ್ಥಾಪಿತವಾದ ಸೂಫಿ ಕಾವ್ಯ ಸಂಪ್ರದಾಯ ಅವನ ತರುವಾಯ ಸುಮಾರು ಮುನ್ನೂರು ವರ್ಷಗಳವರೆಗೂ ಜೀವಂತಶಕ್ತಿಯಾಗಿದ್ದನ್ನು ಇಲ್ಲಿ ಪರಿಗಣಿಸಬಹುದು. ವಾರಿಶ್‌ಶಾಹ್ ನಂಥ ಅನೇಕ ಪ್ರಮುಖ ಕವಿಗಳು ಬಾಬಾ ಫರೀದನಿಗೆ ಗೌರವ ಸಲ್ಲಿಸಿ, ಅವನನ್ನು ಸೂಫಿ ಕವಿಗಳಲ್ಲಿ ಮೊದಲಿಗನೆಂದು ಮನ್ನಣೆ ನೀಡಿದ್ದಾರೆ.

೬

ಫರೀದ್ ಪಂಜಾಬಿ ಭಾಷೆಯ ಪ್ರಥಮ ಕವಿ, ತನಗಿದ್ದ ಅರೇಬಿಕ್ ಮತ್ತು ಪರ್ಶಿಯನ್ ಪಾಂಡಿತ್ಯದ ಹಿನ್ನೆಲೆಯಿಂದ, ತನ್ನ ಸೃಜನಶೀಲ ಕಲ್ಪನೆಯಿಂದ ಮತ್ತು ಆಳವಾದ ಸಂವೇದನೆಗಳಿಂದ, ಬೆಳವಣಿಗೆಯನ್ನು ಪಡೆಯದಿದ್ದ, ಬಹುತೇಕ ಗ್ರಾಮ್ಯವೆನಿಸಿದ ಈ ಉಪಭಾಷೆಗಳನ್ನು ರೂಪಾಂತರಗೊಳಿಸಿ ಮನುಷ್ಯನ ಆಳವಾದ ಪ್ರೇರಣೆಗಳನ್ನು ಅಭಿವ್ಯಕ್ತಿಗೊಳಿಸಬಲ್ಲ ಸಾಮರ್ಥ್ಯವನ್ನು ಅದಕ್ಕೆ ತಂದುಕೊಟ್ಟನು. ಫರೀದ್ ಮೊಟ್ಟಮೊದಲನೆಯ ಸೂಫಿ ಕವಿ. ಲಹರಿ ಬಂದಾಗ ಅವನು ಪಂಜಾಬಿಯಲ್ಲಿ ಬರೆದ ಪದ್ಯಗಳು ದೈವೀಪ್ರೇಮ ಹಾಗೂ ಮಾನವ ಪ್ರೇಮಗಳಿಂದ ತುಂಬಿದ ಹೃದಯದಿಂದ ಹೊರಹೊಮ್ಮಿ ಬಂದಿವೆ. ಚಿಸ್ತಿ ಸಿಲ್‌ಸಿಲಾಹ್ ಮುಖ್ಯಸ್ಥನಾಗಿ ಧರ್ಮದ ಸೂಕ್ಷ್ಮತತ್ವಗಳನ್ನು ಅಭಿವ್ಯಕ್ತಿಗೊಳಿಸಲು ತಕ್ಕ ಭಾಷೆ ಹಾಗೂ ನುಡಿಗಟ್ಟನ್ನು ಅವನು ರೂಪಿಸಿ ಕೊಳ್ಳಬೇಕಾಯಿತು. ಅಷ್ಟೇ ಅಲ್ಲ, ಅದು ಜನತೆಯ ಭಾಷೆಯೇ ಆಗಬೇಕಾದ ಅಗತ್ಯವಿತ್ತು. ಯಾಕೆಂದರೆ, ಸೂಫಿಗಳು ಸಮಾಜದ ಪ್ರತಿಷ್ಠಿತ ನಗರದ ಜನರಿಗಿಂತ ಜನಸಾಮಾನ್ಯರನ್ನು ಮುಟ್ಟುವ ಮಾರ್ಗವನ್ನು ಕಂಡುಕೊಂಡರು. ಫರೀದ್ ಸಹಜವಾಗಿಯೇ ತಾನು ಬಾಲ್ಯದಲ್ಲಿ ಬಳಸುತ್ತಿದ್ದ ಮುಲ್ತಾನಿ ಪಂಜಾಬಿ ಭಾಷೆಯ ಕಡೆಗೆ ಒಲಿದನಲ್ಲದೆ, ಲೌಕಿಕ ಹವ್ಯಾಸಗಳಿಂದ ಜನತೆಯನ್ನು ದೈವೀಪ್ರಜ್ಞೆಯ ಕಡೆಗೆ ತಿರುಗಿಸುವ ಉದ್ದೇಶದಿಂದ ಗ್ರಾಮಜೀವನದ ಪ್ರತಿಮೆ, ಸಂಕೇತಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡನು.

ಫರೀದ್, ಸೂಫಿಧರ್ಮದ ಪ್ರಥಮ ಪಂಜಾಬಿ ಕವಿಯೆಂಬ ಗೌರವಕ್ಕೆ ಪಾತ್ರನಾಗಿರುವುದು ಯೋಗ್ಯವೇ ಆಗಿದೆ. ಮೊದಲ ನೋಟಕ್ಕೆ ಅವನೊಬ್ಬ ಇಸ್ಲಾಂ ಸಂಸ್ಕೃತಿಯ ಕವಿಯೆಂಬ ಅಭಿಪ್ರಾಯವನ್ನು ಅವನ ಪದ್ಯಗಳು ನಮ್ಮಲ್ಲಿ ಮೂಡಿಸುತ್ತವೆ. ಮುಹಮ್ಮದನು ಕಲ್ಪಿಸಿಕೊಂಡ ದೇವರು, ಮಸೀದಿಯಲ್ಲಿ ಪ್ರಾರ್ಥನೆ, ದೇವದೂತರು, ಸ್ವರ್ಗ, ನರಕ, ಕೊನೆಯ ತೀರ್ಪಿನ ದಿನ, ಆತ್ಮಗಳ ಉದಯ, ನರಕದ ಸೇತುವೆಯನ್ನು ದಾಟುವುದು ಮತ್ತು ಶರೀಯತ್‌ನಲ್ಲಿ ಆಜ್ಞಾಪಿಸಿದ ಎಲ್ಲ ಸಾಮಾಜಿಕ ಸದ್ಗುಣಗಳು – ಇವೆಲ್ಲವನ್ನು ಕುರಿತು ಅವನು ಬರೆದಿದ್ದಾನೆ. ಆದರೆ ನಾವು ಅಭ್ಯಾಸ ಮಾಡುತ್ತ ಹೋದಂತೆ, ಇಸ್ಲಾಮಿ ಬಣ್ಣ ಹಿಂದಕ್ಕೆ ಸರಿದು, ಸಮ್ಮಿಶ್ರಗೊಂಡ ಹಾಗೂ ವ್ಯಾಪ್ತವಾದ ಮಾನವಾಸಕ್ತಿ ಪದ್ಯಗಳಲ್ಲಿ ಒಡೆದು ಕಾಣತೊಡಗುತ್ತದೆ. ಇದಕ್ಕೆ ಎರಡು ಕಾರಣಗಳಿವೆ.

ಮೊದಲನೆಯದಾಗಿ, ಮುಹಮ್ಮದನ ಬಗೆಗಾಗಲಿ, ಅವನ ಯುದ್ಧಗಳು ಮತ್ತು ಅವನ ದೈವನಿಯಮಿತ ಕಾರ್ಯದ ಯಶಸ್ಸಿನ ಬಗೆಗಾಗಲಿ ಫರೀದ್ ಎಲ್ಲಿಯೂ ಪದ್ಯ ರಚಿಸಿಲ್ಲ. ಜಗತ್ತನ್ನು ಜಯಿಸಿದ ಇಸ್ಲಾಮಿನ ಕೂಡ ಅವನ ಸಂಬಂಧವೇ ಇಲ್ಲ. ಅನ್ಯ ನಂಬಿಕೆಗಳನ್ನು ಹೀಗಳೆದು, ಇಸ್ಲಾಮನ್ನು ಎತ್ತಿ ಹಿಡಿಯುವ ಉಲೇಮಾ ಅಥವಾ ಖಾಜಿ ಅವನಾಗಿರಲಿಲ್ಲ. ಎರಡನೆಯದಾಗಿ ಶರೀಯತ್‌ನ ವಿವಿಧ ಅಂಶಗಳನ್ನು ಕುರಿತು ಅವನು ಎತ್ತಿ ಹೇಳುವಾಗ ಹೋರಾಟದ ಬಗ್ಗೆ ಹಾಗೂ ಮನುಷ್ಯನ ಸಂಕಟದ ಬಗ್ಗೆ ಹೆಚ್ಚು ಕಾಳಜಿ ವ್ಯಕ್ತಗೊಳಿಸುತ್ತಾನೆಯೇ ಹೊರತು ಮತಾಂತರದ ಬಗೆಗಲ್ಲ. ಪ್ರಪ್ರಥಮವಾಗಿ

ಮನುಷ್ಯನನ್ನು ದೈವೀಪ್ರಜ್ಞೆಯುಳ್ಳವನನ್ನಾಗಿ ಮಾಡಲು ಪ್ರಯತ್ನಿಸುವ ಪರಮ ಧಾರ್ಮಿಕ ಪುರುಷನಾಗಿ ಫರೀದ್ ಗೋಚರಿಸುತ್ತಾನೆಯೇ ಹೊರತು, ಕುರಾನದ ಪರಿಭಾಷೆಯಲ್ಲಿಯ ಪ್ರತ್ಯೇಕ ದೇವರನ್ನು ಕುರಿತಲ್ಲ. ಅವನ ಮುಖ್ಯ ವಿಷಯಗಳೆಂದರೆ, ಮನುಷ್ಯ ಮತ್ತು ಆಧ್ಯಾತ್ಮಿಕತೆ, ಭೂಮಿಯ ಮೇಲೆ ಅವನ ತಾತ್ಕಾಲಿಕ ಜೀವನ, ಸಾಮಾನ್ಯ ಜನರ ಬಡತನ, ಹಸಿವು ಹಾಗೂ ಜಗತ್ತಿನಲ್ಲಿಯ ಅನ್ಯಾಯ, ಮರುಳುಗೊಳಿಸುವಿಕೆ, ಐಶ್ವರ್ಯ ಮತ್ತು ಅಧಿಕಾರದ ಕುರುಡುಗೊಳಿಸುವ ಆಕರ್ಷಣೆ, ನಿರುಪಯುಕ್ತ ಹವ್ಯಾಸಗಳಲ್ಲಿ ವೇಳೆಯನ್ನು ಹಾಳುಮಾಡುವುದು ಇವುಗಳ ಬಗ್ಗೆ ಅವನು ಹೆಚ್ಚು ಆಳವಾದ ಕಾಳಜಿಯುಳ್ಳವನಾಗಿದ್ದಾನೆ. ಸಾಮಾಜಿಕ ಸದ್ಗುಣಗಳ ಬಗ್ಗೆ ಅವನು ಹಾಡಿದರೆ ಅವು ಎಲ್ಲ ಧರ್ಮಗಳಿಗೆ ಸಂಬಂಧಪಟ್ಟವುಗಳೇ ಆಗಿರುತ್ತವೆ. ವರ್ಷಗಳು ಗತಿಸಿದಂತೆ ಫರೀದ್ ಇಸ್ಲಾಮಿನ ಬಾಹ್ಯವಿಧಿಗಳಿಂದ ದೂರ ಸರಿದನು. ಇಸ್ಲಾಂ ರಾಜ್ಯ ಅಥವಾ ಅಧಿಕಾರಶಾಹಿ, ಅಥವಾ ಉಲೇಮಾಗಳು ಮತ್ತು ಖಾಜಿಗಳು ಇವಾವುಗಳೊಡನೆಯೂ ಅವನು ಸಂಬಂಧವಿಟ್ಟುಕೊಂಡಿರಲಿಲ್ಲ. ಒಂದೆಡೆ ಉಲ್ಲೇಖಿಸಿರುವಂತೆ ಅವರು ಇವನ ವಿರುದ್ಧ ಪಿತೂರಿ ಮಾಡಿದ್ದಲ್ಲದೆ ಅವನನ್ನು ಖಂಡಿಸಿದರು. ಅವನಿಗೂ ಅವನ ಮಕ್ಕಳಿಗೂ ಅನೇಕ ತೊಂದರೆಗಳನ್ನು ಕೊಟ್ಟರು. ಆದರೆ ತಾಳ್ಮೆ ಮತ್ತು ಪರಿಶ್ರಮದಿಂದ ಅವೆಲ್ಲ ಅಡ್ಡಿ ಆತಂಕಗಳನ್ನು ಅವನು ದಾಟಿ ಬಂದನು. ಪ್ರಾರ್ಥನೆ ಮಾಡಲಿ, ಅಥವಾ ಉಪವಾಸ ವ್ರತ ಕೈಗೊಳ್ಳಲಿ ಅವನ ಎಲ್ಲ ತಪಸ್ಸು ಆಧ್ಯಾತ್ಮಿಕ ಗುರಿಯೆಡೆಗೆ ಸಾಗಿಸುವಂಥದಾಗಿತ್ತು. ಹೀಗೆ ಧಾರ್ಮಿಕ ವಿಷಯದಲ್ಲಿ ಅವನು ಸೂಫಿ ಪ್ರೇಮತತ್ವವನ್ನು ಅನುಸರಿಸಿದನು; ಪ್ರೇಮದ ಮಾರ್ಗವಾದ ಭಕ್ತಿಮಾರ್ಗವನ್ನು ಅವನು ಹಿಡಿದನು.

ಫರೀದ್ ಜೀವನದ ಬಗ್ಗೆ ದುರಂತ ದೃಷ್ಟಿಯುಳ್ಳವನಾಗಿ ಕಂಡರೂ ದೈವೀಪ್ರೇಮದ ಬಗ್ಗೆ ಅವನು ಉತ್ಕಟ ಭಾವದಿಂದ ಬರೆದನೆಂಬುದನ್ನು ನಾವು ಮರೆಯಕೂಡದು. ಅವನ ಭಕ್ತಿ ಮತ್ತು ಸಮರ್ಪಣಭಾವ ಇಡಿಯಾಗಿ ಸಂಪೂರ್ಣವಾಗಿತ್ತು. ಸಂತನಾಗಿ, ಕವಿಯಾಗಿ ಅವನು ನಿಜಕ್ಕೂ ದೊಡ್ಡವನು. ಅವನ ಜೀವನ ಹಾಗೂ ಕೃತಿಗಳಿಂದ ಹೊರಹೊಮ್ಮುವ ಫರೀದನ ಮೂರ್ತಿಪ್ರಭಾವ ಎಂಥದು? ಬಲವಂತಸಿಂಗ್ ಆನಂದ ಅವರ ಮಾತಿನಲ್ಲಿ ಹೇಳುವುದಾದರೆ, "ಕುಲಾಧಿಪತಿಯಂತೆ, ಪೂಜ್ಯ ವಯೋವೃದ್ಧ ಷೇಕ್‌ನಂತೆ, ಅಂತಃಕರಣವುಳ್ಳ ನಿಷ್ಠುರ ಶಿಸ್ತುಗಾರನಂತೆ, ದೊಡ್ಡ ವಿದ್ವಾಂಸನಂತೆ ಮತ್ತು ಪ್ರೀತಿಯ ಗುರುವಿನಂತೆ ಅವನು ಕಂಡುಬರುತ್ತಾನೆ. ಜಗತ್ತನ್ನು ಪರೀಕ್ಷಿಸಿ ನೋಡಿ, ಅದರ ಕಾಂತಿ, ಹೊಳಪುಗಳು ಕೇವಲ ಅಳಿದು ಹೋಗುವ ನೆರಳಿನಂತೆ ಎಂಬುದನ್ನು ಕಂಡುಕೊಂಡ ಜ್ಞಾನಿಯವನು. ವೈರಾಗ್ಯ ಮತ್ತು ಕಷ್ಟಗಳನ್ನು ವಹಿಸಿಕೊಳ್ಳುತ್ತ ದೇವರಲ್ಲಿ ಐಕ್ಯವನ್ನು ಸಾಧಿಸಲು ತನ್ನ ಜೀವನವನ್ನೇ ಸಮರ್ಪಿಸಿಕೊಂಡ ಭಕ್ತಿಪೂರ್ಣ ದರವೇಶನಾಗಿಯೂ ತೋರುತ್ತಾನೆ. ದೈವೀಪ್ರೇಮಕ್ಕಾಗಿ ತನ್ನ ಹೆರೆಹಿಂಗದ ಹಸಿವನ್ನು ಚಿರಂತನವಾದ ಸೌಂದರ್ಯಪೂರ್ಣವಾದ ಶಬ್ದಗಳಲ್ಲಿ ಹಾಡಿದ ಘನತೆವೆತ್ತ ಮಹಾಕವಿಯವನು." ದೇವನ ಮಾಧುರ್ಯದ ಸವಿಯನ್ನುಂಡು ಅದನ್ನು ಚಿನ್ನದ ಪದಗಳಲ್ಲಿ ಅವನು ಬರೆದವನು:

ಕಬ್ಬು, ಸಕ್ಕರೆ, ಜೇನು
ಹಸುವಿನ ಹಾಲು, ಮಧುರ:
ನಿಜ, ಇವೆಲ್ಲವೂ ಮಧುರ, ಇವಕ್ಕಿಂತ
ಮಧುರತರವಾಗಿಹನು ದೇವ.

ಆಧಾರಸೂಚಿ

೧. ಲೈಫ್ ಆ್ಯಂಡ್ ಟೈಮ್ಸ್ ಆಫ್ ಫರೀದ್, ಲೇ.: ಎ.ಕೆ. ನಿಜ್ಮಿ
೨. ಪಂಜಾಬಿ ಸೂಫಿ ಪೊಯೆಟ್ಸ್, ಲೇ: ಲಾಜವಂತಿ ರಾಮಕೃಷ್ಣ
೩. ಹಿಸ್ಟರಿ ಆಫ್ ಪಂಜಾಬಿ ಲಿಟರೇಚರ್, ಲೇ: ಮೋಹನಸಿಂಗ್ ದಿವಾಣ
೪. ಬಾಬಾ ಫರೀದ್, ಬಲವಂತಸಿಂಗ್ ಆನಂದ.

('ಅನುಭಾವಪಥ' ೨೦೧೦ ಸಂ. ಡಾ. ಜಿ.ಎಸ್. ಶಿವರುದ್ರಪ್ಪ)

ಚೆನ್ನಣ್ಣ ಮತ್ತು 'ವ್ಯೋಮಾವ್ಯೋಮ'

ಡಾ. ಚೆನ್ನಣ್ಣ ವಾಲೀಕಾರ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಬಲ್ಲೆ. ತಮ್ಮ ಮುಗ್ಧ ಮನಸ್ಸಿನಿಂದ ಕುತೂಹಲ ಹುಟ್ಟಿಸುವ ವ್ಯಕ್ತಿಯಾಗಿ ಅವರು ಕಂಡಿದ್ದರು. ಈಗಲೂ ಅಷ್ಟೆ. ಇವತ್ತಿನವರೆಗೂ ನನ್ನ ಬಗ್ಗೆ ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡು ಬಂದವರು, ನನ್ನ ಬಗ್ಗೇ ಅಂತಲ್ಲ, ಸಾಮಾನ್ಯವಾಗಿ ತಮ್ಮ ಸಂಪರ್ಕಕ್ಕೆ ಬಂದ ಸಾಹಿತ್ಯ ವಲಯದ ಎಲ್ಲ ಹಿರಿಕಿರಿಯರ ಬಗೆಗೂ ಸೌಹಾರ್ದಯುತ ಸಂಬಂಧ ವಿಟ್ಟುಕೊಂಡು ಬಂದವರು. ಬಂಡಾಯದ ಕೆಲವು ಲೇಖಕರು ಭಿನ್ನಾಭಿಪ್ರಾಯದೊಂದಿಗೆ ಪರಸ್ಪರ ದೂರ ಸರಿದದ್ದುಂಟು, ಆದರೆ ನಾನು ಕಂಡಂತೆ ಚೆನ್ನಣ್ಣ ಭಿನ್ನಾಭಿಪ್ರಾಯವಿದ್ದಾಗಲೂ ತಮ್ಮ ಸ್ನೇಹ ಸಂಬಂಧವನ್ನು ಯಾರ ಜೊತೆಗೂ ಕಡಿದುಕೊಂಡವರಲ್ಲ.

ದಲಿತ–ಬಂಡಾಯದ ಮುಖ್ಯ ಕವಿಗಳಲ್ಲಿ ಒಬ್ಬರಾದ ಚೆನ್ನಣ್ಣ ಹೆಚ್ಚಾಗಿ ಹಾಡುಗಳನ್ನೇ ತಮ್ಮ ಕಾವ್ಯಮಾಧ್ಯಮವಾಗಿ ದುಡಿಸಿಕೊಂಡವರು, ಅವರ ಕವನ ಸಂಗ್ರಹಗಳಲ್ಲಿ ೧) 'ಕರಿತೆಲಿ ಮಾನವನ ಜೀಪದ' ೨) 'ಹಾಡಕ್ಕಿ ಹಾಗೂ ಇತರ ಪದಗಳು, ೩) 'ಪ್ಯಾಂಥರ್ ಪದ್ಯಗಳು', ೪) 'ಬಂಡೆದ್ದ ದಲಿತರ ಬೀದಿ ಹಾಡುಗಳು' ಇವು ಈಗಾಗಲೇ ಹೆಸರು ಮಾಡಿದ ಕೃತಿಗಳು. ನವ್ಯ ಕಾವ್ಯದ ಸಂದರ್ಭದಲ್ಲಿ ಕಾವ್ಯ ಬರೆಯಲು ತೊಡಗಿದ್ದ ಇವರು ಅದರ ಸೋಂಕಿರದೆ ದಲಿತ ಪ್ರಜ್ಞೆ ಹಾಗೂ ಹೋರಾಟದ ಆಶಯದ ಕಾವ್ಯವನ್ನು ಕೊಡತೊಡಗಿದರು, ನವ್ಯಕಾವ್ಯದ ಬಂಧವನ್ನು ಭೇದಿಸಿ ಹೊರಬಂದವರು, 'ಹೈದರಾಬಾದ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ' ಅವರ ಪಿಎಚ್.ಡಿ. ಮಹಾಪ್ರಬಂಧದ ವಿಷಯ. ಅಲ್ಲದೆ ಕರ್ನಾಟಕದ ದೇವದಾಸಿಯರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ,

ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನವನ್ನು ಅವರು ಕೈಕೊಂಡಿದ್ದರು. ಈ ಎರಡು ಸಂಪುಟಗಳು ಹಿಂದೆಯೇ ಬೆಳಕು ಕಂಡಿವೆ, ಇದೂ ಅಲ್ಲದೆ ಸಣ್ಣಕಥೆ, ಕಾದಂಬರಿ, ನಾಟಕ, ಡಪ್ಪಿನಾಟ ಮೊದಲಾದ ಕ್ಷೇತ್ರಗಳಲ್ಲಿ ಅವರು ಅನೇಕ ಕೃತಿಗಳನ್ನೂ ರಚಿಸಿದ್ದಾರೆ. ಬೇರೆ ಬೇರೆ ಪ್ರಕಾರಗಳಲ್ಲಿ ಚದುರಿದ ತಮ್ಮ ಸಮಸ್ತ ಶಕ್ತಿಯನ್ನೂ ಬಹುಶಃ ಒಂದು ಹದಕ್ಕೆ ತಂದುಕೊಂಡು ಈ ಬೃಹತ್ ಕಾವ್ಯ ಪ್ರಯೋಗಕ್ಕೆ ಇಳಿದಿರಬಹುದೆಂದು ತೋರುತ್ತದೆ.

ಮೂಲತಃ ಜಾನಪದದಿಂದ ತಮ್ಮ ಅಸ್ತಿತ್ವಕ್ಕೆ ಪೋಷಕವಾದ ಅಂಶಗಳನ್ನು ಹೀರಿಕೊಂಡು ಜನರ ಮಧ್ಯದಲ್ಲಿಯೇ ನಿಂತವರು ಚೆನ್ನಣ್ಣ. ತಮ್ಮ ಪೂರ್ಣ ವ್ಯಕ್ತಿತ್ವವನ್ನು ಕಾವ್ಯದಲ್ಲಿ ತೊಡಗಿಸಿಕೊಳ್ಳುವ ಅರ್ಥಪೂರ್ಣ ಹೋರಾಟ ಉದ್ದಕ್ಕೂ ಕಂಡುಬರುತ್ತದೆ, ದಲಿತ ಕವಿಯೆಂದೇ ಖ್ಯಾತಿವೆತ್ತ ಸಿದ್ಧಲಿಂಗಯ್ಯನವರು ಬಾಗಲಕೋಟೆಯ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಮಾತು ಹೇಳಿದರು: "ನನ್ನನ್ನು ದಲಿತ ಕವಿಯೆಂದು ಕರೆಯುತ್ತಿದ್ದಾರೆ, ಈಗ ನಾನು ಕೇವಲ ದಲಿತ ಕವಿಯಲ್ಲ." ಇದರ ಅರ್ಥ ಏನೇ ಇದ್ದರೂ ಸಿದ್ಧಲಿಂಗಯ್ಯನವರಲ್ಲಿರುವ ಈ ಕೊರಗು ದೇವನೂರು ಮಹಾದೇವ ಅವರಲ್ಲಿ ಕಂಡುಬರುವುದಿಲ್ಲ, ಚೆನ್ನಣ್ಣ ವಾಲೀಕಾರರಲ್ಲಿಯೂ ಕಾಣುವುದಿಲ್ಲ, ಇದು ಗಮನಿಸಬೇಕಾದ ಅಂಶ. ದೀನ ದಲಿತರ ನೆಲಮೂಲ ಅನುಭವ ದ್ರವ್ಯವನ್ನು ತುಂಬಿ ಕೊಂಡು ಹೊರಬರುವ ಇವರ ಸೃಜನಶೀಲತೆಗೆ ಬಹುಶಃ ಸಾಂಪ್ರದಾಯಿಕ ಶಿಸ್ತು ಒಗ್ಗದೆ ಇರಬಹುದು.

ಇವರು ಬಹಳ ಹಿಂದೆ ಬರೆದ 'ಬೆಳ್ಳ' ಕಿರು ಕಾದಂಬರಿ ರಾಯಚೂರು ಭಾಗದ ಗ್ರಾಮೀಣ ಭಾಷಾ ವಿಶೇಷದ ಮೂಲಕ ಇಡೀ ಕಾದಂಬರಿಯನ್ನು ನಿರೂಪಿಸಿದಾಗ ಓದುಗರಿಗೆ ಅದರ ಪ್ರವೇಶವೇ ಕಷ್ಟವಾಯಿತು, ನಾನೂ ಕಷ್ಟಪಟ್ಟೇ ಅದನ್ನು ಓದಿಮುಗಿಸಿದ್ದೆ. ಆ ಪ್ರಯೋಗವನ್ನು ವಿಮರ್ಶಕರೂ ಲಘುವಾಗಿಯೇ ತೆಗೆದುಕೊಂಡ ರೆಂದು ಕಾಣುತ್ತದೆ. ಆದರೆ ಅಂಥ ಕಷ್ಟ 'ವ್ಯೋಮಾವ್ಯೋಮ'ದಲ್ಲಿಲ್ಲ. ಇದು ಶಿಷ್ಟ ಭಾಷೆಯಲ್ಲಿಯೇ ಇರುವುದರಿಂದ ಅಂಥ ತೊಂದರೆಯಿಲ್ಲ. ಆದರೆ ಇಲ್ಲಿರುವ ಕಷ್ಟ ಬೇರೆ ಬಗೆಯದು. ಅಲ್ಪವಿರಾಮ, ಪೂರ್ಣವಿರಾಮಗಳಿಲ್ಲದೆ, ಪ್ಯಾರಾ ಅಥವಾ ಅಧ್ಯಾಯ ಯಾವುದೂ ಇಲ್ಲದೆ ಉದ್ದಕ್ಕೂ ಹರಿದು ಹೋಗುವ ಶೈಲಿ ಈ ಕಾವ್ಯದ್ದು. ಓದುಗರೇ ಸೂಕ್ತ ಕಂಡಲ್ಲಿ ವಿರಾಮ ಹಾಕಿಕೊಳ್ಳಬೇಕು. ಇಂಥ ಪ್ರಯೋಗವನ್ನು ಯಾಕೆ ಮಾಡಲಾಗಿದೆ ಎಂಬುವುದನ್ನು ಕವಿ ಎಲ್ಲೂ ಹೇಳುವುದಿಲ್ಲ. ಗದ್ಯ, ಪದ್ಯ ಎದ್ದು ಕಾಣುವಂತೆ ಹಾಡುವ ಕಾವ್ಯದ ಮಾದರಿಯಲ್ಲಿ ಅಚ್ಚು ಮಾಡಿದ್ದರೆ ಓದಿಗೆ ಅಡೆತಡೆಯುಂಟಾಗುವುದನ್ನು ತಪ್ಪಿಸಬಹುದಾಗಿತ್ತು. 'ಮಹಾ ಛಂದಸ್ಸಿನ ಸಂಕೀರ್ಣ ಗದ್ಯಪದ್ಯದ ಹಾಡುಗಬ್ಬ' ಎಂಬ ಉಪಶೀರ್ಷಿಕೆಯನ್ನು ಮಾತ್ರ ಕೊಡಲಾಗಿದೆ. ಹರಿಹರನ ರಗಳೆಗಳಲ್ಲಿ ಜೂಜಿನ ಕುದುರೆಯ ಓಟವಿದ್ದರೂ ಈ ಬಗೆಯ ತೊಂದರೆಯನ್ನು ಓದುಗ ಅನುಭವಿಸುವುದಿಲ್ಲ.

ಈ ಕಾವ್ಯವನ್ನು ನಾನು ಪೂರ್ತಿ ಓದಿರದಿದ್ದರೂ ಕೆಲವು ಮಾತು ಹೇಳಬಹುದು. ಇಲ್ಲಿ ಯಾವುದೇ ಮುಖ್ಯ ಕಥೆಯೆಂಬುದು ಇಲ್ಲ. ಆದ್ದರಿಂದ ಇದನ್ನು ಯಾವ ಪುಟದಿಂದ ಲಾದರೂ ಓದಬಹುದು: ಹರಿಯುವ ನದಿಯಲ್ಲಿ ಬೊಗಸೆಯಿಂದ ನೀರು ಕುಡಿದಂತೆ. ಆದರೂ ಈ ಆಕಾರದಲ್ಲಿ ಸಾವಿರದ ಮೂವತ್ತು ಪುಟಗಳಷ್ಟು ಬರೆದಿದ್ದಾ ರೆಂದರೆ ಆಶ್ಚರ್ಯವಲ್ಲದೆ ಮತ್ತೇನು? ಇಲ್ಲಿ ತನ್ನದೇ ಆದ ಜೀವನಾನುಭವವಿದೆ. ದೇಶ ವಿದೇಶದ ಕವಿಗಳ, ತಾತ್ವಿಕರ, ದಾರ್ಶನಿಕರ, ಚಾರಿತ್ರಿಕ ವ್ಯಕ್ತಿಗಳ, ಕಾವ್ಯೇತಿಹಾಸಗಳ ವಿಚಾರ ಧಾರೆಯಿದೆ. ಅವೆಲ್ಲ ಒಂದಕ್ಕೊಂದು ಸಂಯೋಜನೆಗೊಂಡ ಅನುಸಂಧಾನವಿದೆ. ಇದೆಲ್ಲದರ ಆಂತರ್ಯದಲ್ಲಿ ಬಂಡಾಯದ ಧ್ವನಿಯನ್ನು ಗುರುತಿಸಬಹುದು. ಇದೊಂದು ರೀತಿಯ ಪ್ರಜ್ಞಾ-ಪ್ರವಾಹ. ಆದರೆ ಒಂದು ತಂತ್ರವಾಗಿ ಅಲ್ಲ. ಗದ್ಯಪದ್ಯವೆಂದರೂ ವಾಚ್ಯವಾಗಿಲ್ಲ. ತಮ್ಮ ಹಿಂದಿನ ಕಾವ್ಯದ ಆಶಯ, ಅಭಿವ್ಯಕ್ತಿಯನ್ನೂ ಬಿಟ್ಟುಕೊಟ್ಟಿಲ್ಲ. ಸಮಕಾಲೀನ ಸಂದರ್ಭದ ಪ್ರತಿಕ್ರಿಯೆಗಳಿಗೂ ಇಲ್ಲಿ ಎಡೆಯಿದೆ. ಜ್ಞಾನದ ಒಂದು ಮಹಾಸೌಧವನ್ನು ಕಟ್ಟುವ ಅಪೂರ್ವ ಪ್ರಯತ್ನವಾಗಿಯೂ ಇದು ತೋರಬಹುದು. ಆದರೆ ಇದನ್ನು ಸಂಗ್ರಹಿಸುವುದು ಅಸಾಧ್ಯ. ಸವಾಲುಗಳನ್ನು ಎಸೆಯುತ್ತ ಹೋಗುವುದು ಅದರ ಸ್ವಭಾವ. ಮಾರ್ಗದೇಶಿಗಳ ಬೆಸುಗೆಯ ಪ್ರಯತ್ನವೂ ಹೌದು. ಬರಗೂರು ರಾಮಚಂದ್ರಪ್ಪನವರು ಅಭಿಪ್ರಾಯಪಡುವಂತೆ ಎಲ್ಲ ವಿಚಾರ ಧಾರೆಗಳನ್ನು ಸಂಯೋಜಿಸುವ ಭರದಲ್ಲಿ ಸೈದ್ಧಾಂತಿಕ ಗೊಂದಲವಿರಬಹುದೇನೋ ಎನಿಸುತ್ತದೆ. ಅದೇ ಹೊತ್ತಿಗೆ 'ಶುದ್ಧತ್ವ' ಮತ್ತು 'ಪ್ರಕೃತಿಯತ್ವ'ಗಳನ್ನು ಪ್ರಸ್ತಾಪಿಸಿ ಇವೇ ಇದರ ಕೇಂದ್ರ ಪ್ರಜ್ಞೆ ಇರಬಹುದೆಂಬ ಭಾವನೆ ಬಂದುಬಿಡುತ್ತದೆ. ಇಲ್ಲಿ ಕಥೆ ಇರದಿದ್ದರೂ ಆತ್ಮಕಥನ ಮಾತ್ರ ಎಳೆಯಾಗಿ ಹಾಸುಹೊಕ್ಕಾಗಿದೆ ಎಂಬುದನ್ನು ಬರಗೂರು ಅವರು ಸೂಚಿಸುತ್ತಾರೆ. ಇದು ನಿಜವೂ ಹೌದು.

ಈ ಕಾವ್ಯದ ಪ್ರಾರಂಭದ ಕೆಲವು ಸಾಲುಗಳಿವು:

"ಬಯಲು ಆಲಯದಲ್ಲಿ ಮರುಹುಟ್ಟು ಪಡೆದಂಥ ಲೋಕಾಲೋಕದ ಪಿರಮಿಡ್ಡಿನ ಅಮರತ್ವಕ್ಕೆ ಪಂಚಭೂತದಲ್ಲಿ ಮಗು ಮಾಡಿ ಸಲುಹಿದ ಭೂತಾಯಿಯ ಅನನ್ಯ ಜ್ಞಾನ ಅನ್ನ ಆಶ್ರಯಕೆ ಬೌದ್ಧಿಕ ಭೌತಿಕವಾಗಿ ಕೂಡಲ ಸಂಗಮಗೈದ ಸುಖಾಸುಖದ ಸಾತ್ವಿಕ ರಾಜಸ ತಾಮಸಕೆ ದೇದೀಪ್ಯ ಮಾನದ ದೀಧಿತಿ ಧೃತಿಯನು ಬೆಳ್ಳಂ ಬೆಳಗುಗೈದ ದುಃಖಾದುಃಖದ ಮಹರ್ಷಿಯರ ಮಹಾತಪದ ಗೌರಿಶಂಕರ ಶಿಖರಕೆ ಕುಂಟ ಕುರುಡನಾದಲ್ಲೂ ಕೈ ಹಿಡಿದು ನಡೆಸಿ ಸ್ಥಿತ ಪ್ರಜ್ಞೆಗೈದು ಹಿಮಗಿರಿ ಮಾಡಿದ ವೃಕ್ಷಾವೃಕ್ಷದ ಕರುಣಾಳು ಬೆಳಕಿನ ದಿವ್ಯದರ್ಶನಕೆ ನಡೆವರೆಡಹದೆ ಕುಳಿತವರೆಡಹುವರೆ ಹಿಡಿದೆತ್ತಿ ಬೆಳಸಿದ ಕನ್ನಡದ ಪ್ರಜ್ವಲ ಕವಿಗಣಕೆ ನಾನಾ ಕಷ್ಟಕಾರ್ಪಣ್ಯ ಹಿಂಸೆಧ್ವಂಸ ಕ್ರೌರ್ಯ ಕಿರಾತತನ ಹತ್ತಿಕ್ಕಲ್ಪಡುವಿಕೆ ಸೋಲು ನಿಂದೆ ನೋವಿನಿಂದ ಬೆಳಸಿದ ಒಳಾಂತರಂಗದ ಕಾವ್ಯದೀಪನಕೆ ಅಂತ್ಯ ಇಲ್ಲವೆ ಇಲ್ಲ..."

ಇಲ್ಲಿಯ 'ಬಯಲು ಆಲಯ' 'ಭೂತಾಯಿಯ ಅನನ್ಯ ಜ್ಞಾನ ಅನ್ನ ಆಶ್ರಯಕೆ' 'ಕೂಡಲಸಂಗಮಗೈದ' 'ಸ್ಥಿತಪ್ರಜ್ಞಗೈದು' 'ಕರುಣಾಳು ಬೆಳಕಿನ' 'ನಡೆವರೆಡಹದೆ' 'ಹಿಂಸೆಧ್ವಂಸಕ್ರೌರ್ಯ' 'ಒಳಾಂತರಂಗದ ಕಾವ್ಯ ದೀಪನಕೆ' ಮೊದಲಾದ ಪದಪುಂಜಗಳು ಕಾವ್ಯ, ತತ್ವಜ್ಞಾನ, ಭೂಮಿ, ಬದುಕು, ಅನುಭವ ಇತ್ಯಾದಿ ಪರಿಕಲ್ಪನೆಗಳ ಸಾಹಚರ್ಯವನ್ನು ಸಾರವತ್ತಾಗಿ, ಹಿಡಿಯುವ ಪ್ರಯತ್ನದಂತೆ ತೋರಬಹುದು. ಅಲ್ಲದೆ ರಾಘವಾಂಕನ ಅಪೇಕ್ಷೆಯಂತೆ 'ಕಡೆತನಕ ಬಂದ ಲೇಸಿಂಗೆ' ಕಾಯಬೇಕೆಂದು ಸೂಚಿಸುತ್ತಿರಬಹುದು.

ಕಾವ್ಯದ ಮುಕ್ತಾಯದ ಕೆಲವು ಸಾಲುಗಳಿವು;

'ಊಟವಿಲ್ಲದೆ ನೀರಿಲ್ಲದೆ ಹಿಂದು ಮುಂದಿನ ಗಮನವಿಲ್ಲದೆ ನಿದ್ರೆಯಿಲ್ಲದೆ ವಿಶ್ರಾಂತಿಯಿಲ್ಲದೆ ಬೇಲೂರು ಹಳೆಬೀಡಿನ ಶಿಲ್ಪದೊಳಗಿನ ಧ್ಯಾನಿಯಾಗಿ ಮೌನಿಯಾಗಿ ಅಖಂಡ ಲೋಕದ ಜ್ಞಾನಿಯಾಗಿ ಮಹಾಮಹವ ಸಾಧಿಸಲಿಕ್ಕೆ ತನ್ನನ್ನು ಆಲಯಕ್ಕೆ ಆಕರ್ಷಿಸಿಕೊಂಡು ಘನಸ್ಥ ಯೋಗಿಯಾಗಿ ಕುಳಿತವ ಕುಳಿತೆ ಇರುವನು." "ಬಯಲು ಆಲಯ" ಪದಪುಂಜದಿಂದ ಆರಂಭವಾದ ಕಾವ್ಯ ಮುಕ್ತಾಯದಲ್ಲು ಅಲ್ಲಿಗೇ ಬಂದು ತಲುಪಿದ್ದು ಗಮನಾರ್ಹ.

ಚಾಮರಸನ 'ಪ್ರಭುಲಿಂಗ ಲೀಲೆ'ಯ 'ವ್ಯೋಮ ಮೂರುತಿ ಗುರು ಗುಹೇಶ್ವರಲಿಂಗ ಶರಣಾರ್ಥಿ' ಎಂಬ ಉಕ್ತಿ ಚೆನ್ನಣ್ಣನ ಕಾವ್ಯದ ಶೀರ್ಷಿಕೆಗೆ ಪ್ರೇರಣೆ ನೀಡಿರಬಹುದೆ? 'ವ್ಯೋಮಾವ್ಯೋಮ'ದ ಐದನೆಯ ಪುಟದ ಕೊನೆಯಲ್ಲಿ ಅಲ್ಲಮನ ಪ್ರಸ್ತಾಪವಿದೆ; "ಕಾಡಡವಿಯಲ್ಲಿ ಮತ್ತೆ ಜಡ ಜಂಗಮನಾಗಲು ಉಪೋದ್ಘಾತ ಮುಗಿದಿತ್ತು ಕಾಮಲತೆ ಪ್ರೀತಿಸಲು ಮೃತ್ಯುವಾಗಿತ್ತು ಕಾಡಡವಿಯಲ್ಲಿ ಕಾಮಲತೆ ಸತ್ತಾಗಲೆ ಅನಿಮಿಷದೇವ ಸಿಕ್ಕಾಗಲೆ ಮದ್ದಳೆಯ ಅಲ್ಲಮ ವ್ಯೋಮಾವ್ಯೋಮನಾಗುವುದು ಆರಂಭವಾಗಿತ್ತು ಕಾಡಡವಿಯಲ್ಲಿ ವ್ಯೋಮಾವ್ಯೋಮವೆ ಬೃಹದ್ಗಾನವಾಗಿ ಹಾಡಿತ್ತು..." 'ಶ್ರೀ ರಾಮಯಣ ದರ್ಶನಂ'ದಲ್ಲಿ ಕುವೆಂಪು 'ಮುಗಿಸಿ ತಂದಿಹೆನೀ ಬೃಹದ್ಗಾನಮಂ' ಎಂದು ಹಿಂದೆಯೇ ಹೇಳಿದ್ದುಂಟು.

ದಲಿತ ಬಂಡಾಯದ ಚೆನ್ನಣ್ಣ ವಾಲೀಕಾರ ಭೂಮಿಯಲ್ಲಿ ಬದುಕಿನ ನೆಲೆಯನ್ನು ಕಂಡುಕೊಂಡು ಆ ಮೂಲಕವೇ ಅನುಭಾವಿಕ ಆಕಾಶವನ್ನು ಕಾಣಲು ಪ್ರಯತ್ನಿಸಿದ್ದಾರೆ. ಅದೇನೇ ಇದ್ದರೂ ಇದೊಂದು ಅದ್ಭುತ ರಚನೆ.

('ವ್ಯೋಮಾವ್ಯೋಮ' ಕಾವ್ಯದ ವಿಮರ್ಶಾಹೊತ್ತಿಗೆ: ೨೦೧೩)

ಬೆಳಗಾವಿ ವಿಶ್ವಕನ್ನಡ ಸಮ್ಮೇಳನ : ಉದ್ಘಾಟನಾ ಸಮಾರಂಭ

(ಮುಖ್ಯ ಅತಿಥಿಗಳಲ್ಲಿ ಒಬ್ಬನಾಗಿ ಮಾಡಿದ ಭಾಷಣ)

ರಾಜಧಾನಿಯಾದ ಬೆಂಗಳೂರಿನಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನೆರವೇರಿದ ಕೆಲವೇ ದಿನಗಳಲ್ಲಿ, ಉಪರಾಜಧಾನಿಯೆನಿಸಿದ ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಯುತ್ತಿರುವುದು, ನಾಡಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಕನ್ನಡಿಗರಿಗಿರುವ ಶ್ರದ್ಧೆಯ ದ್ಯೋತಕವಾಗಿದೆ. ಯಾವುದೇ ಬಗೆಯ ರಾಜಕೀಯಕ್ಕೆ ಆಸ್ಪದವಿಲ್ಲದೆ, ಸರ್ವ ಕನ್ನಡಿಗರೂ ಒಮ್ಮನಸ್ಸಿನಿಂದ ಈ ಮಹಾಸಮ್ಮೇಳನವನ್ನು ಋಜುಮಾರ್ಗದಲ್ಲಿ ನಡೆಸಲು ಕಂಕಣಬದ್ಧರಾಗಿರುವುದು ಜನಪದರ ಹಾಗೂ ಜನಪ್ರತಿನಿಧಿಗಳ ಸಮಷ್ಟಿ ಪ್ರಜ್ಞೆಗೆ ಸಾಕ್ಷಿಯಾಗಿದೆ. ಬೆಳಗಾವಿ ಇಂದು, ವಿಶ್ವದ ಕೇಂದ್ರಬಿಂದುವಾಗಿ, ಜಗತ್ತಿನ ನಾನಾ ಮೂಲೆಗಳಿಂದ ಕನ್ನಡತಾಯ ಮಕ್ಕಳನ್ನು ಹಾಗೂ ಇತರ ಬಂಧುಗಳನ್ನು ಅಂತಃಕರಣದಿಂದ ತನ್ನ ಮಡಿಲಿಗೆ ಬರಮಾಡಿಕೊಂಡಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ.

'ಕರ್ನಾಟಕತ್ವದ ವಿಕಾಸ' ಎಂಬ ಪರಿಕಲ್ಪನೆಯನ್ನು ಕೊಟ್ಟ ಆಲೂರು ವೆಂಕಟರಾಯರು ರಾಜಕಾರಣ, ಧರ್ಮ, ವಾಙ್ಮಯ, ಇತಿಹಾಸ, ಕಲೆ, ಉದ್ದಿಮೆ ಮೊದಲಾದ ಯಾವತ್ತು ವಿಷಯಗಳನ್ನು ಸೇರ್ಪಡೆ ಮಾಡಿ ಕನ್ನಡಿಗರಿಗೆ ದಾರಿ ತೋರಿಸಿದ್ದಾರೆ. 'ಕರ್ನಾಟಕತ್ವ' ಎಂಬುದು ಫೋಕಸ್ಸಿಂಗ್ ಲೆನ್ಸ್ ಇದ್ದ ಹಾಗೆ. ಕಿರಣಕೇಂದ್ರದ ಆ ಗಾಜಿನೊಳಗಿಂದ ಭರತಭೂಮಿ ಮಾತ್ರವೇ ಏಕೆ, ವಿಶ್ವವೇ ನಮಗೆ ಗೋಚರಿಸಬಲ್ಲುದು. ಈ ಮುಖ್ಯ ವಿಚಾರವನ್ನು ೯ನೇ ಶತಮಾನದಷ್ಟು ಹಿಂದೆಯೇ ನಮ್ಮ ಕವಿರಾಜಮಾರ್ಗಕಾರ ಕಂಡುಕೊಂಡಿದ್ದ. "ಕಾವೇರಿಯಿಂದಂ ಆ ಗೋದಾವರಿವರಂ ಇರ್ದ ನಾಡು ಅದು. ಆ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ

ವಿಶದ ವಿಷಯ ವಿಶೇಷಂ." ಕೆ.ವಿ.ಸುಬ್ಬಣ್ಣ ಅವರು ಮಾಡಿದ ಈ ಪದ್ಯದ ವ್ಯಾಖ್ಯಾನ ತುಂಬ ಚೇತೋಹಾರಿಯಾಗಿದೆ.

೧. ವಿಶ್ವ ಜಗತ್ತಿನಲ್ಲಿ ಕರ್ನಾಟಕ ವಿಲೀನವಾಗಿದೆ, ಸಮರಸವಾಗಿ ಬೆರೆತುಕೊಂಡಿದೆ.

೨. ವಿಲೀನವಾಗಿಯೂ ತನ್ನ ವಿಶಿಷ್ಟತೆಯನ್ನು ಕಳೆಯದೆ, ಕಾಣುವಂತೆ ಉಳಿಸಿ ಕೊಂಡಿದೆ.

೩. ಮತ್ತು ಇನ್ನೊಂದು ರೀತಿಯಿಂದ ಇದು ವಿಶ್ವಜಗತ್ ಸಮಸ್ತವನ್ನೂ ತನ್ನಲ್ಲಿ ವಿಲೀನಗೊಳಿಸಿಕೊಂಡು, ವಿಶ್ವಜಗತ್ತಿನಷ್ಟೇ ವಿಶದ ಎಂದರೆ ಅಪಾರವಾಗಿದೆ.

ಆದ್ದರಿಂದ ಕರ್ನಾಟಕದ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಶ್ವಕನ್ನಡ ಸಮ್ಮೇಳನ ವಸುಧೆಯ ಒಳಗಿನ ಒಂದು ಬಿಂದುವಾಗಿ, ತನ್ನೊಳಗೆ ಆ ವಸುಧೆಯನ್ನೇ ಅರಗಿಸಿಕೊಂಡ 'ಕನ್ನಡ'ದ ಒಂದು ಭವ್ಯ ಪ್ರತಿಮೆಯಾಗಿ ಕಂಗೊಳಿಸುತ್ತದೆ. ಕುವೆಂಪು ಅವರ 'ಅಖಂಡ ಕರ್ನಾಟಕ' ಕವಿತೆ ನೆನಪಾಗುತ್ತದೆ.

"ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!
ಋಷಿಯ ಕಾಂಬ ಕಣ್ಣಿಗೆ!"

ಇಂಥ ಕನ್ನಡಕ್ಕೆ ಅನೇಕ ಶತಮಾನಗಳ ಒಂದು ಸುದೀರ್ಘವಾದ ಚರಿತ್ರೆಯಿದೆ, ಪರಂಪರೆಯಿದೆ, ಇದನ್ನು ಕಟ್ಟಿ ಬೆಳೆಸಿದ ಒಂದು ಹಿರಿಯ ಸಮುದಾಯವಿದೆ. ಈ ಸಮುದಾಯದ ಮನಸ್ಸು ಕಂಡ ಕನಸುಗಳು, ಆದರ್ಶಗಳು, ಚಿಂತನೆಗಳು, ಸವಾಲುಗಳು ಸಾಧನೆಗಳು ಇವೆಲ್ಲವುಗಳಿಂದ ರೂಪಿತವಾದ ಒಂದು ಮನೋಧರ್ಮ, ಒಂದು ಜೀವನಕ್ರಮವಿದೆ. ಅದನ್ನೇ ಕನ್ನಡ ಸಂಸ್ಕೃತಿ ಎಂದು ನಾವು ಕರೆಯುವದು.

ಕರ್ನಾಟಕ ತನ್ನ ನೆರೆಹೊರೆಯ ರಾಜ್ಯಗಳ ಭಾಷಾ ಸಾಹಿತ್ಯ ಹಾಗೂ ಸಾಹಿತಿಗಳ ಜೊತೆಗೆ ಮಧುರ ಬಾಂಧವ್ಯವನ್ನು ಹೊಂದಿದೆ. ಅದರಲ್ಲೂ ಕನ್ನಡ ಮತ್ತು ಮರಾಠಿ ಭಾಷೆಗಳ ನಡುವೆ ಸಾಂಸ್ಕೃತಿಕ ಕೊಳು-ಕೊಡೆ ಅವ್ಯಾಹತವಾಗಿ ನಡೆದುಬಂದಿದೆ. ಈ ಎರಡೂ ರಾಜ್ಯಗಳ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ಪ್ರಯತ್ನಗಳು ಈಚೆಗೆ ಮುಂದುವರಿದಿರುವುದು ಸಂತೋಷದ ಸಂಗತಿ. ಪ್ರಖ್ಯಾತ ಮರಾಠಿ ಸಾಹಿತಿ, ದಿವಂಗತ ಪು.ಲ. ದೇಶಪಾಂಡೆಯವರನ್ನು ಮುಂಬೈ ಕನ್ನಡಿಗರು ಸನ್ಮಾನಿಸಿದಾಗ ಪು.ಲ. ಹೇಳಿದರು: "ನನಗೆ ಕನ್ನಡ ಓದಲು ಮತ್ತು ಬರೆಯಲು ಬರದಿದ್ದರೂ ಎರಡು ವರ್ಷ ಬೆಳಗಾವಿಯಲ್ಲಿದ್ದುದರಿಂದ ಕನ್ನಡಭಾಷೆಯ ರುಚಿಯನ್ನು ಬಲ್ಲೆ. "ಏನ್ರೀ, ಹ್ಯಾಗಿದ್ದೀರಿ" ಇಂಥ ಸಾದಾ ಪ್ರಶ್ನೆಗಳನ್ನು ಕೇಳುವಾಗ ಕೂಡ, ಕನ್ನಡ ಭಾಷೆಯಲ್ಲಿ ವ್ಯಕ್ತವಾಗುವ

ಆತ್ಮೀಯತೆ ಮರಾಠಿಗಿಂತಲೂ ಉತ್ಕಟವಾಗಿದೆ" ಎಂದರು. ಮುಂದುವರಿದು ಅವರು ಹೇಳಿದರು: "ಕನ್ನಡಿಗರು ನಮಗೆ ಅನೇಕವನ್ನು ಕೊಟ್ಟಿದ್ದಾರೆ. ಅವರು ಮರಾಠಿಗೆ 'ಅಣ್ಣಾ' 'ಅಕ್ಕಾ' 'ಅಪ್ಪಾ' ಮೊದಲಾದ ಪದಗಳನ್ನು ಕೊಟ್ಟಿದ್ದಾರೆ – ಇದಕ್ಕಿಂತ ಹೆಚ್ಚಿನದು ಇನ್ನೇನು ಬೇಕು?" ಎಂದಿದ್ದಾರೆ. ರಾಜಕೀಯ ಮನುಷ್ಯರನ್ನು ಒಡೆಯಲು ಪ್ರಯತ್ನಿಸಿದರೆ ಸಾಹಿತ್ಯ ಸಂಸ್ಕೃತಿ ಬೆಸೆಯುವ ಕೆಲಸ ಮಾಡುತ್ತದೆ.

ಕನ್ನಡಿಗರು ಎಂದೂ ಭಾಷಾಂಧರಾಗಿರಲಿಲ್ಲ. ಇಂದೂ ಆಗಬೇಕಾಗಿಲ್ಲ. ೧೧ನೇ ಶತಮಾನದ ೨ನೇ ನಾಗವರ್ಮ 'ಸರ್ವಭಾಷಾ ಸರಸ್ವತಿ' ಎಂಬ ಪರಿಕಲ್ಪನೆಯನ್ನು ಜಗತ್ತಿಗೇ ಕೊಟ್ಟಿದ್ದಾನೆ. ಎಲ್ಲ ಭಾಷೆಗಳು ಸರಸ್ವತಿಯ ಅಂಗಗಳು, ಬೆಳಕಿನ ಬಾಹುಗಳು. ಅಲ್ಲಿ ತಾರತಮ್ಯದ ಪ್ರಸಕ್ತಿಯೇ ಇಲ್ಲ. ಆದರೂ ಅಗ್ರಪೂಜೆ ಸಲ್ಲಬೇಕಾದದ್ದು ನಮ್ಮ ತಾಯ್ನುಡಿಗೆ. ಕನ್ನಡವನ್ನು ಪೂರ್ತಿ ತೊರೆದುಬಿಟ್ಟು 'ಇಂಗ್ಲಿಷ್ ಒಂದೇ ನಮ್ಮ ಪರಮದೈವ' ಎಂದರೆ ಮಾತ್ರ ದುರಂತ ತಪ್ಪಿದ್ದಲ್ಲ. ದೇಶಭಾಷೆಗಳ ವಿಷಯದಲ್ಲಿ ಗಾಂಧೀಜಿ ಆಡಿದ ಒಂದು ಮಾತನ್ನು ಇಲ್ಲಿ ಸ್ಮರಿಸಬಹುದು. "ಯಾರು ಎಷ್ಟೇ ಪರೋಪಕಾರ ಬುದ್ಧಿಯಿಂದ, ಯಾವ ತರಹದ ಸ್ವರಾಜ್ಯವನ್ನೇ ಕೊಡಲಿ, ನಮ್ಮ ತಾಯಂದಿರಾಡುವ ಭಾಷೆಯ ವಿಷಯದಲ್ಲಿ ನಮ್ಮ ಮನದಲ್ಲಿ ಆದರಬುದ್ಧಿ ಇಲ್ಲದಿದ್ದರೆ, ನಾವು ನಿಜವಾದ ಸ್ವರಾಜ್ಯ ಭೋಗಿಗಳಾಗಲಾರೆವು." ಕನ್ನಡ ಪ್ರಜ್ಞೆ ತನ್ನ ಸ್ವೋಪಜ್ಞತೆಯಿಂದ ಇಂದು ವಿಶ್ವಪ್ರಜ್ಞೆಯಾಗಿ, ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವಹಿಸಿ, ಸಮನ್ವಯಗೊಂಡು ಸಾಕ್ಷಾತ್ಕಾರಗೊಳ್ಳಬೇಕಾದ ಅಗತ್ಯವಿದೆ. ಈ ಸಮ್ಮೇಳನ ಕೊಡಬೇಕಾದ ಸಂದೇಶಗಳಲ್ಲಿ ಇದು ಬಹಳ ಮುಖ್ಯವಾದದ್ದು ಎಂದು ನನ್ನ ಅನಿಸಿಕೆ.

ಕರ್ನಾಟಕದಲ್ಲಿ ವಾಸಿಸುವವರಿಗೆ ಕನ್ನಡ ಅವರ ಬದುಕಿನ ಅಂಗವಾದರೆ, ವಿದೇಶಗಳಲ್ಲಿ ವಾಸಿಸುವ ಕನ್ನಡಿಗರಿಗೆ ಭಾವನಾತ್ಮಕವಾಗಿ ತಮ್ಮ ಬೇರುಗಳೊಡನೆ ಸಂಪರ್ಕವಿಟ್ಟುಕೊಳ್ಳುವದು ಅನಿವಾರ್ಯವಾಗುತ್ತದೆ. ಅನಿವಾಸಿ ಕನ್ನಡಿಗರಲ್ಲಿ ಅನೇಕರು ತಾವಿರುವ ಸ್ಥಳದಲ್ಲಿ ಹೋರಾಟದ ಬದುಕನ್ನು ನಡೆಸಿದವರೇ. ಏಕಾಂಗಿತನವನ್ನು ನುಂಗಿಕೊಂಡು ಶ್ರಮಪಟ್ಟು ದುಡಿದು ಮುಂದೆ ಬಂದವರು, ಅದ್ಭುತವಾದುದನ್ನು ಸಾಧಿಸಿ ತೋರಿಸಿ ಕನ್ನಡದ ಕೀರ್ತಿಯನ್ನು ಹೆಚ್ಚಿಸಿದವರು. ಎಲ್ಲಕ್ಕೂ ಮಿಗಿಲಾಗಿ ತಾಯ್ನುಡಿಯ ಅಭಿಮಾನವನ್ನು ಪ್ರೀತಿಯನ್ನು ಕಾಪಾಡಿಕೊಂಡು, ವಿದೇಶದ ವಿವಿಧೆಡೆಗಳಲ್ಲಿ ಕನ್ನಡದ ದೀಪ ಹಚ್ಚಿ ನಂದಾದೀಪವಾಗಿ ಬೆಳಗುವಂತೆ ಮಾಡಿದ ಅವರಿಗೆ ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಕಡಿಮೆಯೆ.

ಈ ಸಮ್ಮೇಳನ ಒಂದು ದೃಷ್ಟಿಯಿಂದ ಕನ್ನಡಿಯೂ ಹೌದು, ಕೈದೀವಿಗೆಯೂ ಹೌದು. ಕನ್ನಡಿಯಲ್ಲಿ ನಮ್ಮ ನಮ್ಮ ಮುಖಗಳನ್ನು ಕಂಡು ನಮ್ಮ ಸ್ಥಿತಿ–ಗತಿಯನ್ನರಿತರೆ, ಕೈದೀವಿಗೆ ನಮಗೆ ಮುಂದಿನ ದಾರಿಯನ್ನು ತೋರಿಸುತ್ತದೆ. ಈ ಎರಡೂ ಕೆಲಸಗಳನ್ನು ಪ್ರಸ್ತುತ ಸಮ್ಮೇಳನ ಸಮರ್ಥವಾಗಿ ಈಡೇರಿಸುವಂತಾಗಲಿ ಎಂದು ಹಾರೈಸುತ್ತೇನೆ.

(೧೧–೩–೨೦೧೧)

ಗೀತೋತ್ಸವ ೨೦೧೨ : ಉದ್ಘಾಟನೆ

೯ನೇ ಸುಗಮ ಸಂಗೀತ ಸಮ್ಮೇಳನದ ಅಧ್ಯಕ್ಷರಾದ ಉಭಯಗಾನ ವಿದುಷಿ ಡಾ. ಶ್ಯಾಮಲಾ ಜಿ. ಭಾವೆಯವರೆ, ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಶ್ಯಾಮಲಾ ಜಾಗೀರದಾರ ಅವರೆ, ಸ್ವಾಗತಾಧ್ಯಕ್ಷರೂ, ಜಿಲ್ಲಾಧಿಕಾರಿಗಳೂ ಆದ ಮಾನ್ಯಶ್ರೀ ಎಸ್.ಎಸ್. ಪಟ್ಟಣಶೆಟ್ಟಿಯವರೆ, ಕರ್ನಾಟಕ ಸುಗಮಸಂಗೀತ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಅವರೆ, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಕಿಕ್ಕೇರಿ ಕೃಷ್ಣಮೂರ್ತಿಯವರೆ, ಕವಿಮಿತ್ರ ಚಂದ್ರಶೇಖರ ಪಾಟೀಲ, ಶ್ರೇಷ್ಠ ಗಾಯಕ ಶಿವಮೊಗ್ಗ ಸುಬ್ಬಣ್ಣ ಹಾಗೂ ವೇದಿಕೆಯ ಮೇಲಿರುವ ಎಲ್ಲಾ ಗಣ್ಯರೆ, ಸಮ್ಮೇಳನದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿರುವ ಎಲ್ಲ ಕವಿ, ಕಲಾವಿದ, ಲೇಖಕ ಮಿತ್ರರೆ, ಸಹೃದಯರಾದ ಸಭಿಕರೆ, ಎಲ್ಲರಿಗೂ ನಮಸ್ಕಾರ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಡಾ. ಜಿ.ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಅದ್ದೂರಿಯಾಗಿ ನೆರವೇರಿದ ನಂತರ – ಬಹುಶಃ ಅಷ್ಟೇ ವೈಭವಯುತವಾಗಿ, ಅದೇ ಗುಣಮಟ್ಟದಲ್ಲಿ ಅದೇ ಉತ್ಸಾಹದಿಂದ, ಅರ್ಥಪೂರ್ಣವಾಗಿ ನೆರವೇರುತ್ತಿರುವ ಮತ್ತೊಂದು ಸಮ್ಮೇಳನವೆಂದರೆ ಈ ೯ನೇ ಸುಗಮ ಸಂಗೀತ ಸಮ್ಮೇಳನ ವೆಂದರೆ ತಪ್ಪಾಗಲಾರದು.

ದೊಡ್ಡವರದೆಲ್ಲವೂ ದೊಡ್ಡದೆನ್ನುವ ಮಾತು ಸುಳ್ಳಲ್ಲ. 'ಶ್ರೀಯುತನೋಳ್ ಉದಾರತೆ' ಕಾಣಬೇಕೆಂದರೆ ನೀವು ದಾವಣಗೆರೆಗೆ ಬರಬೇಕು – ನೂರು, ಸಾವಿರ ಕೇಳಿದರೆ ತಮಗೆ ಅವಮಾನ ಅಂತ ತಿಳಿದುಕೊಳ್ಳುವ ಜನ

ಇಲ್ಲಿದ್ದಾರೆ. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಮಹಾಪೋಷಕರಾಗಿರುವ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನೊಡನೆ ಎಲ್ಲ ರೀತಿಯಿಂದಲೂ ಸಹಕರಿಸಿ, ೨೦೧೨ರ ಗೀತೋತ್ಸವವನ್ನು ಇಲ್ಲಿ ಹಮ್ಮಿಕೊಂಡಿರುವ ದಾವಣಗೆರೆಯ ಸ್ವಾಗತ ಸಮಿತಿಗೆ ವೈಯಕ್ತಿಕವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿಗೂ ನನಗೂ ಬಿಡಲಾರದ ನಂಟು. ನನಗೊಬ್ಬನಿಗೇ ಅಂತಲ್ಲ. ಇಲ್ಲಿ ನೆರೆದಿರುವ ಎಲ್ಲ ಕವಿ–ಗಮಕಿ–ವಾದಿ–ವಾಗ್ಮಿ–ರಂಗಕರ್ಮಿ – ಸಮಾನಧರ್ಮಿಗಳು – ಎಲ್ಲರೂ ಮುದ್ದುಕೃಷ್ಣ ಅವರ ಕೊಳಲಿನ ಕರೆಗೆ ಓಗೊಡುವುದು ಅನಿವಾರ್ಯ. ಎಲ್ಲಾ ಮೊದಲೇ ಯೋಚಿಸಿ, ನಿರ್ಧರಿಸಿ ಆಮೇಲೆ ಅವರು ದೂರವಾಣಿಯಲ್ಲಿ ನಮಗೆ ಆದೇಶ ಕೊಟ್ಟುಬಿಡ್ತಾರೆ. 'ಸ್ವಾಮಿ ನೀವು ಉದ್ಘಾಟನೆ ಮಾಡಬೇಕು. ತಪ್ಪಿಸುವಂತಿಲ್ಲ. ಬರಲೇಬೇಕು' ಅವರ ಪ್ರೀತಿ, ವಿಶ್ವಾಸ, ಆದರ, ಗೌರವ, ಅಭಿಮಾನ, ಇಷ್ಟು ದೊಡ್ಡದು. ಸಾಮಾನ್ಯವಾಗಿ ಇದುವರೆಗೂ ನಡೆದ ಎಲ್ಲ ಗೀತೋತ್ಸವಗಳಲ್ಲಿಯೂ ನಾನು ಪಾಲ್ಗೊಂಡಿದ್ದೇನೆ.

ಅವರ ಪ್ರೀತಿಯ ಕರೆಯನ್ನು ಶಿರಸಾವಹಿಸಿ ನಾನು ತಮ್ಮೆದುರು ನಿಂತಿದ್ದೇನೆ. ಇದರ ಉದ್ಘಾಟನೆ ಮಾಡಿದವನು ನಾನೊಬ್ಬನೆ ಅಲ್ಲ. ವೇದಿಕೆಯ ಮೇಲಿರುವ ನಾವೆಲ್ಲರೂ, ನೀವೂ ಕೂಡ. ಸುಗಮ ಸಂಗೀತದ ಮೂಲಕ, ಕನ್ನಡ ಕಾವ್ಯದ ಬಗ್ಗೆ ಜನತೆಯಲ್ಲಿ ಅಪಾರವಾದ ಆಕರ್ಷಣೆಯನ್ನು ಅಭಿರುಚಿಯನ್ನು ಬೆಳೆಸಿ – ಕನ್ನಡ ಕಾವ್ಯದ ಆರೋಗ್ಯವನ್ನು ಕಾಪಾಡಿಕೊಂಡು ಅದನ್ನು ಸದೃಢವಾಗಿ ಸುಗಮವಾಗಿ ಎಲ್ಲರಿಗೂ ತಲುಪಿಸಲು ಪ್ರಯತ್ನ ನಡೆಸುತ್ತಿರುವ, ಪ್ರತಿಭಾವಂತ ಪರಿಚಾರಕರಲ್ಲಿ ವೈ.ಕೆ. ಮುದ್ದುಕೃಷ್ಣ ಅವರೂ ಒಬ್ಬರು ಮತ್ತು ಪ್ರಮುಖರು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸಮಾನಾಂತರದಲ್ಲಿ, ಕಾವ್ಯದ ಯೋಗಕ್ಷೇಮವನ್ನೇ ಗುರಿಯಾಗಿಟ್ಟುಕೊಂಡಿರುವ, ಅದರ ಪ್ರಚಾರ, ಪ್ರಸಾರ, ಪ್ರಭಾವ ಮೂರನ್ನೂ ಏಕತ್ರವಾಗಿ ಸಾಧ್ಯಗೊಳಿಸಲು ಅವಿರತ ಪ್ರಯತ್ನ ನಡೆಸುತ್ತಿರುವ ಸಂಸ್ಥೆಯೆಂದರೆ ಈ ಪರಿಷತ್ತು. ನಾಡಿನಲ್ಲಿ ಈಗಾಗಲೆ ಈ ಕಾರ್ಯದಲ್ಲಿ ತೊಡಗಿರುವ ಸಂಘ, ಸಂಸ್ಥೆ, ಸಂಘಟನೆ ಯಾವುದನ್ನೂ ನಿರಾಕರಿಸದೆ, ಎಲ್ಲವನ್ನೂ ಒಳಗೊಂಡು, ಎಲ್ಲರ ಸಹಕಾರವನ್ನೂ ಪಡೆದು, ತನ್ನ ಧ್ಯೇಯವನ್ನು ಗಟ್ಟಿಗೊಳಿಸುತ್ತಾ ಬಂದಿದೆ.

ಸುಗಮ ಸಂಗೀತಕ್ಕೆ ಮೈಸೂರು ದಸರಾ ಅರಮನೆಯ ದರ್ಬಾರಿನಲ್ಲಿ ಕಾರ್ಯಕ್ರಮ ನೀಡುವ ಸೌಭಾಗ್ಯವನ್ನು ಕಲ್ಪಿಸಿದವರು ಇದೇ ಮುದ್ದುಕೃಷ್ಣ ಅವರು. ಅಶ್ವತ್ಥರ ಜೊತೆ ಸ್ಥಾಪಿಸಿದ ಧ್ವನಿ ಸಂಸ್ಥೆಯ ರೂವಾರಿಗಳಲ್ಲಿ ಪ್ರಮುಖರಾಗಿದ್ದವರು. ಸ್ವತಃ ಸಂಸ್ಕೃತಿ ಇಲಾಖೆಯಲ್ಲಿ ಸುಗಮ ಸಂಗೀತಕ್ಕೆ ಸ್ಥಾನಮಾನ ಒದಗಿಸಿದವರು. ಸಾಹಿತ್ಯ ಸಮ್ಮೇಳನಗಳಲ್ಲಿ, ಮನರಂಜನಾ ಕಾರ್ಯಕ್ರಮಗಳಲ್ಲಿ ಸೇರಿಹೋಗಿದ್ದ ಭಾವಗೀತಗಾಯನವನ್ನು 'ಗೀತ

ಸಂಗೀತ ಗೋಷ್ಠಿ'ಯಾಗಿ ಪರಿವರ್ತಿಸಿ, ಕವಿಗಳಿಗೆ ಇರುವ ಮನ್ನಣೆಯನ್ನು ಸುಗಮ ಸಂಗೀತ ಗಾಯಕರಿಗೂ ದೊರೆಯುವಂತೆ ಅವರು ಮಾಡಿದರು.

ಗೊ.ರು. ಚನ್ನಬಸಪ್ಪ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಅವರ ಆಸ್ಥೆಯಿಂದ ಸಾಹಿತ್ಯ ಸಮ್ಮೇಳನದಲ್ಲಿ ಸುಗಮ ಸಂಗೀತ ಸ್ಥಾನ ಪಡೆಯಿತು.ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ, ಸಾಹಿತ್ಯ ಮತ್ತು ಸಂಗೀತದ ನಿಕಟ ಸಂಬಂಧದ ಬಗ್ಗೆ ಮೊಟ್ಟ ಮೊದಲು ಪ್ರಸ್ತಾಪಿಸಿದವರೆಂದರೆ ಬಹುಶಃ ಪ್ರೊ. ಶಿ.ಶಿ. ಬಸವನಾಳರೇ ಎಂದು ತೋರುತ್ತದೆ. ೧೯೪೪ರಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಿದ್ದರು. ಧಾರವಾಡದಲ್ಲಿ ಅವರ ವಿದ್ವತ್ತು, ಭಾಷಣ ಮತ್ತು ಬರವಣಿಗೆಯ ಶೈಲಿ ಎಷ್ಟು ಪ್ರಭಾವಶಾಲಿಯಾಗಿತ್ತು ಎಂದರೆ, ಧಾರವಾಡದಲ್ಲಿ ಇನ್ನೂ ಹೈಸ್ಕೂಲ್ ವಿದ್ಯಾರ್ಥಿ ಯಾಗಿದ್ದ ನಾನು ಹೇಗೋ ಪ್ರಯತ್ನಪಟ್ಟು ಆ ಸಮ್ಮೇಳನ ನೋಡಲು ಹೋಗಿದ್ದೆ. ಅವರ ಅಧ್ಯಕ್ಷ ಭಾಷಣದ ಪ್ರತಿಯನ್ನು ೬೮ ವರ್ಷಗಳ ನಂತರವೂ ನಾನು ಕಾದಿಟ್ಟುಕೊಂಡಿದ್ದೇನೆ.

ಸಾಹಿತ್ಯ ಮತ್ತು ಸಂಗೀತಕ್ಕೆ ಸಂಬಂಧಪಟ್ಟಂತೆ ೬೮ ವರ್ಷಗಳ ಹಿಂದೆಯೇ ಅವರು ಆಡಿದ ಕೆಲವು ಮಾತುಗಳು ಹೀಗಿವೆ: "ಸಾಹಿತ್ಯಕ್ಕೂ ಸಂಗೀತಕ್ಕೂ ಮೊದಲಿನಿಂದಲೂ ನಿಕಟ ಸಂಬಂಧವಿರುವುದು ಎಲ್ಲರಿಗೂ ತಿಳಿದ ಮಾತು. ಅದರಲ್ಲಿಯೂ ಇತ್ತೀಚೆಗೆ, ವಚನ ಪ್ರಚಾರ ಹೆಚ್ಚಾಗುತ್ತಿರುವುದರಿಂದ, ಕನ್ನಡ ನಾಡಿನಲ್ಲಿ ಜರುಗುವ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ವಚನಗಾಯನದಿಂದಲೇ ಆದ್ಯಂತದ ಮಂಗಲವಾಗುತ್ತಿರು ವುದರಿಂದಲೂ ನಮ್ಮ ಸಾಹಿತ್ಯದಲ್ಲಿ ಹಾಡುಗಬ್ಬಗಳಿಗೆ ಮಹತ್ವದ ಸ್ಥಾನವಿರುವುದ ರಿಂದಲೂ ಜನಪದ ಸಾಹಿತ್ಯವೆಲ್ಲ ಹೆಚ್ಚಾಗಿ ಹಾಡಿನ ರೂಪದಲ್ಲೆ ಇರುವುದರಿಂದಲೂ ಸಂಗೀತ ಮತ್ತು ಸಾಹಿತ್ಯಗಳ ಸಂಬಂಧ ಇನ್ನೂ ಹೆಚ್ಚು ನಿಕಟವಾಗಲಾರಂಭಿಸಿದೆ. ಇದೂ ಅಲ್ಲದೆ ನಮ್ಮ ದೇಶದಲ್ಲಿ ಸಂಗೀತ ಗೋಷ್ಠಿಗಳು ಪ್ರತ್ಯೇಕ ನಡೆಯುತ್ತಿಲ್ಲವಾದುದರಿಂದ, ಇನ್ನು ಮುಂದೆ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಾಹಿತ್ಯ-ಸಂಗೀತ ಗೋಷ್ಠಿಗಳು ಜರುಗುವುದು ವಿಹಿತವೆನಿಸುತ್ತದೆ."

ಮುಂದೆ ಹತ್ತು ವರ್ಷಗಳ ನಂತರ ಅಂದರೆ ೧೯೫೪ರಲ್ಲಿ ಡಿ.ವಿ.ಜಿ. ಒಂದು ಕಡೆ ಬರೆದರು: "ನಮ್ಮ ದೇಶದಲ್ಲಿ ಭಾಷೆ ಎಷ್ಟು ಹಳೆಯದೊ ಹಾಡೂ ಅಷ್ಟೇ ಹಳೆಯದು, ವೇದಕವಿಗಳೇ ಗಾನವಿಧಿಗೆ ವಿಧೇಯರಾಗಿದ್ದರು. ಕನ್ನಡ ಕವಿಗಳಲ್ಲಿ ಪಂಪ, ರನ್ನರ ಕಾವ್ಯಗಳಲ್ಲಿ ಸಂಗೀತದ ಪ್ರಸಂಗಗಳು ಎಷ್ಟೋ ಇವೆ. ಪುರಂದರದಾಸರ ಸಮಕಾಲೀನನಾದ ರತ್ನಾಕರವರ್ಣಿ ತನ್ನ ಭರತೇಶ ವೈಭವದಲ್ಲಿ 'ಶ್ರೀರಾಗ' 'ಮಾಧವಶ್ರೀ' 'ಭೂಪಾಳಿ' 'ಧನ್ಯಾಸಿ' 'ಮಲಹರಿ' 'ದೇಶಾಕ್ಷಿ' 'ಮಂಗಳ ಕೈಶಿಕಿ' ಮೊದಲಾದ ರಾಗಗಳನ್ನೂ, ಅನೇಕ ವಾದ್ಯಗಳನ್ನೂ ಪ್ರಶಂಸೆ ಮಾಡಿದ್ದಾನೆ. ವೀಣಾಸಂಧಿ ಎಂಬುದು ಅಲ್ಲಿ ಒಂದು ಅಧ್ಯಾಯ."

ಅಷ್ಟೇಕೆ, ಕನ್ನಡ ಕಾವ್ಯಗಳು ಮೊದಲಿನಿಂದಲೂ ಗೇಯಪ್ರಬಂಧಗಳಾಗಿಯೇ ಬಂದಿವೆ. ಅವುಗಳಿಗೆ ಹಾಡುಗಬ್ಬಗಳೆಂದೇ ಹೆಸರು. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ,

ಸಾಂಗತ್ಯ ಈ ನಾನಾ ಛಂದಸ್ಸುಗಳು ಹಾಡಿಗಾಗಿಯೇ ಹುಟ್ಟಿದವು. ರಾಗದ ವಾತಾವರಣ ವಿಲ್ಲದಿದ್ದಲ್ಲಿ ಕಾವ್ಯದಿಂದ ಸುಲಭವಾಗಿ ರಸಾನುಭವವಾಗದು. ಆದ್ದರಿಂದಲೇ ಸಂಗೀತ ಸಾಹಿತ್ಯಗಳನ್ನು ಸರಸ್ವತಿಯು ತನ್ನ ಮಕ್ಕಳಿಗಾಗಿ ತಳೆದಿರುವ ಜೋಡಿ ಹಾಲು ಬುಗ್ಗೆಗಳೆಂದು ಪೂರ್ವಿಕರು ವರ್ಣಿಸಿದ್ದಾರೆ.

ಕಾವ್ಯವು ಛಂದಸ್ಸಿನ ತರಂಗಧೋರಣೆಯನ್ನು, ಭಾವಾನುಗುಣವಾದ ರಾಗವನ್ನು, ಭಾವಸಂಜ್ಞೆಯಾದ ಅಂಗಾಭಿನಯವನ್ನೂ ಅಪೇಕ್ಷಿಸುತ್ತದೆ. ಕಾವ್ಯ ಕರ್ಣಾನಂದ ಮಾತ್ರವಲ್ಲ. ಅದು ಆತ್ಮಾನಂದ, ಸತ್ಕೃತಿ ಯಾವುದು ಎಂಬುದನ್ನು ಹರಿಹರ ಹೀಗೆ ಹೇಳುತ್ತಾನೆ: "ಕೇಳಲೊಡಂ ಕಿವಿ ಸವಿಯೊಳಗಾಳದೊಡಂ ತನ್ಮನಂ ಮುಳುಂಗದೊಡಂ ಸೌಖ್ಯಾಲಂಬಿಯೆನಿಪ ಚಿತ್ತಂ ಲೀಲೆಯೊಳಗವಗಾಹಮಿರದೊಡದು ಸತ್ಕೃತಿಯೆ."

ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಅದರ ಸಾಹಿತ್ಯದಲ್ಲಿ, ಕಾವ್ಯದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ವಾಗರ್ಥಗಳನ್ನು ಶಿವಶಕ್ತಿಯರಂತೆ ಸಮನ್ವಯಗೊಳಿಸಿ ಮನುಷ್ಯ ತನ್ನ ಭಾವನೆಗಳನ್ನು, ಅನುಭವಗಳನ್ನು, ಆಶೋತ್ತರಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸಿಕೊಂಡು ಬಂದದ್ದು ಭಾಷೆಯ ಮೂಲಕ. ಆ ಭಾಷೆಯನ್ನು ಅತ್ಯಂತ ಸತ್ವಪೂರ್ಣವಾಗಿ ಸಮರ್ಥವಾಗಿ ಬಳಸಿಕೊಳ್ಳುವುದು ಕಾವ್ಯದ ಮೂಲಕ. ಆದ್ದರಿಂದಲೇ ಕನ್ನಡದ ಮಹತ್ವದ ಕಾವ್ಯಗಳೆಲ್ಲ ಜನಜೀವನದ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತಾ ಬಂದಿವೆ.

ಜನಮನದ ಸದಭಿರುಚಿಯನ್ನು ಬೆಳೆಸಿಕೊಂಡು ಸಂಸ್ಕೃತಿಪ್ರಸಾರದ ಮಾಧ್ಯಮವಾಗಿ, ತನ್ನದೇ ರೀತಿಯಲ್ಲಿ ಸಾಗಿರುವ ಸುಗಮಸಂಗೀತ, ತನ್ನ ಸಾಂಸ್ಕೃತಿಕ ಜವಾಬ್ದಾರಿಯನ್ನು ಮರೆಯಕೂಡದು. ಅಬ್ಬರದಿಂದ ಅದು ಸಿನಿಮಾ ಜಾಡಿಗೆ ಜಾರದಂತೆ ನೋಡಿ ಕೊಳ್ಳುವುದು ಆವಶ್ಯಕ. ಕೇವಲ ಹಣದ ಬಲದಿಂದ ಕಲೆಯನ್ನು ನಿರ್ಲಕ್ಷಿಸಿ ಕ್ಯಾಸೆಟ್ ಪ್ರಪಂಚಕ್ಕೆ ಧಾಳಿಯಾಗುತ್ತಿರುವುದನ್ನು ತಡೆಗಟ್ಟಬೇಕು.

ಯೋಗ್ಯತೆಗೆ ತಕ್ಕ ಮನ್ನಣೆ ನೀಡಿ ಹೊಸ ಹೊಸ ಕಲಾವಿದರನ್ನು ಬೆಳಕಿಗೆ ತಂದು, ಕೇವಲ ನವುರಾದ ಭಾವವುಳ್ಳ ಭಾವಗೀತೆಗಳನ್ನು ಮಾತ್ರ ಆಯ್ಕೆ ಮಾಡದೆ ಸಾಮಾಜಿಕ ಕಾಳಜಿ ಹಾಗೂ ವೈಚಾರಿಕ ಜಾಗೃತಿಯ ಅಂಶಗಳುಳ್ಳ ಕವನಗಳನ್ನು ಸುಗಮ ಸಂಗೀತಕ್ಕೆ ಅಳವಡಿಸುವತ್ತ ಗಾಯಕರೂ, ಸಂಗೀತ ನಿರ್ದೇಶಕರೂ ಲಕ್ಷ್ಯವಹಿಸಬೇಕು.

ಕನ್ನಡ ನಾಡಿನ ಸಂಸ್ಕೃತಿಯ ಸುಗಂಧವನ್ನು ಹರಡುವ ಗೀತಕಾವ್ಯಗಳು ಸುಗಮ ಸಂಗೀತದಿಂದ ಜನಸಾಮಾನ್ಯಕ್ಕೆ ಹತ್ತಿರವಾಗುತ್ತಿರುವುದು ನಿಜಕ್ಕೂ ಆಶಾದಾಯಕ ವಾಗಿದೆ. ಸುಗಮ ಸಂಗೀತ ರಸಿಕರ ಸಂಖ್ಯೆ ಹೆಚ್ಚುತ್ತಿದ್ದು ಮೂರು ನಾಲ್ಕು ಗಂಟೆಗಳ ವರೆಗೂ ಕುಳಿತು ತಮ್ಮ ಮೆಚ್ಚಿನ ಗಾಯಕರ ಹಾಗೂ ಕವಿಗಳ ಹಾಡುಗಳನ್ನು ಕೇಳಿ ಸುಖಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಇದರಿಂದ ವಾಣಿಜ್ಯ ಸಂಸ್ಕೃತಿಯನ್ನು ತಡೆಗಟ್ಟುವ

ಅಲೆಯೊಂದು ಕಾಣಿಸಿಕೊಳ್ಳುತ್ತಿದ್ದು, ಹೃದಯದಾರಿದ್ರ್ಯಕ್ಕೆ ತಕ್ಕ ಔಷಧವನ್ನು ಸುಗಮ ಸಂಗೀತ ಒದಗಿಸುತ್ತಿದೆ ಎಂದರೆ ತಪ್ಪಾಗದು.

'ಸಂಗೀತ' ಎಂಬ ಮಾತಿನ ಬದಲು 'ಹಾಡುಗಾರಿಕೆ' ಎಂಬ ಮಾತನ್ನು ಬಳಸಲು ಜಿ.ಎಸ್.ಎಸ್. ಹೆಚ್ಚು ಇಷ್ಟಪಡುತ್ತಾರೆ ಮತ್ತು ಅದು ಹೆಚ್ಚು ಸಮರ್ಪಕವಾಗಿದೆ ಎಂದು ನನ್ನ ಭಾವನೆ. ಯಾಕೆಂದರೆ 'ಸಂಗೀತ' ಎಷ್ಟಾದರೂ ತನಗೆ ತಾನೇ ಒಂದು ಶಾಸ್ತ್ರ ಪ್ರಪಂಚಕ್ಕೆ ಸೇರಿದ ವಿಷಯ. ಅದಕ್ಕೆ ಅದರದೇ ಆದ ಸಂಪ್ರದಾಯಗಳಿವೆ. ಯಾವುದನ್ನು ನಾವು 'ಸಾಹಿತ್ಯ' ಎಂದು ಕರೆಯುತ್ತೇವೋ ಅದಕ್ಕೆ ಅಂತಹ ಪ್ರಾಧಾನ್ಯತೆ ಅಲ್ಲಿ ಇಲ್ಲ.

ಹಾಡುಗಾರಿಕೆ ಎನ್ನುವುದು 'ಸಂಗೀತ'ದಂತೆ ಶಾಸ್ತ್ರನಿಷ್ಠವಲ್ಲ. ಅದು ಕಾವ್ಯದ ಅರ್ಥಭಾವಗಳನ್ನು ಸಂವಹನಗೊಳಿಸುವ ಒಂದು ಸುಶ್ರಾವ್ಯವಾದ ವಿಧಾನ. ಅಕ್ಷರಸ್ಥ ವಿದ್ಯಾವಂತ ವರ್ಗದಂತೆ, ಅನಕ್ಷರಸ್ಥ ಬಹುಜನ ಸಮುದಾಯವನ್ನು ಹಾಡುಗಾರಿಕೆ ಯಿಂದ ಹಿಡಿದಿಟ್ಟರೆ ಕಾವ್ಯೋದ್ದೇಶ ಸಫಲವಾದಂತೆ.

ಎಲ್ಲ ಬಗೆಯ ಕಾವ್ಯರೂಪಗಳ ಮೂಲ ಮಾತೃಕೆ ಭಾವಗೀತೆ. ಗಾತ್ರ ಕಿರಿದಾಗಿರ ಬಹುದು. ಆದರೆ ಅದರೊಳಗಿನ ಭಾವಜಗತ್ತು ಹಿರಿದಾದದ್ದು, ವಿಸ್ತಾರವಾದದ್ದು. ಇದೊಂದು ಜೀವಂತವಾದ ಕಾವ್ಯಪ್ರಕಾರ. ಕಾವ್ಯರಚನೆ ಒಂದು ಸೃಷ್ಟಿಯಾದರೆ, ಕಾವ್ಯ ಗಾಯನ ಪ್ರತಿಸೃಷ್ಟಿಯ ಪ್ರಕ್ರಿಯೆ. ಸುಗಮ ಸಂಗೀತ ಆಧುನಿಕ ಕಾವ್ಯ ಹುಟ್ಟುಹಾಕಿದ, ಅಪರೂಪದ, ಸಾಹಿತ್ಯನಿಷ್ಠವಾದ ಸಂಗೀತ ಮಾದರಿ.

ಕಾವ್ಯವನ್ನು ಹಾಡಲೇಬಾರದು ಎಂದ ನವ್ಯರ ಆಕ್ಷೇಪಕ್ಕೆ ಯಾವ ಅರ್ಥವೂ ಇಲ್ಲ. ಅವರ ವಿರೋಧಕ್ಕಿರುವ ಕಾರಣಗಳೂ ದುರ್ಬಲವಾದವು. ಅನಿಯತ ಲಯದಲ್ಲಿ ರಚನೆಯಾದ ಕಾವ್ಯವನ್ನು ಓದಿಕೊಳ್ಳಬಹುದು. ಆದರೆ ನಿಯತಲಯದಲ್ಲಿ ರಚನೆಯಾದ ಭಾವಗೀತೆಗಳನ್ನು ಓದಲೂಬಹುದು, ಹಾಡಲೂಬಹುದು. ಆದರೆ ಭಾವಗೀತೆ ಮುಖ್ಯವಾಗಿ ಕಾವ್ಯವಾಗಿರಬೇಕು. ಅದು ಕೇವಲ ಹಾಡಾಗಬಾರದು.

"ಹಾಡುವುದಕ್ಕಾಗಿ ಪ್ರತ್ಯೇಕವಾಗಿ ಕವಿತೆ ಬರೆಯುವುದರಿಂದ ಕಾವ್ಯಗುಣ ಕುಂಠಿತ ವಾಗುತ್ತದೆ" ಎನ್ನುತ್ತಾರೆ ಜಿ.ಎಸ್.ಎಸ್. ಅದು ನಿಜವೂ ಕೂಡ. ಕವಿಗಳಾದ ನಾವು ನಮ್ಮ ಪಾಡಿಗೆ ಕವಿತೆ ಬರೆಯುತ್ತೇವೆ. ಬೇಕಾದರೆ ಗಾಯಕರು ಅದನ್ನು ಹಾಡು ಮಾಡಿಕೊಳ್ಳಲಿ. ಹಾಡುವುದಕ್ಕೆಂದೇ ಕಟ್ಟಿದ ಕವಿತೆಗಳಲ್ಲಿ ಕಾವ್ಯನೈಪುಣ್ಯ ಇಲ್ಲವಾಗುತ್ತದೆ. ಒಟ್ಟಿನಲ್ಲಿ ಸುಗಮ ಸಂಗೀತ, ಆಧುನಿಕ ಕನ್ನಡ ಕಾವ್ಯದ ಒಂದು ಅವಿಭಾಜ್ಯ ಭಾಗ. ಭಾವಗೀತೆಯ ಹೊರತಾಗಿ ಅದಕ್ಕೆ ಪ್ರತ್ಯೇಕ ಅಸ್ತಿತ್ವವಿಲ್ಲ.

ಸುಗಮ ಸಂಗೀತಕ್ಕೆ ಒಂದು ಸ್ವತಂತ್ರ ಶೈಲಿಯಿದೆ. ಒಂದು ಸ್ವತಂತ್ರ ವ್ಯಕ್ತಿತ್ವವಿದೆ. ವಾಚನಕ್ಕೆ ಹತ್ತಿರವಾದ ಸಾಹಿತ್ಯದ ಅರ್ಥ-ಭಾವ-ನಾದಗಳನ್ನು ಹುಡುಕುವ, ಅರ್ಥೈಸುವ ಭಾವಿಸುವ ಅಭಿವ್ಯಕ್ತಿಸುವ ಮೂಲಾಂಶಗಳು ಈ ಶೈಲಿಯಲ್ಲಿವೆ.

ಈ ಸಲದ ಗೀತೋತ್ಸವ ಕಾರ್ಯಕ್ರಮಗಳು ವೈವಿಧ್ಯಪೂರ್ಣವಾಗಿದ್ದು, ಉಪಯುಕ್ತವೂ ಆಗಿವೆ. ಉಳಿದೆಲ್ಲ ಕಾರ್ಯಕ್ರಮಗಳ ಜೊತೆ 'ಕವಿತಾ ವಾಚನ', 'ಕವಿ-ಕಾವ್ಯ-ಗಾಯನ'ದಂಥ ಹೊಸ ಉಪಕ್ರಮಗಳಿವೆ. "ಸುಗಮ ಸಂಗೀತದ ಇತಿಮಿತಿಗಳು-ಹೊಸ ಸಾಧ್ಯತೆಗಳು" ಕುರಿತು ವಿಚಾರಸಂಕಿರಣವಿದೆ. ಎಲ್ಲ ಕಾರ್ಯಕ್ರಮಗಳೂ ಯಶಸ್ವಿಯಾಗಿ ನೆರವೇರಲಿ, ದಾವಣಗೆರೆಯ ಜನಕ್ಕೆ ಈ ಗೀತೋತ್ಸವ ಅಪೂರ್ವವಾದ ಸುಖಾನುಭವವನ್ನು ಒದಗಿಸುವಂತಾಗಲಿ ಎಂದು ಹಾರೈಸಿ, ಮತ್ತೊಮ್ಮೆ ಕರ್ನಾಟಕ ಸುಗಮ ಸಂಗೀತ ಪರಿಷತ್ತಿಗೂ, ಸಹೃದಯ ರಸಿಕ ವೃಂದಕ್ಕೂ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತಿಗೆ ವಿರಾಮ ನೀಡುತ್ತೇನೆ. ನಮಸ್ಕಾರ.

(೧೨-೨-೨೦೧೨)

ಆಲೂರು ವೆಂಕಟರಾಯರು

(೧೩೨ನೆಯ ಜನ್ಮದಿನಾಚರಣೆ)

ಸಮಾರಂಭವನ್ನು ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರೆ, ಸಭಾಧ್ಯಕ್ಷರೂ ಆಲೂರು ವೆಂಕಟರಾವ್ ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಾ. ಶ್ರೀನಿವಾಸ ರಿತ್ತಿಯವರೆ, ಸಹೃದಯ ಸಭಿಕರೆ, ನನ್ನನ್ನು ಮುಖ್ಯ ಅತಿಥಿಯಾಗಿ ಬರಮಾಡಿಕೊಂಡ ಎಲ್ಲರಿಗೂ ನಮಸ್ಕಾರ.

ಕಳೆದ ತಿಂಗಳು ಧಾರವಾಡದ ಇದೇ ಸಭಾಭವನದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣದ ೧೫೦ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಡಾ. ಶ್ರೀನಿವಾಸ ರಿತ್ತಿಯವರನ್ನು ಸತ್ಕರಿಸಿ, ಅಭಿನಂದನ ಗ್ರಂಥವನ್ನು ಸಮರ್ಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಅವರು ಟ್ರಸ್ಟಿನ ಅಧ್ಯಕ್ಷರಾಗಿರುವುದು ನಮಗೆಲ್ಲ ಸಂತೋಷದ ಹಾಗೂ ಹೆಮ್ಮೆಯ ಸಂಗತಿ. ಅವರೊಂದಿಗಿನ ಆತ್ಮೀಯ ಸ್ನೇಹ ಹಾಗೂ ಆಲೂರು ವೆಂಕಟರಾಯರ ಬಗೆಗಿನ ಗೌರವ ಮತ್ತು ಅಭಿಮಾನದಿಂದ ನಾನು ಇವತ್ತು ಮುಖ್ಯ ಅತಿಥಿಯಾಗಿ ಮಾತನಾಡಲು ಒಪ್ಪಿಕೊಂಡಿದ್ದೇನೆ.

ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರ ಜನ್ಮದಿನಾಚರಣೆಯನ್ನು 'ಇತಿಹಾಸಜ್ಞರ ದಿನ'ವಾಗಿ ಆಚರಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಈಗ್ಗೆ ೩೨ ವರ್ಷಗಳ ಹಿಂದೆ (೧೯೮೦) ವೆಂಕಟರಾಯರ ಜನ್ಮ ಶತಮಾನೋತ್ಸವ ಸಮಾರಂಭವನ್ನು ನಾನು ಕಂಡವನು. ಗುರುವರ್ಯ ಪ್ರೊ. ಸ.ಸ. ಮಾಳವಾಡರು ಸಂಪಾದಕರಾಗಿದ್ದ ಸಂಸ್ಮರಣ ಗ್ರಂಥದ ಸಂಪಾದಕ ಮಂಡಲಿಯ ಸದಸ್ಯರಲ್ಲಿ ನಾನೂ ಒಬ್ಬನಾಗಿದ್ದೆ. ಇವತ್ತು ಅಂಥ ಮಹಾನುಭಾವರನ್ನು ಕುರಿತ ಸಾಕ್ಷ್ಯಚಿತ್ರದ

ಸಿ.ಡಿ.ಯನ್ನು ಬಿಡುಗಡೆ ಮಾಡುವ ಅವಕಾಶ ದೊರೆತದ್ದು ನನ್ನ ಭಾಗ್ಯವೆಂದು ನಾನು ಭಾವಿಸಿದ್ದೇನೆ. ೧೯೪೧ರಲ್ಲಿ ಹೈದರಾಬಾದ ಕನ್ನಡಿಗರು ವೆಂಕಟರಾಯರನ್ನು ಸತ್ಕರಿಸಿ 'ಕರ್ನಾಟಕ ಕುಲಪುರೋಹಿತ' ಎಂಬ ಬಿರುದು ನೀಡಿದ್ದು, ಇಂದಿಗೂ ಆ ಬಿರುದು ಅವರ ಹೆಸರಿನ ಅವಿಭಾಜ್ಯ ಅಂಗವಾಗಿರುವುದು ಯೋಗ್ಯವೇ ಆಗಿದೆ. ನಾನು ೧೯೪೧ರಲ್ಲಿ ಹಾಯ್‌ಸ್ಕೂಲ್ ವಿದ್ಯಾರ್ಥಿಯಾಗಿ ಧಾರವಾಡಕ್ಕೆ ಬಂದಾಗ ಆಲೂರು ವೆಂಕಟರಾಯರು ಸಾರ್ವಜನಿಕ ಜೀವನದಿಂದ ನಿವೃತ್ತರಾಗಿ ಅಧ್ಯಾತ್ಮ ಚಿಂತನೆಗೈಯುತ್ತ ವಾನಪ್ರಸ್ಥ ಜೀವನ ಸಾಗಿಸುತ್ತಿದ್ದರು. ಆದರೂ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅವರು ಕಂಡು ಬರುತ್ತಿದ್ದರು; ಆಗೀಗ ಅವರ ಭಾಷಣಗಳನ್ನು ಕೇಳುತ್ತಿದ್ದೆ. ಶುದ್ಧ ಖಾದಿಧಾರಿಗಳಾಗಿದ್ದ ಅವರ ಮಿಂಚುಗಣ್ಣು, ಉದ್ದ ಮೂಗು, ಬಿಳಿಯ ಗಡ್ಡ, ಪ್ರಸನ್ನ ಗಂಭೀರ ವದನ – ಋಷಿ ಸದೃಶ ವ್ಯಕ್ತಿಯಾಗಿ ಕಂಗೊಳಿಸುತ್ತಿದ್ದರು.

'ಕರ್ನಾಟಕ' ಎಂದರೇನು? ಎಂಬ ಕಲ್ಪನೆಯೂ ಇರದಿದ್ದ ಕಾಲದಲ್ಲಿ ಕರ್ನಾಟಕತ್ವದ ಬೀಜ ಬಿತ್ತಿದ ಅಂಥ ಪ್ರಾತಃಸ್ಮರಣೀಯರನ್ನು ಎಷ್ಟು ನೆನೆದರೂ ಸಾಲದು. ಜೀವನದುದ್ದಕ್ಕೂ ಕರ್ನಾಟಕತ್ವದ ದೀಕ್ಷೆ ತೊಟ್ಟು, 'ಜಯಕರ್ನಾಟಕ' ಮಂತ್ರವನ್ನು ಜಪಿಸಿದ ಅವರು ವಿಸ್ಮೃತಿಯಲ್ಲಿ ಮುಳುಗಿದ್ದ ಕನ್ನಡ ಜನತೆಯ ಅಭಿಮಾನವನ್ನು ಬಡಿದೆಬ್ಬಿಸಿದ ಆದ್ಯರಲ್ಲಿ ಪ್ರಮುಖರಾದವರು. ಅವರು ಯಾವ ಕಾರ್ಯವನ್ನು ಕೈಕೊಂಡರೂ ಅವರ ಗುರಿ ಕರ್ನಾಟಕ ಏಕೀಕರಣವೇ ಆಗಿತ್ತು. ಅವರು ಹೇಳುತ್ತಿದ್ದರು: "ಕರ್ನಾಟಕದ ಸರ್ವಾಂಗೀಣ ಉನ್ನತಿ' ಈ ಮೂರು ಶಬ್ದಗಳಲ್ಲಿ ನನ್ನ ಜಗತ್ತೆಲ್ಲವೂ ಅಡಗಿದೆ." ಕರ್ನಾಟಕ, ಭರತಖಂಡ, ವಿಶ್ವ ಹೀಗೆ ಕರ್ನಾಟಕದ ಉಪಾಸನೆಯ ಬಲದಿಂದ, ಈ ಮೂರೂ ಜಗತ್ತುಗಳ ಕಲ್ಯಾಣವನ್ನು ಕರ್ನಾಟಕವು ಸಾಧಿಸಬಲ್ಲುದು ಎಂಬ ಭರವಸೆಯನ್ನು ಅವರು ತಾಳಿದ್ದರು. ನಾವು ಇವತ್ತು ಮಾಡಬೇಕಾದ ಕೆಲಸದ ಕಲ್ಪನೆ ಬರಬೇಕಾದರೆ ಅವರ ಚರಿತ್ರೆಯನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. 'ನನ್ನ ಜೀವನ ಸ್ಮೃತಿಗಳು' ಪುಸ್ತಕವನ್ನುಇಂದಿನ ಪೀಳಿಗೆ ಒಮ್ಮೆಯಾದರೂ ಓದಬೇಕು.

ವಂಗಭಂಗ ಚಳವಳಿಯೇ ಅವರಿಗೆ ಕರ್ನಾಟಕದ ಹುಚ್ಚು ಹಿಡಿಸಿದ್ದು. ಬಂಗಾಲವನ್ನು ಎರಡು ಮಾಡಲು ಹೊರಟ ಬ್ರಿಟಿಷರ ವಿರುದ್ಧ ಅಂಥ ಹೋರಾಟ ನಡೆದಾಗ, ಹಲವಾರು ತುಂಡುಗಳಾಗಿ ಹೋಗಿದ್ದ ಕರ್ನಾಟಕದ ಗತಿಯೇನು? ಎಂದು ಅವರು ಚಿಂತಿಸಿದರು. ಗಾಂಧೀಜಿಯ ಆದರ್ಶ, ಧ್ಯೇಯಗಳ ಬಗ್ಗೆ ಅವರಿಗೆ ಆದರವಿದ್ದರೂ ರಾಷ್ಟ್ರೀಯ ಆಂದೋಲನದಲ್ಲಿ ವೆಂಕಟರಾಯರು ಲೋಕಮಾನ್ಯ ಟಿಳಕರ ಅನುಯಾಯಿಯಾಗಿದ್ದರು. ೧೯೨೦ರಲ್ಲಿ ಟಿಳಕರ ನಿಧನದ ನಂತರ ವೆಂಕಟರಾಯರು ತಮ್ಮ ಸೇವೆಯನ್ನು ಸಂಪೂರ್ಣವಾಗಿ ಕನ್ನಡ ಮತ್ತು ಕರ್ನಾಟಕಕ್ಕಾಗಿ ಮೀಸಲಿಟ್ಟರು. ೧೯೦೮ರಷ್ಟು ಹಿಂದೆಯೇ ಧಾರವಾಡದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ರಾಷ್ಟ್ರಾಭಿಮಾನದ ಜೊತೆಗೆ ಸ್ವಾವಲಂಬನೆಯನ್ನು ಕಲಿಸುವದು ಆ ಶಾಲೆಯ ಉದ್ದೇಶವಾಗಿತ್ತು. ಅದಕ್ಕಾಗಿ ಯಾವ ಸಂಬಳವನ್ನೂ ಅವರು ತೆಗೆದುಕೊಳ್ಳುತ್ತಿರಲಿಲ್ಲ.

'ರಾಷ್ಟ್ರೀಯ ಶಾಲೆ ಪ್ರಾರಂಭವಾದ ದಿನವೇ, ಆಗ ತೀರ ಚಿಕ್ಕ ಬಾಲಕನಾಗಿದ್ದ ಬೇಂದ್ರೆ ದತ್ತು ಅಲ್ಲಿ ಭಾಷಣ ಮಾಡಿದ್ದ' ಎಂದು 'ಜೀವನಸ್ಮೃತಿ'ಯಲ್ಲಿ ಕಾಣಿಸಿದ್ದಾರೆ.

೧೯೧೭ರಲ್ಲಿ ನಾಸಿಕ ಕಾಂಗ್ರೆಸ್ ಅಧಿವೇಶನದಲ್ಲಿಯೇ ವೆಂಕಟರಾಯರು ಕರ್ನಾಟಕಕ್ಕೆ ಪ್ರತ್ಯೇಕ ರಾಜಕೀಯ ಪರಿಷತ್ತು ಬೇಕೆಂದು ವಾದ ಮಾಡಿದ್ದರು. ಪುಣೆಯ ಅಧಿವೇಶನದಲ್ಲಿ ಕನ್ನಡದಲ್ಲಿಯೇ ಭಾಷಣ ಮಾಡಿ ಕನ್ನಡದ ಹಕ್ಕನ್ನು ಸ್ಥಾಪಿಸಿದರು. ೧೯೨೦ರಲ್ಲಿ ಧಾರವಾಡದಲ್ಲಿ ವ್ಹಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಪ್ರಥಮ ಕರ್ನಾಟಕ ರಾಜಕೀಯ ಪರಿಷತ್ತಿನ ಅಧಿವೇಶನ ನಡೆಸಿ ಜಯಬೇರಿ ಬಾರಿಸಿದರು. ಇವತ್ತಿನ ಕೆ.ಪಿ.ಸಿ.ಸಿ.ಯ ಮೂಲ ಎಂದರೆ ಅದೇ. ಅಂದಿನಿಂದ ಕರ್ನಾಟಕ ಭಾರತದ ನಕ್ಷೆಯಲ್ಲಿ ನಿಚ್ಚಳವಾಗಿ ಕಾಣಿಸಿಕೊಂಡಿತು. ವೆಂಕಟರಾಯರು ೧೯೩೬ರಲ್ಲಿ ಹಂಪಿಯಲ್ಲಿ ನೆರವೇರಿದ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಆರು ನೂರು ವರ್ಷದ ಉತ್ಸವದ ಬೆನ್ನಲುಬಾಗಿ ದುಡಿದರು. ಪುಣೆಯಲ್ಲಿದ್ದ 'ಭಾರತ ಇತಿಹಾಸ ಸಂಶೋಧನ ಮಾಡಲಿ'ಯಲ್ಲಿ ಕರ್ನಾಟಕದ ಇತಿಹಾಸ ಸಂಶೋಧನೆಗೆ ಅವಕಾಶವಿಲ್ಲದ್ದರಿಂದ, ೧೯೧೪ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ'ಯನ್ನು ಸ್ಥಾಪಿಸಿದರು. ೧೬ ವರ್ಷ ಅದರ ಅಧ್ಯಕ್ಷರಾಗಿ ಕೆಲಸ ಮಾಡಿದರು. ೧೯೧೭ರಲ್ಲಿ ಅದೇ ಸಂಸ್ಥೆಯಿಂದ ತಮ್ಮ 'ಕರ್ನಾಟಕದ ಗತವೈಭವ' ಗ್ರಂಥವನ್ನು ಪ್ರಕಟಿಸಿದರು.

೧೯೧೫ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಹಿಂದೆ ವೆಂಕಟರಾಯರ ಎಂಟು ವರುಷದ ಅವಿರತ ಪ್ರಯತ್ನವಿತ್ತು. ೧೯೩೦ರಲ್ಲಿ ಮೈಸೂರಲ್ಲಿ ಜರುಗಿದ ೧೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಒಂದು ಮುಖ್ಯವಾದ ಅಂಶವನ್ನು ಪ್ರತಿಪಾದಿಸಿದರು: 'ಕರ್ನಾಟಕದ ನಾಲ್ಕು ಮೋರೆಗಳನ್ನು ಏಕಮುಖವಾಗಿ ಮಾಡುವುದಕ್ಕೋಸ್ಕರ ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಅವಶ್ಯವಾಗಿ ಬೇಕಾಗಿದೆ. ಕರ್ನಾಟಕದ ಸಂಸ್ಕೃತಿಯಲ್ಲಿ ಏಕರೂಪತೆಯುಂಟಾಗಬೇಕಾದರೆ ಇದು ಅವಶ್ಯ.' ತಾವು ಕಟ್ಟಿ ಬೆಳೆಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ವೆಂಕಟರಾಯರು ರಾಜೀನಾಮೆ ನೀಡಬೇಕಾಗಿ ಬಂದದ್ದು ಒಂದು ವಿಪರ್ಯಾಸ. ಅದಕ್ಕೆ ಕಾರಣ ಮೂರು.

೧. ಪರಿಷತ್ತಿನಲ್ಲಿ ಬೆಂಗಳೂರಿನ ಸದಸ್ಯರೇ ಪ್ರಾಬಲ್ಯ ಪಡೆದಿದ್ದರು.

೨. ಹೊರಗಿನ ಸದಸ್ಯರಿಗೆ ಮತಾಧಿಕಾರವಿರಲಿಲ್ಲ.

೩. ಉತ್ತರ ಕರ್ನಾಟಕದವರು ಮತ್ತು ಮಂಗಳೂರು ಭಾಗದವರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು.

ಈ ಬಗ್ಗೆ ಪರಿಷತ್ತಿನ ಗಮನ ಸೆಳೆದರೂ ಅದು ಜಪ್ಪೆನ್ನಲಿಲ್ಲ. ಆದ್ದರಿಂದ ತೀವ್ರ ಅಸಮಾಧಾನಗೊಂಡು ಪರಿಷತ್ತಿನಿಂದ ದೂರ ಸರಿದರು.

ಆ ಕಾಲದಲ್ಲಿ ವೆಂಕಟರಾಯರು ಪತ್ರಿಕಾ ವ್ಯವಸಾಯಕ್ಕೆ ಸಲ್ಲಿಸಿದ ಸೇವೆಯೂ ಅನುಪಮವಾದದ್ದು. ೧೯೦೭ರಲ್ಲಿಯೇ ಕರ್ನಾಟಕ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ' ಪತ್ರಿಕೆಯ ಸಂಪಾದಕರಾಗಿ ಅದಕ್ಕೊಂದು ಹೊಸ ಸ್ವರೂಪ ಕೊಟ್ಟರು. 'ಕರ್ನಾಟಕ ಪತ್ರ', 'ಕರ್ನಾಟಕವೃತ್ತ', 'ಕನ್ನಡಕೇಸರಿ' ಮೊದಲಾದ ಪತ್ರಿಕೆಗಳ ಸಂಪಾದಕರು ಬೇರೆಯವರು. ಆದರೆ ಅವೆಲ್ಲಕ್ಕೂ ಸಂಪಾದಕೀಯ ಬರೆಯುವವರು ಇವರೇ. ವೆಂಕಟರಾಯರು ಸ್ಥಾಪಿಸಿದ ಒಂದೇ ಒಂದು ಪತ್ರಿಕೆಯೆಂದರೆ 'ಜಯಕರ್ನಾಟಕ'. 'ಜಯಕರ್ನಾಟಕವೇ ನಮ್ಮ ಮಂತ್ರ ಘೋಷ' ಎಂಬ ಘೋಷಣೆಯೊಂದಿಗೆ ಅದು ಆರಂಭಗೊಂಡಿತು. ಕರ್ನಾಟಕ ಏಕೀಕರಣವೇ ಅದರ ಗುರಿ. ಅದಕ್ಕೆ ಪೂರಕವಾಗಿ ಸಾಹಿತ್ಯ, ಕಲೆ, ವಿಮರ್ಶೆ, ಧರ್ಮಜಿಜ್ಞಾಸೆ, ತತ್ವಜ್ಞಾನ, ವಿಜ್ಞಾನ, ರಾಜಕಾರಣ, ಕತೆ, ಕವಿತೆ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಕುರಿತ ಲೇಖನಗಳು ಆ ಪತ್ರಿಕೆಯಲ್ಲಿ ಬರುತ್ತಿದ್ದವು. ಕನ್ನಡಕ್ಕೆ ಅಪಚಾರ ಎಲ್ಲಿಯೇ ಯಾವ ರಂಗದಲ್ಲಿಯೇ ಆಗಲಿ 'ಜಯಕರ್ನಾಟಕ' ಅದನ್ನು ಖಂಡಿಸದೆ ಬಿಡುತ್ತಿರಲಿಲ್ಲ. 'ಜಯಕರ್ನಾಟಕ'ದಂಥ ಪತ್ರಿಕೆ ಆಗ ಭಾರತೀಯ ಭಾಷೆಗಳಲ್ಲಿಯೇ ವಿರಳ. ಇದು ಬರಿ ಅಭಿಮಾನದ ಮಾತಲ್ಲ. ನಿಜಸ್ಥಿತಿ. ಒಂದು ದಶಕದವರೆಗೆ ಧೀರೋದತ್ತವಾಗಿ ನಡೆದು ನಿಂತಿತು. ಮುಂದೆ ಅದನ್ನು 'ಗೆಳೆಯರ ಗುಂಪು' (ಬೆಳಗಾವಿ ರಾಮಚಂದ್ರರಾಯರು) ಕೆಲಕಾಲ ನಡೆಸಿತು. ೧೯೪೩ರಲ್ಲಿ ಪ್ರೊ. ಶಿ.ಶಿ. ಬಸವನಾಳರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ೧೯೫೩ರಲ್ಲಿ ಅವರು ತೀರಿಕೊಳ್ಳುವವರೆಗೂ ಪತ್ರಿಕೆ ಚೆನ್ನಾಗಿಯೇ ನಡೆಯಿತು.

ಆಲೂರು ವೆಂಕಟರಾಯರು ಗ್ರಂಥರಚನೆಗೆ ತೊಡಗಿದ್ದು ಆಕಸ್ಮಿಕ. ಅವರು ಹೇಳಿದ್ದಾರೆ: "ನಾನು ಸಾಹಿತಿಯಲ್ಲ. ಆದರೆ ಸಾಹಿತ್ಯವೊಂದನ್ನೇ ಜೀವಿತದ ಗುರಿಯಾಗಿ ಇಟ್ಟುಕೊಂಡವನು ನಾನಲ್ಲ. ಸಾಹಿತ್ಯಯೋಗ ನನಗೆ ಕರ್ನಾಟಕ ಏಕೀಕರಣ ನಿರ್ಮಾಣಕ್ಕೆ ಕೇವಲ ಸಾಧನ ಮಾತ್ರ." ಕರ್ನಾಟಕತ್ವದ ಕಲ್ಪನೆ ಮೊಟ್ಟಮೊದಲು ಮೂಡಿಸಿದ 'ಕರ್ನಾಟಕದ ಗತವೈಭವ'ವಂತೂ ಸರಿಯೆ. ಕನ್ನಡ ಗಂಡು ಭಾಷೆ ಎಂದು ತೋರಲು 'ಕರ್ನಾಟಕದ ವೀರರತ್ನಗಳು' ಬರೆದರು. 'ನವಜೀವನ ಗ್ರಂಥಮಾಲೆ' ಪ್ರಾರಂಭಿಸಿದರು. ತರುಣ ಕವಿ ಬೇಂದ್ರೆಯವರ 'ಕೃಷ್ಣಾಕುಮಾರಿ' ಕವನ ಸಂಗ್ರಹವನ್ನು ಮಾಲೆಯಲ್ಲಿ ಪ್ರಕಟಿಸಿದರು. ಟಿಳಕರ ಪ್ರಖರವಾದ ಜ್ಞಾನವನ್ನು ಅರುಹಲು ಅವರ 'ಗೀತಾರಹಸ್ಯ'ವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಲೋಕಮಾನ್ಯ ಟಿಳಕರು ತಮ್ಮ ಈ ಗ್ರಂಥದ ಭಾಷಾಂತರಕ್ಕೆ ವೆಂಕಟರಾಯರನ್ನೇ ಆರಿಸಿ ಒಪ್ಪಿಸಿದರು (೧೯೧೫). ಅದರ ಭಾಷಾಂತರವನ್ನು ಬಿ.ಎಂ.ಶ್ರೀ. ಮೊದಲಾದವರಿಗೆ ತೋರಿಸಿ ಅವರ ಅಭಿಪ್ರಾಯಗಳನ್ನೇ ಟಿಳಕರಿಗೆ ವೆಂಕಟರಾಯರು ತಿಳಿಸಿದರು. ಭಗವದ್ಗೀತೆಯ ಪಿಪಾಸುಗಳಿಗೆ ಸ್ವತಃ 'ಗೀತಾಪ್ರಕಾಶನ', 'ಗೀತಾ ಸಂದೇಶ,' 'ಗೀತಾ ಪ್ರಭಾವ' ಎಂಬ ಗ್ರಂಥಗಳನ್ನು ರಚಿಸುವ ಸಾಮರ್ಥ್ಯ ಮತ್ತು ಯೋಗ್ಯತೆ ಅವರದಾಗಿತ್ತು.

ತಮ್ಮ ಸಾರ್ವಜನಿಕ ಜೀವನದಲ್ಲಿ ಕರ್ನಾಟಕದ ಸಮಕಾಲೀನ ಇತಿಹಾಸದ ಸಿಂಹಾವಲೋಕನ ಮಾಡುವ 'ನನ್ನ ಜೀವನ ಸ್ಮೃತಿಗಳು' ಆತ್ಮಕತೆಯನ್ನು ೧೯೪೦ರಲ್ಲಿಯೇ ಬರೆದರು. ಕರ್ನಾಟಕ ರಾಜ್ಯೋದಯದ ಸಂದರ್ಭವಾದ ೧೯೫೬ರಲ್ಲಿ ಅವರ 'ಕರ್ನಾಟಕತ್ವದ ವಿಕಾಸ' ಪ್ರಕಟಗೊಂಡಿತು. ಕರ್ನಾಟಕತ್ವ ಎಂದರೆ ಕೇವಲ ದೇಶಾಭಿಮಾನವಲ್ಲ, ಕೇವಲ ಭಾಷಾಭಿಮಾನವಲ್ಲ, ಕೇವಲ ಇತಿಹಾಸದ ಅಭಿಮಾನವೂ ಅಲ್ಲ. ಇವೆಲ್ಲವನ್ನೂ ಒಳಗೊಂಡೂ ಅದನ್ನು ಮೀರಿದ ಪರಿಶುದ್ಧ ಭಾವನೆ. ಅವರೇ ಹೇಳುವಂತೆ ವ್ಯಕ್ತಿಗೆ ಹೇಗೋ ಹಾಗೆ ದೇಶಕ್ಕೂ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳಿರುತ್ತವೆ. ಅವೆಲ್ಲವುಗಳ ವಿಕಾಸವಾಗಿ ಅವುಗಳ ಮೂಲಕ ಮೋಕ್ಷವನ್ನೈದುವಂತೆ ರಾಷ್ಟ್ರವೂ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ವಿಕಾಸವನ್ನು ಮಾಡಿಕೊಂಡು ಮೋಕ್ಷವನ್ನು ಪಡೆಯಬೇಕಾಗುತ್ತದೆ. ಆಲೂರು ವೆಂಕಟರಾಯರದು ಅಂಥ ಒಂದು ಸಮಗ್ರ ದೃಷ್ಟಿ.

ಹೀಗೆ ಕನ್ನಡಿಗರಲ್ಲಿ ಕರ್ನಾಟಕದ ಕಲ್ಪನೆಯನ್ನು ಮೂಡಿಸಿ, ಏಕೀಕರಣಕ್ಕಾಗಿ ಹೋರಾಡಿ, ಕಡೆಗೆ ಏಕೀಕರಣವಾದದ್ದನ್ನು ಕಂಡ ಸುದೈವಿಯವರು. ಆ ಸಂದರ್ಭದಲ್ಲಿ ರಾಜ್ಯೋದಯಕ್ಕೆ ನೀಡಿದ ಸಂದೇಶ ವಿಚಾರಪ್ರದವಾಗಿತ್ತು. "ಈಗ ಮೈಸೂರು ರಾಜ್ಯವೆಂದು ತಪ್ಪಾಗಿ ಹೆಸರಿಸಲ್ಪಟ್ಟ ಕರ್ನಾಟಕ ರಾಜ್ಯವು ಆಯುಷ್ಮಂತವಾಗಲಿ ಮತ್ತು ಭಾಗ್ಯಶಾಲಿಯಾಗಲಿ ಎಂದು ಹಿರಿಯನಾನು ಹರಸುತ್ತೇನೆ.... ಎಲ್ಲ ದೃಷ್ಟಿಯಿಂದಲೂ ಯೋಗ್ಯವಾದ ಕರ್ನಾಟಕವೆಂಬ ಹೆಸರನ್ನು ಪುನಃ ಇಡಲಿಕ್ಕೆ ಎಲ್ಲರಿಗೂ ದೇವರು ಬುದ್ಧಿಯನ್ನು ಕೊಡಲಿ, ಮತ್ತು ಅನ್ಯಾಯದಿಂದ ಕಳೆದುಕೊಂಡ ಪ್ರದೇಶಗಳನ್ನು ತೀವ್ರ ಪಡೆಯಲಿ." ನವಂಬರ ೧, ೧೯೫೬ರಂದು ಮಧ್ಯರಾತ್ರಿ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಏರ್ಪಟ್ಟು, ವೆಂಕಟರಾಯರನ್ನು ಸಮಾರಂಭದ ಅಧ್ಯಕ್ಷರನ್ನಾಗಿ ಮಾಡಿ, ಕನ್ನಡನಾಡು ಅವರಿಗೆ ಭಕ್ತಿ ಗೌರವ ಸಲ್ಲಿಸಿತು. ೧೯೫೭ರಲ್ಲಿ ಧಾರವಾಡದಲ್ಲಿ ಕುವೆಂಪು ಅಧ್ಯಕ್ಷತೆಯಲ್ಲಿ ನಡೆದ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯ ಸಂದರ್ಭದಲ್ಲಿ ಆಲೂರು ವೆಂಕಟರಾಯರನ್ನು ವೇದಿಕೆಯ ಅಗ್ರಪಂಕ್ತಿಯಲ್ಲಿ ಕೂಡಿಸಿ ಸನ್ಮಾನಿಸಲಾಯಿತು. (ಆಗ ನಾನು ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದೆ)

೧೯೭೩ರಲ್ಲಿ ಈ ನಾಡಿಗೆ 'ಕರ್ನಾಟಕ' ಎಂಬ ಹೆಸರು ಬರುವ ಮೊದಲೇ ಫೆಬ್ರವರಿ ೨೫, ೧೯೬೪ರಂದು ಕರ್ನಾಟಕ ಕುಲಪುರೋಹಿತರು ಕಣ್ಣಿನಲ್ಲಿ ಸಮೃದ್ಧ ಕರ್ನಾಟಕದ ಕನಸನ್ನು ತುಂಬಿಕೊಂಡು ಕಣ್ಣು ಮುಚ್ಚಿದರು.

(೧೨-೭-೨೦೧೨)

ಶತಮಾನೋತ್ತರ ಸುವರ್ಣ ಮಹೋತ್ಸವ

(ಪ್ರಾಸ್ತಾವಿಕ ಭಾಷಣ)

ಈ ಉತ್ಸವದ ಸಮಾರೋಪ ಸಮಾರಂಭದ ಉದ್ಘಾಟನೆ ನೆರವೇರಿಸಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ ಅವರೆ, ಶಿಕ್ಷಣ ಪ್ರೇಮಿಗಳಾದ ಮಾನ್ಯ ಸಭಿಕರೆ, ಎಲ್ಲರಿಗೂ ನಮಸ್ಕಾರ.

'ಕನ್ನಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜು' ಎಂಬ ಈ ಮಹಾಸಂಸ್ಥೆಯ ಸ್ಥಾಪಕರಾಗಿ, ಅದರ ಪ್ರಥಮ ಪ್ರಾಚಾರ್ಯರಾಗಿ ಅಕ್ಷರಶಃ ಕನ್ನಡ ಕುಲದೀಪಕರೆನಿಸಿದ ಡೆಪ್ಯೂಟಿ ಚೆನ್ನಬಸಪ್ಪನವರ ೧೩೧ನೆಯ ಪುಣ್ಯತಿಥಿಯಂದು ಈ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಸುವರ್ಣ ಮಹೋತ್ಸವ ನೆರವೇರುತ್ತಿರುವುದು ಎಷ್ಟೊಂದು ಔಚಿತ್ಯಪೂರ್ಣವಾಗಿದೆ ಯೆಂಬುದನ್ನು ಬೇರೆ ಹೇಳಬೇಕಿಲ್ಲ.

ಈಗ್ಗೆ ಆರು ವರ್ಷಗಳ ಹಿಂದೆಯೇ ೨೦೦೬, ಜನವರಿ ೨೭ರಂದು ಆಗಿನ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾಗಿದ್ದ ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು, ಉತ್ಸವದ ವರ್ಷಾಚರಣೆಯ ಕಾರ್ಯಕ್ರಮದ ಉದ್ಘಾಟನೆ ಮಾಡಿ ಅದಕ್ಕೆ ಚಾಲನೆ ನೀಡಿದ್ದರು. ಅದೇ ಕಾಲಕ್ಕೆ ಉತ್ಸವ ಸಮಿತಿಯ ರಚನೆಯೂ ಆಗಿ, ಆಗ ರಾಜ್ಯದ ಕಂದಾಯ ಸಚಿವರೂ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದ ಮಾನ್ಯ ಶ್ರೀ ಜಗದೀಶ ಶೆಟ್ಟರ ಅವರು ಆ ಸಮಿತಿಯ ಗೌರವಾಧ್ಯಕ್ಷರಾದದ್ದನ್ನು ಇಲ್ಲಿ ಸ್ಮರಿಸಬೇಕು. ಈಗ ಅವರೇ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಸಮಾರೋಪ ಸಮಾರಂಭದ ಉದ್ಘಾಟನೆ ಮಾಡುತ್ತಿರುವುದು ಒಂದು ಯೋಗಾಯೋಗವೆಂದೇ ಹೇಳಬಹುದು.

೧೫೦ ವರ್ಷಗಳ ಉತ್ಸವದ ಈ ಅಪೂರ್ವ ಸಂದರ್ಭದಲ್ಲಿ ಆಗಲೇಬೇಕಾದ, ಕೆಲವು ಮಹತ್ವದ ಯೋಜನೆಗಳ ಪ್ರಸ್ತಾವನೆಯನ್ನು

ಹಣಕಾಸಿನ ಅಂದಾಜುಗಳೊಂದಿಗೆ ಸರಕಾರಕ್ಕೆ ಸಲ್ಲಿಸಿ, ಅನುಮತಿ ಪಡೆಯಲಾಯಿತು. ಆದರೂ ಹಣಕಾಸು ಇಲಾಖೆಯ ನಿರ್ಲಕ್ಷ್ಯದಿಂದ ಅವೆಲ್ಲ ಸ್ಥಗಿತಗೊಂಡು, ಈ ಸಮಾರಂಭವನ್ನು ಐದಾರು ವರ್ಷಗಳಿಂದ ಅನಿವಾರ್ಯವಾಗಿ ಮುಂದೂಡುತ್ತ ಬರಬೇಕಾಯಿತು. ರಾಜ್ಯದ ರಾಜಕೀಯ ಸ್ಥಿತ್ಯಂತರಗಳು ಮುಖ್ಯಮಂತ್ರಿ ಸ್ಥಾನದ ಬದಲಾವಣೆಗಳು ಕೆಲಮಟ್ಟಿಗೆ ಈ ಅವಸ್ಥೆಗೆ ಕಾರಣವಾಗಿದ್ದರೂ ಆಗಿರಬಹುದು. ಆ ಬಗ್ಗೆ ಯಾರನ್ನೂ ದೂಷಿಸುವ ಹಾಗೂ ಇಲ್ಲ. ಯಾಕೆಂದರೆ ಸರಕಾರ ಅಥವಾ ವ್ಯವಸ್ಥೆ ಎನ್ನುವದು ಸಮುದ್ರದಲ್ಲಿ ಸಾಗಿರುವ ಒಂದು ದೊಡ್ಡ ಹಡಗಿನಂತೆ. ನಾವು ರಸ್ತೆಯಲ್ಲಿ ಮೋಟರ್ ಸೈಕಲ್‌ನ್ನು ಗಕ್ಕರೆ ತಿರುಗಿಸಿದಂತೆ ಆ ಭಾರವಾದ ಹಡಗನ್ನು ತಿರುಗಿಸುವದು ಸಾಧ್ಯವಾಗದೆ ಹೋಗಬಹುದು. ಆದರೆ ಹಡಗದ ಕಪ್ತಾನ ಮನಸ್ಸು ಮಾಡಿದರೆ ನಿಧಾನವಾಗಿಯಾದರೂ ಅದನ್ನು ತಿರುಗಿಸಬಹುದು.

೧೯೫೬ರಲ್ಲಿ ಈ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಜರುಗಿದಾಗ ಶ್ರೀ ಎಸ್.ಪಿ. ಪಾಟೀಲರು ಪ್ರಿನ್ಸಿಪಾಲರಾಗಿದ್ದರು. ಪೂಜ್ಯ ಬಂಥನಾಳ ಶಿವಯೋಗಿಗಳು ಹಾಗೂ ಕುಲಪತಿಗಳಾದ ಡಾ. ಡಿ.ಸಿ. ಪಾವಟೆಯವರ ಸಮಕ್ಷಮದಲ್ಲಿ ಶತಮಾನೋತ್ಸವ ಅರ್ಥಪೂರ್ಣವಾಗಿ ಜರುಗಿದ್ದನ್ನು ನಾನು ಸ್ವತಃ ಕಂಡಿದ್ದೇನೆ. ಕರ್ನಾಟಕದ ಹಿತಚಿಂತನೆಯನ್ನೇ ತಮ್ಮ ಜೀವನದ ಧ್ಯೇಯವಾಗಿ ಉಳ್ಳವರೆಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಿದರೆ ಬೆಳಗಾವಿಯ ಸುವರ್ಣ ಸೌಧವನ್ನಷ್ಟೇ ಅಲ್ಲ, ಇಡಿಯ ಕರ್ನಾಟಕವನ್ನೇ ಸುವರ್ಣ ಸೌಧವಾಗಿ, ಇನ್ನೊಂದು ಮಾದರಿ ರಾಜ್ಯವಾಗಿ ಮಾರ್ಪಡಿಸಬಹುದು. ಇಂದಿನ ರಾಜಕೀಯ ಕಿತ್ತಾಟದಲ್ಲಿ ಇದು ಸಾಧ್ಯವೆ? ನಮ್ಮ ಭವ್ಯವಾದ ಪರಂಪರೆಯನ್ನೇ ನಾವು ಮರೆತಿದ್ದೇವೆ. ಬೇಂದ್ರೆಯವರು 'ದೊಡ್ಡವರು' ಎಂಬ ತಮ್ಮ ಪದ್ಯದಲ್ಲಿ, ಕನ್ನಡಿಗರ ಅದ್ವಿತೀಯವಾದ ಮಹೋನ್ನತ ಕಾರ್ಯಗಳನ್ನೆಲ್ಲ ಕೊಂಡಾಡಿ ಕೊನೆಗೆ ಒಂದು ಸಾಲು ಬರೆದಿದ್ದಾರೆ. "ಕೃತಿಯು ಘನ, ವಿಸ್ಮೃತಿಯೂ ಘನ, ದೊಡ್ಡವರು." ಈ ಜನಾಂಗದ ಕೃತಿ ಎಷ್ಟು ಘನವಾದದ್ದೋ ಮರೆವೂ ಅಷ್ಟೇ ಘನವಾದದ್ದು. ಅಂಥ ವಿಸ್ಮೃತಿಯಿಂದ ನಾವು ಹೊರಬರಬೇಕು.

ಕನ್ನಡಿಗರು ತಮ್ಮತನವನ್ನೇ ಕಳೆದುಕೊಂಡು ಗತವೈಭವವನ್ನು ಮರೆತು, ಅನ್ಯಭಾಷೆಯ ಅಸಹ್ಯವಾದ ಆಕ್ರಮಣಕ್ಕೆ ಒಳಗಾಗಿ, ಕತ್ತಲೆಯಲ್ಲಿ ತಡವರಿಸುತ್ತಿರುವಾಗ, ಸುರ್ಯೋದಯದಂತೆ ಕಂಗೊಳಿಸಿದವರು ಚೆನ್ನಬಸಪ್ಪ ಧಾರವಾಡ ಅವರು. ಅಂದು ಕನ್ನಡ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರನ್ನು ತರಬೇತುಗೊಳಿಸುವುದಕ್ಕಾಗಿ ಧಾರವಾಡದಲ್ಲಿ ೧೮೫೬ರಲ್ಲಿ 'ನಾರ್ಮಲ್ ಸ್ಕೂಲ್' ಎಂಬ ಟ್ರೇನಿಂಗ್ ಸಂಸ್ಥೆ ಪ್ರಾರಂಭವಾದಾಗ ಅದರ ಮುಖ್ಯಸ್ಥರಾಗಿ ಚೆನ್ನಬಸಪ್ಪನವರು ನೇಮಕ ಹೊಂದಿದರು. ಇದು ೧೮೬೧ರಲ್ಲಿ ಬೆಳಗಾವಿಗೆ ಸ್ಥಳಾಂತರಗೊಂಡಾಗ ಇದನ್ನು ಟ್ರೇನಿಂಗ್ ಕಾಲೇಜ್ ಸ್ಥಾನಕ್ಕೆ ಏರಿಸಬೇಕೆಂದು ಅವರೇ ಒತ್ತಾಯ ತಂದಾಗ ೧೮೬೪ರಲ್ಲಿ ಟ್ರೇನಿಂಗ್ ಕಾಲೇಜಾಗಿ ಊರ್ಜಿತಗೊಂಡಿತು. ನಿರೀಕ್ಷಿಸಿದಂತೆ ಚೆನ್ನಬಸಪ್ಪನವರೇ ಆ ಕಾಲೇಜಿನ ಪ್ರಥಮ

ಪ್ರಿನ್ಸಿಪಾಲರಾಗಿ ಈ ಸಂಸ್ಥೆ ಮರಳಿ ೧೮೬೭ರಲ್ಲಿ ಧಾರವಾಡಕ್ಕೆ ಬಂದಿತು. ಕರ್ನಾಟಕದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಉಜ್ವಲ ಅಧ್ಯಾಯವೊಂದಕ್ಕೆ ಇಲ್ಲಿಂದಲೇ ಶ್ರೀಕಾರ ಹಾಕಿದಂತಾಯಿತು.

ಕನ್ನಡ ಶಾಲೆಗಳು ಒಂದೊಂದಾಗಿ ಕಣ್ಮುಚ್ಚುತ್ತಿರುವ ಇವತ್ತಿನ ಸಂದರ್ಭದಲ್ಲಿ, ಹಳ್ಳಿಹಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ತೆರೆದು, ಮರಾಠಿಯ ಪ್ರಭಾವವನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಿ, ಕನ್ನಡ ಪಠ್ಯಪುಸ್ತಕ ಲೇಖಕರ ಒಂದು ಪಡೆಯನ್ನೇ ನಿರ್ಮಿಸಿ, 'ಸದರ್ನ್ ಮಹಾರಾಷ್ಟ್ರ' ಎಂಬ ಅಪಖ್ಯಾತಿಯನ್ನೂ ಬ್ರಿಟಿಷರ ತಪ್ಪು ಕಲ್ಪನೆಯನ್ನೂ ಹೋಗಲಾಡಿಸಿ ಧಾರವಾಡವನ್ನು ಕನ್ನಡದ ಗಂಡುಮೆಟ್ಟಿನ ಸ್ಥಳವಾಗಿ ಮಾಡಿದವರು ಚೆನ್ನಬಸಪ್ಪನವರು. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವು ನಡೆಯದೇ ಹೋದರೆ, ನಾವು ಕನ್ನಡಿಗರೆಂದು ಕರೆಸಿಕೊಳ್ಳಲು ಅಯೋಗ್ಯರು, ಇಷ್ಟೇ ಅಲ್ಲ, ಮನುಷ್ಯರೆಂದು ಕರೆಸಿಕೊಳ್ಳಲು ಕೂಡ ಯೋಗ್ಯರಲ್ಲ. ಯಾಕೆಂದರೆ, ಸ್ವಂತಿಕೆ, ಸ್ವಾಭಿಮಾನ, ಸ್ವಸ್ವರೂಪ ಜ್ಞಾನ ಇಲ್ಲದ ವ್ಯಕ್ತಿಗಳನ್ನು ಮನುಷ್ಯರೆಂದು ಹೇಗೆ ಕರೆಯುವದು?

ನಮ್ಮ ಈ ಟ್ರೇನಿಂಗ್ ಕಾಲೇಜು ಭಾರತದ ನಾಲ್ಕು ಉತ್ಕೃಷ್ಟ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿರುವುದಲ್ಲದೆ, ದಕ್ಷಿಣ ಭಾರತದಲ್ಲಿಯೇ ಏಕಮೇವ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಯಾಗಿ ಖ್ಯಾತಿ ಪಡೆದಿದೆ. ಚೆನ್ನಬಸಪ್ಪನವರು ೧೮೬೭ರಲ್ಲಿಯೇ ಪ್ರಾರಂಭಿಸಿದ ಶೈಕ್ಷಣಿಕ ಮಾಸಿಕ 'ಮಠ ಪತ್ರಿಕೆ' ಈಗ 'ಜೀವನಶಿಕ್ಷಣ'ವಾಗಿ ೧೪೭ ವರ್ಷ ನಿರಂತರವಾಗಿ ನಡೆದ ಕರ್ನಾಟಕದ ಏಕಮೇವ ಪತ್ರಿಕೆಯಾಗಿದ್ದು ಕರ್ನಾಟಕದ ಪ್ರತಿಯೊಂದು ಪ್ರಾಥಮಿಕ ಶಾಲೆಗೂ ಅದು ತಲುಪುವಂತೆ ನಮ್ಮ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕು. ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯ, ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಮೊದಲಾದವುಗಳಿಗೆ ಅವುಗಳ ಆರಂಭದ ಕಾಲಕ್ಕೆ ಆಶ್ರಯ ನೀಡಿದ್ದು ಇದೇ ಟ್ರೇನಿಂಗ್ ಕಾಲೇಜು ಎಂಬುದನ್ನು ಮರೆಯಬಾರದು. ಒಂದೂವರೆ ಶತಮಾನದ ನಂತರ ಈಗ ನಾವು ಪುನರವಲೋಕನ ಮಾಡಿಕೊಂಡರೆ, ಚೆನ್ನಬಸಪ್ಪನವರು ಎಂಥ ಮಹಾನ್ ದ್ರಷ್ಟಾರರಾಗಿದ್ದರು ಎಂಬುದು ಗೋಚರಿಸುತ್ತದೆ.

ಇಲ್ಲಿ ತರಬೇತಿಗಾಗಿ ಬಂದು ಹೋಗುವ ಸಾವಿರಾರು ಶಿಕ್ಷಕರ ಅಂತರಾಳದಲ್ಲಿ ಶಿಕ್ಷಣದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ವಿಜ್ಞಾನ, ಕಲೆ, ಧರ್ಮಶಾಸ್ತ್ರ, ವಾಣಿಜ್ಯ, ವ್ಯವಸಾಯ ಇತ್ಯಾದಿಗಳ ಬೀಜಗಳನ್ನು ಅವರು ಬಿತ್ತಿದರು. ಅವರ ಹೋರಾಟ ವೇದಿಕೆಯ ಮೇಲಿನ ಅರ್ಥಹೀನ ಭಾಷಣವಾಗಿರಲಿಲ್ಲ. ಅದು ಕ್ರಿಯಾತ್ಮಕವಾಗಿತ್ತು, ಕಾರ್ಯಾನುಷ್ಠಾನಕ್ಕೆ ತರುವಂಥದಾಗಿತ್ತು. ಕನ್ನಡದ ಅಸ್ತಿತ್ವಕ್ಕೆ ಪ್ರಗತಿಗೆ ಧಕ್ಕೆ ತರುವಂಥವರನ್ನು ಅವರು ಎಳ್ಳಷ್ಟು ಸಹಿಸುತ್ತಿರಲಿಲ್ಲ. ಅವರು ಈ ಕಾಲೇಜಿನ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದ್ದು ಕೇವಲ ಎರಡು ವರ್ಷ ಮಾತ್ರ. ಮುಂದೆ ಬೆಳಗಾವಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಡೆಪ್ಯೂಟಿ ಇನ್ಸ್‌ಪೆಕ್ಟರರಾಗಿ ಕೊನೆಯ

ಗಳಿಗೆಯವರೆಗೂ ಕನ್ನಡಕ್ಕಾಗಿ ದುಡಿದರು. ಸಮರ್ಥ ಲೇಖಕರಾಗಿದ್ದರೂ ಬಿಡುವಿಲ್ಲದ ಕೆಲಸಗಳಲ್ಲಿ ಅವರಿಗೆ ಬರವಣಿಗೆಯನ್ನು ಹೆಚ್ಚು ಮಾಡುವುದಾಗಲಿಲ್ಲ. ಆದರೂ ಷೇಕ್ಸ್‌ಪಿಯರನ ಎರಡು ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು. ಎರಡು ಉತ್ತಮ ಗಣಿತ ಪುಸ್ತಕಗಳನ್ನು ಬರೆದರು. ರ್‍ಯಾಂಗ್ಲರ್ ಡಿ.ಸಿ. ಪಾವಟೆಯವರು ೧೯೦೭ರಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗ, ಅವರ ಆಸಕ್ತಿಗನುಸರಿಸಿ ಚೆನ್ನಬಸಪ್ಪನವರ ಗಣಿತ ಪುಸ್ತಕ ಪಾರಿತೋಷಕವಾಗಿ ದೊರೆತಿತ್ತು ಎಂಬದನ್ನು ಪಾವಟೆಯವರು ತಮ್ಮ ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದಾರೆ.

ಚೆನ್ನಬಸಪ್ಪನವರ ನಂತರ, ಅವರು ಹಾಕಿಕೊಟ್ಟ ಹಾದಿಯಲ್ಲಿಯೇ ನಡೆದ ಭುಜಂಗರಾವ್ ಹುಯಿಲಗೋಳ, ವೆಂಕಟ ರಂಗೋ ಕಟ್ಟಿ, ರೊದ್ದ ಶ್ರೀನಿವಾಸರಾಯರು ಮುಂತಾದವರು ಈ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ ಕನ್ನಡವನ್ನು ಕಟ್ಟುವ ಕೆಲಸವನ್ನು ೧೯ನೆಯ ಶತಮಾನದಲ್ಲಿ ಮುಂದುವರಿಸಿದರು. ಚೆನ್ನಬಸಪ್ಪನವರು ತಮ್ಮ ೪೭ನೇ ವಯಸ್ಸಿನಲ್ಲಿಯೇ ನಿಧನರಾದದ್ದು ಕನ್ನಡಿಗರ ದುರ್ದೈವ. ಮುದವೀಡು ಕೃಷ್ಣರಾಯರಂಥ ಉಜ್ವಲ ರಾಷ್ಟ್ರಪ್ರೇಮಿ ಹಾಗೂ ಕನ್ನಡದ ಕಟ್ಟಾಳು, ಚೆನ್ನಬಸಪ್ಪನವರನ್ನು 'ಹೊಸಗನ್ನಡದ ಆದಿಪುರುಷ', 'ಕನ್ನಡದ ಹುಲಿ' ಎಂದು ಮುಂತಾಗಿ ಲೇಖನವೊಂದರಲ್ಲಿ ಪ್ರಶಂಸಿಸಿದ್ದಾರೆ.

ಚೆನ್ನಬಸಪ್ಪನವರು ಈ ಟ್ರೇನಿಂಗ್ ಕಾಲೇಜ ಮೂಲಕ ಹುಟ್ಟು ಹಾಕಿದ ಜಾಗೃತಿಯು ಎಷ್ಟೊಂದು ದೂರಗಾಮಿಯಾಗಿತ್ತು ಎಂಬುದನ್ನು ನೆನೆದರೆ ಆಶ್ಚರ್ಯವಾಗುತ್ತದೆ. ಕರ್ನಾಟಕದ ಏಕೀಕರಣ ಚಳವಳಿ ಮೊದಲುಗೊಂಡು ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿಯ ಹೆಣ್ಣುಮಕ್ಕಳ ಸರಕಾರಿ ಶಿಕ್ಷಣ ತರಬೇತಿ ಶಾಲೆ, ಉಪಾಧ್ಯಾಯರ ಸರಕಾರಿ ಟ್ರೇನಿಂಗ್ ಕಾಲೇಜು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡವೇ ಆಡಳಿತಭಾಷೆ ಹಾಗೂ ಪ್ರಾಥಮಿಕ ಶಿಕ್ಷಣ ಮಾಧ್ಯಮವಾಗಬೇಕೆಂಬ ಈಗಿನ ಹೋರಾಟ, ಕನ್ನಡ ಅಂಕಿಗಳನ್ನೇ ಬಳಸಿ ಎಂಬ ಒತ್ತಾಸೆ, ಹೊಸಗನ್ನಡ ಉದಯ ಕಾಲದಲ್ಲಿ ರಚನೆಗೊಂಡ ವೈವಿಧ್ಯಮಯ ಸಾಹಿತ್ಯಸೃಷ್ಟಿ, ಕರ್ನಾಟಕದಾದ್ಯಂತ ತಲೆದೋರಿದ ಉಚಿತ ಪ್ರಸಾದ ನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಇವೇ ಮೊದಲಾದವುಗಳ ಸ್ಫೂರ್ತಿಯ ನೆಲೆಗಳಿರುವುದು ಡೆಪ್ಯೂಟಿ ಚೆನ್ನಬಸಪ್ಪನವರ ಅಂದಿನ ಹೋರಾಟದಲ್ಲಿ ಹಾಗೂ ಅದರ ಮೂರ್ತಿ ಸ್ವರೂಪ ವಾಗಿರುವ ಈ ಟ್ರೇನಿಂಗ್ ಕಾಲೇಜಿನಲ್ಲಿ ಎಂದರೆ ಅತಿಶಯೋಕ್ತಿಯಾಗದು.

ಚೆನ್ನಬಸಪ್ಪನವರ ನೂರನೆ ವರ್ಷದ ಪುಣ್ಯತಿಥಿಯಂದು ೧೯೮೮ರಲ್ಲಿ ಅವರ ಪ್ರತಿಮೆಯನ್ನು ಕಾಲೇಜಿನೆದುರು ಸ್ಥಾಪಿಸಲಾಯಿತು. ಆಗ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾಯರು, ಅರ್ಥಮಂತ್ರಿಗಳಾಗಿದ್ದ ವೀರಪ್ಪ ಮೊಯಿಲಿಯವರು, ಧರ್ಮಸಿಂಗ್ ಅವರು ಹಾಗೂ ಶಿಕ್ಷಣ ಸಚಿವರಾಗಿದ್ದ ಗುಬ್ಬಿ ಶಂಕರರಾವ್ ಅವರು ಆ ಸಮಾರಂಭದಲ್ಲಿ

ಭಾಗವಹಿಸಿದ್ದು ಒಂದು ಚಾರಿತ್ರಿಕ ಘಟನೆ ಎಂದೇ ಹೇಳಬಹುದು. ರಾಜ್ಯದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಿದ ಮಾತ್ರಕ್ಕೆ ಶಿಕ್ಷಣದ ನಿಜವಾದ ಉದ್ದೇಶ ಈಡೇರಿದಂತಾಗುವದಿಲ್ಲ. ಈ ಟ್ರೇನಿಂಗ್ ಕಾಲೇಜು ಮತ್ತು ಡಾಯಟ್‌ನಂಥ ಶಿಕ್ಷಣ ಸಂಸ್ಥೆಗಳಿಗೆ ಮೂಲ ಸೌಕರ್ಯಗಳನ್ನೆಲ್ಲ ಒದಗಿಸಿ, ಅವುಗಳ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿ, ಅವುಗಳನ್ನು ಸಮರ್ಥವಾಗಿ ಬಲಗೊಳಿಸುವುದರಿಂದ ಮಾತ್ರ ನಮ್ಮ ಶಿಕ್ಷಣದ ಬುನಾದಿ ಭದ್ರಗೊಳ್ಳುತ್ತದೆ.

(೪-೧-೨೦೧೩)

'ಸ್ಪಂದನ' ಪುಸ್ತಕದ ಬಿಡುಗಡೆ

ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಜಗದೀಶ ಶೆಟ್ಟರವರೆ, ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟನವರೆ, ಸಭಿಕರೆ, ಆತ್ಮೀಯ ಸ್ನೇಹಿತರೂ ಖ್ಯಾತ ಪತ್ರಿಕಾಕರ್ತರೂ ಆದ ಮನೋಜ ಪಾಟೀಲರ ಅಂಕಣ ಬರೆಹಗಳ ಸಂಗ್ರಹ 'ಸ್ಪಂದನ' ಪುಸ್ತಕವನ್ನು ಸಂತೋಷದಿಂದ ಬಿಡುಗಡೆ ಮಾಡಿದ್ದೇನೆ.

ಇಂದು ಯಾವ ದಿನಪತ್ರಿಕೆಯನ್ನು ತೆಗೆದು ನೋಡಿದರೂ ಎರಡು-ಮೂರಾದರೂ ಅಂಕಣ ಬರೆಹಗಳು ಇದ್ದೇ ಇರುತ್ತವೆ. ಪ್ರಚಲಿತ ವ್ಯಕ್ತಿ-ವಿದ್ಯಮಾನಗಳ ಬಗ್ಗೆ ಪರಿಶ್ರಮ ಹಾಗೂ ಚಿಂತನೆಗಳಿಂದ ದೊರಕಿಸಿಕೊಂಡ ತಿಳಿವಳಿಕೆಯನ್ನು ಸಾಮಾನ್ಯ ಓದುಗರೊಂದಿಗೆ ಹಂಚಿಕೊಂಡಾಗ ಅದು ವಿಶೇಷ ಮಹತ್ವವನ್ನು ಪಡೆಯುತ್ತದೆ. ಸಾಮಾನ್ಯವಾಗಿ ಲೇಖಕರ ಆಸಕ್ತಿ ಹಾಗೂ ಅಧ್ಯಯನದ ವಿಷಯಗಳೇ ಈ ಬಗೆಯ ಬರೆಹದ ವಸ್ತುಗಳಾಗಿರುತ್ತವೆ. ಮನೋಜ ಪಾಟೀಲರು ಕಳೆದ ಐದು ವರುಷಗಳಿಂದ 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರತಿ ಶನಿವಾರ ಬರೆಯುತ್ತ ಬಂದ ಇಂಥ ಬರೆಹಗಳಲ್ಲಿ ಕೆಲವನ್ನು ಈ 'ಸ್ಪಂದನ'ದಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ವಿಷಯದ ವಿಶ್ಲೇಷಣೆ, ಭಾಷೆಯ ಸೊಗಸು, ನಿಷ್ಪಕ್ಷಪಾತವಾದ ದೃಷ್ಟಿಕೋನ, ಸಾಮಾಜಿಕ ಕಳಕಳಿ ಇವು ಇಲ್ಲಿ ಎದ್ದು ಕಾಣುವ ಅಂಶಗಳು. ಸ್ಪಂದನ ಎಂದರೆ ಮಿಡಿಯುವದು, ಕಂಪನ ಹೊಂದುವದು. ವಿಷಯಗಳ ಆಯ್ಕೆ, ನಿರೂಪಣೆ, ಪ್ರತಿಪಾದನೆಗಳಲ್ಲಿ ಅಂಥ ಮಿಡಿತ-ತುಡಿತಗಳನ್ನು ಇಲ್ಲಿ ಕಾಣಬಹುದು.

'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಮೂವತ್ತು ವರ್ಷ ಸೇವೆ ಸಲ್ಲಿಸಿದ ಮನೋಜ ಪಾಟೀಲರು ನಾಡಿನ ಹಾಗೂ ದೇಶದ ಆಗು-ಹೋಗುಗಳನ್ನು

ಸೂಕ್ಷ್ಮವಾಗಿ ವೀಕ್ಷಿಸಿ ಚೆನ್ನಾಗಿ ಅರಗಿಸಿಕೊಂಡಿದ್ದಾರೆ. ಆದ್ದರಿಂದಲೇ ಈ ಬರೆಹಗಳ ಹಿನ್ನೆಲೆಯಲ್ಲಿ ಒಂದು ಪಕ್ವವಾದ ಮನೋಧರ್ಮ ಹಾಗೂ ಸದಸದ್ವಿವೇಕ ಒಡೆದು ಕಾಣುತ್ತದೆ. ಕನ್ನಡ ಅಂಕಣಕಾರರಿಗೆ ಗುರುಸ್ಥಾನದಲ್ಲಿದ್ದವರು ಮಾಸ್ತಿ, ಡಿ.ವಿ.ಜಿ., ತಿ.ತಾ. ಶರ್ಮ, ಸಿದ್ಧವ್ವನಹಳ್ಳಿ ಕೃಷ್ಣಶರ್ಮ ಮೊದಲಾದವರು. ನಂತರದಲ್ಲಿ ಪಾಪು, ಎಚ್.ಎಸ್.ಕೆ., ಪಾ.ವೆಂ. ಆಚಾರ್, ಕು.ಶಿ. ಹರಿದಾಸಭಟ್ಟ, ನಿರಂಜನ, ಹಾ.ಮಾ. ನಾಯಕ ಮೊದಲಾದ ಗಣ್ಯರು. ಇವರ ಕೈಯಲ್ಲಿ ಈ ಅಂಕಣ ಬರೆಹಗಳು ಜನಪ್ರಿಯತೆಯ ಜೊತೆಗೆ ಲೋಕಶಿಕ್ಷಣದ ಉಪಕರಣಗಳೂ ಆದವು.

ಡಾ. ಹಾ.ಮಾ. ನಾಯಕರ ಅಂಕಣ ಬರೆಹಗಳ ಸಂಗ್ರಹ 'ಸಂಪ್ರತಿ'ಯ ಮೊದಲನೆಯ ಸಂಪುಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ೧೯೮೯ರ ಬಹುಮಾನ ಬಂದಿತು. ೧೯೫೪ರಲ್ಲಿ ಸಾಹಿತ್ಯ ಕೃತಿಗಳಿಗಾಗಿ ಆರಂಭಗೊಂಡ ಕೇಂದ್ರ ಸಾಹಿತ್ಯ ಅಕಾಡೆಮಿಯ ಈ ಬಹುಮಾನ ಅದುವರೆಗಿನ ಯಾವ ಭಾರತೀಯ ಭಾಷೆಯಲ್ಲಿಯೂ ಅಂಕಣ ಬರೆಹಗಳಿಗೆ ಬಂದಿರಲಿಲ್ಲ. ಸಮಕಾಲೀನ ಜೀವನ, ಸಾಹಿತ್ಯ, ಸಂಸ್ಕೃತಿ, ಕಲೆ, ಶಿಕ್ಷಣ ಮೊದಲಾದ ವಿವಿಧ ವಿಷಯಗಳನ್ನು ಕುರಿತ ವಿಶ್ಲೇಷಣೆಯನ್ನು 'ಸಂಪ್ರತಿ' ಒಳಗೊಂಡಿತ್ತು. ಅಂಕಣ ಬರೆಹಗಳಿಗೆ ಸಾಹಿತ್ಯಿಕ ಸೊಬಗನ್ನು, ಕಲಾತ್ಮಕ ಕುಸುರಿತನವನ್ನು ವೈಚಾರಿಕ ಗಾಂಭೀರ್ಯವನ್ನು ತಂದುಕೊಟ್ಟು, ಅವಸರದ ಸಾಹಿತ್ಯಕ್ಕೆ ಶಾಶ್ವತ ಸಾಹಿತ್ಯದ ಹಿರಿಮೆಯನ್ನೂ ಮಹತ್ವವನ್ನೂ ಕಲ್ಪಿಸಿದ್ದು ಹಾ.ಮಾ. ನಾಯಕರ ವೈಶಿಷ್ಟ್ಯ.

ಅಂಕಣಗಳ ಮುಖ್ಯ ಗುರಿ ಓದುಗರನ್ನು ಸಮಕಾಲೀನ ಸಂದರ್ಭಗಳತ್ತ ಎಳೆಯುವದು, ಆ ಬಗ್ಗೆ ವಿವೇಚನಾತ್ಮಕ ತಿಳಿವಳಿಕೆ ನೀಡುವದು. ಇದು ಕೂಡ ಸೃಜನಶೀಲ ಬರವಣಿಗೆಯೇ. ಯಾಕೆಂದರೆ ಅಂಕಣಕ್ಕೂ ಅದರದೇ ಆದ ಒಂದು ಶಿಲ್ಪ structure ಇದೆ. ಆದಿ, ಮಧ್ಯ ಮತ್ತು ಮುಕ್ತಾಯದ ಒಂದು ಹಿತಮಿತವಾದ ಬಂಧ ಅದಕ್ಕಿರುತ್ತದೆ. ಬರೆದದ್ದೆಲ್ಲ ಶ್ರೇಷ್ಠವಾಗಿರಲಿಕ್ಕಿಲ್ಲ. ಆದರೆ ಶ್ರೇಷ್ಠವಾದ ಅಂಶಗಳು ಅದರಲ್ಲಿ ಖಂಡಿತವಾಗಿಯೂ ಇರುತ್ತವೆ. ಕವಿಯೊಬ್ಬನ ಕವಿತೆಗಳೆಲ್ಲವೂ ಶ್ರೇಷ್ಠವಾಗಿಯೇ ಇರುತ್ತವೆಯೆ? ಅವುಗಳಲ್ಲಿ ತರ-ತಮಗಳು ಇರುವುದಿಲ್ಲವೆ? ಅದೇ ಮಾತು ಅಂಕಣ ಬರೆಹಗಳಿಗೂ ಅನ್ವಯಿಸುತ್ತದೆ. ಈ ಬರೆಹಗಳು ಕಾಲದ ಜೊತೆಗೆ ಸ್ಪರ್ಧಿಸುವುದು ಅನಿವಾರ್ಯ. ಇವುಗಳ ಸತ್ವ, ಲೇಖಕನ ಅನುಭವ, ಅಧ್ಯಯನ ಹಾಗೂ ಬರವಣಿಗೆಯ ಶಕ್ತಿಯನ್ನು ಅವಲಂಬಿಸಿರುತ್ತದೆ.

ಮನೋಜ ಪಾಟೀಲರು ಹೇಳಿಕೊಂಡಂತೆ ಹಳ್ಳಿಯಲ್ಲಿ ಬೆಳೆದು, ಕೃಷಿ ಕುಟುಂಬದ ಪರಿಸರದಲ್ಲಿದ್ದು, ಆ ವಾತಾವರಣದ ಜೀವನೋತ್ಸಾಹ ಮತ್ತು ಮುಕ್ತ ಮನಸ್ಸನ್ನು ಅವರು ಪಡೆದುಕೊಂಡಿದ್ದಾರೆ. ಅವರ ಇಲ್ಲಿಯ ಬರವಣಿಗೆಯ ಉದ್ದಕ್ಕೂ ಈ ಗ್ರಾಮೀಣ ಸೊಗಡನ್ನು ನಿಚ್ಚಳವಾಗಿ ಕಾಣಬಹುದು. ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅಗತ್ಯವಾದ ಮಾಹಿತಿಗಳ ಸಂಗ್ರಹಣೆ, ವಿಚಾರ ಪೂರ್ಣ ವಿಶ್ಲೇಷಣೆ, ಕಲಾತ್ಮಕ ನಿರೂಪಣೆ, ಸರಳವಾದ

ನಿರಾಡಂಬರ ಶೈಲಿಯಿಂದ ಇವು ಸುಲಭವಾಗಿ ಓದಿಸಿಕೊಳ್ಳುತ್ತವೆ. ವಿದ್ವತ್ತಿನ ಹೊರೆಯಿಂದ ಮುಕ್ತವಾಗಿ ಜ್ಞಾನಾರ್ಜನೆಗೆ ನೆರವಾಗುವಂಥ ಉತ್ತಮ ಅಭಿರುಚಿಯನ್ನು ಬೆಳೆಯಿಸಿ, ಪೋಷಿಸುವ ಗುಣ ಇಲ್ಲಿ ಸಾಕಷ್ಟಿದೆ. ಅಂಕಣಕಾರನ ದೃಷ್ಟಿಕೋನವನ್ನು ಒಲವಿನಿಂದ ಅಂಗೀಕರಿಸುವ, ಸಾಮಾನ್ಯವಾಚಕನೇ ಆ ಅಂಕಣದ ಜನಪ್ರಿಯತೆಗೆ ಕಾರಣನಾಗುತ್ತಾನೆ. ಆದರೆ ಜನಪ್ರಿಯತೆಗಾಗಿ ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳದ ಗಟ್ಟಿತನವೇ ಒಬ್ಬ ಅಂಕಣಕಾರನ ವ್ಯಕ್ತಿತ್ವದ ಹಿರಿಮೆ.

ಕೆಲವು ಅಂಕಣಕಾರರಿಗೆ ಕೆಲವೊಂದು ವಿಷಯಗಳಲ್ಲಿ ಮಾತ್ರ ಆಸಕ್ತಿಯಿರುತ್ತದೆ. ಆದರೆ ಮನೋಜ ಪಾಟೀಲರಿಗೆ ಸಾಮಾನ್ಯವಾಗಿ ಎಲ್ಲ ವಿಷಯಗಳ ಬಗೆಗೂ ಆಸಕ್ತಿ. ನಾಡು–ನುಡಿ, ಸಾಹಿತ್ಯ, ಕಲೆ, ಶಿಕ್ಷಣ, ರಾಜಕೀಯ, ಸಿನೆಮಾ, ಪ್ರಸಿದ್ಧ ಹಾಗೂ ಅಪ್ರಸಿದ್ಧ ವ್ಯಕ್ತಿಗಳ ಅಂತರಂಗ – ಬಹಿರಂಗಗಳು ಹೀಗೆ ಹಲವಾರು ಆಸಕ್ತಿಗಳ ಸಾರವನ್ನು ಸಮಯೋಚಿತವಾಗಿ ಬಳಸಿಕೊಂಡು ಅವರು ತಮ್ಮ ಅಂಕಣದ ಶಿಲ್ಪವನ್ನು ರೂಪಿಸುತ್ತಾರೆ. ವಿಷಯ ಪ್ರತಿಪಾದನೆಗೆ ಇವೆಲ್ಲವೂ ಪೋಷಕವಾಗಿ ನಿಲ್ಲುತ್ತವೆ. ಈ ಬರೆಹಗಳ ವಸ್ತುವೈವಿಧ್ಯಕ್ಕೆ ಶೀರ್ಷಿಕೆಗಳನ್ನು ನೋಡಿದರೇ ಗೊತ್ತಾಗುತ್ತದೆ. ಉದಾ: 'ಸಾಹಿತಿಗಳಲ್ಲಿಯ ಪಾರದರ್ಶಕತೆ ಎಷ್ಟೆಷ್ಟು?', 'ರೈತನ ಉತ್ಪನ್ನಗಳಿಗೆ ಎಂ.ಆರ್.ಪಿ. ಏಕೆ?', 'ಇವರೇನು ನಟರೊ? ಇಲ್ಲ ವಿಟರೋ?', 'ಸಾಯಿಬಾಬಾ', 'ಕಲಾವಿದ ಹುಸೇನ್ ಭಾರತದಲ್ಲಿಯೇ ಇರಬೇಕಿತ್ತಲ್ಲವೇ?', 'ರಾಹುಲ್ ಕೊನೆಗೆ ಇನ್ನೊಬ್ಬ ರಾಜೀವ ಆದಾನೆಯೆ?', 'ಮನೆಯೇ ಮೊದಲ ಪಾಠಶಾಲೆ ಆಗುತ್ತಿಲ್ಲ ಏಕೆ?', 'ರಾಜಕೀಯ ಎಂದರೆ ಮೋಸವೇ? ಸೇವೆಯೆ?', 'ಡಾ. ರಾಜ್ ಇಲ್ಲದ ಕನ್ನಡ ಮತ್ತು ಕರ್ನಾಟಕ' ಹೀಗೇ ವೈವಿಧ್ಯ ಮುಂದುವರಿಯುತ್ತದೆ. 'ಅಮಿತಾಬ್, ಶಾರುಖ್ ದೇಶಕ್ಕೆ ಮಾಡಿದ್ದೇನು?', 'ಭಯೋತ್ಪಾದನೆಗೆ ಭಾರತ ಹೂ ಹಾಸಿಗೆ' ಈ ವೈವಿಧ್ಯ ನಿಜಕ್ಕೂ ಅಚ್ಚರಿಗೊಳಿಸುವಂಥದು.

ಕೆಲವು ವ್ಯಕ್ತಿಚಿತ್ರಗಳನ್ನು 'ಸ್ಪಂದನ' ಒಳಗೊಂಡಿದೆ. ಜ್ಞಾನದೇವ ದೊಡ್ಡಮೇಟಿ ಅವರನ್ನು ಕುರಿತು ಬರೆದ 'ಮಾಜಿ ಶಾಸಕರ ಮೌಲ್ಯಾಧಾರಿತ ಈ ಬದುಕು' ಲೇಖನವಂತೂ ನಾನು ಈಚೆಗೆ ಓದಿದ ಅತ್ಯುತ್ತಮ ವ್ಯಕ್ತಿಚಿತ್ರಗಳಲ್ಲಿ ಒಂದು ಎಂದು ಸಂತೋಷದಿಂದ ಹೇಳಬಲ್ಲೆ. 'ಇಬ್ಬರು ಶಿಕ್ಷಕರು, ನೂರಾರು ನೆನಪುಗಳು', 'ಛಡಿ ಚಂಚಂ ಮತ್ತು ಗುರುಗಳ ಗುಲಾಮ' ಇಂಥ ಬರೆಹಗಳು ಹಳ್ಳಿಯ ಜೀವನವನ್ನು ನಖಶಿಖಾಂತ ಅನುಭವಿಸಿ ಆನಂದಿಸಿದ ಮನೋಜ ಪಾಟೀಲರಂಥವರಿಗೆ ಮಾತ್ರ ಸಾಧ್ಯ. ತಮ್ಮ ಲೇಖನಗಳ ಇಡೀ ಆಶಯವನ್ನು ಅಲ್ಲಲ್ಲಿ ಮಾರ್ಮಿಕವಾದ, ಧ್ವನಿಪೂರ್ಣವಾದ ಒಂದೆರಡೇ ಮಾತುಗಳಲ್ಲಿ ವ್ಯಾಖ್ಯಾನಿಸಬಲ್ಲ ಕೌಶಲ್ಯವನ್ನು ಪಾಟೀಲರು ತೋರಿಸಿದ್ದಾರೆ. ಇದೇ ತಿಂಗಳ ದಿನಾಂಕ ೮ರ ಅಂಕಣದಲ್ಲಿ 'ಮತ್ತೆ ಹಿಂದೀ–ಚೀನೀ ಭಾಯಿಭಾಯಿ' ಲೇಖನ ಯುದ್ಧದ ೫೦ ವರ್ಷಗಳನ್ನು ನೆನಪಿಸುತ್ತದೆ. 'ಬಂದೂಕಿನಿಂದ ಹೊಡೆಯ ಬಂದವರಿಗೆ ನಾವು ಬಡಿಗೆಯಿಂದ ಸದೆಬಡಿಯಲು ಹೊರಟಿದ್ದೆವು' ಎಂಬ ಕಠೋರ

ವಾಸ್ತವವಾಗಲಿ, ಕಳೆದ ಶನಿವಾರದ ಅಂಕಣದಲ್ಲಿ ಬೆಳಗಾವಿ ಅಧಿವೇಶನದ ಬಗ್ಗೆ ಬರೆದ ಒಂದು ಮಾತಿದು: "ಚಳಿಗಾಲದ ನಾಮಕಾವಾಸ್ತೆ ಅಧಿವೇಶನದ ಒಂದೇ ಒಂದು ಸಾಧನೆ ಎಂದರೆ, ಹಾವೇರಿ–ಕಾವೇರಿಯಿಂದ ಮನದಲ್ಲೇ ಬೆವರಿದ್ದ ಮುಖ್ಯಮಂತ್ರಿ ಜಗದೀಶ ಶೆಟ್ಟರಿಗೆ ಪುನಃ ಆಕ್ಸಿಜನ್ ದೊರೆತದ್ದು." ಎಷ್ಟೊಂದು ಧ್ವನಿಪೂರ್ಣ ವಾಗಿದೆಯಲ್ಲವೆ?

'ಸ್ಪಂದನ'ದ ಬಗ್ಗೆ ನಾನು ಹೇಳುವುದಾದರೆ ಸುವರ್ಣದ ಚಿತ್ರಕ್ಕೆ ಬೆಳ್ಳಿಯ ಚೌಕಟ್ಟು ಎಂದು ಹೇಳಬಲ್ಲೆ. ಅಂಕಣದ ವಿಷಯಗಳ ವಿಶ್ಲೇಷಣೆ ಸುವರ್ಣದಷ್ಟೇ ಬೆಲೆಯುಳ್ಳದ್ದು. ಅಂಕಣಕ್ಕೆ ಸ್ಥಳದ ಇತಿಮಿತಿಗಳಿರುವುದರಿಂದ ಅದು ಬೆಳ್ಳಿಯ ಚೌಕಟ್ಟು

(೨೨-೧೨-೨೦೧೨)

ಹಲಸಂಗಿ ಗೆಳೆಯರ ಪ್ರತಿಷ್ಠಾನ: ಉದ್ಘಾಟನೆ

ಆತ್ಮೀಯ ಸ್ನೇಹಿತರೂ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆದ ಡಾ. ಗುರುಲಿಂಗ ಕಾಪಸೆಯವರೆ, ಅಧ್ಯಕ್ಷರಾದ ಈಶ್ವರಚಂದ್ರ ಚಿಂತಾಮಣಿ ಅವರೆ, ಪ್ರತಿಷ್ಠಾನದ ಎಲ್ಲ ಸದಸ್ಯರೆ, ಸಹೃದಯರಾದ ಸಭಿಕರೆ, ಎಲ್ಲರಿಗೂ ನಮಸ್ಕಾರ.

ವಿಜಾಪುರ ಜಿಲ್ಲೆಯ ಜನಮನದ ಅಭೀಪ್ಸೆ ಈ ವರ್ಷ ಈಡೇರಿದೆ. 'ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು' ಎಂಬ ಕವಿ-ಪ್ರವಾದಿ ಮಧುರಚೆನ್ನರ ವಾಣಿಯಂತೆ ಇಂದು 'ಹಲಸಗಿ ಗೆಳೆಯರ ಪ್ರತಿಷ್ಠಾನ'ವನ್ನು ಉದ್ಘಾಟಿಸುವ ಭಾಗ್ಯ ನನ್ನದಾಗಿದೆ. ಅದನ್ನು ಬಹಳ ಸಂತೋಷದಿಂದ ನೆರವೇರಿಸಿದ್ದೇನೆ.

ಕರ್ನಾಟಕ ಸರಕಾರ ಕನ್ನಡದ ಶ್ರೇಷ್ಠ ಸಾಹಿತಿಗಳ, ಸಂಗೀತಗಾರರ ಹಾಗೂ ಕಲಾವಿದರ ಹೆಸರಿನಲ್ಲಿ ಪ್ರತಿಷ್ಠಾನಗಳನ್ನು ಸ್ಥಾಪಿಸಿ, ಆಯಾ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಾಗೂ ಗ್ರಂಥಪ್ರಕಾಶನ ಮತ್ತು ಪ್ರಶಸ್ತಿ ಪ್ರದಾನಗಳಿಗೆ ಅವಕಾಶಗಳನ್ನು ಒದಗಿಸಿದೆ. ಉತ್ತರ ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ, ಧಾರವಾಡದಲ್ಲಿ ದ.ರಾ.ಬೇಂದ್ರೆ, ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, (ಹುಬ್ಬಳ್ಳಿ), ಡಿ.ವಿ. ಹಾಲಭಾವಿ; ಹಾವೇರಿಯಲ್ಲಿ ವಿ.ಕೃ. ಗೋಕಾಕ, ಬೆಳಗಾವಿಯಲ್ಲಿ ಬಸವರಾಜ ಕಟ್ಟೀಮನಿ ಮತ್ತು ಬೆಟಗೇರಿ ಕೃಷ್ಣಶರ್ಮ ಟ್ರಸ್ಟುಗಳನ್ನು ಹೆಸರಿಸಬಹುದು. ವಿಜಾಪುರ ಜಿಲ್ಲೆ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಹಳ ಉನ್ನತ ಸ್ಥಾನದಲ್ಲಿದ್ದರೂ ಇಲ್ಲಿ ಅಂಥ ಒಂದು ಪ್ರತಿಷ್ಠಾನವಿಲ್ಲದಿರುವುದನ್ನು ಗಮನಿಸಿ, ನಾನು ೨೬-೬-೨೦೧೨

ರಂದು ಆಗ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಡಿ.ವಿ. ಸದಾನಂದಗೌಡರಿಗೆ ಪತ್ರಬರೆದು, ವಿಜಾಪುರದಲ್ಲಿ ಶ್ರೇಷ್ಠ ಅನುಭಾವ ಕವಿ ಮಧುರಚೆನ್ನರ ಹೆಸರಿನಲ್ಲಿ ಪ್ರತಿಷ್ಠಾನವೊಂದನ್ನು ಸ್ಥಾಪಿಸುವ ಅವಶ್ಯಕತೆಯನ್ನು ವಿವರಿಸಿದೆ. ಆಗ ಶ್ರೀ ಗೋವಿಂದ ಕಾರಜೋಳ ಅವರು ಸಂಸ್ಕೃತಿ ಇಲಾಖೆ ಮಂತ್ರಿಗಳಾಗಿದ್ದರು. ನಮ್ಮ ಒತ್ತಾಯದಿಂದ ಅದಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತು, ಹೆಸರಿನಲ್ಲಿ ಸ್ವಲ್ಪ ಬದಲಾವಣೆಗೊಂಡು ಪ್ರತಿಷ್ಠಾನ ಸ್ಥಾಪನೆಗೊಂಡಿತು. ಎಲ್ಲ ಪ್ರತಿಷ್ಠಾನಗಳಿಗೂ ಆಯಾ ಜಿಲ್ಲಾಧಿಕಾರಿಗಳು ಹಣಕಾಸಿನ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರೂ ಅವುಗಳಿಗೆಲ್ಲ ಒಬ್ಬೊಬ್ಬ ಅಧ್ಯಕ್ಷರಿದ್ದಾರೆ. ಈ ಪ್ರತಿಷ್ಠಾನಕ್ಕೂ ಒಬ್ಬರನ್ನು ಅಧ್ಯಕ್ಷರನ್ನಾಗಿಸಿದರೆ ಸ್ವತಂತ್ರವಾಗಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ತೀವ್ರ ಕಾರ್ಯತತ್ಪರರಾಗಲು ಅನುಕೂಲವಾಗುತ್ತದೆ.

ಕನ್ನಡ ಸಾಹಿತ್ಯ ಪ್ರಪಂಚ ಈಗಾಗಲೆ ಅರಿತಿರುವಂತೆ ಮಧುರಚೆನ್ನರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಅನುಭಾವ ಕವಿಯೆನಿಸಿ, ಹಲಸಂಗಿ ಗ್ರಾಮವನ್ನು ಕರ್ನಾಟಕದ ಸಾಂಸ್ಕೃತಿಕ ಭೂಪಟದಲ್ಲಿ ಚಿರಸ್ಮರಣೀಯವಾಗುವಂತೆ ಅಂಕಿತಗೊಳಿಸಿದರು. ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಪಿ. ಧೂಲಾ ಮೊದಲಾದ ಅವರ ಶಿಷ್ಯ ಬಳಗ ಆ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿದರು. ಹಲಸಂಗಿ ಗೆಳೆಯರು ಇಡೀ ಜಿಲ್ಲೆಯನ್ನೇ ತಮ್ಮ ಕರ್ಮಭೂಮಿ ಹಾಗೂ ಯೋಗಭೂಮಿಯನ್ನಾಗಿ ಮಾಡಿಕೊಂಡು ಇಡೀ ಕನ್ನಡ ನಾಡನ್ನೇ ತಮ್ಮೆಡೆಗೆ ಆಕರ್ಷಿಸಿದರು. ಅರ್ಧಶತಮಾನಕ್ಕಿಂತ ಹಿಂದೆ, ಇಂದಿನಂತೆ ಯಾವ ಸಂಪರ್ಕ–ಸೌಲಭ್ಯಗಳೂ ಇಲ್ಲದ ಕಾಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಂದ ಕುರಿತೋದದ ಜನಸಾಮಾನ್ಯರಲ್ಲಿಯೂ ಹೊಸ ಎಚ್ಚರವನ್ನು ಹುಟ್ಟಿಸಿ, ಇದನ್ನು ತಮ್ಮ ಪ್ರಯೋಗ ಕ್ಷೇತ್ರವನ್ನಾಗಿಯೂ ಮಾಡಿದರು. ೧೯೨೧ರಲ್ಲಿ ಹುಟ್ಟು ಹಾಕಿದ ಧಾರವಾಡದ ಬೇಂದ್ರೆಯವರ 'ಗೆಳೆಯರ ಗುಂಪಿ'ಗೆ ಸಮಾನಾಂತರವಾಗಿ ೧೯೨೨ರಲ್ಲಿ ಮಧುರಚೆನ್ನರು 'ಹಲಸಂಗಿ ಗೆಳೆಯರ ಗುಂಪು' ಸ್ಥಾಪಿಸಿ, ಆ ಮೂಲಕ 'ಅರವಿಂದ ಮಂಡಲ'ವನ್ನು ಪ್ರಾರಂಭಿಸಿದರು. ನಾಡಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿ ನಾಡಿನ ಹಿರಿಯ ಸಾಹಿತಿಗಳು ಹಲಸಂಗಿಗೆ ಆಸ್ಥೆಯಿಂದ ಧಾವಿಸಿ ಬರುವಂತೆ ಮಾಡಿದರು. 'ಅರವಿಂದ ಗ್ರಂಥಮಾಲೆ'ಯಿಂದ ಅನೇಕ ಸಾಹಿತ್ಯಿಕ ಹಾಗೂ ಆಧ್ಯಾತ್ಮಿಕ ಗ್ರಂಥಗಳನ್ನು ಪ್ರಕಟಿಸಿದರು.

ಇಷ್ಟೇ ಅಲ್ಲ, ಜಾನಪದದ ಬಗ್ಗೆ ವಿಚಾರ ಮಾಡಿದ ಮೊದಲಿಗರು ಮಧುರಚೆನ್ನರೇ ಎಂಬುದು ಸ್ಪಷ್ಟವಾಗಿದೆ. ೧೯೨೩ರಲ್ಲಿ ೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ವಿಜಾಪುರದಲ್ಲಿ ನಡೆದ ಸಂದರ್ಭದಲ್ಲಿ, 'ಹಳ್ಳಿಯ ಹಾಡುಗಳು' ಎಂಬ ಬಗ್ಗೆ ಮಧುರಚೆನ್ನರು ಮಂಡಿಸಿದ ಪ್ರಬಂಧ ೧೯೨೪ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಚೆನ್ನಮಲ್ಲಪ್ಪ (ಮಧುರಚೆನ್ನ), ಲಿಂಗಪ್ಪ (ಸಿಂಪಿ ಲಿಂಗಣ್ಣ), ರೇವಪ್ಪ (ಕಾಪಸೆರೇವಪ್ಪ) ಇವರು ಕೂಡಿ ಪ್ರಕಟಿಸಿದ 'ಗರತಿಯ ಹಾಡು' ಬಹುಶಃ ಜಾನಪದ ಕ್ಷೇತ್ರದಲ್ಲಿ ಮೊಟ್ಟ ಮೊದಲ ಸಂಗ್ರಹ. ಹಲಸಂಗಿಯ ಗೆಳೆಯರು ಪ್ರಾರಂಭಿಸಿದ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕಾರ್ಯ ಮುಂದೆ ಕರ್ನಾಟಕದಾದ್ಯಂತ ಉತ್ಸಾಹದಿಂದ ನಡೆದು, ಈ ಬಗೆಯ ಕೆಲಸಗಳಿಗೆ

ಪ್ರೇರಣೆ ಒದಗಿಸಿದ್ದಲ್ಲದೆ, ಜಾನಪದ ಅಧ್ಯಯನವು ವಿಶ್ವವಿದ್ಯಾಲಯಗಳ ಪಠ್ಯಕ್ರಮದಲ್ಲಿ ಸೇರ್ಪಡೆಯಾಗುವುದಕ್ಕೂ ಹಿನ್ನೆಲೆಯ ಸ್ಫೂರ್ತಿ ಯಾಯಿತು. ಇಷ್ಟೇ ಅಲ್ಲ, ಸ್ವತಂತ್ರವಾದ 'ಜಾನಪದ ವಿಶ್ವವಿದ್ಯಾಲಯ'ವೊಂದು ಇತ್ತೀಚೆಗೆ ಉತ್ತರ ಕರ್ನಾಟಕದ ಸಿಗ್ಗಾಂವಿ ಬಳಿಯಲ್ಲಿ ಸ್ಥಾಪನೆಗೊಂಡುದು ಎಲ್ಲರೂ ಕಂಡ ಮಾತಾಗಿದೆ.

ಈ ಎಲ್ಲ ಕಾರಣಗಳಿಂದ ಕನ್ನಡ ನವೋದಯ ಸಾಹಿತ್ಯದ ಕೇಂದ್ರಗಳೆನಿಸಿದ್ದ ಧಾರವಾಡ, ಮೈಸೂರು ಹಾಗೂ ಮಂಗಳೂರಿನ ಜೊತೆಗೆ ಹಲಸಂಗಿಯನ್ನು ನಾಲ್ಕನೆಯ ಕೇಂದ್ರವಾಗಿ ಪರಿಗಣಿಸುವದು ಅತ್ಯಗತ್ಯವೆಂಬ ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯ ಅತ್ಯಂತ ಸಮಂಜಸವಾಗಿದೆ. `Future Poetry' ಎಂದು ಯಾವುದನ್ನು ಅರವಿಂದ ಮಹರ್ಷಿಗಳು ೧೯೪೪ರ ವೇಳೆಗೆ ಪ್ರಕಟವಾದ ತಮ್ಮ ಕೃತಿಯಲ್ಲಿ ಸೂಚಿಸಿದರೊ, ಅಂಥ ಮೇಲ್ಮಟ್ಟದ ಅನುಭಾವ ಕಾವ್ಯ 'ನನ್ನ ನಲ್ಲ'ವನ್ನು ಮಧುರಚೆನ್ನರು ೧೯೨೯-೩೦ರಷ್ಟು ಹಿಂದೆಯೇ ಬರೆದಿದ್ದರು. ಅವರ ಆತ್ಮಕಥೆಗಳಾದ 'ಪೂರ್ವರಂಗ', 'ಕಾಳರಾತ್ರಿ', 'ಬೆಳಗು', 'ಆತ್ಮಶೋಧನೆ' ಕೃತಿಗಳು ಅವರೊಬ್ಬ ದಿವ್ಯತ್ವದ ಸಾಧಕರಾಗಿ ನಡೆಯಿಸಿದ ಆತ್ಮಶೋಧವೇ ಆಗಿತ್ತು. ಹೀಗೆ ಅವರ ಗದ್ಯ-ಪದ್ಯಗಳಲ್ಲಿ ಈ ಅನುಭಾವ ಜಗತ್ತು ಸಾಹಿತ್ಯದ ಸಕಲ ಲಕ್ಷಣ ಸಮನ್ವಿತವಾಗಿ ಪ್ರಕಟಗೊಂಡಿರುವುದು ಹೊಸಗನ್ನಡದಲ್ಲಿ ಬಹುಶಃ ಇದೇ ಮೊದಲು ಎಂದು ಗುರುತಿಸಲಾಗಿದೆ. ಸಾಹಿತ್ಯ ನಿರ್ಮಿತಿಯ ಜೊತೆಗೆ ಮಧುರಚೆನ್ನರು ಹಾಗೂ ಸಿಂಪಿ ಲಿಂಗಣ್ಣನವರು ಸಾಹಿತಿಗಳನ್ನು ನಿರ್ಮಿಸಿದ್ದೂ ಬೆಳೆಸಿದ್ದೂ ಈಗಾಗಲೆ ಇತಿಹಾಸವಾಗಿದೆ.

ಇಂಥ ಅಸಾಧಾರಣ ವ್ಯಕ್ತಿತ್ವವುಳ್ಳ ಮಧುರಚೆನ್ನರು ಸ್ನೇಹಜೀವಿಯಾಗಿದ್ದು ಹಲಸಂಗಿ ಊರನ್ನಷ್ಟೇ ಅಲ್ಲ, ಇಡೀ ವಿಜಾಪುರ ಜಿಲ್ಲೆಯನ್ನೇ ಸಾಂಸ್ಕೃತಿಕ ವಲಯವನ್ನಾಗಿ ಮಾರ್ಪಡಿಸಿದರು, ಅಧ್ಯಾತ್ಮ ಸಾಧಕರ ಕ್ಷೇತ್ರವನ್ನಾಗಿ ಪರಿವರ್ತಿಸಿದರು. ಮಧುರಚೆನ್ನರ ಅತ್ಯಂತ ಆಪ್ತ ಗೆಳೆಯರಾದ ಕವಿವರ್ಯ ಬೇಂದ್ರೆಯವರು ಒಂದು ಸಂದರ್ಭದಲ್ಲಿ ಹೇಳಿದರು: "ಬಸವಣ್ಣನಂತೆ ಚೆನ್ನಮಲ್ಲಪ್ಪ ಗಣಜೀವಿ, ಗಣಸಹಿತ ಕಲ್ಯಾಣ ಕಾಣಬೇಕು. ಇವರ ಸಾಧನೆಯಿಂದ ಅರವಿಂದರ ಯೋಗಧ್ವನಿ, ಶ್ರೀಮಾತೆಯವರ ಪ್ರೇಮಸ್ಪರ್ಶ ಜನತೆಗೆ ಒದಗುವಂತಾಯಿತು." ಬೇಂದ್ರೆಯವರ 'ಗೆಳೆಯರ ಗುಂಪಿ'ನ ಸದಸ್ಯರು ಸಾಮಾನ್ಯವಾಗಿ ಕಾಲೇಜಿನ ಪದವಿಗಳನ್ನು ಪಡೆದವರು. ಆದರೆ 'ಹಲಸಂಗಿಯ ಗೆಳೆಯರು' ಕೇವಲ ಕನ್ನಡ ಮುಲ್ಕಿ ಪರೀಕ್ಷೆ ಮಾಡಿಕೊಂಡವರು. ಇವರೆಲ್ಲ ಸ್ವಯಂ ಅಧ್ಯಯನದಿಂದ ಮೈಗೂಡಿಸಿ ಕೊಂಡ ಜ್ಞಾನ, ತಿಳಿವು ವಿಪುಲವಾದದ್ದು. ವೇದೋಪನಿಷತ್ತುಗಳನ್ನು, ಭಾರತೀಯ ಹಾಗೂ ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು, ಅರವಿಂದರ ಬರೆಹಗಳನ್ನು ಮೂಲದಲ್ಲಿಯೆ ಓದಿ, ಕರಗತ ಮಾಡಿಕೊಳ್ಳುತ್ತ ಪರಿಣತಿಯನ್ನು ಪಡೆದವರು. ಶ್ರೀರಾಮಕೃಷ್ಣ-ವಿವೇಕಾನಂದ ಜನ್ಮದಿನೋತ್ಸವಗಳನ್ನು ಕರ್ನಾಟಕದಲ್ಲಿ ಮೊಟ್ಟಮೊದಲು ಪ್ರಾರಂಭಿಸಿದವರು ಹಲಸಂಗಿಯ ಗೆಳೆಯರು. ಒಂದು ಸಂದರ್ಭದಲ್ಲಿ ಮಧುರಚೆನ್ನರು ಹೇಳಿಕೊಂಡಿದ್ದಾರೆ: "ನನಗೇನೊ ಇಂಥದೊಂದು ಜಾತಿಮತದವನೆಂದು ಹೇಳಿಕೊಳ್ಳುವುದಕ್ಕೆ ಜೀವನದಲ್ಲಿ

ಸಮ್ಮತಿಯಿಲ್ಲ. ಸರ್ವಮಾನವರೆಲ್ಲ ಒಂದೇ ಜಾತಿ. ಮನುಷ್ಯಜಾತಿ ಎಂಬುದೊಂದೇ ಒಂದು. ಈಗಿರುವ ಸರ್ವದೇಶಗಳ ಜನಾಂಗಗಳ ಗ್ರಂಥಗಳ ಸತ್ಯತೆಯು ಸರ್ವರಿಗೆ ವಿದಿತವಾಗಿ, ಇನ್ನು ಮುಂದೆ ಒಂದೇ ಮನೆಯಲ್ಲಿ, ಒಬ್ಬೊಬ್ಬರೂ ತಮ್ಮ ಅಭಿರುಚಿ ಬೇರೆ ಬೇರೆ ಹೇಳಿದ ಪದ್ಧತಿಯಲ್ಲಿ ಸಾಧನವನ್ನು ಮಾಡುತ್ತಲಿರಬಹುದೆಂಬ ಕಾಲವೊಂದು ಬೇಗನೆ ಬರುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹ ತೋರುವುದಿಲ್ಲ. ಕಾಲವೇ ಹಾಗೆ ಹೇಳುತ್ತಿದೆಯೆಂದು ಈಗಿನ ಮಹಾಪುರುಷರ ಮನಸ್ಸಿನ ಒಲವಿನ ಮೇಲಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ."

ಮತಧರ್ಮದ ಹೆಸರಿನಲ್ಲಿ ಮನುಷ್ಯ ಮನುಷ್ಯರನ್ನು ವಿಭಜಿಸುತ್ತಿರುವ, ಧಾರ್ಮಿಕ ಮೂಲಭೂತವಾದದ ಆಕ್ರಮಣದ ಇಂದಿನ ದಿನಗಳಲ್ಲಿ ಧರ್ಮವನ್ನು ಕುರಿತ ಮಧುರಚೆನ್ನರ ಈ ವ್ಯಾಖ್ಯಾನ ಅತ್ಯಂತ ಪ್ರಸ್ತುತವೆಂಬುದನ್ನು ನಾವು ಗಮನಿಸಬೇಕು. ಪ್ರತಿಷ್ಠಾನದ ಸದಸ್ಯರಲ್ಲಿ ಹಿರಿಯರಾದ ಡಾ. ಗುರುಲಿಂಗ ಕಾಪಸೆಯವರು 'ಮಧುರಚೆನ್ನರ ಜೀವನ ಹಾಗೂ ಕೃತಿಗಳ'ನ್ನು ಕುರಿತು ಮೊಟ್ಟಮೊದಲು ಪ್ರೌಢವಾದ ಸಂಶೋಧನ ಪ್ರಬಂಧ ಬರೆದವರು. ಅವರ ಸಮಗ್ರ ಕೃತಿಗಳು ಪುನರ್ಮುದ್ರಣಗೊಳ್ಳುವಂತೆ ಮಾಡಿ, ಅವುಗಳಿಗೆ ವಿಸ್ತಾರವಾದ ಪ್ರಸ್ತಾವನೆ ಬರೆದು, ಪುನಶ್ಶೋಧನೆ ಮಾಡಿ ಒಂದು ರೀತಿ ಮಧುರಚೆನ್ನರಿಗೆ ಮತ್ತು ಹಲಸಂಗಿ ಗೆಳೆಯರಿಗೆ ಒಂದಿಲ್ಲ ಒಂದು ರೀತಿಯಲ್ಲಿ ಪುನರ್ಜನ್ಮ ನೀಡಿದರು ಎಂದು ಹೇಳಿದರೆ ತಪ್ಪಾಗದು. ಅವರ ಮಾರ್ಗದರ್ಶನವಂತೂ ಈ ಪ್ರತಿಷ್ಠಾನಕ್ಕೆ ಇದ್ದೇ ಇರುತ್ತದೆ.

ಇತ್ತೀಚೆಗೆ ಡಾ. ಫ.ಗು. ಹಳಕಟ್ಟಿಯವರ ಹೆಸರಿನ ಸಂಶೋಧನ ಸಂಸ್ಥೆಯೊಂದು ಸ್ಥಾಪನೆಗೊಂಡು, ವಿಜಾಪುರಕ್ಕೆ ಪ್ರತಿಷ್ಠಿತ ಸ್ಥಾನ ಗಳಿಸಿಕೊಡುವಲ್ಲಿ ಅದರ ಚಟುವಟಿಕೆಗಳು ಭರದಿಂದ ಸಾಗಿರುವ ಸಂದರ್ಭದಲ್ಲಿ, 'ಹಲಸಂಗಿ ಗೆಳೆಯರ ಪ್ರತಿಷ್ಠಾನ' ವಿಜಾಪುರದ ಮತ್ತೊಂದು ಕಣ್ಣಿನಂತೆ, ಎರಡೂ ಕಣ್ಣುಗಳು ಸಮಗ್ರ ದೃಷ್ಟಿಯಿಂದ ಹಾಗೂ ದೂರದೃಷ್ಟಿಯಿಂದ ಬೆಳೆದು ಬರಲಿ ಎಂದು ಹಾರೈಸುತ್ತೇನೆ.

(೫-೩-೨೦೧೪)

ಏಕೀಕರಣಪೂರ್ವ ಕರ್ನಾಟಕ ಹೇಗಿತ್ತು...?

(ಬೀಸು ನೋಟ)

ಏಕೀಕರಣಪೂರ್ವ ಕರ್ನಾಟಕ ಹೇಗೆ ಭಿನ್ನವಾಗಿತ್ತು?

"ಪ್ರಾಚೀನ ಭಾಷೆಗಳು ಬೆಳೆದು ಪರಿಪೂರ್ಣ ವ್ಯವಸ್ಥೆ ಹೊಂದಬೇಕಾದರೆ ಭಾಷಾ ತಳಹದಿ ಮೇಲೆ ಪ್ರಾಂತಗಳನ್ನು ಪುನರ್ವಿಂಗಡಿಸುವುದು ಅವಶ್ಯಕ" ಈ ರೀತಿ ಗಾಂಧೀಜಿಯವರು ಅವತ್ತು (೨೫-೧-೧೯೪೪೮) ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿದ ಮಾತು ಸತ್ಯವಾದುದು. ಏಕೀಕರಣ ಪೂರ್ವದಲ್ಲಿ ಕರ್ನಾಟಕದ ಪರಿಸ್ಥಿತಿ ಇತರ ಪ್ರದೇಶಗಳಿಗಿಂತ ಒಂದು ಮಹತ್ವದ ವಿಷಯದಲ್ಲಿ ಭಿನ್ನವಾಗಿಯೇ ಇತ್ತು. ಇದು ೧೯ ಆಡಳಿತಗಳಲ್ಲಿ ಪಂಚಿ ಹೋಗಿತ್ತು. ಆ ಎಲ್ಲ ಭಾಗಗಳನ್ನು ಒಂದೇ ಪ್ರಾಂತಬಲ್ಲಿ ತರದೇ ಹೋದರೆ ಕರ್ನಾಟಕಸ್ಥರ ಏಳಿಗೆ ಎಂದೆಂದೂ ಸಾಧ್ಯವಿಲ್ಲ ಎಂಬ ಭಾವನೆ ಆಗಿನ ಮುಖಂಡರು-ಜನರಲ್ಲಿ ಗಟ್ಟಿಯಾಗಿತ್ತು. ದಕ್ಷಿಣ ಭಾರತದ ಯಾವ ಭಾಷಾ ಪ್ರದೇಶವೂ ಕರ್ನಾಟಕದಷ್ಟು ಎಂದೂ ತುಂಡರಿಸಲ್ಪಟ್ಟಿರಲಿಲ್ಲ ಎಂಬುದನ್ನು ನಾವು ತಿಳಿದಿರಬೇಕು. ಮುಂಬಯಿ, ಮದ್ರಾಸ್, ಕೊಡಗು, ಮೂರು ಪ್ರಾಂತ್ಯಗಳಿದ್ದವು. ೧. ಮೈಸೂರು, ೨. ಹೈದರಾಬಾದ್, ೩. ಕೊಲ್ಲಾಪುರ, ೪. ಸಾಂಗಲಿ, ೫. ಮಿರಜ್ (ಹಿರಿ) ೬. ಮಿರಜ್ (ಕಿರಿ), ೭. ಕುರಂದವಾಡ (ಹಿರಿ), ೮. ಕುರಂದವಾಡ (ಕಿರಿ), ೯. ಜಮಖಂಡಿ, ೧೦. ಮುಧೋಳ, ೧೧. ರಾಮದುರ್ಗ, ೧೨. ಜತ್ತ, ೧೩. ಅಕ್ಕಲಕೋಟೆ, ೧೪. ಔಂಧ್ (ಗುಣದಾಳ), ೧೫. ಸವಣೂರು, ೧೬. ಸೊಂಡೂರು ಸಂಸ್ಥಾನಗಳಾಗಿದ್ದವು.

ಕರ್ನಾಟಕ ಅಥವಾ ಕನ್ನಡ ಭಾಷೆ ನಿಸ್ತೇಜವಾಗಿದ್ದು ಹೇಗೆ?

ಕರ್ನಾಟಕಸ್ಥರೆಲ್ಲರೂ ಒಂದೇ ಆಡಳಿತದಲ್ಲಿ ಒಂದುಗೂಡದೇ ಗತ್ಯಂತರವಿಲ್ಲ ಎಂಬ ಕಲ್ಪನೆಯು ಉತ್ತರ ಕರ್ನಾಟಕದಲ್ಲಿ ಮೊದಲಿತ್ತು.

ಉ.ಕ.ದ ನಾಲ್ಕು ಜಿಲ್ಲೆಗಳು ಮುಂಬಯಿ ಪ್ರಾಂತ್ಯದ ದಕ್ಷಿಣ ತುದಿಗಿದ್ದು ತೀರ ನಿರ್ಲಕ್ಷಿಸಲ್ಪಟ್ಟಿದ್ದವು. ಎಂಜಿನಿಯರಿಂಗ್, ಮೆಡಿಕಲ್, ಕೃಷಿ ಶಿಕ್ಷಣಕ್ಕಾಗಿ ಇಲ್ಲಿನ ವಿದ್ಯಾರ್ಥಿಗಳು ದೂರದ ಪುಣೆ, ಮುಂಬಯಿಗಳಿಗೆ ಹೋಗಬೇಕಾಗಿತ್ತು. ೧೯ನೇ ಶತಮಾನದ ಆದಿ ಭಾಗದಲ್ಲಂತೂ ಉತ್ತರಕ್ಕೆ ಮರಾಠರ ಆಳ್ವಿಕೆ, ಈಶಾನ್ಯದಲ್ಲಿ ನಿಜಾಮರ ಆಡಳಿತ, ದಕ್ಷಿಣದಲ್ಲಿ ಬ್ರಿಟಿಷರ ಪ್ರಭಾವ. ಮದ್ರಾಸು ಪ್ರಾಂತ್ಯದಲ್ಲಿ ತಮಿಳು, ತೆಲುಗು, ಹೈದರಾಬಾದ ಪ್ರಾಂತ್ಯದಲ್ಲಿ ಉರ್ದು, ಮುಂಬಯಿ ಪ್ರಾಂತ್ಯದ ಅಧೀನಕ್ಕೊಳಪಟ್ಟ ಸಂಸ್ಥಾನಗಳಲ್ಲಿ ಮರಾಠಿ – ಹೀಗೆ ಹಲವು ಭಾಷೆ, ಸಂಸ್ಕೃತಿಗಳ ಅಡಿಯಲ್ಲಿ ಸಿಕ್ಕು ಕನ್ನಡ ಭಾಷೆ ಸಂಸ್ಕೃತಿಗಳು ಕಣ್ಮರೆಯಾಗತೊಡಗಿದವು. ಉತ್ತರ ಕರ್ನಾಟಕದ ಪಾಲಿಗಂತೂ ಇದೊಂದು ರಾಜಕೀಯ ಶಾಪವಾಗಿ ಪರಿಣಮಿಸಿತು. ರಾಜಕೀಯ ಒತ್ತಡದಿಂದಾಗಿ ದೇಶದ ಇನ್ನಾವುದೇ ಭಾಗದ ಜನ ತಮ್ಮ ತಾಯ್ನೆಲದಲ್ಲಿಯೇ ಇಷ್ಟೊಂದು ಪರದೇಶಿಗಳಂತೆ ಬದುಕುವ ಸ್ಥಿತಿ ಉಂಟಾಗಿರಲಿಲ್ಲ. ಈ ರೀತಿ ಕನ್ನಡ ಭಾಷೆ ನಿಸ್ತೇಜವಾಗಿತ್ತು ಎನ್ನಬಹುದು.

ಕರ್ನಾಟಕದ ಜಾಗೃತಿ ಹೇಗಾಯಿತು?

ನಾನಾ ಕಾರಣಗಳಿಂದ ಕನ್ನಡ ನಿಸ್ಸಹಾಯಕವಾಗಿ ಆತ್ಮಪ್ರತ್ಯಯ ಕಳೆದುಕೊಂಡ ಸಂದರ್ಭದಲ್ಲಿ ಮೂಡಿ ಬಂದವರು ಡೆಪ್ಯೂಟಿ ಚೆನ್ನಬಸಪ್ಪನವರು (೧೮೩೩–೧೮೮೧). ಮಾತೃಭಾಷಾ ನಿಷ್ಠೆಯೇ ರೂಪುಗೊಂಡಂತೆ ಇವರು ಶಿಕ್ಷಣ ಕ್ಷೇತ್ರದ ಮಾಮೂಲಿ ಅಧಿಕಾರಿಗಳಾಗದೇ ಕನ್ನಡದ ಪುನರುತ್ಥಾನಕ್ಕಾಗಿಯೇ ತಮ್ಮನ್ನು ತೊಡಗಿಸಿಕೊಂಡದ್ದಲ್ಲದೆ ಈ ದಿಶೆಯಲ್ಲಿ ದುಡಿಯುವ ಒಂದು ಬಳಗವನ್ನೇ ಸಜ್ಜುಗೊಳಿಸಿದರು. ಗಂಗಾಧರ ಮಡಿವಾಳೇಶ್ವರ ತುರಮರಿ, ಭುಜಂಗರಾವ್ ಹುಯಿಲ್‌ಗೋಳ, ಶಾಂತವೀರ ರಾಚದೇವ ಕಿತ್ತೂರ, ವೆಂಕಟ ರಂಗೋ ಕಟ್ಟಿ, ಚುರಮರಿ ಶೇಷಗಿರಿರಾಯರು, ರೊದ್ದ ಶ್ರೀನಿವಾಸರಾಯ, ಚನ್ನಬಸಪ್ಪ ಮೊದಲಾದವರು ಸೌರಮಂಡಲದ ಗ್ರಹಗಳಾಗಿ ಬೆಳಗಿ ಶಿಕ್ಷಣದ ಮೂಲಕ ಸಂಸ್ಕೃತಿ ಕಟ್ಟುವ ಕೆಲಸವನ್ನು ಮಾಡಿದರು. ಇನ್ನು ಕೆಲವರು ಅದನ್ನು ಮುಂದುವರೆಸಿದರು.

ಕರ್ನಾಟಕವು ರೂಪುಗೊಳ್ಳುವ, ಸಮೃದ್ಧವಾಗುವ ದಿಶೆಯಲ್ಲಿ ಕನ್ನಡಿಗರಲ್ಲಿ ವ್ಯಾಪಕವಾದ ಜಾಗೃತಿ ತಲೆದೋರುವಂತೆ ಕಾರ್ಯಪ್ರವೃತ್ತರಾದವರಲ್ಲಿ ಆಲೂರು ವೆಂಕಟರಾಯರು ಅತ್ಯಂತ ಹಿರಿಯರು (೧೮೮೧–೧೯೬೪). "ಇದು ನಮ್ಮ ಕರ್ನಾಟಕ, ಭೂಪಟದಲ್ಲಿ ಒಂದು ರೇಖಾಕೃತಿ. ಏಕ ಚಿತ್ತದಿಂದ ಗಮನಿಸಿರಿ, ಅದರ ಚರಿತ್ರೆ, ಮಹತ್ವವನ್ನು ಅರಿತವರಾಗಿದ್ದರೆ ಒಂದು ಭಾವ ಮನದಲ್ಲಿ ಮೂಡುತ್ತದೆ. ಕ್ಷಣ ಮಾತ್ರದಲ್ಲಿ ಚೈತನ್ಯ ರೂಪ ಪಡೆಯುತ್ತದೆ. ಕರ್ನಾಟಕ ದೇವಿಯು ಕನ್ನಡಿಗರ ಆರಾಧ್ಯ ದೈವವಾಗುತ್ತದೆ." ಇಂತಹ ದರ್ಶನವನ್ನು ನೀಡಿದವರು ಆಲೂರು ವೆಂಕಟರಾಯರು. ಕರ್ನಾಟಕ ಗತವೈಭವ (೧೯೧೭), ಕರ್ನಾಟಕ ವೀರರತ್ನಗಳು (೧೯೩೦) ಎನ್ನುವ ಗ್ರಂಥಗಳು ಹಾಗೂ ಇತಿಹಾಸವನ್ನು ಬಳಸಿಕೊಂಡು ಜನರಲ್ಲಿ ರಾಜಕೀಯ ಹಾಗೂ

ಸಾಂಸ್ಕೃತಿಕ ಪ್ರಜ್ಞೆಯನ್ನು ಪ್ರಚೋದಿಸುವಂತವರಾಗಿದ್ದಾರೆ. 'ಕರ್ನಾಟಕತ್ವದ ವಿಕಾಸ' (೧೯೫೭) ಕನ್ನಡ ನಾಡು ಹೇಗೆ ರೂಪುಗೊಂಡಿತು ಎಂಬುದನ್ನು ರಾಜ್ಯೋದಯದ ಸಂದರ್ಭದಲ್ಲಿ ಇಂದಿನ ಪೀಳಿಗೆಗೆ ತಿಳಿಸಿದ ಮಹತ್ವದ ಆಧಾರ ಗ್ರಂಥವಾಗಿದೆ. ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ. ಕೇವಲ ಭಾಷಾಭಿಮಾನವಲ್ಲ. ಇತಿಹಾಸಾಭಿಮಾನವಲ್ಲ, ಇವೆಲ್ಲವುಗಳನ್ನು ಮೀರಿದ ಇವೆಲ್ಲವುಗಳನ್ನೊಳಗೊಂಡ ಪರಿಶುದ್ಧ ಕೃತಿ ಎಂಬುದು ಆಲೂರರ ವಸ್ತುನಿಷ್ಠವಾದ ಅನುಭವಕಥನ. ರಾ.ಹ. ದೇಶಪಾಂಡೆಯವರಿಂದ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦) ಏಕೀಕೃತ ಕನ್ನಡ ನಾಡು-ನುಡಿಗಳ ಅಭಿಮಾನದಿಂದ ಸ್ಥಾಪಿತವಾದ ಹಾಗೂ ಏಕೀಕರಣಕ್ಕಾಗಿ ಹೋರಾಡಿದ ಪ್ರಥಮ ಸಂಸ್ಥೆಯಾಗಿದೆ. ಹಲವು ಕಡೆ ಹಂಚಿಹೋದ ನಾಡು ಒಂದಾಗಬೇಕು. ಇದರಿಂದ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವುದು.' ಎಂದು ೭-೧೦-೧೯೦೭ರಲ್ಲಿ ಸಂಘ ಸ್ವೀಕರಿಸಿದ ಗೊತ್ತುವಳಿಯೂ ಕರ್ನಾಟಕ ಏಕೀಕರಣ ಇತಿಹಾಸದಲ್ಲಿಯೇ ಪ್ರಥಮ ಗೊತ್ತುವಳಿಯಾಗಿದೆ.

ಶಾಂತಕವಿ ಎಂಬ ಹೆಸರಿನಿಂದಲೇ ಹೆಚ್ಚು ಪರಿಚಿತವಾದ ಬಾಳಾಚಾರ್ಯ ಸಕ್ಕರಿಯವರು ತಮ್ಮ ಕೀರ್ತನದ ಮೂಲಕ ರಾಷ್ಟ್ರೀಯ ಪ್ರಜ್ಞೆ ಮತ್ತು ಕರ್ನಾಟಕತ್ವದ ಬಗ್ಗೆ ಜಾಗೃತಿ ಮೂಡಿಸಿದ ಹಿರಿಯರು. ಆರ್.ಆರ್. ದಿವಾಕಾರ, ಅಂದಾನಪ್ಪ ದೊಡ್ಡಮೇಟಿ, ಗಂಗಾಧರರಾವ್ ದೇಶಪಾಂಡೆ, ಗುದ್ಲೆಪ್ಪ ಹಳ್ಳಿಕೇರಿ, ಚನ್ನಪ್ಪ ವಾಲಿ, ಜಿನರಾಜ ಹೆಗಡೆ, ಬಿ.ಎನ್. ದಾತಾರ, ಎಸ್. ನಿಜಲಿಂಗಪ್ಪ, ಹಾರ್ನಹಳ್ಳಿ ರಾಮಸ್ವಾಮಿ, ಶಿವಮೂರ್ತಿಸ್ವಾಮಿ ಅಳವಂಡಿ, ಕಾರ್ನಾಡ ಸದಾಶಿವರಾಯರು, ಕೆ.ಎಫ್. ಪಾಟೀಲ, ಸಿದ್ದಪ್ಪ ಕಂಬಳಿ, ಸಿದ್ಧಪ್ಪ ಹೊಸಮನಿ, ಕೆಂಗಲ್ ಹನುಮಂತರಾಯರು ಮೊದಲಾದವರು ತಮ್ಮ ರಾಜಕೀಯ ಶಕ್ತಿಯನ್ನು ಕರ್ನಾಟಕ ಏಕೀಕರಣಕ್ಕಾಗಿ ನಿವೇದಿಸಿ ನಂತರವೂ ನಾಡಿನ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಹನೀಯರು. ತಮ್ಮ ಬರವಣಿಗೆ ಹಾಗೂ ಭಾಷಣಗಳ ಮೂಲಕ ಕರ್ನಾಟಕ ಏಕೀಕರಣದ ಬಗ್ಗೆ ಜಾಗೃತಿ ಮೂಡಿಸಿದರು. ಕುವೆಂಪು, ಕಯ್ಯಾರ ಕಿಞ್ಞಣ್ಣ ರೈ, ಕೃಷ್ಣಕುಮಾರ ಕಲ್ಲೂರ, ಮುದವೀಡು ಕೃಷ್ಣರಾಯರು, ಕೃಷ್ಣಶರ್ಮ ಬೆಟಗೇರಿ, ಸಿದ್ದನವಳ್ಳಿ ಕೃಷ್ಣಶರ್ಮ, ಪಾಟೀಲ ಪುಟ್ಟಪ್ಪ, ಕೋ. ಚನ್ನಬಸಪ್ಪ, ಜಯದೇವಿ ತಾಯಿ ಲಿಗಾಡೆ, ಶಂಬಾ ಜೋಶಿ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಶ್ರೀರಂಗ, ತಿ.ತಾ. ಶರ್ಮ, ಜಿ. ಶಿವಮೂರ್ತಿ ಶಾಸ್ತ್ರಿ, ಶಿವರಾಮ ಕಾರಂತ, ಬಿ.ಎಂ. ಶ್ರೀಕಂಠಯ್ಯ, ಹರ್ಡೇಕರ ಮಂಜಪ್ಪ ಮೊದಲಾದ ಹಿರಿಯ ಸಾಹಿತಿಗಳು ಹಾಗೂ ಪತ್ರಕರ್ತರು ಕರ್ನಾಟಕವನ್ನು ಒಂದುಗೂಡಿಸಲು ಮತ್ತು ಏಕೀಕರಣದ ನಂತರ ಪರಸ್ಪರ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದ್ದನ್ನು ಮರೆಯುವಂತಿಲ್ಲ. ಡಿವಿಜಿಯಂತಹ ಧೀಮಂತರು ಎರಡು ಕರ್ನಾಟಕಗಳ ರಚನೆಗೆ ಒಲವು ತೋರಿದರಾದರೂ ಏಕೀಕರಣದ ವಿರೋಧಿಗಳಾಗಿರಲಿಲ್ಲ ಎಂಬುದನ್ನು ಮರೆಯಬಾರದು.

ಅವತ್ತಿನ ಪ್ರಮುಖ ಬದಲಾವಣೆಗಳೇನು?

ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಾರಂಭವಾದ ೨೫ ವರ್ಷಗಳ ನಂತರ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಸ್ಥಾಪನೆಯಿಂದ ಮೈಸೂರು ಸಂಸ್ಥಾನದ ಕನ್ನಡಿಗರಿಗೂ ಉಳಿದ ಕನ್ನಡಿಗರಿಗೂ ಹೆಚ್ಚಿನ ಬಾಂಧವ್ಯ ಬೆಳೆಯುವಂತಾಯಿತು. ಮೈಸೂರು ಒಡೆಯರು ಈ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಿ ರಾಜಾಶ್ರಯ ನೀಡಿದರು. ಪ್ರತಿವರ್ಷವೂ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಕರ್ನಾಟಕದ ವಿವಿಧ ಸ್ಥಾನಗಳಲ್ಲಿ ನೆರವೇರಿಸುವ ಸಾಹಿತ್ಯ ಪರಿಷತ್ತಿನ ನಿರ್ಣಯವು ಕರ್ನಾಟಕ ರಾಜ್ಯ ನಿರ್ಮಾಣಕ್ಕೆ, ಕನ್ನಡಿಗರೆಲ್ಲರ ಐಕ್ಯ ಭಾವನೆಗೆ ನಾಂದಿಯಾಯಿತು. ೧೯೧೫ರಿಂದ ೧೯೫೬ರ ವರೆಗೆ (ರಾಜ್ಯೋದಯವದವರೆಗೆ) ೩೮ ಕನ್ನಡ ಸಮ್ಮೇಳನಗಳು ನಡೆದಿದ್ದು ಅವುಗಳಲ್ಲಿ ಕೆಲವು ಮುಂಬಯಿ, ಹೈದರಾಬಾದ್, ಮದ್ರಾಸ, ಕಾಸರಗೋಡು ಬೇರೆ ಬೇರೆ ಪ್ರಾಂತಗಳ ನಗರಗಳಲ್ಲಿ ನೆರವೇರಿದ್ದರಿಂದ ಅಲ್ಲಿನ ಕನ್ನಡಿಗರು ಹಾಗೂ ಜನಸಾಮಾನ್ಯರಲ್ಲಿಯೂ ಕರ್ನಾಟಕತ್ವದ ಅಭಿಮಾನವನ್ನು ಕುದುರಿಸಿವೆ. ಸಾಮಾನ್ಯವಾಗಿ ಸಾಹಿತ್ಯ ಸಮ್ಮೇಳನಗಳಲ್ಲಿ ಅಧ್ಯಕ್ಷರೂ ಕನ್ನಡ ನಾಡು-ನುಡಿ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸುತ್ತ ಏಕತೆ ಬಿಂಬಿಸಿದ್ದಾರೆ. ೧೯೪೯ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ೧೯೫೦ರಲ್ಲಿ ಧಾರವಾಡ ಬಾನುಲಿ ಕೇಂದ್ರ ಸ್ಥಾಪನೆಯಾದ ಮೇಲೆ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯ ಬಾಗಿಲು ತೆರೆದಂತಾಯಿತು.

ವರಕವಿ ಬೇಂದ್ರೆಯವರು ಗೆಳೆಯರನ್ನು ಕೂಡಿಸಿ ಧಾರವಾಡದಲ್ಲಿ ೧೯೨೬ರಂದು ನಾಡಹಬ್ಬದ ಆಚರಣೆ ಪ್ರಾರಂಭಿಸಿದರು. ಕರ್ನಾಟಕ ವಿದ್ಯಾವರ್ದಕ ಸಂಘ ನಾಡಹಬ್ಬವನ್ನು ಪ್ರತಿವರ್ಷ ಆಚರಿಸತೊಡಗಿತು. ಏಕೀಕರಣ ಪೂರ್ವದಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲಿನ ಉತ್ಸಾಹ ಈ ನಾಡ ಹಬ್ಬಗಳಲ್ಲೂ ಕಂಡು ಬಂದಿತು. ಧಾರವಾಡದಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ ಸ್ಥಾಪಿತವಾಯಿತು. ೧೯೩೬ರಲ್ಲಿ ಹಂಪಿಯಲ್ಲಿ ಏರ್ಪಡಿಸಿದ್ದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ವರ್ಷಗಳ ಸಮಾರಂಭ ನಿಜವಾಗಿಯೂ ಅವಿಸ್ಮರಣೀಯ. ಆಲೂರು ವೆಂಕಟರಾಯರು ಹಂಪಿ ಪ್ರಥಮ ದರ್ಶನದಲ್ಲಿ ತಾವು ಪಡೆದ ಅದ್ಭುತ ಅನುಭವವನ್ನು ರಾಜ್ಯೋತ್ಸವದ ಸುದಿನ ದಿನದಂದು ಪಂಪೆಯ ತುಂಗಭದ್ರೆ ತಟದಲ್ಲಿ ವಿರುಪಾಕ್ಷನ ಸನ್ನಿಧಿಯಲ್ಲಿ ಮತ್ತೊಮ್ಮೆ ನೆನೆದರು. ಅವರಿಗೆ ಅದೊಂದು ಜೀವನದಲ್ಲಿನ ಮಹಾಕ್ಷಣವಾಗಿತ್ತು.

ಸ್ವಾತಂತ್ರ್ಯದ ನಂತರ ಕರ್ನಾಟಕ ಹೇಗಿತ್ತು?

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ, ಸ್ವಾರ್ಥ-ಸಂಕುಚಿತ ಭಾವನೆಗಳು ಸಿಡಿದೆದ್ದಂತೆ ಏಕತಂತ್ರ ಕರ್ನಾಟಕವಾದ ನಂತರ ಕನ್ನಡಿಗರಲ್ಲಿಯೂ ಈ ಅಲ್ಪ ವಿಚಾರಗಳು ತಲೆದೋರಿರಬಹುದು. ಅವು ಬರುಬರುತ್ತ ಕಡಿಮೆಯಾಗುತ್ತ ಬಂದವು. ಏಕೀಕರಣದ ನಂತರ ಎಲ್ಲಾ ಕ್ಷೇತ್ರಗಳಲ್ಲಿಯೂ ನಾಡು ಅನೇಕ ಬದಲಾವಣೆಗಳನ್ನು ಕಂಡಿತು. ಕಾಲೇಜು

ಹಾಗೂ ವಿಶ್ವವಿದ್ಯಾನಿಲಯಗಳು ಬೆಳೆದವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಭಾಷೆ ಸಾಹಿತ್ಯ ಹಾಗೂ ಕಲೆಗಳಿಗೆ ಸಂಬಂಧಿಸಿದಂತೆ ನಾನಾ ಕಡೆ ಇವುಗಳು ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ, ರಂಗಾಯಣ ಮೊದಲಾದವು ಹಲವಾರು ಯೋಜನೆಗಳನ್ನು ಕೈಗೊಂಡು ಮುನ್ನಡೆದಿವೆ. ಬೆಳಗಾವಿಯಲ್ಲಿ ವಿಧಾನಸೌಧ ತೀವ್ರ ಗತಿಯಲ್ಲಿದ್ದು ವಿಧಾನಸಭೆ ಕಲಾಪ ನಡೆಸುವ ಸಿದ್ಧತೆಗೆ ಅನುವಾಗಿದೆ. ಧಾರವಾಡ-ಗುಲಬರ್ಗಾದಲ್ಲಿ ಸಂಚಾರಿ ಉಚ್ಚ ನ್ಯಾಯಲಯ ಪೀಠಗಳು ಸ್ಥಾಪಿತವಾದವು. ನೆರೆಯ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ನಡೆಯುವ ಕನ್ನಡ ಸಮ್ಮೇಳನಗಳಲ್ಲಿ ಕನ್ನಡಿಗರು ಪಾಲ್ಗೊಳ್ಳುವುದು ಹೆಮ್ಮೆಯ ವಿಷಯ.

ಈ ಹೊತ್ತಿನಲ್ಲಿ ಕರ್ನಾಟಕದ ಕುರಿತು ನಿಮ್ಮ ಸಲಹೆ?

ಆಗಬೇಕಾಗಿರುವ ಕೆಲಸ ಸಾಕಷ್ಟಿವೆ. ಸರಕಾರದ ಅಭಿವೃದ್ಧಿ ಯೋಜನೆಗಳು ಎಲ್ಲ ಭಾಗಗಳಿಗೂ ಸಮರ್ಪಕವಾಗಿ ಹಂಚಿಕೆಯಾಗಬೇಕು. ಹಿಂದುಳಿದ ಪ್ರದೇಶಗಳನ್ನು ನಂಜುಂಡಪ್ಪ ವರದಿಯಲ್ಲಿ ಗುರುತಿಸಿದಂತೆ ಸರಕಾರ ಅವುಗಳ ಅಭಿವೃದ್ಧಿಗೆ ಲಕ್ಷ್ಯ ವಹಿಸಬೇಕು. ಆಡಳಿತ ಭಾಷೆ ಸಂಪೂರ್ಣವಾಗಿ ಕನ್ನಡವಾಗಿರಬೇಕು. ಪ್ರಾಥಮಿಕ ಮಟ್ಟದಲ್ಲಿ ಕನ್ನಡ ಮಾಧ್ಯಮವೇ ಇರಬೇಕು. ಸರೋಜಿನಿ ಮಹಿಷಿ ವರದಿ ಕೆಲವು ಸುಧಾರಣೆ ಅಂಶಗಳೊಂದಿಗೆ ಸಂಪೂರ್ಣ ಜಾರಿಯಾಗಬೇಕು. ಗಡಿಭಾಗದ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ಪಾಲಕ-ಪೋಷಕರ ಮೌಢ್ಯ, ಶಿಕ್ಷಕರ ಕೀಳರಿಮೆ, ಸರಕಾರಗಳ ತಾತ್ಸಾರ, ಇಂಗ್ಲಿಷಿನ ಪಟ್ಟಭದ್ರತೆ ಇವು ಹೋದಾಗಲೇ ಕನ್ನಡ ಭದ್ರವಾಗಲು ಸಾಧ್ಯ ಎಂಬುದನ್ನು ತಿಳಿಯಬೇಕು.

ಎಲ್ಲ ಕ್ಷೇತ್ರಗಳಲ್ಲಿ ಹರಡಿರುವ ಭ್ರಷ್ಟಾಚಾರದ ಬೇರು ಕಿತ್ತೊಗೆಯಬೇಕು. ಗಡಿ ಭಾಗದ ಜನತೆಗೆ ನಾವು ಗಡಿಭಾಗದ ಹೊರಗಿದ್ದೇವೆ ಎಂಬ ಭಾವನೆ ಬರದಂತೆ ನೋಡಿಕೊಳ್ಳಬೇಕು. ಅವು ಹೊರಗಿನವರ ಆಕ್ರಮಣಕ್ಕೆ ತುತ್ತಾಗದಂತೆ ನೋಡಿಕೊಳ್ಳಬೇಕು. ಸಮೃದ್ಧ-ಸುಸಂಸ್ಕೃತ ಕರ್ನಾಟಕ ರೂಪಗೊಳ್ಳಲು ರಾಜ್ಯ ಸರಕಾರ ಹಾಗೂ ನಾಡಿನ ಜನತೆ ಪ್ರಾಮಾಣಿಕವಾಗಿ ಶ್ರಮಿಸಿದಾಗ ನಮ್ಮ ಗುರಿ ತಲುಪಲು ಸಾಧ್ಯ. ಬಹುಮುಖ್ಯವಾಗಿ ಕನ್ನಡಿಗರು ಸಮರ್ಥರಾದಲ್ಲಿ ಕನ್ನಡ ಭಾಷೆ ಸಾಮರ್ಥ್ಯ ಪಡೆಯುತ್ತದೆ. ನಾವು ಪ್ರಗತಿಯತ್ತ ಸಾಗುತ್ತೇವೆ. ಪ್ರತಿಯೊಬ್ಬ ಕನ್ನಡಿಗ ಮೊದಲು ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಂಡು ಅದನ್ನು ನಾಡು-ನುಡಿಗಳ ಮೇಲ್ಮೆಗಾಗಿ ಧಾರೆ ಎರೆಯಬೇಕು.

('ಪುನರಾವಲೋಕನ' : ವಿಶ್ವಕನ್ನಡ ಸಮ್ಮೇಳನ, ಬೆಳಗಾವಿ: ಸಂದರ್ಭ ಗ್ರಂಥ: ೨೦೧೧)

ಕನ್ನಡ ಪ್ರಜ್ಞೆಯ ಭದ್ರಕೋಟೆ

ಕನ್ನಡ ನಾಡಿನಲ್ಲಿ ಇಂದು ಎಲ್ಲಿ ನೋಡಿದಲ್ಲಿ, ಸುವರ್ಣಮಹೋತ್ಸವ ಹಾಗೂ ಶತಮಾನೋತ್ಸವ ಸಂಭ್ರಮದ ಸಡಗರವನ್ನು ಕಾಣುವ ಅವಕಾಶ ಇಂದಿನ ಪೀಳಿಗೆಗೆ ಒದಗಿರುವುದು ನಮ್ಮೆಲ್ಲರ ಭಾಗ್ಯ. ಜನತೆಯಲ್ಲಿ ಶಿಕ್ಷಣ ಪ್ರಸಾರದ ದ್ಯೋತಕವಾಗಿ ಮೂಡಿದ ನಾಡಿನ ಕೆಲವು ಸಂಘ-ಸಂಸ್ಥೆಗಳು ಅನೇಕ ತ್ಯಾಗಜೀವಿಗಳ ಶಕ್ತಿ ಸಾಹಸಗಳನ್ನು ಒಗ್ಗೂಡಿಸಿಕೊಂಡು ಭವ್ಯವೂ ವಿಸ್ತಾರವೂ ಆದ ಜ್ಞಾನದೇಗುಲಗಳಾಗಿ ಕಂಗೊಳಿಸುತ್ತಿರುವುದು ಅಷ್ಟೇ ಮಹತ್ವದ ಸಂಗತಿಯಾಗಿದೆ. ಇವುಗಳಲ್ಲಿ ಬೆಳಗಾವಿಯ ಕೆ.ಎಲ್.ಇ. ಸಂಸ್ಥೆ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ೭೫ ವರ್ಷಗಳ ಸುದೀರ್ಘವಾದ ಪವಾಡಸದೃಶ ಬೆಳವಣಿಗೆಯನ್ನು ದಾಖಲಿಸಿ ಹೊಸಕಾಲಕ್ಕೆ ತಕ್ಕ ಹೊಸಪರಿಯ ಸಿಂಗರದಿಂದ ಮುನ್ನಡೆದಿರುವದು ಅಭಿಮಾನಪಡತಕ್ಕ ಸಂಗತಿಯಾಗಿದೆ.

ಇಪ್ಪತ್ತನೇ ಶತಮಾನದ ಪ್ರಾರಂಭದ ಕಾಲವೆಂದರೆ ಉತ್ತರ ಕರ್ನಾಟಕಕ್ಕೆ ಎಲ್ಲ ದೃಷ್ಟಿಯಿಂದಲೂ ಅರುಣೋದಯದ ಕಾಲ: ಕುವೆಂಪುವಾಣಿ ಅದನ್ನು ಸರಿಯಾಗಿ ಕಂಡರಿಸಿದೆ.

ನಾಡಿನ ಪುಣ್ಯದ ಪೂರ್ವ ದಿಗಂತದಿ
ನವ ಅರುಣೋದಯ ಹೊಮ್ಮುತ್ತಿದೆ,
ಚಿರನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತ್ತಿದೆ!

ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಕೈಗಾರಿಕೆ, ಸಾಮಾಜಿಕ ಚಿಂತನೆ – ಹೀಗೆ ಎಲ್ಲ ದಿಸೆಯಲ್ಲಿಯೂ ನಾಡಿನಲ್ಲಿ ಕವಿದ ಮಬ್ಬು ಕ್ರಮೇಣ ಕರಗಿ,

ವಿಸ್ಮೃತಿಯನ್ನು ಹೋಗಲಾಡಿಸಿ ಬೆಳಕಿಗೆ ಕಣ್ಣು ತೆರೆದ ಕಾಲ. ಅನ್ಯಭಾಷೆಯ ಆಕ್ರಮಣದಿಂದ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನಿಸಿದ ಧಾರವಾಡದಂಥ ಧಾರವಾಡವೇ ವರ್ತಮಾನ ಹಾಗೂ ಭವಿಷ್ಯದ ಬಗೆಗಿನ ಎಲ್ಲ ಭರವಸೆಗಳನ್ನು ಕಳೆದುಕೊಂಡಿದ್ದ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತರ ಕರ್ನಾಟಕದ ಕಣ್ಣು ತೆರೆಯಿಸಿ, ಅದರ ಭಾಷೆ, ಬದುಕು, ಸಂಸ್ಕೃತಿಗೆ ಒಂದು ಭವಿಷ್ಯವನ್ನು ರೂಪಿಸಿಕೊಟ್ಟ ಮಹಾಚೇತನಗಳಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಪ್ರಾತಃಸ್ಮರಣೀಯರು. ಈ ಮಹನೀಯರೇ ೧೮೬೮ರಷ್ಟು ಪೂರ್ವದಲ್ಲಿಯೇ ಬೆಳಗಾವಿಯಲ್ಲಿ 'ಲಿಂಗಾಯತ ಶ್ರೀ ಬೋರ್ಡಿಂಗ್' ಸ್ಥಾಪಿಸಿ ವೀರಶೈವ ಜನಾಂಗದ ಜಾಗೃತಿಗೂ ತನ್ಮೂಲಕ ಕನ್ನಡ ಜಾಗೃತಿಗೂ ಕಾರಣರಾದುದು ಸ್ಮರಣಾರ್ಹವಾಗಿದೆ. ಮುಂದೆ ೧೯೩೭ರಲ್ಲಿ ಶ್ರೀ ಶಿವಬಸವ ಸ್ವಾಮಿಗಳು (ರುದ್ರಾಕ್ಷಿಮಠ–ನಾಗನೂರು) ಪ್ರಸಾದ ನಿಲಯವನ್ನು ಪ್ರಾರಂಭಿಸಲು ಬೆಳಗಾವಿಯನ್ನೇ ಆಯ್ಕೆ ಮಾಡಿಕೊಳ್ಳಲು ಇದು ಪ್ರೇರಣೆ ನೀಡಿತು.

"ಸಾಕಷ್ಟು ಶಿಕ್ಷಣವಿಲ್ಲದೆ, ರಾಜಕೀಯ ಪ್ರಜ್ಞೆಯೂ ಇಲ್ಲದೆ ಕನ್ನಡವನ್ನು ಮನೆ ಮಾತಾಗಿಸಿಕೊಂಡು ಅದನ್ನು ಗುಪ್ತನಿಧಿಯಂತೆ ಉಳಿಸಿಕೊಂಡು ಬಂದ ಶ್ರೇಯಸ್ಸಿನ ಸಿಂಹಪಾಲು ವೀರಶೈವರಿಗೆ ಸಲ್ಲುತ್ತದೆ." ಎಂದು ವಿಲಿಯಂ ರಸೆಲ್ ಹೇಳುತ್ತಾರೆ. ಬೆಳಗಾವಿಯ ಗಡಿಭಾಗದ ಜೈನರಿಗೂ ಇದರಲ್ಲಿ ಸ್ವಲ್ಪ ಪಾಲಿದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಕೆ.ಎಲ್.ಇ. ಸಂಸ್ಥೆಗೆ ಹಿರಿಯರೂ ಪೋಷಕರೂ ಆದ ಅಂದಿನ ವೀರಶೈವ ಸಮಾಜದ ಧುರೀಣರಾದ ರಾವ್‌ಬಹಾದ್ದೂರ ಅರಟಾಳ ರುದ್ರಗೌಡರು ೧೯೧೩ರಲ್ಲಿ ನಿಪ್ಪಾಣಿಯಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯ ಏಳನೆಯ ಅಧಿವೇಶನ ಯಶಸ್ವಿಯಾಗಿ ನೆರವೇರುವಂತೆ ನೋಡಿಕೊಂಡದ್ದು ಒಂದು ಮಹತ್ವದ ಘಟನೆಯಾಗಿದೆ. ಈ ಭಾಗದ ಶಿಕ್ಷಣ ಪ್ರಸಾರದ ಜೊತೆಗೆ ಕನ್ನಡದ ರಕ್ಷಣೆ ಹಾಗೂ ಪೋಷಣೆಯೂ ಇದರ ಮೂಲ ಉದ್ದೇಶವಾಗಿದ್ದಿತು. ಅದೇ ರುದ್ರಗೌಡರು ಧಾರವಾಡದಲ್ಲಿ ಕರ್ನಾಟಕ ಕಾಲೇಜಿನ ಸ್ಥಾಪನೆಗೆ ಕೈಗೂಡಿದರು. ಪುಣೆ, ಮುಂಬಯಿಗಳಲ್ಲಿಯ ಶೈಕ್ಷಣಿಕ ವಾತಾವರಣದಿಂದ ಪ್ರಭಾವಿತರಾದ ಸಪ್ತರ್ಷಿಗಳು (ಸರ್ವಶ್ರೀ ಬಿ.ಎಸ್. ಹಂಚಿನಾಳ, ಎಚ್.ಎಫ್. ಕಟ್ಟೀಮನಿ, ಜಿ.ಬಿ. ಮಮದಾಪುರ, ಎಂ.ಆರ್. ಸಾಖರೆ, ಶಿ.ಶಿ. ಬಸವನಾಳ, ಪಂಡಿತಪ್ಪ ಚಿಕ್ಕೋಡಿ, ವೀರನಗೌಡ ಪಾಟೀಲ) ಅರಟಾಳ ರುದ್ರಗೌಡರ ಮುಖಂಡತ್ವದಲ್ಲಿ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ'ಯನ್ನು ಹುಟ್ಟು ಹಾಕಿದರು.

'ಕರ್ನಾಟಕ' ಎಂಬ ಹೆಸರಿನಲ್ಲಿಯೇ ಒಂದು ಮಂತ್ರ ಶಕ್ತಿಯಿದೆ. 'ಜಯಕರ್ನಾಟಕ' ಎಂಬುದು ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರ ಎಲ್ಲ ಚಟುವಟಿಕೆಗಳಿಗೆ ಮೂಲಮಂತ್ರವಾಗಿತ್ತು. ಕುವೆಂಪು ಆ ಹೆಸರಿನ ಸಾಂಸ್ಕೃತಿಕ ಮೌಲ್ಯವನ್ನು ಎತ್ತಿ ತೋರಿಸುತ್ತಾರೆ ತಮ್ಮ ಕವಿತೆಯಲ್ಲಿ:

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!

ಕನ್ನಡ ಭಾಷೆಯ ಮೇಲೆ ಮರಾಠಿಯ ಆಕ್ರಮಣದಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಧಕ್ಕೆಯೊದಗಿದ ಸಂದರ್ಭದಲ್ಲಿ ಪ್ರೊ. ಶಿ.ಶಿ. ಬಸವನಾಳರಂಥ ಮೇಧಾವಿಗಳು ಮುಧೋಳ ಮೊದಲಾದ ಅನೇಕ ಗಡಿಭಾಗಗಳಲ್ಲಿ ಸಂಚರಿಸಿ, ಭಾಷಣ ಮಾಡಿ, ಕನ್ನಡ ನಾಡಿನಲ್ಲಿದ್ದ ಚಿಕ್ಕಪುಟ್ಟ ಸಂಸ್ಥಾನಗಳಲ್ಲಿದ್ದ ಕನ್ನಡಿಗರಲ್ಲಿ ಜಾಗೃತಿ ಮೂಡಿಸಿದರು. ಬೆಳಗಾವಿಯಲ್ಲಿ ನಾಡಹಬ್ಬದ ಆಚರಣೆಯನ್ನು ಸಂಭ್ರಮದಿಂದ ನೆರವೇರಿಸುತ್ತಿದ್ದ ಒಂದು ಸಂದರ್ಭದಲ್ಲಿ ಬಸವನಾಳರು ತಲೆತಿರುಕ ಮರಾಠಿ ಯುವಕನೊಬ್ಬನ ಚೂರಿ ಇರಿತಕ್ಕೆ ಒಳಗಾಗಿದ್ದನ್ನು ನೆನೆಸಿಕೊಂಡರೆ, ಕನ್ನಡಿಗರ ಸ್ಥಿತಿ ಆಗ ಎಂಥ ಗಂಡಾಂತರದಲ್ಲಿತ್ತು ಎಂಬುದನ್ನು ಊಹಿಸಿಕೊಳ್ಳಬಹುದು. ನಾಡಹಬ್ಬ, ಬಸವಜಯಂತಿ ಮೊದಲಾದ ಉತ್ಸವ ಹಾಗೂ ಮೆರವಣಿಗೆಗಳನ್ನು ಸಂಘಟಿಸಿ ಕನ್ನಡದ ಘೋಷಣೆಗಳು ಮಾರ್ದನಿಗೊಳ್ಳುವಂತೆ ಮಾಡಿದ ಶ್ರೇಯಸ್ಸು ಕೆ.ಎಲ್.ಇ. ಸಂಸ್ಥೆಯ ಸದಸ್ಯರಿಗೆ ಹಾಗೂ ಅದರ ಶಿಕ್ಷಣ ಸಂಸ್ಥೆಗಳ ಅಧ್ಯಾಪಕವರ್ಗ ಹಾಗೂ ವಿದ್ಯಾರ್ಥಿಗಳಿಗೆ ಸಲ್ಲುತ್ತದೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಪಂಡಿತಪ್ಪ ಚಿಕ್ಕೋಡಿಯವರು ವೀರಶೈವರ ಮಾತೃಭಾಷೆ ಕನ್ನಡವಾಗಿದ್ದು ಕನ್ನಡದಲ್ಲಿಯೇ ಮೂಲಶಿಕ್ಷಣ ದೊರೆಯಬೇಕೆಂಬ ತಮ್ಮ ಹಾಗೂ ಸಂಸ್ಥೆಯ ಕನಸನ್ನು ಹಲವಾರು ಶಾಲೆ ಕಾಲೇಜುಗಳ ಸ್ಥಾಪನೆಯ ಮೂಲಕ ಈಡೇರಿಸಿದರು. ಇದರಿಂದ ಶಿಕ್ಷಣಕ್ಕಾಗಿ ಕೊಲ್ಲಾಪುರ, ಪುಣೆ, ಮುಂಬಯಿಗಳಿಗೆ ಹೋಗಬೇಕಾಗುತ್ತಿದ್ದ ವಿದ್ಯಾರ್ಥಿಗಳ ಸಂಕಷ್ಟ ಬಹುಮಟ್ಟಿಗೆ ನಿವಾರಣೆಯಾಯಿತು. ಇದರಿಂದ ಬೆಳಗಾವಿ ಪರಿಸರದ ಗ್ರಾಮೀಣಭಾಗದ ಮಕ್ಕಳಲ್ಲಿ ಕನ್ನಡ ಕಲಿಯುವ ಸಂಖ್ಯೆ ಬೆಳೆಯುತ್ತ ಬಂದಿತು. ಬಾರ್ಸಿ, ಸೊಲ್ಲಾಪುರ, ಅಕ್ಕಲಕೋಟೆಗಳಲ್ಲಿ ಕೆ.ಎಲ್.ಇ. ಸಂಸ್ಥೆ ಶಾಲೆ ಕಾಲೇಜುಗಳನ್ನು ಸ್ಥಾಪಿಸಿದ್ದರಿಂದ ಗಡಿಯಾಚೆಗಿನ ಕನ್ನಡಿಗರಿಗೂ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿದಂತಾಯಿತು. ಆದರೆ ಒಂದು ಮಾತನ್ನು ನೆನಪಿಡಬೇಕು. ಕೆ.ಎಲ್.ಇ. ಸಂಸ್ಥೆಯಲ್ಲಿ ಕೆಲಸ ಮಾಡುವ ಅಧ್ಯಾಪಕವರ್ಗದಲ್ಲಿ ಹಾಗೂ ವಿದ್ಯಾರ್ಥಿ ಸಮುದಾಯದಲ್ಲಿ ಜಾತಿ ಭೇದಕ್ಕೆ ಎಡೆಯಿರಲಿಲ್ಲ. ಸಂಸ್ಥೆಯ ಹೆಸರಿನಲ್ಲಿಯ 'ಲಿಂಗಾಯತ' ಪದ ಸ್ವಾತಂತ್ರ್ಯಾನಂತರ 'ಲಿಬರಲ್' ಆಗಿ ಮತ್ತೆ ಕೆಲವು ವರ್ಷಗಳ ನಂತರ 'ಲಿಂಗಾಯತ' ಎಂದಾದುದರಲ್ಲಿ ಯಾವ ತಪ್ಪು ಇಲ್ಲ. ಯಾಕೆಂದರೆ ಎಲ್ಲ ದೃಷ್ಟಿಯಿಂದಲೂ ಎರಡೂ ಸಮಾನಾರ್ಥ ಪದಗಳೇ.

ಕೆ.ಎಲ್.ಇ. ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸಬೇಕೆಂಬ ವಿಚಾರ ಪ್ರಾರಂಭದಲ್ಲಿದ್ದರೂ ಕನ್ನಡದ ರಕ್ಷಣೆ ಹಾಗೂ ಪೋಷಣೆಯ ದೃಷ್ಟಿಯಿಂದ ಬೆಳಗಾವಿಯನ್ನೇ ಆಯ್ಕೆ ಮಾಡಿಕೊಂಡ ಸಂಸ್ಥಾಪಕರ ದೂರದೃಷ್ಟಿಯನ್ನು ಪ್ರಶಂಸಿಸಲೇಬೇಕು. ಮಹಾಜನಸಮಿತಿ

ಬೆಳಗಾವಿಗೆ ಬಂದಾಗ ಕೆ.ಎಲ್.ಇ. ಸಂಸ್ಥೆ 'ಬೆಳಗಾವಿ ಶುದ್ಧ ಕನ್ನಡ ನಾಡಿನ ಪ್ರದೇಶ. ಅಲ್ಲದೆ ಇನ್ನೂ ಕನ್ನಡ ನಾಡಿನ ಮುಖ್ಯ ಪ್ರದೇಶಗಳಾದ ಸೊಲ್ಲಾಪುರ, ಅಕ್ಕಲಕೋಟೆ, ಜತ್ತ ಇತ್ಯಾದಿ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕು' ಎಂಬ ಮನವಿಯನ್ನು ಅರ್ಪಿಸಿ ಸಮಿತಿಗೆ ಮನವರಿಕೆ ಮಾಡಿಕೊಟ್ಟಿತು. ಇಂದು ೧೭೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬಲಾಢ್ಯವಾಗಿ ಬೆಳೆದು ನಿಂತಿರುವ ವಿವಿಧ ಜ್ಞಾನಶಾಖೆಗಳ ಮಹಾವಿದ್ಯಾಲಯಗಳು ಅಂದಿನ ಸತ್ ಸಂಕಲ್ಪದ ಸಾಧನೆಗಳೇ ಆಗಿವೆ. ಇಷ್ಟೇ ಅಲ್ಲ, ತನ್ನದೇ ಆದ ವಿಶ್ವವಿದ್ಯಾಲಯವೊಂದನ್ನು ಸುಸಜ್ಜಿತವಾಗಿ ನಡೆಸುವಷ್ಟರ ಮಟ್ಟಿಗೆ ಸಂಸ್ಥೆ ಸಾಮರ್ಥ್ಯ ಪಡೆದಿದೆ. ೧೯೮೪ರಿಂದ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಡಾ. ಪ್ರಭಾಕರ ಕೋರೆಯವರು ಹೊಸ ಹೊಸ ಯೋಜನೆಗಳನ್ನು, ಹೊಸ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ದೇಶವಿದೇಶದ ವಿದ್ಯಾರ್ಥಿಗಳಿಗೂ ವಿಶೇಷ ಅನುಕೂಲತೆಗಳನ್ನು ಒದಗಿಸಿದ್ದು ಗಮನಾರ್ಹವಾಗಿದೆ. ಇಷ್ಟೆಲ್ಲ ಸಾಧನೆ ಮಾಡಿದ ಕೋರೆಯವರು ಸಂಸ್ಥೆಯ ಚೇರಮನ್‌ರಾಗಿ ಆಯ್ಕೆಯಾದುದು ಅತ್ಯಂತ ಸಹಜವಾಗಿದೆ.

ಈಗ ಗಡಿನಾಡಿನಲ್ಲಿ ಕನ್ನಡದ ಕೋಟೆಯಂತಿರುವ ಲಿಂಗರಾಜ ಕಾಲೇಜಿನ ಸ್ಥಾಪನೆಗೆ ಮುಂಬಯಿ ವಿಶ್ವವಿದ್ಯಾಲಯದ ಸಿನೇಟಿನಲ್ಲಿ ಪಟ್ಟಭದ್ರವಾಗಿದ್ದ ಮರಾಠಿ ಲಾಬಿ, ಅಡ್ಡಗಾಲು ಹಾಕುತ್ತಲೇ ಇತ್ತು. ಆಗ ಶಿಕ್ಷಣ ಮಂತ್ರಿಗಳಾಗಿದ್ದ ಸರ್ ಸಿದ್ದಪ್ಪ ಕಂಬಳಿಯವರು ಅತ್ಯಂತ ಚಾಣಾಕ್ಷತನದಿಂದ ಲಿಂಗರಾಜ ಕಾಲೇಜಿನ ಸ್ಥಾಪನೆಯನ್ನು ಸುಗಮಗೊಳಿಸಿದರು. ೧೯೩೩ರಲ್ಲಿ ಲಿಂಗರಾಜ ಕಾಲೇಜಿನ ಆರಂಭೋತ್ಸವದ ಉದ್ಘಾಟಕರು ಗವರ್ನರ್ ಸರ್ ಫ್ರೆಡರಿಕ್ ಸ್ಟೈಕ್ಸ್, ಅಧ್ಯಕ್ಷರು, ಶಿಕ್ಷಣ ಮಂತ್ರಿ ಸಿದ್ದಪ್ಪ ಕಂಬಳಿ. ಕಂಬಳಿಯವರ ನಿರ್ಣಾಯಕ ಪಾತ್ರವನ್ನು ಕೊಂಡಾಡುತ್ತ ಸರ್ ಫ್ರೆಡರಿಕ್ ಸ್ಟೈಕ್ಸ್ ಹೇಳಿದರು: "ಈ ಜನರಲ್ಲಿ ಕೃತಜ್ಞತೆ ಎನ್ನುವದಿದ್ದರೆ ಕಾಲೇಜಿನ ಸ್ಥಾಪನೆಗೆ ಕಾರಣಕರ್ತರಾದ ದಿವಾನ್ ಬಹಾದ್ದೂರ ಸಿದ್ದಪ್ಪ ಕಂಬಳಿಯವರ ಪೂರ್ಣಾಕಾರದ ಮೂರ್ತಿಯನ್ನು ಕಾಲೇಜ ಕಟ್ಟಡದ ಮುಂದೆ ನಿಲ್ಲಿಸುವರು." ಡಾ. ಕೋರೆಯವರು ಈಗ ಈ ಕಾರ್ಯವನ್ನು ಪೂರೈಸಿದ್ದಾರೆ. ಪ್ರಾರಂಭದಿಂದಲೂ ಲಿಂಗರಾಜ ಕಾಲೇಜಿನ ಕರ್ನಾಟಕ ಸಂಘ ನಾಡಿನ ಅನೇಕ ಗಣ್ಯ ಸಾಹಿತಿಗಳನ್ನೂ ಕಲಾವಿದರನ್ನೂ ಆಮಂತ್ರಿಸಿ ಉಪನ್ಯಾಸಗಳನ್ನು ವಿಚಾರ ಸಂಕಿರಣಗಳನ್ನು ಎಡಬಿಡದೆ ಏರ್ಪಡಿಸಿ ಬೆಳಗಾವಿ ಹಾಗೂ ಸುತ್ತಮುತ್ತಿನ ಊರುಗಳಲ್ಲಿ ಕನ್ನಡದ ಕಂಪನ್ನು ಪಸರಿಸುತ್ತಿದೆ. ಜೆ.ಎನ್. ಮೆಡಿಕಲ್ ಕಾಲೇಜಿನ 'ಕನ್ನಡ ಬಳಗ'ವೂ ಇಂಥ ಕೆಲಸಗಳಿಗೆ ಎಂದೂ ಹಿಂದೆ ಬಿದ್ದಿಲ್ಲ. ಕೆ.ಎಲ್.ಇ. ಸಂಸ್ಥೆ ರಾಜ್ಯೋತ್ಸವವನ್ನು ಅದ್ದೂರಿಯಿಂದ ಪ್ರತಿವರ್ಷ ಆಚರಿಸುತ್ತದೆ. ಬೆಳಗಾವಿಯಲ್ಲಿ ನಡೆದ ಎಲ್ಲ ಸಾಹಿತ್ಯ ಸಮ್ಮೇಳನಗಳಿಗೂ ಈ ಸಂಸ್ಥೆ ಬೆನ್ನೆಲುಬಾಗಿ ನಿಂತು ಕೆಲಸಮಾಡಿರುವುದನ್ನು ಎಲ್ಲರೂ ಬಲ್ಲರು. ೧೯೮೦ರಲ್ಲಿ ಬೆಳಗಾವಿಯಲ್ಲಿ ನಡೆದ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಪ್ರಖ್ಯಾತ ಪ್ರಗತಿಶೀಲ ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರು ಈ ಸಂಸ್ಥೆಯ ಜಿ.ಎ. ಹೈಸ್ಕೂಲಿನ

ವಿದ್ಯಾರ್ಥಿಯಾಗಿದ್ದರು. ಅವರು ತಮ್ಮ ಅಧ್ಯಕ್ಷಭಾಷಣದಲ್ಲಿ ಬೆಳಗಾವಿ ಬಗ್ಗೆ ಹೇಳಿದ ಒಂದು ಮಾತು ಹೀಗಿದೆ: "ಸೂರ್ಯಚಂದ್ರರಿರುವವರೆಗೆ, ಮಲಪ್ರಭಾ-ಘಟಪ್ರಭಾ ಇರುವವರೆಗೆ ಕರ್ನಾಟಕವಿರುವವರೆಗೆ ಬೆಳಗಾವಿಯೂ ಕನ್ನಡಿಗರ ನಗರವಾಗಿಯೇ ಉಳಿಯವುದು. ಬೆಳಗಾವಿಯು ನಮ್ಮ ಹರಿತವಾದ ಕುಡಗೋಲಿದ್ದಂತೆ. ಇದನ್ನು ನುಂಗಬೇಕೆನ್ನುವವರೇ ಜೋಕೆ!"

೨೦೦೩ರಲ್ಲಿ ಬೆಳಗಾವಿಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ತಮ್ಮ ಭಾಷಣದಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲದ ವಿಶೇಷ ಅಧಿವೇಶನ ನಡೆಸುವ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದರು. ಆದರೆ ಅದಕ್ಕೆ ಮುಹೂರ್ತ ಒದಗಿದ್ದು ೨೦೦೬ರಲ್ಲಿ. ಸರ್ಕಾರ ಆ ಬಗ್ಗೆ ನಿರ್ಧರಿಸಿದಾಗ ಹತ್ತು-ಹದಿನೈದು ದಿನಗಳ ಅವಧಿಯಲ್ಲಿಯೇ ಪ್ರಭಾಕರ ಕೋರೆಯವರು ಅದರ ಸಂಪೂರ್ಣ ಜವಾಬುದಾರಿಯನ್ನು ಹೊತ್ತು ಕೆ.ಎಲ್.ಇ. ಸಂಸ್ಥೆಯ ನೆರವಿನಿಂದ ಅದನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಿದರು. "ಗಡಿ ವಿಷಯದಲ್ಲಿ ಕೇಂದ್ರ ಸರಕಾರವು ತಳೆಯುತ್ತಿರುವ ಅನ್ಯಾಯದ ಧೋರಣೆಯನ್ನು ಪ್ರತಿಭಟಿಸಲು ಈಗಿನ ಸರ್ಕಾರವು ಕೈಕೊಂಡ ದಿಟ್ಟಹೆಜ್ಜೆಯ ಫಲವಾಗಿ ನಡೆಯುತ್ತಿದೆ... ಬೆಳಗಾವಿಯನ್ನು ಉಳಿಸಿಕೊಳ್ಳಲು ಕೇಂದ್ರದ ವಿರುದ್ಧ ಸಿಡಿದೆದ್ದ ಕರ್ನಾಟಕದ ಪ್ರತಿಕ್ರಿಯೆ ಇದು. ಹೀಗಾಗಿ ಇದು ಐತಿಹಾಸಿಕ!" ಎಂದು ಪ್ರಭಾಕರ ಕೋರೆಯವರ ವ್ಹಿಜನ್, ಕರ್ತೃತ್ವಶಕ್ತಿ, ಶೀಘ್ರ ಹಾಗೂ ದೃಢನಿರ್ಧಾರಗಳನ್ನು ರಾಘವೇಂದ್ರ ಜೋಶಿಯವರು ಪ್ರಶಂಸಿಸಿದ್ದಾರೆ ('ನಾಡೋಜ' ದಿನಪತ್ರಿಕೆ ೨೪-೬-೨೦೦೬). "ಮರಾಠಿಗರ ಮಧ್ಯದ ತಂಟೆಕೋರರಿಗೆ, ಎಂ.ಇ.ಎಸ್.ನ ಪುಂಡರಿಗೆ ಈ ಅಧಿವೇಶನದ ನೆಪದಲ್ಲಿ ನಡೆಯುತ್ತಿರುವ ಕನ್ನಡಿಗರ ಗಡಿ ಉತ್ಸವ ಒಂದು ಪಾಠವಾಗಬೇಕು. ಇದು ನಮ್ಮ ಒಗ್ಗಟ್ಟು-ಬಲ ಮತ್ತು ಅಭಿಮಾನಗಳ ದಿಟ್ಟ ಪ್ರದರ್ಶನವಾಗಬೇಕು. ಬೆಳಗಾವಿ ಯನ್ನೊಂದು ಬಲಹೀನ ಹಿತ್ತಲು ಅಂತ ಭಾವಿಸಿ ಪದೇ ಪದೇ ತಂಟೆಗೆ ಬರುವ ಮಹಾರಾಷ್ಟ್ರ ಇವತ್ತಿನಮಟ್ಟಿಗೆ ಕೊಂಚ ಶಕ್ತಿಯುತ ಸ್ಥಾನದಲ್ಲಿದೆ. ಕೇಂದ್ರದಲ್ಲಿನ ಸರಕಾರ ನಮ್ಮ ಪರವಾಗಿಲ್ಲ. ಯಾರೇನೇ ಹೇಳಲಿ, ಸುಪ್ರೀಂ ಕೋರ್ಟಿಗೆ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಬೇಕಾಗಿರುವ ಈ ಸಂದರ್ಭದಲ್ಲಿ ನಾವು ಬೆಳಗಾವಿಯಲ್ಲೊಂದು ಅಧಿವೇಶನ ನಡೆಸಿ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಅಂತ ನಿರೂಪಿಸಿ ಇದನ್ನೊಂದು ಐತಿಹಾಸಿಕ ಘಟನೆಯನ್ನಾಗಿ ಮಾಡಬೇಕು" ಎಂದು ರವಿ ಬೆಳಗೆರೆ ಯವರು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿ ('ಹಾಯ್ ಬೆಂಗಳೂರು' ೨೮-೯-೨೦೦೬) ಕೋರೆಯವರು (ಮತ್ತು ಕೆ.ಎಲ್.ಇ. ಸಂಸ್ಥೆ) ಕನ್ನಡಿಗರ ಗೌರವ - ಅಭಿನಂದನೆಗಳಿಗೆ ಅರ್ಹರು ಎಂದಿರುವುದು ಅತ್ಯಂತ ಸಮರ್ಪಕವಾಗಿದೆ.

'ಹಚ್ಚೇವು ಕನ್ನಡದ ದೀಪ' ಹಾಡು ಇಂದು ಪರ್ಯಾಯ ನಾಡಗೀತೆಯಂತೆ ನಾಡಿನ ಮೂಲೆಮೂಲೆಗಳಿಂದ, ಇಷ್ಟೇ ಅಲ್ಲ, ವಿದೇಶಗಳಲ್ಲಿ ನಡೆಯುವ ಕನ್ನಡ ಸಮಾರಂಭ

ಗಳಲ್ಲಿಯೂ ಉಚ್ಚಕಂಠದಿಂದ ಕೇಳಿಬರುತ್ತಿದೆ. ಕೆ.ಎಲ್.ಇ. ಸಂಸ್ಥೆಯ ಹುಬ್ಬಳ್ಳಿ ಕಾಡಸಿದ್ದೇಶ್ವರ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾದ ಡಾ. ಡಿ.ಎಸ್. ಕರ್ಕಿಯವರು ಈ ಕ್ರಿಯಾಶೀಲ ಸಂಕಲ್ಪದ ಕೆಚ್ಚಿನಿಂದ ಕೂಡಿದ ಕವಿತೆಯನ್ನು ಬೆಳಗಾವಿಯಲ್ಲಿದ್ದಾಗಲೇ ೧೯೪೪ರಲ್ಲಿ ಬರೆದರೆಂಬುದನ್ನು ಮರೆಯುವಂತಿಲ್ಲ, 'ಮನಸಗೊಟ್ಟು ಕೇಳಿದವರ ಮೈನವಿರೇಳಿಸುವಂಥ' ವೀರರಾಣಿ ಚೆನ್ನಮ್ಮನ ಚರಿತೆಯನ್ನು ಲಾವಣಿ ರೂಪದಲ್ಲಿ ಕ್ರಾಂತಿಗೀತೆಯಾಗಿಸಿದ ಎಸ್.ಡಿ. ಇಂಚಲ ಅವರು ಬೆಳಗಾವಿಯ ಜಿ.ಎ. ಹೈಸ್ಕೂಲಿನ ಮುಖ್ಯೋಪಾಧ್ಯಯರಾಗಿದ್ದರು. ಡಾ. ಕೆ.ಆರ್. ಶ್ರೀನಿವಾಸ ಅಯ್ಯಂಗಾರ್, ಡಾ. ಹಿರೇಮಲ್ಲೂರು ಈಶ್ವರನ್, ಡಾ. ಎ.ಕೆ. ರಾಮಾನುಜನ್, ಪ್ರೊ. ಸಂ.ಶಿ. ಭೂಸನೂರಮಠ, ಡಾ. ಆರ್.ಸಿ. ಹಿರೇಮಠ, ಡಾ. ಶಿ.ಚ. ನಂದೀಮಠ, ಪ್ರೊ. ಪರಮಶಿವಯ್ಯ, ಪ್ರೊ. ಪಿ.ಕೆ. ಬಾಗೋಜಿ, ಡಾ. ಚಂದ್ರಶೇಖರ ಕಂಬಾರ ಇವರೇ ಮೊದಲಾಗಿ ಶಿಕ್ಷಣ, ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ, ವಾಣಿಜ್ಯ ಮೊದಲಾದ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿ ವಿಶ್ವವಿಖ್ಯಾತರಾದ ಸಾವಿರಾರು ಪ್ರತಿಭಾವಂತ ವ್ಯಕ್ತಿಗಳು ಕೆ.ಎಲ್.ಇ. ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳೂ, ಪ್ರಾಧ್ಯಾಪಕರೂ ಪ್ರಾಂಶುಪಾಲರೂ ಆಗಿ ಸೇವೆ ಸಲ್ಲಿಸಿದವರೆಂಬುದು ಬೆಳಗಾವಿಯಷ್ಟೇ ಅಲ್ಲ, ಇಡಿಯ ಕನ್ನಡ ನಾಡು ಹೆಮ್ಮೆಪಡತಕ್ಕ ಸಂಗತಿಯಾಗಿದೆ.

ಹೀಗೆ, ಕೆ.ಎಲ್.ಇ. ಸಂಸ್ಥೆ ಹಾಗೂ ಕನ್ನಡದ ಸಂಬಂಧ ಎಂಥದೆಂಬುದನ್ನು ವರಕವಿ ಬೇಂದ್ರೆಯವರ ಕವಿತೆಯ ಕೆಳಗಿನ ಸಾಲುಗಳಿಗೆ ಅನ್ವಯಿಸಿ ಹೇಳಬಹುದು:

"ಕಟ್ಟಿ ಕೂಡುವುದಲ್ಲ
ಬಿಚ್ಚಿಬಿಡುವುದು ಅಲ್ಲ
ಹೊಕ್ಕಳಿನ ಹುರಿಯಂಥ ಭಾವಬಂಧ"

('ಕೆ.ಎಲ್.ಇ. ಸಂಸ್ಥೆ: ಕನ್ನಡ ನುಡಿತೇರು' ೨೦೧೧)

‘ಬೆಳಗಾವಿ: ಕನ್ನಡ ಹೋರಾಟದ ಕೆಲವು ಪುಟಗಳು’

(ಗ್ರಂಥಾವಲೋಕನ)

ಬೆಳಗಾವಿ ಎಂದಿನಿಂದಲೂ ಕನ್ನಡ ಪ್ರದೇಶವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. “ಬೆಳಸೆಂದುಂ ಕುಂದದ ವಿಪುಲ ಫಲಚಯಂ ಕ್ಷೇಮಧಾನ್ಯಂ” ಎಂಬುದಾಗಿ ಈ ಸಂಪದ್ಭರಿತ ನಾಡಿನ ವರ್ಣನೆ ನೇಸರಗಿಯ ಶಾಸನದಲ್ಲಿ ಬರುತ್ತದೆ. ೧೨-೧೩ನೆಯ ಶತಮಾನಗಳ ಶಾಸನಗಳಲ್ಲಿ ಬೆಳಗಾವಿ ‘ವೇಣುಗ್ರಾಮ’ವೆಂದು ಉಲ್ಲೇಖಗೊಂಡಿದೆ. ಅದು ಆಗ ಬೆಳಗಾವಿ ಎಪ್ಪತ್ತರ ಕೇಂದ್ರ. ಅದನ್ನು ಗೋವೆ ಮತ್ತು ಬಿಜಾಪುರಗಳ ನಡುವಿನ ಏಕೈಕ ಪಟ್ಟಣವೆಂದು ಇಂಗ್ಲಿಷ್ ಪ್ರವಾಸಿ ಫಿಚ್ (೧೫೮೩) ವರ್ಣಿಸಿದ್ದಾನೆ. ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ರಟ್ಟರು, ದೇವಗಿರಿಯ ಯಾದವರು, ಮುಸಲ್ಮಾನ ದೊರೆಗಳು ಆಳಿದ ಈ ಬೆಳಗಾವಿ ಭಾಗದ ಜನರು ಆಡುತ್ತಿದ್ದ ಮಾತು ಕನ್ನಡವೆಂಬುದಕ್ಕೆ ಉದ್ದಕ್ಕೂ ದಾಖಲೆಗಳಿವೆ. ಮಹಾರಾಷ್ಟ್ರದ ಒಟ್ಟು ಶಾಸನಗಳ ಸಂಖ್ಯೆ ಸುಮಾರು ಒಂದು ಸಾವಿರವಾದರೆ, ಅವುಗಳಲ್ಲಿ ಕನ್ನಡ ಶಾಸನಗಳ ಸಂಖ್ಯೆ ಸುಮಾರು ಮುನ್ನೂರು ಮತ್ತು ಮರಾಠಿ ಶಾಸನಗಳ ಸಂಖ್ಯೆ ಸುಮಾರು ಎಪ್ಪತ್ತಾರು ಎಂದು ಸಂಶೋಧಕರು ಎತ್ತಿ ತೋರಿಸಿದ್ದಾರೆ. ಮರಾಠಿ ಜನರು ತಮ್ಮ ಸಂಖ್ಯೆಯನ್ನು ಬೆಳೆಸಿಕೊಂಡಿದ್ದು ಈಚಿನ ದಶಕಗಳಲ್ಲಿ. ಪೇಶ್ವೆಗಳ ಕಾಲದಿಂದ ಸರ್ವಾಧಿಕಾರಿ ಮನೋಭಾವ, ಆಕ್ರಮಣಶೀಲ ಪ್ರವೃತ್ತಿ ಕಂಡು ಬರತೊಡಗಿತು. ರಾಷ್ಟ್ರಪಿತ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಅ.ಭಾ. ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಕೂಡಿದ್ದಾಗಲೇ (೧೯೨೪) ಅವರು ತೀರ್ಮಾನ ಕೊಟ್ಟರು: “ಬೆಳಗಾವಿ ಕನ್ನಡಿಗರದ್ದು” “ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು” ಎಂಬ ಕನ್ನಡಿಗರ ಹಾಡಿನ ದನಿ ನಾಲ್ದೆಸೆಗಳಲ್ಲಿಯೂ ಮೊಳಗಿದ್ದು ಅಲ್ಲಿಯೇ. ಆ ಸಂದರ್ಭದಲ್ಲಿಯೇ.

ಬೆಳಗಾವಿಯನ್ನು ಮಹಾರಾಷ್ಟ್ರದ ಭಾಗವೆಂದು ಇದುವರೆಗೂ ಯಾರೂ ಅಧಿಕೃತವಾಗಿ ಹೇಳಿಲ್ಲ. ಎಲ್ಲ ಸಮಿತಿಗಳೂ ಆಯೋಗಗಳೂ ಅದನ್ನು ಕರ್ನಾಟಕದಲ್ಲಿಯೇ ಉಳಿಸಿವೆ. ರಾ.ಪು. ಆಯೋಗ ಬೆಳಗಾವಿ ಭೌಗೋಳಿಕವಾಗಿ ಆಡಳಿತಾತ್ಮಕವಾಗಿ ಆರ್ಥಿಕವಾಗಿ ಕರ್ನಾಟಕಕ್ಕೆ ಸೇರಿದ್ದೆಂಬುದನ್ನು ದೃಢಪಡಿಸಿತು. ಇದನ್ನು ಒಪ್ಪದ ಮಹಾರಾಷ್ಟ್ರೀಯರ ಅನುಚಿತ ಅಪೇಕ್ಷೆ, ಒತ್ತಾಯಗಳಿಂದಲೇ ಮಹಾಜನ ಆಯೋಗ ನೇಮಕವಾಯಿತು. ಅದು ಕೂಡ ಕನ್ನಡಿಗರ ಅಪೇಕ್ಷೆಯಿಂದ ಆದದ್ದಲ್ಲ. ಮರಾಠಿಗರ ಒತ್ತಾಯದ ಫಲ. ಅದು ಕೂಡ ಬೆಳಗಾವಿ ಕರ್ನಾಟಕದ್ದೆಂದು ಶಿಫಾರಸ್ಸು ಮಾಡಿತು. ಈ ಗಡಿ ಸಮಸ್ಯೆಯನ್ನು ಅಂತಿಮವಾಗಿ ಪರಿಹರಿಸಲು ಕೇಂದ್ರ ಸರ್ಕಾರಕ್ಕೆ ಈಗ ಮತ್ತೊಂದು ಅವಕಾಶ ಒದಗಿಬಂದಿತ್ತು. ಆದರೆ ಅದು ಕ್ರಮ ಕೈಗೊಳ್ಳಲೇ ಇಲ್ಲ. ಪ್ರಜಾಪ್ರಭುತ್ವದಲ್ಲಿ ಸಜ್ಜನಿಕೆಗೆ ಬೆಲೆ ಇಲ್ಲ, ಪುಂಡಾಡಿಕೆಗೆ ಮಾನ್ಯತೆ ದೊರೆಯುತ್ತ ದೆಂಬುದೂ ಇದರಿಂದಲೇ ಗೊತ್ತಾಗುತ್ತದೆ.

ಈ ಕಾಲದಲ್ಲಿ ಏಕಭಾಷಾ ಪ್ರದೇಶವನ್ನು ಗೆರೆಕೊರೆದು ಗುರುತಿಸುವುದಾಗಲಿ, ಒಂದೇ ಭಾಷೆಯನ್ನಾಡುವವರನ್ನು ಬೇರ್ಪಡಿಸುವುದಾಗಲಿ ದೇವರಿಂದಲೂ ಸಾಧ್ಯವಿಲ್ಲ. ಪ್ರತಿಯೊಂದು ರಾಜ್ಯದಲ್ಲಿರುವ ಭಾಷಾ ಅಲ್ಪಸಂಖ್ಯಾತರಿಗೆ ಅವರ ಭಾಷೆಯನ್ನು ಕಲಿಯಲು ಅವಕಾಶವಿರಬೇಕೆಂಬುದು ಮುಖ್ಯ. ಈ ವಿಷಯದಲ್ಲಿ ಕರ್ನಾಟಕ ಅತ್ಯಂತ ಉದಾರವಾಗಿ ನಡೆದುಕೊಂಡಿದೆ. ಕರ್ನಾಟಕದಲ್ಲಿರುವವರು ಕನ್ನಡವನ್ನು ಕಲಿಯಬೇಕು ಎಂದು ಸರಕಾರ ಆದೇಶ ಹೊರಡಿಸಿದೆ. ತಮ್ಮ ಭಾಷೆಯನ್ನು ಕಲಿಯಬಾರದೆಂದು ಎಲ್ಲಿಯೂ ಹೇಳಿಲ್ಲ. ಆದರೆ ಅದಕ್ಕೆ ಮರಾಠಿಗರು ಸಿದ್ಧರಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡದ ಅಸ್ತಿತ್ವವನ್ನು ಯೋಜನಾಬದ್ಧವಾಗಿ ನಾಶಗೊಳಿಸಲಾಗುತ್ತಿದೆ. ಆದರೆ ಕರ್ನಾಟಕದಲ್ಲಿ ಮರಾಠಿ ಸಾಯುತ್ತಿದೆಯೆಂದು ಸುಳ್ಳು ಬೊಬ್ಬೆ ಹೊಡೆಯಲಾಗುತ್ತಿದೆ. ರಾಜ್ಯದ ಭಾಷಾ ಅಲ್ಪಸಂಖ್ಯಾತರು ತಮ್ಮ ತಮ್ಮ ಭಾಷೆಯನ್ನು ಕಲಿತು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲೆಂಬುದು ಕನ್ನಡಿಗರ ಸದಾಶಯ. ಆದರೆ ಅವರು ತಾವು ವಾಸ ಮಾಡುತ್ತಿರುವ ರಾಜ್ಯಕ್ಕೆ ನಿಷ್ಠರಾಗಿರಬೇಕು. ಇದು ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೂ ಅನ್ವಯಿಸುತ್ತದೆ. ಅವರು ಎಂದೂ ಈ ವಿಷಯದಲ್ಲಿ ತಕರಾರು ತೆಗೆದದ್ದೇ ಇಲ್ಲವೆಂಬುದು ಗಮನಾರ್ಹ. ನಯವಂಚನೆಯ ರಾಜಕೀಯಕ್ಕೆ, ಸ್ವಾರ್ಥ ಲಾಲಸೆಗೆ ಮಹಾರಾಷ್ಟ್ರದ ನಾಯಕರು ಹಾಗೂ ಬೆಳಗಾವಿಯ ಸ್ಥಳೀಯ ಮರಾಠಿ ಮುಖಂಡರು ಪ್ರಬಲ ಸಾಕ್ಷಿಯಾಗಿದ್ದಾರೆ. ರಾಜಕೀಯವನ್ನು ಮಾಡಲು ಹೋಗದೆ ರಾಷ್ಟ್ರದ ಹಿತವನ್ನು ಪರಿಗಣಿಸುವುದರ ಕಡೆಗೆ ಕೇಂದ್ರ ಸರ್ಕಾರಕ್ಕೆ ಲಕ್ಷ್ಯವಿದ್ದರೆ ಅದಕ್ಕೆ ಇರುವ ದಾರಿ ಒಂದೇ: ರಾಜ್ಯಗಳ ಗಡಿಸಮಸ್ಯೆ ಮುಕ್ತಾಯವಾಗಿದೆಯೆಂದು ತೀರ್ಪುಕೊಡುವುದು.

ಇವತ್ತು ಬೆಳಗಾವಿಯ ಮುಖವೇ ಬದಲಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಲ್ಲಿ ತಲೆಯೆತ್ತಿದೆ. ಸ್ನಾತಕೋತ್ತರ ಕೇಂದ್ರ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿದೆ. ಕೆ.ಎಲ್.ಇ. ವಿಶ್ವವಿದ್ಯಾಲಯ ಭದ್ರವಾಗಿ ರೂಪುಗೊಂಡಿದೆ.

ಮಹಾನಗರಸಭೆಯ ಕಟ್ಟಡದಲ್ಲಿ ಭಗವಾಧ್ವಜವನ್ನಿಳಿದು ರಾಷ್ಟ್ರಧ್ವಜ ಮೆರೆಯುತ್ತಿದೆ. ಕನ್ನಡಿಗರು ಮಹಾಪೌರರಾಗಿ, ನಗರದ ಅಭಿವೃದ್ಧಿಯಲ್ಲಿ ಎಲ್ಲರೂ ಲಕ್ಷ್ಯವನ್ನು ಕೇಂದ್ರೀಕರಿಸುವಂತೆ ಮಾಡಿದ್ದಾರೆ. ಬೆಳಗಾವಿಯಲ್ಲಿ ವಿಧಾನಮಂಡಲದ ಅಧಿವೇಶನ ನಡೆದದ್ದಲ್ಲದೆ ಈಗ ಅದಕ್ಕಾಗಿ ಸುವರ್ಣಸೌಧವೂ ಮೈತುಂಬಿಕೊಂಡು ಮೇಲೇಳುತ್ತಿದೆ. ಇಷ್ಟೆಲ್ಲ ಆಗಬೇಕಾದರೆ ಕಳೆದ ಆರೇಳು ದಶಕಗಳಿಂದ ಅಲ್ಲಿಯ ಕನ್ನಡಿಗರು ನಡೆಸಿದ ನಿರಂತರ ಹೋರಾಟ, ಪಟ್ಟ ಕಷ್ಟ ನಷ್ಟಗಳು, ಅನುಭವಿಸಿದ ಅವಮಾನಗಳು, ಎದುರಿಸಿದ ಹಿಂಸಾಚಾರಗಳು ಒಡ್ಡಿಕೊಂಡ ಅಗ್ನಿಪರೀಕ್ಷೆಗಳು ಒಂದಲ್ಲ, ಎರಡಲ್ಲ ನೂರಾರು. ಇವೆಲ್ಲವುಗಳ ಜೀವಂತ ಚಿತ್ರಣವೇ ಶ್ರೀರಾಘವೇಂದ್ರ ಜೋಶಿಯವರ ಪ್ರಸ್ತುತ ಕೃತಿ: 'ಬೆಳಗಾವಿ: ಕನ್ನಡ ಹೋರಾಟದ ಕೆಲವು ಪುಟಗಳು.'

ರಾಘವೇಂದ್ರ ಜೋಶಿಯವರ ತಂದೆಯವರಾದ ಶ್ರೀ ಅರವಿಂದ ಜೋಶಿಯವರು ಕೇಂದ್ರ ಗೃಹಶಾಖೆಯಲ್ಲಿ ರಾಜ್ಯ ಸಚಿವರಾಗಿ ನೆಹರು ಸಂಪುಟದಲ್ಲಿ ಕೆಲಸ ಮಾಡಿದ ಬಿ.ಎನ್. ದಾತಾರ ಅವರ ಆಪ್ತ ಕಾರ್ಯದರ್ಶಿಯಾಗಿದ್ದವರು. ದಾತಾರ ಅವರ ಜೊತೆಗೂಡಿ ಗಡಿ ಸಮಸ್ಯೆಗಳಿಗೆ ಸಂಬಂಧಪಟ್ಟ ಎಲ್ಲ ಕಡತಗಳನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಿದವರು. ರಾಘವೇಂದ್ರ ಜೋಶಿಯವರು ೧೯೫೦ರಿಂದ ಕನ್ನಡ ಚಳವಳಿಯನ್ನು ಸಮೀಪದಿಂದ ಕಂಡು ನೂರಾರು ತರುಣ ಮಿತ್ರರೊಂದಿಗೆ ಅದರಲ್ಲಿ ಭಾಗವಹಿಸುತ್ತ ಬಂದವರು. ಹತ್ತು-ಹನ್ನೆರಡು ವರ್ಷಗಳ ಬಾಲ್ಯದಿಂದಲೇ ಗೋಂಧಳಿಗಲ್ಲಿಯ ವಾಸ್ತವ್ಯದಲ್ಲಿ ಸುತ್ತುಮುತ್ತಿನ ಮರಾಠಿಗರಿಂದ 'ಕಾನಡ್ಯಾ' ಎಂದು ಛೇಡಿಸಿಕೊಂಡು, ಕಲ್ಲಿನೇಟು ತಿನ್ನುತ್ತ ಬೆಳೆದು ಗಟ್ಟಿಯಾದವರು. "ಅಲ್ಲಿಯವರೆಗೆ ನನಗೆ ಕನ್ನಡ ಇಷ್ಟೊಂದು 'ಅಪಾಯಕಾರಿ' ಎನ್ನುವದೇ ಗೊತ್ತಿರಲಿಲ್ಲ" ಎಂಬುದು ಅವರ ಮುಗ್ಧ ಪ್ರತಿಕ್ರಿಯೆ.

ಪತ್ರಿಕೋದ್ಯಮ ವೃತ್ತಿ ಬರಬರುತ್ತ ಇವರಿಗೆ ಸಾರ್ವಜನಿಕ ಜೀವನದ ಒಳಹೊರಗುಗಳನ್ನು, ರಾಜಕೀಯ ವ್ಯಕ್ತಿಗಳ ಒಳಸುಳಿಗಳನ್ನು ಅರಿಯಲು ಹೆಚ್ಚು ಅನುಕೂಲ ಒದಗಿಸಿತು. ಏಕಕಾಲಕ್ಕೆ ಹಲವು ಮುಖಗಳಲ್ಲಿ, ಹಲವು ದಿಕ್ಕುಗಳಲ್ಲಿ ಹೋರಾಟಕ್ಕಣಿಗೊಳ್ಳಬೇಕಾದ ಮರಾಠಿ ದಬ್ಬಾಳಿಕೆ, ಸ್ವಾರ್ಥಸಾಧಕ ಕೆಲವು ಕನ್ನಡ ವ್ಯಕ್ತಿ, ಸಂಸ್ಥೆ, ಸಂಘಟನೆಗಳ ನಡತೆ, ಬೆಳಗಾವಿಯ ಬಗ್ಗೆ ಉದಾಸೀನ ಭಾವ ತಾಳಿದ ಕರ್ನಾಟಕ ಸರಕಾರ, ಆಕ್ರಮಣಶೀಲ ಪ್ರವೃತ್ತಿಯ ಮಹಾರಾಷ್ಟ್ರ ಸರ್ಕಾರ ಹಾಗೂ ಅದರ ಧುರೀಣರು, ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾದ ಕೇಂದ್ರ ಸರ್ಕಾರದ ನಿಲುವುಗಳು ಹೀಗೆ ಎಷ್ಟೋ ಸಂಗತಿಗಳನ್ನು ಅರಗಿಸಿಕೊಳ್ಳುತ್ತ, 'ನಾಡೋಜ'ದ ಬರವಣಿಗೆಯ ಮೂಲಕ ಪ್ರತಿಭಟಿಸುತ್ತ, ಪ್ರತ್ಯಕ್ಷ ಚಳವಳಿಯಲ್ಲಿ ಭಾಗವಹಿಸುತ್ತ ಪ್ರಚಾರ ಪ್ರತಿಷ್ಠೆಗಳಿಂದ ದೂರವನ್ನು ಕಾಯ್ದುಕೊಂಡು, ರಾಜೀಮನೋಭಾವಕ್ಕೊಳಗಾಗದ ರಾಘವೇಂದ್ರ ಜೋಶಿಯವರ ವ್ಯಕ್ತಿತ್ವ ಈ ಗ್ರಂಥದ ಪುಟಪುಟಗಳಲ್ಲಿ ಪುಟಗೊಂಡಿರುವುದನ್ನು ಕಾಣಬಹುದು. ಇದರ

ಒಂದೊಂದು ಪುಟವನ್ನು ತಿರುವಿ ಹಾಕುವಾಗ ಓದುಗರ ಬೆರಳುಗಳಿಗೆ ಬಿಸಿ ತಾಗಿ ಮೈಗೆ ಮುಳ್ಳು ಬಂದರೆ ಆಶ್ಚರ್ಯವಿಲ್ಲ.

'ಆಕಾಶಬುಟ್ಟಿ ಪ್ರಕರಣ', ೧೯೫೬ ಜನವರಿ ೧೭ರ ಘಟನೆ, 'ಕನ್ನಡಿಗರು ತಮ್ಮನ್ನು ತಾವೇ ರಕ್ಷಿಸಿಕೊಂಡರು', '೧೯೭೩ರ ರಾಜ್ಯೋತ್ಸವ', 'ಮರಾಠಿ ಪತ್ರಕರ್ತರ ಸಮ್ಮೇಳನ', 'ಗೋಕಾಕ ಚಳವಳಿ', 'ಚೆನ್ನಮ್ಮಳಾದ ಚಿಂದೋಡಿ', 'ಚುನಾವಣಾ ಚಳವಳಿ', 'ಹುತಾತ್ಮ ದೀಪಕ ಅನಗೋಳ್ಕರ ಪ್ರಕರಣ', 'ಮಹಾನಗರ ಸಭೆಗೆ ಪಾಪು ಭೆಟ್ಟಿ', '೮೬ರ ಸೀಮಾಲಡಾ ಚಳವಳಿ', 'ಕನ್ನಡ ಮಹಾಪೌರರ ಆಯ್ಕೆ', 'ಕಂಗ್ರಾಳಿ ಶಾಲೆಯ ಕಥೆ', 'ವಿಧಾನಸಭೆ ಚುನಾವಣೆಗಳು', 'ಮಹಾನಗರ ಸಭೆಯ ಮೇಲಿನ ಭಗವಾಧ್ವಜ', 'ಪಿ.ಜೆ. ಲುಯಿಸ್ ಕಾಲಾವಧಿ', 'ಹಿಂಸಾಚಾರವೇ ಅವರ ಚಳವಳಿ', ಮ.ಏ. ಸಮಿತಿಗೆ ಶರದ್ ಪವಾರರ ಸರ್ಟಿಫಿಕೆಟ್, ಇತ್ಯಾದಿ ಮೂವತ್ತೇಳು ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಇಲ್ಲಿಯ ಬರವಣಿಗೆ ಬೆಳಗಾವಿಯ ಕನ್ನಡಿಗರ ಹೋರಾಟದ ಸಂದರ್ಭದ ಅನೇಕ ವಾಸ್ತವ ಘಟನೆಗಳಿಗೆ, ಸನ್ನಿವೇಶಗಳಿಗೆ, ಸಾಹಸಗಳಿಗೆ, ಮರಾಠಿಗರ ಪುಂಡಾಟಿಕೆ ಹಿಂಸಾಚಾರಗಳಿಗೆ, ಕನ್ನಡಿಗರ ತೀರ ಸೌಮ್ಯ ಸ್ವಭಾವಕ್ಕೆ, ಮರಾಠಿಪರ ಅಧಿಕಾರಿಗಳ ದುರ್ವರ್ತನೆಗೆ ಕರ್ನಾಟಕ ಭಗಿನಿ ಮಂಡಳದ ರಚನಾತ್ಮಕ ಕಾರ್ಯಗಳಿಗೆ, ಇನ್ನೂ ಎಷ್ಟೊ ಚಟುವಟಿಕೆಗಳಿಗೆ ಕನ್ನಡಿ ಹಿಡಿಯುತ್ತದೆ. ಡಾ. ಶ್ರೀನಿವಾಸ ಕುಲಕರ್ಣಿಯವರು ಸಮರ್ಪಕವಾಗಿ ಗುರುತಿಸಿದಂತೆ "ಕಳೆದ ಐವತ್ತು ವರ್ಷಗಳ ಬೆಳಗಾವಿಯ ಸಾರ್ವಜನಿಕ ಬದುಕಿನ ಕನ್ನಡ ಕೇಂದ್ರಿತ ಇತಿಹಾಸವೇ ಇಲ್ಲಿ ಪುನರ್ ಸೃಷ್ಟಿಯಾಗಿದೆ."

ಈ ಸಂದರ್ಭದಲ್ಲಿ 'ನಾಡೋಜ' ಪತ್ರಿಕೆ ಪ್ರಾರಂಭಗೊಂಡದ್ದು ಒಂದು ಮಹತ್ವದ ಘಟನೆಯಾಗಿ ಪರಿಣಮಿಸಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಕಂಡುಬರದು. ಕನ್ನಡಿಗರ ಸಂಘಟನೆಗೆ ಪತ್ರಿಕಾಮಾಧ್ಯಮವೊಂದರ ಅಗತ್ಯವನ್ನು ಹಿರಿಯರು ಮನಗಂಡಿದ್ದರು. ಮರಾಠಿಗರ ಚಳವಳಿಯ ಯಶಸ್ಸಿಗೆ 'ತರುಣ ಭಾರತ' ಪತ್ರಿಕೆಯೇ ಕಾರಣ ಎಂಬುದನ್ನು ಎಲ್ಲರೂ ಅರಿತಿದ್ದರು. ಹಿರಿಯರಾದ ಶ್ರೀ ಅರವಿಂದ ಜೋಶಿಯವರ ಮಾರ್ಗದರ್ಶನದಲ್ಲಿ ೧೯೭೩ರ ದಸರೆಯಂದು 'ನಾಡೋಜ' ವಾರಪತ್ರಿಕೆಯಾಗಿ ಪ್ರಾರಂಭವಾಯಿತು. ಶ್ರೀಯುತರಾದ ಅರವಿಂದ ಜೋಶಿ, ಅಣ್ಣು ಗುರೂಜಿ, ಅನಂತರಾವ್ ಚಿಕ್ಕೋಡಿ, ಅನಂತ ಕಲ್ಲೋಳ ಮುಂತಾದವರ ನುರಿತ ಲೇಖನಗಳು ಪತ್ರಿಕೆಯಲ್ಲಿ ಬರತೊಡಗಿದವು. ಮರಾಠಿ ಪತ್ರಿಕೆಗಳಲ್ಲಿ ಪಕ್ಷಪಾತತನದಿಂದ ಕೂಡಿ ಪ್ರಕಟವಾಗುತ್ತಿದ್ದ ಸುದ್ದಿಗಳ ಉಳಿದ ಮಗ್ಗುಲಗಳನ್ನು ನಿಷ್ಪಕ್ಷಪಾತವಾಗಿ ಈ ಪತ್ರಿಕೆ ತೋರಿಸಿಕೊಟ್ಟಿತು. ಅವುಗಳ ಸುಳ್ಳು-ಟೊಳ್ಳುಗಳನ್ನು 'ನಾಡೋಜ' ನಿರ್ಭಯವಾಗಿ ಬಯಲಿಗೆಳೆಯಿತು. ಮರುವರ್ಷವೇ ಅನೇಕರ ಅಪೇಕ್ಷೆಯಂತೆ ಅದು ದಿನಪತ್ರಿಕೆಯಾಗಿ ಪರಿವರ್ತನೆಗೊಂಡು ಮುಖ್ಯಮಂತ್ರಿ ದೇವರಾಜ ಅರಸು ಅವರಿಂದ ಪ್ರಥಮ ಸಂಚಿಕೆಯ ಬಿಡುಗಡೆಯ ಭಾಗ್ಯವನ್ನು ಪಡೆದದ್ದು ಗಮನಾರ್ಹ ಸಂಗತಿಯಾಗಿದೆ. ಪತ್ರಿಕಾರಂಗದ ಲಾಭದಾಸೆಯ

ಅಂಗವಾಗಿ ಬೆಳೆಯದೇ ಕನ್ನಡ ಚಳವಳಯ ಅಂಗವಾಗಿ 'ನಾಡೋಜ' ಬೆಳೆದು ಬಂದು ಅದರಲ್ಲಿ ಪ್ರಮುಖ ಪಾತ್ರವಹಿಸಿದ್ದು ಈಗ ಇತಿಹಾಸ.

ಬೆಳಗಾವಿ ಕನ್ನಡಿಗರು ಮೈಯೆಲ್ಲಾ ಕಣ್ಣಾಗಿಸಿಕೊಂಡು ಸದಾ ಹೋರಾಟಕ್ಕೆ ಸಿದ್ಧರಾಗಿದ್ದರಿಂದಲೇ ಬೆಳಗಾವಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಯಿತೆಂಬ ಲೇಖಕರ ಅಭಿಪ್ರಾಯಕ್ಕೆ ಎರಡು ಮಾತಿಲ್ಲ. ಕನ್ನಡಿಗರ ವಿರುದ್ಧ ಮರಾಠಿಗರು ಹಿಂಸಾಚಾರ ನಡೆಸಿದ್ದಾರೆ. ಆದರೆ ಕನ್ನಡಿಗರು ಮರಾಠಿಗರ ವಿರುದ್ಧ ಹಿಂಸಾಚಾರ ನಡೆಸಿದ ಒಂದು ಉದಾಹರಣೆಯೂ ಇಲ್ಲವೆಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಮರಾಠಿಗರು ಹಾಗೂ ಉಗ್ರಗಾಮಿ ಮುಸಲ್ಮಾನರು ಒಂದೇ ಧಾತುವಿನಿಂದ ತಯಾರಾದ ಜನಾಂಗವೆಂಬ ಅವರ ಮಾತಿನ ಹಿಂದೆ ಕಟುವಾದ ಅನುಭವಗಳ ಮೊತ್ತವೇ ಇದೆ. "ಬೆಳಗಾವಿ ಕನ್ನಡಿಗರ ಎದೆಯನ್ನು ಹೊಕ್ಕು ನೋಡಿದರೆ ಅಲ್ಲಿ ದೇವರಾಜ ಅರಸು ಹಾಗೂ ಎಚ್.ಡಿ. ಕುಮಾರಸ್ವಾಮಿ ಇಬ್ಬರೇ ಕಾಣಿಸಿಕೊಳ್ಳುತ್ತಾರೆ... ಬೆಳಗಾವಿಗೆ ಮೊಟ್ಟ ಮೊದಲ ಕನ್ನಡ ಮಹಾಪೌರರನ್ನು ನೀಡಿದ ಶ್ರೇಯಸ್ಸು ಆಗ ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ ಅವರಿಗೆ ಸಲ್ಲುತ್ತದೆ ಎಂದೇ ಎಲ್ಲೆಡೆ ಹೇಳುವುದುಂಟು. ಆದರೆ ವೀರೇಂದ್ರ ಪಾಟೀಲರು ಈ ಐತಿಹಾಸಿಕ ಬೆಳವಣಿಗೆಗೆ ಮೊದಲ ಅಡಿಗಲ್ಲನ್ನಿಟ್ಟವರು ಎಂಬುದನ್ನು ಕನ್ನಡಿಗರು ಎಂದೂ ಮರೆಯಬಾರದು... ಸಂಭಾಜಿ ಪಾಟೀಲರು ಏನೇ ಮಾಡಿಕೊಳ್ಳಲಿ, ಎಷ್ಟೇ ಮಾಡಿಕೊಳ್ಳಲಿ, ಮಹಾರಾಷ್ಟ್ರ ಏಕೀಕರಣ ಸಮಿತಿಯ ಎಲುಬನ್ನು ಮುರಿದ ಅವರಿಗೆ ನಾವು ಎಷ್ಟು ಕೊಟ್ಟರೂ ಕಡಿಮೆಯೇ... ಬೆಳಗಾವಿಯ ಭಾಷಿಕ ದಂಗೆಗಳಲ್ಲಿ ಸಾವಿಗೀಡಾದವರನ್ನು ಮರಾಠಿಗರು ಪ್ರತಿವರ್ಷ ಹುತಾತ್ಮದಿನ ಆಚರಿಸಿ ನೆನೆಸಿಕೊಳ್ಳುತ್ತಾರೆ. ಮಹಾರಾಷ್ಟ್ರ ಸರ್ಕಾರವು ಈ ರೀತಿ ಸಾವಿಗೀಡಾದವರ ಕುಟುಂಬಗಳಿಗೆ ಈಗಲೂ ಮಾಸಾಶನ ನೀಡುತ್ತಾರೆ. ಆದರೆ ಬೆಳಗಾವಿಯ ಭಾಷಿಕ ದಂಗೆಗಳ ಇತಿಹಾಸದಲ್ಲಿಯೇ ಸಾವಿಗೀಡಾದ ಏಕಮೇವ ಕನ್ನಡಿಗನಾದ ದೀಪಕ ಅನಗೋಳ್ಕರ್ ಅವರನ್ನು ಯಾರೂ ನೆನೆಸಿಕೊಳ್ಳುತ್ತಿಲ್ಲ. ಅವನ ಕುಟುಂಬದವರಿಗೆ ಜುಜುಬಿ ಹತ್ತು ಸಾವಿರ ರೂ. ನೀಡಿ ಅವರು ಎಂದೂ ಬಾಯಿಬಿಚ್ಚದಂತೆ ದಬಾಯಿಸಿ ಬಿಟ್ಟರು. ನಾನು ಕನ್ನಡ ಚಳವಳಿಯಲ್ಲಿ ಧುಮುಕಿದಾಗ ಕನ್ನಡಿಗರ ಸಂಖ್ಯೆ ಕಡಿಮೆ ಇತ್ತು. ಆದರೆ ಕನ್ನಡದ ಅಭಿಮಾನ ಹೆಚ್ಚಿಗೆ ಇತ್ತು. ಈಗ ಕನ್ನಡಿಗರ ಸಂಖ್ಯೆ ಹೆಚ್ಚಾಗಿದೆ. ಕನ್ನಡ ಕಾರ್ಯಕರ್ತರ ಸಂಖ್ಯೆಗಿಂತ ಸಂಘಟನೆಗಳ ಹಾಗೂ ನಾಯಕರ ಸಂಖ್ಯೆಯೇ ಹೆಚ್ಚಾಗಿದೆ. ಕನ್ನಡಕ್ಕಾಗಿ ದುಡಿಯುವವರಿಗಿಂತ ಕನ್ನಡವನ್ನು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳುವವರೇ ಎಲ್ಲೆಡೆ ಕಾಣಿಸುತ್ತಿದ್ದಾರೆ" ಇವೇ ಮೊದಲಾದ ಅನಿಸಿಕೆಗಳನ್ನು ಲೇಖಕರ ವೈಯಕ್ತಿಕ ಅಭಿಪ್ರಾಯಗಳೆಂದು ಯಾರೂ ಕಡೆಗಣಿಸುವಂತಿಲ್ಲ. ಯಾಕೆಂದರೆ, ಇತಿಹಾಸಕ್ಕೆ ಅಪಚಾರವೆಸಗುವ ಕಾರ್ಯವನ್ನು ಅವರು ಕನಸಿನಲ್ಲಿಯೂ ಮಾಡಿದವರಲ್ಲ.

'ಈ ಪುಸ್ತಕವು ಗಡಿ ಹೋರಾಟದ ಸಮಗ್ರ ದಾಖಲೆಯೇನೂ ಅಲ್ಲ' ಎಂದು ಲೇಖಕರು ತಮ್ಮ ವಿನಯವನ್ನು ವ್ಯಕ್ತಪಡಿಸಿದ್ದರೂ ಬಹುಶಃ ಬೇರೆ ಯಾರಿಂದಲೂ

ಇಷ್ಟರಮಟ್ಟಿಗೆ ಸಾಧ್ಯವಾಗದೆ ಇದ್ದ ಮಹತ್ವದ ಬರವಣಿಗೆಯನ್ನು ಶ್ರೀರಾಘವೇಂದ್ರ ಜೋಶಿಯವರು ಕೈಕೊಂಡು ಯಶಸ್ವಿಯಾಗಿ ನಿರ್ವಹಿಸಿದ್ದಕ್ಕಾಗಿ ಕನ್ನಡಿಗರು ಅವರಿಗೆ ತುಂಬ ಕೃತಜ್ಞರಾಗಿರಬೇಕು. ಹಾಗೆಯೇ ಅವರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿರುವ ಒಂದು ಎಚ್ಚರಿಕೆಯ ಮಾತನ್ನು ನಾವು ಅವಶ್ಯವಾಗಿ ಗಮನಿಸಬೇಕು: "ಗಡಿ ಸಮಸ್ಯೆ ಈಗ ಸತ್ತುಹೋಗಿದೆ. ಸುಟ್ಟುಹೋಗಿದೆ. ಕೇವಲ ಬೂದಿ ಮಾತ್ರ ಉಳಿದಿದೆ. ಆ ಬೂದಿಯನ್ನೇ ಬಂಡವಾಳ ಮಾಡಿಕೊಂಡು ಕೆಲವರು ರಾಜಕೀಯ ಪ್ರಯೋಜನ ಪಡೆಯಲು ಯತ್ನಿಸುತ್ತಿದ್ದಾರೆ. ಅವರಿಗೆ ನಮ್ಮ ಕನ್ನಡ ಸಂಘಟನೆಗಳು ನೆರವಾಗಬಾರದು. ಅವರಿಗೆ ಸಂಘಟಿತರಾಗಲು ಅವಕಾಶ ನೀಡಬಾರದು. ಮರಾಠಿ ಚಳವಳಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದೇ ಸದ್ಯದ ಸ್ಥಿತಿಯಲ್ಲಿ ಅತ್ಯುತ್ತಮ ಪರಿಹಾರ." ಭಾಷಾ ವಿವಾದವನ್ನು ಮುಂದಿನ ಪೀಳಿಗೆಗೆ ಬಿಟ್ಟು ಹೋಗುತ್ತಿಲ್ಲ ಎಂಬ ಸಮಾಧಾನ ಲೇಖಕರದು. ಇಂದಿನ ಪೀಳಿಗೆಗೆ ಅದನ್ನು ಅರ್ಥಮಾಡಿಕೊಂಡು ಅಭಿಮಾನಿಗಳಾಗಿ ನಾಡಿನ ಅಭಿವೃದ್ಧಿಯಲ್ಲಿ ಪಾಲ್ಗೊಂಡರೆ ಅದಕ್ಕಿಂತ ಹೆಚ್ಚಿನ ಸಾರ್ಥಕತೆ ಯಾವುದಿದೆ?

(೨೦೦೦)

ಜರಗನಹಳ್ಳಿ ಶಿವಶಂಕರ ಅವರ 'ಚಾತಕ'

ಹನಿಗವನಗಳಿಗೆ ಕನ್ನಡ ಕಾವ್ಯ ಕ್ಷೇತ್ರದಲ್ಲಿ ತಕ್ಕ ಸ್ಥಾನಮಾನವನ್ನು ದೊರಕಿಸಿ ಕೊಟ್ಟ ಕೆಲವೇ ಅಪ್ಪಟ ಕವಿಗಳಲ್ಲಿ ಜರಗನಹಳ್ಳಿ ಶಿವಶಂಕರ ಅವರೂ ಒಬ್ಬರು ಹಾಗೂ ಪ್ರಮುಖರು. ಮಾತಿನ ಚಮತ್ಕಾರಕ್ಕಿಂತ ಸತ್ಯ–ಸೌಂದರ್ಯದ ಆವಿಷ್ಕಾರವೇ ಅವರ ಕಾವ್ಯದ ಮುಖ್ಯ ಧ್ಯೇಯವಾಗಿರುವುದರಿಂದ ಪ್ರಕೃತಿ ಪರಿಸರದೊಂದಿಗೆ ಜೀವನಾನುಭವದ ಆಳವನ್ನು ಶೋಧಿಸಿ, ವ್ಯಂಗ್ಯ–ವಿಡಂಬನೆಗೆ ಅಷ್ಟಾಗಿ ಹಾತೊರೆಯದೆ, ತೀವ್ರ ಸಂವೇದನೆಯಿಂದ ಅದನ್ನು ರೂಪಕ–ಪ್ರತಿಮೆಗಳಲ್ಲಿ ಅರ್ಥಗರ್ಭಿತವಾಗಿ ಕಟ್ಟಿಕೊಡುವದು ಅವರಿಗೆ ಸಾಧ್ಯವಾಗಿದೆ. ಇಂಗ್ಲಿಷ್ ಹಾಗೂ ಕೆಲವು ಭಾರತೀಯ ಭಾಷೆಗಳಿಗೂ ಇವು ಅನುವಾದಗೊಂಡಿರುವುದು ಗಮನಾರ್ಹವಾಗಿದೆ.

ವ್ಯಕ್ತಿಯಾಗಿ, ಸಾಂಸ್ಕೃತಿಕ ಪರಿಚಾರಕನಾಗಿ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶಿವಶಂಕರ ಹಲವಾರು ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. ಸ್ನೇಹಜೀವಿಯಾಗಿ 'ಶುಭದ ಪ್ರಕಾಶನ' ಪ್ರಾರಂಭಿಸಿ ಅನೇಕರಿಗೆ ಕಾವ್ಯಾಪ್ತಮಿತ್ರನಾಗಿದ್ದು ಯುವಕರಿಗೆ ಸಂಗೀತ, ನಾಟಕಗಳೊಂದಿಗೆ ಸಂಸ್ಕೃತಿ ಶಿಬಿರ, ಕಾವ್ಯಕಮ್ಮಟಗಳನ್ನೇರ್ಪಡಿಸಿ ಹೌದೆನ್ನಿಸಿ ಕೊಂಡಿದ್ದಾರೆ. ಬೆಂಗಳೂರಿನ ಯಾಂತ್ರಿಕ ಜೀವನಕ್ಕೆ ಒಗ್ಗಿಹೋಗಿದ್ದರೂ ಜರಗನಹಳ್ಳಿಯಲ್ಲಿ ಗ್ರಾಮೀಣ ಸೊಗಡನ್ನುಳಿಸುವ ಪ್ರಯತ್ನದಲ್ಲಿ ಯಶಸ್ಸು ಪಡೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ (೨೦೦೪–೨೦೦೮) ಮಹತ್ವದ ಕಾರ್ಯಚಟುವಟಿಕೆಗಳನ್ನು ಚೊಕ್ಕಟವಾಗಿ ನಿರ್ವಹಿಸುತ್ತ ಘರ್ಷಣೆಯ ಸಂದರ್ಭಗಳನ್ನು ಚಾಕಚಕ್ಯತೆಯಿಂದ ನಿವಾರಿಸುತ್ತ, ಅಧ್ಯಕ್ಷರಿಗೆ ಬಹುವಿಧದಲ್ಲಿ ನೆರವಾಗಿ ನಾಡಿನ ಒಳಗೂ ಹೊರಗೂ ಸಂಚರಿಸಿ ಕನ್ನಡ ಜಾಗೃತಿಯಲ್ಲಿ ಪಾಲ್ಗೊಂಡಿದ್ದಾರೆ. ಅರವತ್ತಕ್ಕೆ ಅರ್ಪಿಸಿದ

ಅಭಿನಂದನ ಗ್ರಂಥ 'ತುಂತುರು' ಅವರ ಬದುಕು-ಬರಹಗಳಿಗೆ, ಸದ್ದಿಲ್ಲದ ಸಾಧನೆಗಳಿಗೆ ಹಿಡಿದ ಕನ್ನಡಿಯಾಗಿದೆ.

ಇವರ ಗದ್ಯ ಬರವಣಿಗೆಯ ಇನ್ನೊಂದು ಮುಖವೇ ಅಂಕಣಕಾರನದು. ಈ ಮೊದಲು ಮೂರು ಪತ್ರಿಕೆಗಳ ಅಂಕಣಕಾರರಾಗಿ 'ಭಾವ-ಬದುಕು', 'ನೆನಪಿನ ನೆಂಟರು' ಕೃತಿಗಳಿಗೆ ಕಾರಣರಾದ ಶಿವಶಂಕರ ದೀರ್ಘ ಪರಂಪರೆಯ ಖ್ಯಾತಿಯನ್ನು ಪಡೆದ ವಾರಪತ್ರಿಕೆ 'ಕರ್ಮವೀರ'ದಲ್ಲಿ ಚೊಕ್ಕ ಅಂಕಣ ಬರೆದು ನೂರಿಪ್ಪತ್ತು ವಾರಗಳನ್ನು ಪೂರೈಸಿದ್ದರ ಫಲ ಪ್ರಸ್ತುತ ಕೃತಿ 'ಚಾತಕ'. ಯಾವುದನ್ನು ತಮ್ಮ ಪ್ರಮುಖ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರೊ ಆ ಹನಿಗವಿತೆಗಳಿಗೆ ವಿಸ್ತೃತ ವ್ಯಾಖ್ಯಾನ ರೂಪದ ಲೇಖನಗಳೇ ಇದರ ವೈಶಿಷ್ಟ್ಯ. ಸಾಹಿತ್ಯಕ ತಳಹದಿಯನ್ನು ಬಿಟ್ಟುಕೊಡದೆ ಸಮಕಾಲೀನ ಬದುಕು, ಸಮಾಜ ಹಾಗೂ ರಾಜಕೀಯ ವಿದ್ಯಮಾನಗಳ ವಿವೇಚನೆ ಹಾಗೂ ವಿಶ್ಲೇಷಣೆಗೆ ಈ ಬರಹಗಳು ಇಂಬುಗೊಟ್ಟಿವೆ.

ಈ ಲೇಖನಗಳಿಗೆ ಅವರ ಹಾಗೂ ಇತರ ಕವಿಗಳ ಹನಿಗವನಗಳೇ ಮೂಲ ಆಧಾರ. ಹೆಚ್ಚಿನವು ಪ್ರಾರಂಭದಲ್ಲಿಯೇ ಕಾಣಿಸಿಕೊಂಡರೆ, ಇನ್ನುಳಿದವು ಲೇಖನಗಳ ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಸಂದರ್ಭೋಚಿತವಾಗಿ ನಿರೂಪಣೆಗೆ ನೆರವಾಗುತ್ತವೆ. ವಚನ, ಉಗಾಭೋಗ, ಸುಭಾಷಿತಗಳು, ಕಬೀರ, ಸರ್ವಜ್ಞ, ತಿರುವಳ್ಳುವರ್, ಟಾಗೋರ್ ಮೊದಲಾದವರ ಪದ್ಯಗಳು ಯಾವದೂ ಆಗಬಹುದು. ವಸ್ತು ವೈವಿಧ್ಯಕ್ಕೂ ಕೊರತೆಯಿಲ್ಲ. ಜ್ಞಾನದ, ಅನುಭವದ ಈ ಕಿಡಿನುಡಿಗಳೇ ಕೀಲಿಕೈಗಳಾಗಿ ಆಲೋಚನೆಯ ಬಾಗಿಲು ತೆರೆದು ಓದುಗರ ಆಹಾರಕ್ಕೆ ಎಡೆಮಾಡಿಕೊಡುತ್ತವೆ. ಅಲ್ಲಲ್ಲಿ ವ್ಯಕ್ತಿ ಸಂಗತಿಗಳು, ಘಟನಾವಳಿಗಳು, ಸಣ್ಣಪುಟ್ಟ ಕಥೆಗಳು, ಭಾವಲಹರಿಗಳು, ಪ್ರಚಲಿತ ಟೀಕೆಟಿಪ್ಪಣಿಗಳು, ಚಿಂತನಾಕ್ರಮಕ್ಕೆ ಪುಷ್ಟಿ ಒದಗಿಸಿದರೆ ಲೇಖಕರ ಸ್ವಂತ ಅನುಭವಗಳೆಷ್ಟೋ ಸಾರವತ್ತಾಗಿ ಸಮಯೋಚಿತವಾಗಿ ನಿರೂಪಣೆಗೊಂಡು ವಿಷಯ ವಿವೇಚನೆಯ ವಿವಿಧ ಮಗ್ಗುಲಗಳಿಗೆ ಬೆಳಕು ಬೀರುತ್ತವೆ. ಅಂಕಣವು ಒಂದು ಕಂಕಣವಾಗಿ ಓದುಗರ ಕೈಯನ್ನು ಅಲಂಕರಿಸುತ್ತದೆ.

ವಸ್ತುವೈವಿಧ್ಯಕ್ಕೆ ಈ ಶೀರ್ಷಿಕೆಗಳನ್ನೇ ನೋಡಿ: ಆಚರಣೆ, ವಿನಯ, ಬಾಳಿಕೆ, ಉಪಕಾರ ಸ್ಮರಣೆ, ರಿಕ್ಷಾ ಉವಾಚ, ಸಾವು, ಬೇಡ, ತ್ಯಾಗ, ಕವಿತೆ, ಶ್ಲೇಷ, ಬಂದರು, ಅನ್ನ, ಅಭಿಮಾನ, ದೀಪ, ಲಂಚ, ಸುಖ, ಹುತ್ತ, ಕಾಡೆಗೂಡು, ಅನ್ಯೋನ್ಯ, ಮಣ್ಣು, ಅಧಿಕಾರ, ಕನ್ನಡಿಗರ ನಿರ್ಧಾರ, ಗೊಂಬೆ, ಗಾದೆಗಳು, ಬೋಂತಾದೇವಿ, ಕ್ರಿಕೆಟ್, ಬಡ್ತಿ, ವಾಸ, ವೀಣಾಧರಿ – ಹೀಗೇ ಹೇಳುತ್ತಾ ಹೋಗಬಹುದು. ವಿಚಾರಗಳು ಪುನರುಕ್ತಿಗೊಂಡುದು ಬಹಳ ಕಡಿಮೆ. ಜೇಡ ತನ್ನ ಒಡಲಿನಿಂದ ನೂಲು ತೆಗೆದು ಕಲಾತ್ಮಕವಾಗಿ ಬಲೆಯನ್ನು ಹೆಣೆದಂತೆ ಕೆಲವು ಕಂಗೊಳಿಸಿದರೆ, ಇನ್ನು ಕೆಲವು ಹಕ್ಕಿಗಳು ಗೂಡುಕಟ್ಟಿ ತತ್ತಿ ಇಟ್ಟು ಮರಿ ಮಾಡಿದಂತೆ ಮನಸ್ಸನ್ನು ಮುದಗೊಳಿಸುತ್ತವೆ. ಎಲ್ಲಿಯೂ ಉಪದೇಶಕ್ಕೆಡೆಗೊಡದೆ, ಅವರಿವರನ್ನು ದ್ವೇಷದಿಂದ ಕಾಣದೆ, ಮುಖನೋಡಿ ಮಣೆ ಹಾಕದೆ ವಿಚಾರ

ಪ್ರಚೋದನೆಯನ್ನು ಗುರಿಯಾಗಿಟ್ಟುಕೊಂಡ ಒಂದು ಬಗೆಯ ಮುಗ್ಧ ಸ್ನಿಗ್ಧ ಭಾವ ಇಲ್ಲಿಯ ಬರವಣಿಗೆಯ ವೈಶಿಷ್ಟ್ಯವೆನ್ನಬಹುದು.

ವಿಷಯ ಪ್ರತಿಪಾದನೆಯಲ್ಲಿ ಲೇಖಕರ ಸ್ವಂತಿಕೆ ಅಲ್ಲಲ್ಲಿ ಮೂಡಿ ಮಿನುಗುವುದನ್ನು ಕೆಲವಾದರೂ ಉದಾಹರಣೆಗಳಿಂದ ಎತ್ತಿ ತೋರಿಸದಿದ್ದರೆ ಹೇಗೆ? ಇಲ್ಲಿ ನೋಡಿ:

* ಭಾಷೆಯನ್ನು ಅನುಭವಿಸುವ ಕಲೆಯೂ ಆನಂದದ ಮಾರ್ಗವೆ.
* ಕವಿತೆ ಎನ್ನುವುದು ಎಲ್ಲರ ಹೃದಯದ ಸ್ವತ್ತು. ಹಾಗಾಗಿ ಅದು ಎಲ್ಲರಿಗೂ ಸಲ್ಲುತ್ತದೆ.
* ದುಡಿಯದೆ ದುಃಖಪಡದೆ ಸುಖವಾಗಿ ಸಿಂಹಾಸನದ ಮೇಲೆ ಕುಳಿತುಕೊಳ್ಳ ಬೇಕೆಂಬುದು ಎಷ್ಟು ಸಮಂಜಸ?
* ಸಾರ್ಥಕತೆಯ ಹಿಂದೆ ಕಷ್ಟಗಳ ಕಮ್ಮಟವಿರುವುದನ್ನು ತಿಳಿದುಕೊಳ್ಳಬೇಕು.
* ತಮ್ಮ ಮಕ್ಕಳನ್ನು ಮುದ್ದಿಸುವ ಕೈಗಳು ತಮ್ಮ ಹಿರಿಯರಿಗೆ ನೆರವಿನ ಹಸ್ತವಾಗ ಬೇಕಾಗುತ್ತದೆ.
* ಹಣಕ್ಕೆ ಒಂದು ನಿರ್ದಿಷ್ಟ ಬೆಲೆಯ ಪ್ರಮಾಣವಿದೆ. ಗುಣಕ್ಕೆ ಒಂದು ಮೌಲ್ಯದ ಫ್ರಮಾಣವನ್ನು ನಿರ್ಧರಿಸುವದು ಸಾಧ್ಯವಾಗದು.
* ಜಾಗತೀಕರಣವೆಂದರೆ ಉಪಕರಣಗಳಿಗೆ ಬಳಕೆಯ ವಸ್ತುಗಳ ವಿನಿಮಯ ಮಾತ್ರವಲ್ಲ. ಅದು ಉತ್ತಮ ವಿಚಾರಗಳ, ಶ್ರೇಷ್ಠ ಗುಣಗಳ ವಿನಿಮಯವಾಗಬೇಕಿದೆ.
* ಮನೆಯಲ್ಲಿ ನೆಲೆಸಿರುವ ನೆಮ್ಮದಿ, ಜಗಳ, ಸಂತೋಷಗಳನ್ನು ಮನೆಯಲ್ಲಿ ವಾಸಿಸುವ ಹಲ್ಲಿ, ಇರುವೆಗಳೂ ಗಮನಿಸುತ್ತವೆಂದು ಪರಿಸರ ತಜ್ಞರ ಅಭಿಪ್ರಾಯ.
* ಶಾಲಾಕಾಲೇಜುಗಳು ಪಠ್ಯಗಳಲ್ಲಿರುವ ವಿದ್ಯೆಯನ್ನು ಬೋಧಿಸುತ್ತವೆ. ಬದುಕಿಗೆ ಬೇಕಾದ ಬುದ್ಧಿಯು ಪ್ರವಚನಗಳಂತಹ ಬೋಧಪ್ರದ ಮಾರ್ಗಗಳಿಂದ ಸಿಗುವುದರಲ್ಲಿ ಸಂಶಯವಿಲ್ಲ.
* ಬೇಲಿಗಳು ನಮ್ಮನ್ನು ರಕ್ಷಿಸಬೇಕೇ ಹೊರತು ಮನುಷ್ಯಸಂಬಂಧಗಳನ್ನು ಬೇರ್ಪಡಿಸಬಾರದು. ಅದೇ ಬೇಲಿಯನ್ನು ಆಶ್ರಯಿಸಿ ಬಳ್ಳಿ ಹಬ್ಬಿಕೊಳ್ಳುತ್ತ ಸ್ನೇಹದ ಸೇತುವೆಯಾಗಿ ಹೂವುಗಳನ್ನು ಅರಳಿಸುತ್ತದೆ.

ಇಂಥ ಎಲ್ಲ ನುಡಿಗಳ ಹಿಂದೆ ಕವಿಹೃದಯದ ತುಡಿತ ಮಿಡಿತವಿರುವುದನ್ನು ಯಾರೂ ಮನಗಾಣಬಹುದು.

ಈ ಅಂಕಣ ಬರಹಗಳಿಗೆ ಇಂಬುಗೊಟ್ಟ 'ಕರ್ಮವೀರ'ದ ಸಂಪಾದಕರಾಗಿದ್ದ ಬಾಬು ಕೃಷ್ಣಮೂರ್ತಿಯವರು ಇವರ ಸಾಹಿತ್ಯಪರಿಚಾರಿಕೆಯನ್ನು ಮೆಚ್ಚಿಕೊಂಡು ಕೆಲವೇ ಶಬ್ದಗಳಲ್ಲಿ ಅವರ ವ್ಯಕ್ತಿಚಿತ್ರ ಮೂಡಿಸಿದ್ದಾರೆ. "ಪ್ಯಾಂಟು ಜುಬ್ಬಾಧಾರಿಯಾಗಿ ಹೆಗಲಿ

ಗೊಂದು ತೂಗುಚೀಲ ಹಾಕಿಕೊಂಡು ಬೆಂಗಳೂರಿನ ಬಹಳಷ್ಟು ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವ ಶಿವಶಂಕರ ಹೆಚ್ಚು ಆರ್ಭಟ, ಆಡಂಬರಗಳಿಲ್ಲದ ವ್ಯಕ್ತಿ. ಪ್ರಸನ್ನಚಿತ್ತ, ಶಾಂತ ಮನಸ್ಸು ಲಘುಹಾಸ್ಯ, ಆತ್ಮೀಯತೆ, ಮೃದುಮಾತು ಇವರ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಗುಣಗಳು" 'ಜಾತಕ' ಅಂಕಣದ ಬಗೆಗೂ ಅವರ ಅಭಿಪ್ರಾಯ ಅಷ್ಟೇ ಸಮರ್ಪಕವಾಗಿದೆ. "ತಮ್ಮ ಅಧ್ಯಯನ, ಅನುಭವ, ಕಾಳಜಿಗಳನ್ನು ಬಳಸಿಕೊಂಡು ಇಲ್ಲಿ ಅವರ ಬರವಣಿಗೆ ಸಾಗುತ್ತದೆ. ರಾಗದ್ವೇಷರಹಿತ ಬರವಣಿಗೆ. ಸಮಾಜದಲ್ಲಿನ ಶ್ರೇಷ್ಠ ಅಂಶಗಳನ್ನು ತೋರಿಸುವಂತೆ ಅಂಕುಡೊಂಕು ಹಾಗೂ ಕುಂದುಕೊರತೆಗಳ ಬಗ್ಗೆಯೂ ಇವರ ಲೇಖನಿ ಹರಿಯುತ್ತದೆ. ಆದರೆ ಇಲ್ಲಿ ಯಾರ ಮೇಲೂ ಆಕ್ರೋಶವಿಲ್ಲ, ಕೋಪವಿಲ್ಲ, ಆವೇಶಭರಿತ ಪ್ರಹಾರಗಳಿಲ್ಲ, ತಪ್ಪು ತೋರಿಸಿ ಪ್ರೀತಿಯಿಂದ ಅವುಗಳನ್ನು ಸರಿಪಡಿಸ ಬೇಕೆಂಬ ಗಾಂಧೀವಿಧಾನ ಇಲ್ಲಿ ಪ್ರಧಾನ."

ಹೀಗೆ ಸಮಾಜದ ಬಗ್ಗೆ ಆರೋಗ್ಯಕರ ದೃಷ್ಟಿ ಇಟ್ಟುಕೊಂಡು ಜರಗನಹಳ್ಳಿ ಶಿವಶಂಕರ ಅವರದೇ ಆದ ಹನಿಗವನವೊಂದನ್ನು ಉದಾಹರಿಸಿ ಈ ಲೇಖನ ಮುಕ್ತಾಯ ಗೊಳಿಸಬಹುದು.

ಯಾರೋ ಸೃಷ್ಟಿಸಿದ
ಅಕ್ಷರಗಳು
ಯಾರದೋ
ಭಾವನೆಗಳ ಜೊತೆ
ಕೂಡಿ ಬದುಕು
ಭಾವನೆಗಳ ಆರೋಗ್ಯ
ಅಕ್ಷರಗಳ ಭಾಗ್ಯ

ಅಂಥ ಭಾಗ್ಯ, ಹೊಚ್ಚ ಹೊಸಮಳೆಯ ಜೇಂಬನಿಗಾಗಿ ಕಾತರಿಸಿ ಕುಳಿತಿರುವ ಓದುಗ 'ಜಾತಕ'ಗಳಿಗೆ ಖಂಡಿತವಾಗಿಯೂ ದೊರೆಯುತ್ತದೆ.

(೨೦೧೨)

ಎಂಬತ್ತರ ಎತ್ತರ – ಜನತೆಯ ಹತ್ತಿರ 'ಸಂಯುಕ್ತ ಕರ್ನಾಟಕ'

"ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವವನ್ನು ನಾಡಿನ ತುಂಬ ಆಚರಿಸುತ್ತಿರುವ ಸಂದರ್ಭದಲ್ಲಿ ನಾಡಿನ ಏಕೀಕರಣಕ್ಕಾಗಿ ಎದೆಗೊಟ್ಟು ಹೋರಾಡಿದ ಸಂಯುಕ್ತ ಕರ್ನಾಟಕ ಪತ್ರಿಕೆ ಅಮೃತವರ್ಷದಲ್ಲಿ ಕಾಲಿಡುತ್ತಿರುವುದು ಎಷ್ಟೊಂದು ಅರ್ಥಪೂರ್ಣ!" ಎಂದು ಆರು ವರ್ಷಗಳ ಹಿಂದೆ ನಾನು ಬರೆದಿದ್ದೆ. ('ಸಂಯುಕ್ತ ಅಮೃತೋತ್ಸವ' ಸ್ಮರಣ ಸಂಚಿಕೆ: ೨೦೦೭) ಆ ಲೇಖನದ ಕೆಲವು ಮುಖ್ಯಾಂಶಗಳು ಅದೇ ಪತ್ರಿಕೆಯ ಸಹಸ್ರ ಚಂದ್ರದರ್ಶನ ಮಹೋತ್ಸವದ ಸಂದರ್ಭದಲ್ಲಿಯೂ ನೆನಪಾದರೆ ಆಶ್ಚರ್ಯವಿಲ್ಲ. ಬದಲಿಗೆ ಅದೊಂದು ರೋಮಾಂಚನವೇ. ಯಾಕೆಂದರೆ ಪತ್ರಿಕೆಯ ಮೂಲ ಧ್ಯೇಯ–ಧೋರಣೆಗಳು ಗಟ್ಟಿಮುಟ್ಟಾಗಿದ್ದು, ವರ್ತಮಾನದ ತಳಮಳಗಳಿಗೆ ತಕ್ಕ ರೀತಿಯಲ್ಲಿ ಸ್ಪಂದಿಸುತ್ತ ಲೋಕಶಿಕ್ಷಣಕ್ಕೆ ಅದು ವಿವಿಧ ವಿನ್ಯಾಸಗಳಲ್ಲಿ ಹಡದಿ ಹಾಸುತ್ತ ಬಂದಿರುವುದನ್ನು ಕಂಡರೆ ಯಾರಿಗೆ ಸಂತೋಷವಾಗದು?

ರಾಜಕೀಯ ಒತ್ತಡಗಳು, ಜಾಹಿರಾತುಗಳ ಹಂಗು, ದರದ ಪೈಪೋಟಿ, ಆಶೆ ಆಮಿಷಗಳ ಪ್ರಲೋಭನ, ಮಾಲೀಕರ ಪ್ರಭುತ್ವ, ಸರಕಾರದೊಡನೆ ಸಂಘರ್ಷ, ಪತ್ರಿಕಾ ನಿರ್ಬಂಧಗಳು ಇವೇ ಮೊದಲಾದ ಇನ್ನು ಹಲವು ಆತಂಕಗಳನ್ನು ಅಲ್ಲಗಳೆಯುವಂತಿಲ್ಲವಾದರೂ, ಸ್ವಾರ್ಥವನ್ನು ಬದಿಗಿಟ್ಟು, ಜನತೆಯ ಹಿತ ಸಂಬಂಧಗಳಿಗೆ ಧಕ್ಕೆ ಬರದಂತೆ ನಾಡಿನ ಪ್ರಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ತಂತಮ್ಮ ಸಾಧನೆಯ ಮಾರ್ಗಗಳನ್ನು ಕಂಡುಕೊಂಡ ಪತ್ರಿಕೆಗಳಲ್ಲಿ 'ಸಂಯುಕ್ತ ಕರ್ನಾಟಕ'ಕ್ಕೆ ಹಿರಿಯ ಚೇತನದ ಸ್ಥಾನವನ್ನು ಸಲ್ಲಿಸಿದರೆ ತಪ್ಪಾಗದು. ಜನತೆಯಲ್ಲಿ ರಾಷ್ಟ್ರಾಭಿಮಾನವನ್ನು ಉದ್ದೀಪಿಸಿ, ಅದೇ ಕಾಲಕ್ಕೆ ಹರಿದು ಹಂಚಿಹೋದ ಕನ್ನಡನಾಡನ್ನು ಬೆಸೆದು

ಒಂದಾಗಿಸುವ ಧ್ಯೇಯದೊಡನೆ, ಸಮೃದ್ಧ ಕರ್ನಾಟಕದ ಕನಸನ್ನು ಕನ್ನಡಿಗರ ಮನಸ್ಸಿನಲ್ಲಿ ಬಿತ್ತುವ ಕಾರ್ಯ 'ಅನುದಿನದ ಅಂತರಂಗದ ಅನಾವರಣ'ದೊಂದಿಗೆ ಮುಂದುವರಿದಿರುವುದನ್ನು ಪತ್ರಿಕೆ ಪ್ರತಿಬಿಂಬಿಸಿದೆ.

'ಸಂಯುಕ್ತ ಕರ್ನಾಟಕ' ಸಾಪ್ತಾಹಿಕ ೧೯೩೩ರ ಏಪ್ರಿಲ್ ೨೭ರ ಅಕ್ಷಯ ತೃತೀಯೆಯ ಶುಭಮೂಹೂರ್ತದಲ್ಲಿ ದೈನಿಕ ಪತ್ರಿಕೆಯಾಗಿ ಬಿಡುಗಡೆಗೊಂಡಾಗ 'ಕೇಸರಿ' ಪತ್ರಿಕೆಯ ಸಂಪಾದಕರಾಗಿದ್ದ ನ.ಚಿ. ಕೇಳಕರ ಅವರು ಕಳಿಸಿದ ಸಂದೇಶ ಹೀಗಿತ್ತು: "ಮಾತೃಭಾಷೆಯ ದೈನಿಕ ಪತ್ರಿಕೆಯು ಬೆಳಗಾವಿಯಲ್ಲಿ ಇಲ್ಲದ್ದರಿಂದ ಬಹಳೇ ಕೊರತೆಯಾಗಿತ್ತು. ಆದರೆ ಕನ್ನಡದ ಮುಂದಾಳುಗಳು ಒಂದು ದೈನಿಕ ಪತ್ರಿಕೆಯನ್ನು ಹೊರಡಿಸಿ ತಮ್ಮ ಪ್ರಾಂತೀಯ ಜನಗಳ ತೊಂದರೆ, ಅವಶ್ಯಕತೆ ತಕರಾರು ಮುಂತಾದವುಗಳು ಮತ್ತು ಅಧಿಕಾರಿ ವರ್ಗದ ಜನರಿಂದಾಗುವ ಜುಲುಮೆಯನ್ನು ಪ್ರಕಟಿಸಲಿಕ್ಕೆ ಆಶ್ರಯ ಸ್ಥಾನವನ್ನು ಕೊಟ್ಟಿರುವರು. ಮಾತೃಭಾಷೆಯ ಸೇವೆ ಮಾಡುವದೆಂದರೆ ಸಾಕ್ಷಾತ್ತಾಗಿ ಮಾತೆಯ ಸೇವೆ ಮಾಡಿದಂತೆಯೆ." ಇಂದಿನ ಮಹಾರಾಷ್ಟ್ರದ ರಾಜಕೀಯ ಮುಖಂಡರ ಮುಖದೆದುರು ಈ ಸಂದೇಶವನ್ನು ಹಿಡಿದು ಮತ್ತೊಮ್ಮೆ ತೋರಿಸಬೇಕಾಗಿದೆ.

ಹಳ್ಳಿಗಳಲ್ಲಿ ಈ ಪತ್ರಿಕೆಯನ್ನು ಪ್ರಾರಂಭದಿಂದ ಕೊನೆಯವರೆಗೂ ಓದುತ್ತಿರುವುದನ್ನು ನಾನು ಬಾಲ್ಯದಲ್ಲಿ ಕಂಡವನಾಗಿದ್ದೇನೆ. ಹೀಗೆ ಒಂದಿಲ್ಲ ಒಂದು ರೀತಿಯಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯೊಂದಿಗೆ ನನ್ನ ಆತ್ಮೀಯ ಬಾಂಧವ್ಯ ಬೆಳೆದುಕೊಂಡು ಬಂದಿದೆ. ದೂರದರ್ಶನದಲ್ಲಿ ಎಡೆಬಿಡದೆ ಸುದ್ದಿಗಳು ಪ್ರಸಾರವಾಗುತ್ತಿದ್ದರೂ ಪತ್ರಿಕೆಯಲ್ಲಿ ಅವು ಪ್ರಕಟವಾಗಿ ನಮ್ಮ ಕೈಗೆ ಬಂದಾಗಲೇ ಅದು ಅಧಿಕೃತವೆಂದು ನಂಬುವ ಜನ ಸುಶಿಕ್ಷಿತರಲ್ಲಿ ಇಂದಿಗೂ ಇದ್ದಾರೆ. ಪತ್ರಿಕೆ ಎಂಥ ಪ್ರಭಾವಶಾಲಿ ಮಾಧ್ಯಮ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

೧೯೫೩ರಲ್ಲಿ ವಿನೋಬಾ ಭಾವೆಯವರು ಭೂದಾನ ಚಳವಳಿಯ ನಿಮಿತ್ತ ಧಾರವಾಡ ಜಿಲ್ಲೆಯ ಪ್ರವಾಸ ಕೈಕೊಂಡ ಸಂದರ್ಭದಲ್ಲಿ, ರಾಷ್ಟ್ರಮಟ್ಟದಲ್ಲಿ ಅದೊಂದು ಮಹತ್ವದ ಆಂದೋಲನವಾಗಿದ್ದರಿಂದ ಸಂಯುಕ್ತ ಕರ್ನಾಟಕದಲ್ಲಿ ಅದರ ವರದಿಯನ್ನು ವಿವರವಾಗಿ, ಸಚಿತ್ರವಾಗಿ ಪ್ರಕಟಿಸುತ್ತ ಉಳ್ಳವರ ಮನಃಪರಿವರ್ತನೆಯ ಕಾರ್ಯದಲ್ಲಿ ಪತ್ರಿಕೆ ತನ್ನ ಕರ್ತವ್ಯವನ್ನು ಸಮರ್ಪಕವಾಗಿಯೇ ನೆರವೇರಿಸಿತು. ಏಕೀಕರಣವಾದ ಮರುವರ್ಷವೇ ೧೯೫೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ವಿಜೃಂಭಣೆಯಿಂದ ನೆರವೇರಿತು. ಆ ಬಗ್ಗೆ ಸಮಗ್ರವಾಗಿ, ವಿಶೇಷಾಂಶಗಳಿಗೆ ಗಮನಕೊಟ್ಟು ವರದಿ ಪ್ರಕಟಿಸಿದ ಪತ್ರಿಕೆಗಳಲ್ಲಿ 'ಸಂಯುಕ್ತ ಕರ್ನಾಟಕ' ಒಡೆದು ಕಾಣುತ್ತಿತ್ತು. ಶಿಕ್ಷಣ, ಆಡಳಿತ ಮೊದಲುಗೊಂಡು ಎಲ್ಲ ಹಂತದಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ಸಿಗಬೇಕೆಂದು ೧೯೮೭ರಲ್ಲಿ ಗೋಕಾಕ ಚಳವಳಿ ಪ್ರಾರಂಭವಾದಾಗ ಚಳವಳಿಯ

ಕೇಂದ್ರವಾದ ಧಾರವಾಡಕ್ಕೆ 'ಸಂಯುಕ್ತ ಕರ್ನಾಟಕ' ತೀರ ಹತ್ತಿರವಿದ್ದು ಅಷ್ಟೇ ವೇಗದಿಂದ ಅದರ ವರದಿಗಳನ್ನು ಪ್ರಕಟಿಸಿ ಈ ಪತ್ರಿಕೆ ಉಳಿದವುಗಳಿಗಿಂತ ಮುಂಚೂಣಿಯಲ್ಲಿ ನಿಲ್ಲುತ್ತಿದ್ದುದನ್ನು ಮರೆಯುವಂತಿಲ್ಲ. ಇದರಿಂದ ಚಳವಳಿಯ ಕಾರ್ಯಕರ್ತರಿಗೆ ಹೆಚ್ಚಿನ ನೈತಿಕ ಬೆಂಬಲ ದೊರೆಯಿತು.

ರಾಷ್ಟ್ರೀಯ ವಿಚಾರಧಾರೆಯನ್ನು ಪ್ರಚುರಪಡಿಸುವಲ್ಲಿ ಪ್ರಮುಖ ಪಾತ್ರವಹಿಸುವುದಷ್ಟೇ ಆಗಿರದೆ, ಸ್ಥಾಪಕರಿಂದ ಕಾರ್ಯಕರ್ತರವರೆಗೆ ಎಲ್ಲರೂ ದೇಶಭಕ್ತ ಕಾಂಗ್ರೆಸ್ಸಿಗರೇ ಆಗಿದ್ದುದು ಈ ಪತ್ರಿಕಾ ಬಳಗದ ವೈಶಿಷ್ಟ್ಯವಾಗಿತ್ತು. ವೈಯಕ್ತಿಕ ಒಡೆತನ ಹಾಗೂ ಲಿಮಿಟೆಡ್ ಕಂಪನಿಗಳ ಒಡೆತನದಲ್ಲಿ ಪ್ರಕಟವಾಗದೆ ಸಾರ್ವಜನಿಕ ಧರ್ಮದರ್ಶಿತ್ವ ಸಂಸ್ಥೆಯಾಗಿ 'ಲೋಕಶಿಕ್ಷಣ ಟ್ರಸ್ಟಿ'ನ ಆಶ್ರಯದಲ್ಲಿ ಪತ್ರಿಕೆ ನಡೆಯುತ್ತಿರುವುದು ಒಂದು ಪ್ರಧಾನ ವೈಶಿಷ್ಟ್ಯವಾಗಿದೆ. ಹಾಗೆ ನೋಡಿದರೆ, 'ಸಂಯುಕ್ತ ಕರ್ನಾಟಕ' ನಡೆದು ಬಂದ ದಾರಿ ಅಷ್ಟೊಂದು ಸುಗಮವಾಗಿರಲಿಲ್ಲ. ಆರ್ಥಿಕವಾಗಿ, ಆಡಳಿತಾತ್ಮಕವಾಗಿ ಅನೇಕ ಬಗೆಯ ಕಷ್ಟನಷ್ಟಗಳನ್ನು ಅಡ್ಡಿ, ಆತಂಕಗಳನ್ನು ಅನಿರೀಕ್ಷಿತ ಆಪತ್ತುಗಳನ್ನು ಎದುರಿಸುವಂತಾದರೂ ತನ್ನ ಮೂಲಧ್ಯೇಯಕ್ಕೆ ಚ್ಯುತಿ ಬರದಂತೆ ಹಾಗೂ ತನ್ನ ಕೈಹಿಡಿದು ನಡೆದುಕೊಂಡು ಬಂದ ಜನತೆಯ ಆಶೋತ್ತರಗಳಿಗೆ ಭಂಗ ಬರದಂತೆ ನೋಡಿಕೊಂಡದ್ದು ಅದರ ಅದೃಷ್ಟವೆಂದೇ ಹೇಳಬೇಕು.

ಹಿರಿಯ ಗಾಂಧಿವಾದಿ ಹಾಗೂ ಚಿಂತಕರಾದ ಶ್ರೀಹಾರನಹಳ್ಳಿ ರಾಮಸ್ವಾಮಿಯವರು ಲೋಕಶಿಕ್ಷಣ ಟ್ರಸ್ಟಿನ ಅಧ್ಯಕ್ಷತೆ ವಹಿಸಿಕೊಂಡ ಮೇಲೆ ಸಂಸ್ಥೆ ಮತ್ತೆ ಅಭಿವೃದ್ಧಿಯ ಪಥದಲ್ಲಿ 'ಸಾಧನೆಯ ಪರ್ವ'ಕ್ಕೆ ನಾಂದಿ ಹಾಡಿದಂತಾಯಿತು. ``Experience is the name which we give to our mistakes'' ಎಂಬ ಆಸ್ಕರ ವೈಲ್ಡ್‌ನ ಮಾತನ್ನು ಇಲ್ಲಿ ಸ್ಮರಿಸಬಹುದು.

ಶ್ರೀ ಅಶೋಕ ಹಾರನಹಳ್ಳಿಯವರ ಅಧ್ಯಕ್ಷತೆಯಲ್ಲಿ ನಿರ್ಮಿತಗೊಂಡ ಧರ್ಮದರ್ಶಿಗಳ ಪ್ರಸ್ತುತ ಸಮಿತಿಯು ಮುಕ್ತ ಮನಸ್ಸಿನಿಂದ ಲೋಕಶಿಕ್ಷಣ ಟ್ರಸ್ಟನ್ನು ಅದರ ಮುಖ್ಯ ಅಂಗವಾದ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಹುಬ್ಬಳ್ಳಿ, ಬೆಂಗಳೂರು, ಗುಲಬರ್ಗಾ, ದಾವಣಗೆರೆ, ಮಂಗಳೂರು ಆವೃತ್ತಿಗಳಾಗಿ ಪ್ರಕಟಿಸಿ ಅಖಂಡ ಕರ್ನಾಟಕದ ಬೆಳವಣಿಗೆಯನ್ನು, ಸಮಾನ ಬಾಂಧವ್ಯವನ್ನು ಬೆಳೆಸಲು ಪ್ರಯತ್ನಿಸುತ್ತಿರುವದು ಶ್ಲಾಘನೀಯ.

೧೯೮೬ರಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಗೆ ಪ್ರವೇಶ ಪಡೆದ ಶ್ರೀ ಹುಣಸವಾಡಿ ರಾಜನ್ ಅವರು ವರದಿಗಾರ, ಉಪಸಂಪಾದಕ, ಹೀಗೆ ವಿವಿಧ ಸ್ಥಾನಗಳಲ್ಲಿ ಅನುಭವ ಪಡೆದ ಅವರು ಪ್ರಧಾನ ಸಂಪಾದಕರಾಗಿ ಬಂದು ಅನೇಕ ಹಿತಕರವಾದ ವೈವಿಧ್ಯಪೂರ್ಣ ಬೆಳಗಣಿಗೆಗೆ ಕಾರಣರಾಗಿರುವುದು ಸಂತೋಷದ ಸಂಗತಿ. 'ನಾ ಬಲ್ಲ ನಿಜ', 'ಆಚಾರ ವಿಚಾರ' ಮೊದಲಾದ ಅಂಕಣಗಳ ಆರಂಭವಾಗಿರುವುದನ್ನು ಅವರ ವರದಿ/

ಲೇಖನಗಳಲ್ಲಿ ಸಾಂಸ್ಕೃತಿಕ ಸೊಗಡಿನ ಲೇಪವನ್ನು ಕಾಣಬಹುದಾಗಿದೆ. ರಾಜಕೀಯ ಘಟನಾವಳಿಗಳನ್ನು ಸಾಂಸ್ಕೃತಿಕ ದೃಷ್ಟಿಕೋನದ ಬರವಣಿಗೆಯ ಧಾಟಿ ಇವರ ವೈಶಿಷ್ಟ್ಯವಾಗಿದೆ.

ಸುದ್ದಿಯ ಪಾವಿತ್ರ್ಯವನ್ನು ಕಾಪಾಡಿಕೊಂಡಿರುವ ಸಂ.ಕ. ನಿಷ್ಪಕ್ಷಪಾತವಾದ ದೃಷ್ಟಿಯನ್ನು ಹೊಂದಿರುವುದು ಒಡೆದು ಕಾಣುತ್ತದೆ. 'ಸಾಪ್ತಾಹಿಕ ಸೌರಭ'ಕ್ಕೀಗ ಹೊಸ ಕಳೆ ಬಂದಿದೆ. ಶುಕ್ರವಾರದ 'ಚಿತ್ರಸೌರಭ'ವಂತೂ ಸರಿಯೆ. 'ಕಿಂದರಿಜೋಗಿ' ಮಕ್ಕಳ ಮನೋರಂಜನೆಯ ಜೊತೆಗೆ ಜ್ಞಾನವಾಹಿನಿಯೂ ಆಗಿದೆ. 'ಚೇತನ', 'ವ್ಯಾಪಾರಕೃಷಿ' 'ಯಂಗ್ ಟರ್ಕ್' ಪುರವಣಿಗಳು ಆಯಾ ಕ್ಷೇತ್ರದ ಓದುಗರಿಗೆ ಪ್ರಿಯವಾಗಿವೆ. ದಿನಪತ್ರಿಕೆಗಳಲ್ಲಿ ಇತ್ತೀಚೆಗೆ ಅಂಕಣ ಬರೆಹಗಳ ಸುಗ್ಗಿ. 'ಸಂ.ಕ. ಬಳಗದಲ್ಲಿ ಹಿರಿಯರಾದ ಎಚ್.ಎಸ್. ದೊರೆಸ್ವಾಮಿಯವರೂ ವಿದ್ವಾಂಸರಾದ ಕೆ.ಎಸ್. ನಾರಾಯಣಚಾರ್, ಕೆ.ಈ. ರಾಧಾಕೃಷ್ಣ, ನರಸಿಂಹಮೂರ್ತಿ ದೊನ್ನಿ (ವ್ಯಕ್ತಿ–ವೈಶಿಷ್ಟ್ಯ) ಸಿ.ಎಂ. ರಾಮಚಂದ್ರ (ಕಾಲಚಕ್ರ), ಆರ್. ಶೈಲೇಶಚಂದ್ರಗುಪ್ತ (ವಿಶಿಷ್ಟ), ಖಾದ್ರಿ ಎಸ್. ಅಚ್ಯುತನ್ (ಹದ್ದಿನಕಣ್ಣು), ಮನೋಜಪಾಟೀಲ (ಸ್ಪಂದನ), ಎಸ್.ಆರ್. ಮಣೂರ (ಅಂತರಂಗ–ಬಹಿರಂಗ), ಡಾ.ಎ.ಎಸ್. ವೇಣುಗೋಪಾಲನ್ (ಸಂಯುಕ್ತ – ಸತ್ಸಂಗ), ಎಚ್.ಆರ್. ಶ್ರೀಶ (ಲೋಕಯಾತ್ರೆ) ಹೀಗೆ ಅಂಕಣಕಾರರ ಒಂದು ತಜ್ಞಬಳಗವನ್ನೇ ಕಟ್ಟಿಕೊಂಡು ಸಂಯುಕ್ತ ಕರ್ನಾಟಕ ಮುನ್ನಡೆಯನ್ನು ಸಾಧಿಸುವಲ್ಲಿ ಹಿಂದೆ ಬಿದ್ದಿಲ್ಲ.

ನಾಡಿನ ಸರ್ವತೋಮುಖ ಅಭಿವೃದ್ಧಿಯ ಹಂಬಲ ಹೊಂದಿರುವ ಈ ಹಿರಿಯ ಪತ್ರಿಕೆ ಜಾತ್ಯತೀತ ಧೋರಣೆಗೆ ಗಟ್ಟಿಯಾಗಿ ಅಂಟಿಕೊಂಡು, ಪಕ್ಷಾತೀತವಾಗಿ ವರ್ತಿಸುತ್ತ ಸಮಾಜದ ಸ್ವಾಸ್ಥ್ಯರಕ್ಷಣೆಯ ತನ್ನ ಸಂಕಲ್ಪವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಈಡೇರಿಸುತ್ತ ಬಾಳಿ ಬೆಳಗಲೆಂದು ಹಾರೈಸುತ್ತೇನೆ.

('ಸಾಕ್ಷೀಕಲ್ಲು' ವಿಶೇಷ ಸಂಚಿಕೆ : ೨೮–೭–೨೦೧೩)

ಚುಟುಕು ಸಾಹಿತ್ಯ, ತಟಕು ಟಿಪ್ಪಣಿ

'ಚುಟುಕು' ಹನಿಗವನ, ಮಿನಿಗವನ, ಕಿರುಗವನ ಎಂಬ ಹೆಸರಿನಲ್ಲಿ ತನ್ನ ಪ್ರಪಂಚವನ್ನು ವಿಸ್ತರಿಸಿಕೊಂಡಿದ್ದರೂ 'ಕಿರಿದರಲ್ಲಿ ಪಿರಿದರ್ಥ' ಎಂಬ ಅದರ ಮುಖ್ಯ ಲಕ್ಷಣಕ್ಕೆ ಬಾಧೆಯುಂಟಾಗಿಲ್ಲ. ರಾಜರತ್ನಂ ಮತ್ತು ಹೊಯ್ಸಳರು ಚಿಕ್ಕಮಕ್ಕಳ ಕಲ್ಪಕತೆಯನ್ನು ಜಾಗೃತಗೊಳಿಸಿ ಖುಷಿಗೊಳಿಸಲು ಚುಟುಕುಗಳನ್ನು ಬರೆದು ಕಿರಿಯರನ್ನು ಹಿರಿಯರನ್ನು ಕೂಡಿಯೆ ರಂಜಿಸಿದರು. ಅರುವತ್ತರ ದಶಕದಲ್ಲಿ ದಿನಕರ ದೇಸಾಯಿಯವರು ವಯಸ್ಕ ಓದುಗರಿಗಾಗಿ ಪುಂಖಾನುಪುಂಖವಾಗಿ ವಸ್ತುವೈವಿಧ್ಯದೊಂದಿಗೆ ವಿಡಂಬನೆಯ ಮೊನಚಿನೊಂದಿಗೆ ಇಂಥ ಪದ್ಯಗಳನ್ನು ಬರೆದು 'ಚುಟುಕು ಸಾರ್ವಭೌಮ'ರೆಂದೇ ಪ್ರಸಿದ್ಧರಾದರು.

೧೯೫೬ರಿಂದಲೇ ಆರಂಭವಾದ ಅವರ ಬರವಣಿಗೆಗೆ ಸರ್ವಜ್ಞನ ತ್ರಿಪದಿ, ಬ್ಲೇಕನ ದ್ವಿಪದಿ ಮತ್ತು ಚೌಪದಿಗಳಿಂದ ಪ್ರೇರಣೆ ದೊರೆಯಿತೆಂದು ಅವರೇ ಹೇಳಿದ್ದಾರೆ. ಅವರ ಈ ಪ್ರಾಸಬದ್ಧವಾದ ಚೌಪದಿಗಳಲ್ಲಿ ವಿಡಂಬನ ಮತ್ತು ಭಾವಗೀತದ ಲಹರಿ ಎರಡೂ ಒಡಮೂಡಿವೆ. ಅಪೂರ್ವವಾದ ಭಾಷೆಯ ಹದ, ಮಾತಿನ ಮೊನಚು, ಧ್ವನಿಯ ಕೊಂಕು ಇವುಗಳಲ್ಲಿವೆ. ಸುಮಾರು ಹತ್ತು ಸಾವಿರದಷ್ಟು ಚಾಪದಿಗಳನ್ನು ಬರೆದಿದ್ದರೆನ್ನಲಾದ ದೇಸಾಯಿಯವರು ಪ್ರಕಟಿಸಿದ 'ದಿನಕರನ ಚೌಪದಿ'ಯಲ್ಲಿ (೧೯೭೮) ೧೫೦೦ ಚಾಪದಿಗಳಿವೆ. ಹೊಸ ಹೊಸ ಶಬ್ದಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಇವರು ಪ್ರಾಸದಲ್ಲಿ ದುಡಿಸಿಕೊಳ್ಳುತ್ತಾರೆ:

ಜಗಳಾಡಿ ಜಗಳಾಡಿ ಕ್ರುಶ್ಚೇವ ಕೆನಡಿ
ಕಡಲು ಅಟ್ಲಾಂಟಿಕಕೆ ವಿಪರೀತ ನೆಗಡಿ

ಅಂಬುಧಿಗೆ ಮದ್ದು ಕೊಡಬೇಕೆಂದು ನೆಹರು
ಇಬ್ಬರಿಗು ಕಳಿಸಿದನು ಅರ್ಜಂಟು ತಾರು.

ಡಾ. ಅಕಬರ ಅಲಿಯವರು ೧೯೫೨ರಲ್ಲಿಯೇ 'ಅನ್ನ' ಸಂಗ್ರಹದ ಮೂಲಕ ತಮ್ಮ ಚುಟುಕಗಳ ರುಚಿ ತೋರಿಸಿದರು. ಇದಕ್ಕೆ ಮುನ್ನುಡಿ ಬರೆದ ಗೋಕಾಕರು ಇಂಗ್ಲಿಷಿನಲ್ಲಿ ಲಿಮರಿಕ್ ಎಂಬ ಚುಟ್ಕದ ಪದ್ಧತಿಯಿರುವುದನ್ನು ನೆನಪಿಸಿ, ಮಾತಿನ ಬಿಗುವು ಹಾಗೂ ಚಮತ್ಕಾರ, ಅದನ್ನು ಕಳೆಗಟ್ಟಿಸುವ ಪ್ರಾಸ, ಕೊನೆಯ ಸಾಲಿನಲ್ಲಿ ಅನಿರೀಕ್ಷಿತ ತಿರುವು – ಮೊದಲಾದ ಅದರ ಲಕ್ಷಣಗಳನ್ನೇ ಎತ್ತಿ ತೋರಿಸಿದರು.

ಅಕಬರ ಅಲಿಯವರಿಗೆ ಬಹುಶಃ ವ್ಹಿ.ಜಿ. ಭಟ್ಟರ 'ತುಂಟನ ಪದಗಳು' (೧೯೪೬) ಪ್ರೇರಣೆ ನೀಡಿರಬಹುದು. ಭಟ್ಟರ ಈ ಪುಸ್ತಕದ 'ಅರ್ಪಣ'ದಲ್ಲಿ ಅವರ ಉದ್ದೇಶ ಸೂಚಿತವಾಗಿದೆ:

ನಾಡಿನ ಹಿರಿಕಿರಿ
ಮಕ್ಕಳಿಗೀ ಮರಿ
ಪುಸ್ತಕವನು ನಾ ನೀಡುವೆನು
ಚಿಕ್ಕವರೆಲ್ಲಾ
ದೊಡ್ಡವರಾಗಿ
ದೊಡ್ಡವರೆಲ್ಲಾ
ಚಿಕ್ಕವರಾಗಿ
ಬೆಳೆಯುವದನು ನಾ ನೋಡುವೆನು.

ಭಟ್ಟರು ಮುಂದೆ ಪ್ರಬುದ್ಧರಿಗೆ ಬರೆದಂತೆ ವ್ಯಂಗ್ಯದ ಕೈ ಮೇಲಾಗಿ ತನ್ನದೇ ಛಾಪನ್ನು ಮೂಡಿಸಿತು:

ಉಂಗುರ

ಮನುಜಾ ಈ ದೇಹವು ಕ್ಷಣಭಂಗುರ
ಅಂತೆಯೇ ಬೆರಳಿಗೆ ನೀನೊಂದುಂಗುರ ಧರಿಸಿರು
ಅದು ನಿನಗಾಧಾರ!
ನೀನೆಲ್ಲಾದರು ಬಿದ್ದರೆ ಸತ್ತು
ಉಂಗುರ ಕಟ್ಟಿಗೆ ವೆಚ್ಚವ ಹೊತ್ತು
ಮಾಡಿಸುವರು ಶವ ಸಂಸ್ಕಾರ!

ಅನುಭವಕ್ಕೆ ದಕ್ಕಿದ ವಾಸ್ತವವನ್ನು ಸುಸಂಬದ್ಧ ಚಿಂತನ ಕ್ರಮಕ್ಕಳವಡಿಸಿ ಸಹಜವಾಗಿ ಅಭಿವ್ಯಕ್ತಿಗೊಳಿಸುವ ಜರಗನಹಳ್ಳಿ ಶಿವಶಂಕರ ಹನಿಗವಿತೆಯನ್ನೇ ತಮ್ಮ ಮುಖ್ಯವಾದ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ.

ಹಣತೆ

ಕುಂಬಾರರು ಮಾಡಿದ ಹಣತೆಗೆ
ಗಾಣಿಗರ ಎಣ್ಣೆಯ ತುಂಬಿ
ಒಕ್ಕಲಿಗರು ಬೆಳೆದ ಹತ್ತಿಯ ಹೊಸೆದು
ಬತ್ತಿಯ ಮಾಡಿ ದೀಪವ ಹಚ್ಚಿದರೆ
ಹಲವು ಜಾತಿಗಳು ಕೂಡಿ
ಕುಲಗೆಟ್ಟ ಬೆಳಕು ನೋಡ!

ಡಾ.ಸಿ.ಪಿ.ಕೆ.ಯವರು ಹನಿಗವನಗಳಲ್ಲಿ ಪಾಂಡಿತ್ಯವನ್ನು ಹಗುರಾಗಿ, ಚುರುಕಾಗಿ ಮೂಡಿಸುವಂತೆಯೇ ಹನಿಗವಿತೆಗೊಂದು ಹೊಸ ಆಯಾಮವನ್ನು ತಂದುಕೊಡಲು ಪ್ರಯತ್ನಿಸಿದ್ದಾರೆ.

ಭಾಗ್ಯ

ಗಂಡಿನ ಭಾಗ್ಯವೇ ಭಾಗ್ಯ
ನೋವಿಲ್ಲ, ನರಳಿಲ್ಲ,
ಅನಾಯಾಸವಾಗಿ ತಂದೆ ಹೆಸರು!
ತಾಯಿಪಟ್ಟ ಪಡೆಯಬೇಕಾದರೆ
ಕುಗ್ಗಿ ಹೋಗುತ್ತದೆ ಹೆಣ್ಣಿನ
ಅರ್ಧ ಉಸಿರು!

ಆಧುನಿಕ ಭಾವಾಭಿವ್ಯಕ್ತಿಗೆ ಎಸ್.ವಿ. ಪರಮೇಶ್ವರಭಟ್ಟರು 'ಸಾಂಗತ್ಯ' ಛಂದವನ್ನು ಅದ್ಭುತವಾಗಿ ಬಳಸಿರುವುದನ್ನು 'ಇಂದ್ರ ಚಾಪ', 'ಚಂದ್ರವೀಥಿ'ಗಳಲ್ಲಿ ಕಾಣಬಹುದು. ಅದಕ್ಕೊಂದು ಉತ್ತಮ ಉದಾಹರಣೆ:

ಮೇಲಕೆ ಹತ್ತಿರಿ, ಮುಂದಕೆ ಬನ್ನಿರಿ
ಎಂದು ಕಂಡಕ್ಟರು ಕರೆಯೆ
ಉಳಿದೆಲ್ಲ ಕಡೆಯೊಳು ಹಿಂದಕೆ ತಳ್ಳಿಸಿ
ಕೊಂಡವನಾನಂದಕೆಣೆಯೆ?

'ಚೆಲುವೆ ಹೊಡೆದಂತೆ ಕಣ್ಣು ಮರುಗಳಿಗೆ ತೋರಿರುವೆ ಬೆನ್ನು' ಎಂದು ಹನಿಗವಿತೆಯನ್ನು ವ್ಯಾಖ್ಯಾನಿಸಿರುವ ಲಕ್ಷ್ಮಣರಾವ್ ಪೋಲಿಶೈಲಿಯಿಂದ ಖುಷಿ ಗೊಳಿಸಬಲ್ಲರು.

ರೂಪಾಂತರ

ಯಾಕಾದರೂ ಹೋಗಿ ಬಂದಳೊ
ಬ್ಯೂಟಿ ಪಾರ್ಲರಿಗೆ ಆಕೆ!
ಅಂದಿನಿಂದ
ಅವಳ ಗಂಡ
ಒಂದೇ ಸಮನೆ
'ನನ್ನ ಹೆಂಡತಿಯ ನೀವು ಕಾಣಿರೇ...?
ನೀವು ತೋರಿರೇ...?
ಎಂದು ಹಲುಬುತ್ತಿದ್ದಾನೆ.

ಕೆ.ವಿ. ತಿರುಮಲೇಶರು ಹೇಳಿದಂತೆ ನಮ್ಮ ಅತಿಯಾದ ರಾಜಕೀಯವಸ್ತು ಸಾಮಾಜಿಕ ಪ್ರಜ್ಞೆಯಲ್ಲಿ ನಗುವದನ್ನೇ ಮರೆತಿದ್ದೇವೆ ಎನಿಸಿದಾಗ ಇಂಥ ಕವನಗಳು ನಮಗೆ ಅಗತ್ಯವಿರುವ ಎಚ್ಚರಿಕೆಯನ್ನು ನೀಡುತ್ತವೆ. ನೋವಿನಲ್ಲಿ ಜೀವನದ ಮರ್ಮವನ್ನು, ವಿರೋಧಾಭಾಸವನ್ನು ಸೂಚಿಸಬಲ್ಲ ಜಾಣ್ಮೆ ಹಾಗೂ ನಿರುದ್ವಿಗ್ನ ಭಾವತೀವ್ರತೆ ಕಮಲ ಹೆಮ್ಮಿಗೆಯವರ 'ಮರ್ಮರ'ದಲ್ಲಿ ವ್ಯಕ್ತವಾಗಿದೆ.

ಹೀಗೇಕೆ?

ಕೆಲವೊಮ್ಮೆ ಆನಂದ
ಕಣ್ಣೀರಿನಿಂದ ವ್ಯಕ್ತ
ಮತ್ತೊಮ್ಮೆ ದುಃಖ
ನಗುವಿನಲ್ಲಿ ಪ್ರಕಟ

ಪ್ರೊ. ದೇಜಗೌ ಅವರು ತಮ್ಮ ರಚನೆಗಳನ್ನು ಸಾಂಪ್ರದಾಯಕ ರೀತಿಯಲ್ಲಿಯೆ ಚುಟುಕು ಚೌಪದಿ, ಚುಟುಕು ತ್ರಿಪದಿ ಹಾಗೂ ಚುಟುಕು ನಾಡುನುಡಿ/ಚಾಟುನುಡಿ ಎಂದು ವಿಭಾಗಿಸಿಕೊಂಡಿದ್ದರೆ, ಕೆಲವರು ಛಂದದಲ್ಲಿ ಹೊಸ ಪ್ರಯೋಗಗಳಿಗೆಡೆಗೊಟ್ಟು ಯಶಸ್ವಿಯಾದದ್ದುಂಟು. ಕನ್ನಡದ ಹೈಕುಗಳೆಂದು ಕರೆಯಬಹುದಾದ ತ್ರಿಪದಿಗೆ ಮತ್ತೆ ಜೀವ ತುಂಬಿದಂತೆ ಆದಿಪ್ರಾಸದೊಡನೆ ಛಂದೋಬದ್ಧವಾಗಿರುವ ಜಯರಾಮ ಕಾರಂತರ 'ಮುಕ್ಕಾಲು ಪದ್ಯಗಳು' (೨೦೦೧) ಇದಕ್ಕೆ ಒಂದು ಒಳ್ಳೆ ಉದಾಹರಣೆ:

ಏಳು ಬಣ್ಣದ ಕನಸೆ
ಬಾಳ ಕೌದಿಯ ಸವರಿ
ಬಾಳ ಹರುಕನ್ನು ಮುಚ್ಚಿಸು.

'ಸತ್ಯ ಎಂಬುದು ಸೊಂಟಕ್ಕೆ ಕಟ್ಟಿಕೊಂಡ ಬಾಂಬು' ಎಂದು ವಾಸ್ತವದ ಪ್ರಖರತೆಯನ್ನು ಹೊಳೆಯಿಸುವ ಚಂಪಾ ಅವರ ಹನಿಗವನಗಳು ವ್ಯಂಗ್ಯ – ವಿನೋದ – ವಿಚಾರಪ್ರಚೋದಕತೆಯ ತ್ರಿಪುಟಿಯಂತಿವೆ.

ಮುಖ

ಮಗು
ಉಚ್ಚೆ ಹೊಯ್ದರೂ
ಮುಗಿಲು
ಅದರಲ್ಲಿ
ಮುಖ ನೋಡಿಕೊಳ್ಳುತ್ತದೆ

ವಿಸ್ಮಯಪೂರ್ವಕ ವಿಷಾದದ ದನಿ, ಸಹೃದಯರ ಎದೆಯಲ್ಲಿ ಅನುರಣಿಸುವಂಥ ನವೀನ ರೂಪಕವನ್ನು ಚೆನ್ನವೀರ ಕಣವಿ ಕೊಡಬಲ್ಲರೆಂಬುದು ವಿಮರ್ಶಕರ ಅಭಿಪ್ರಾಯ:

ಬತ್ತಿಹೋದ ಕೆರೆಯಲ್ಲಿ
ಬಂಗಲೆಗಳು ಎದ್ದುಬಿಟ್ಟಿವೆ,
ಜಲ ದೇವತೆಗೆ
ಎಷ್ಟೊಂದು ಗೋರಿಗಳು!

ಕನ್ನಡನಾಡು – ನುಡಿಯನ್ನು ಕುರಿತು ಬರೆಯದ ಕವಿಯೇ ಇಲ್ಲವೆಂದು ಹೇಳುವಂತೆಯೇ ಇಂದು ಹನಿಗವನವನ್ನು ಬರೆಯದ ಕವಿಗಳೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಪತ್ರಿಕೆಗಳೂ ಅದಕ್ಕಾಗಿ ಜಾಗ ಮೀಸಲಿಟ್ಟಿರುವುದುಂಟು. ಈ ಕಾವ್ಯಪ್ರಕಾರವನ್ನು ಅತ್ಯಂತ ಜನಪ್ರಿಯಗೊಳಿಸುವಲ್ಲಿ ತಮ್ಮ ವಿಶೇಷ ಪ್ರತಿಭೆಯನ್ನು ಮೆರೆದ ಕವಿ ಎಚ್.ಡುಂಡಿರಾಜ ಎಂದರೆ ತಪ್ಪಾಗದು. ಅವರು 'ಹನಿಖಜಾನೆ'ಯ ರಾಜರಾಗಿಯೇ ಮೆರೆಯುತ್ತಿದ್ದಾರೆ. ಭಾಷೆಯನ್ನು ಅವರು ಹದಗೊಳಿಸುವ ರೀತಿ, ಪದಗಳನ್ನು ಬಿಚ್ಚಿ, ಜೋಡಿಸಿ ಆಡುವ ಆಟ, ಶ್ಲೇಷೆಯ ಅರ್ಥಪೂರ್ಣ ಬಳಕೆ ಬೆರಗುಗೊಳಿಸುವಂಥದು, ೬೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾಸನದಲ್ಲಿ ನೆರವೇರಿದಾಗ ಕನ್ನಡ ಜನತೆ ಅದರ ಅಧ್ಯಕ್ಷತೆಯ ಗೌರವವನ್ನು ನನಗೆ ನೀಡಿದ ಸಂದರ್ಭದಲ್ಲಿ ಸಮ್ಮೇಳನದ ಅಂಗವಾಗಿ ಮೊತ್ತ ಮೊದಲ ಬಾರಿಗೆ ಹನಿಗವನಗಳಿಗಾಗಿ ಪ್ರತ್ಯೇಕ ಗೋಷ್ಠಿಯನ್ನು ಏರ್ಪಡಿಸಿದ್ದು ಮತ್ತು ಆ ಗೋಷ್ಠಿಯ ಅಧ್ಯಕ್ಷತೆಯನ್ನು ಎಚ್. ಡುಂಡಿರಾಜ ಅವರು ವಹಿಸಿಕೊಂಡದ್ದು ನನಗೆ ವಿಶೇಷ ಸಂತೋಷವನ್ನುಂಟು ಮಾಡಿದ ಸಂಗತಿಯಾಗಿದೆ. ಅದರ ಮರುವರ್ಷವೇ ೧೯೯೭ರಲ್ಲಿ ಹನಿಗವನ–ಚುಟುಕುಗಳ ಪ್ರಾತಿನಿಧಿಕ ಸಂಕಲನವೊಂದನ್ನು 'ಸೂಜಿಮಲ್ಲಿಗೆ' ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲಾಯಿತು. ಅದರ ಸಂಪಾದಕತ್ವದ ಹೊಣೆಯನ್ನು ಡುಂಡಿರಾಜರು ಸಮರ್ಥವಾಗಿ ನಿರ್ವಹಿಸಿದ್ದನ್ನು ಇಲ್ಲಿ ನೆನೆಯಬಹುದು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರ ಒತ್ತಾಸೆಯೂ ಇದಕ್ಕೆ ಕಾರಣವಾಗಿತ್ತೆಂಬುದನ್ನು ಮರೆಯುವಂತಿಲ್ಲ. 'ಸೂಜಿಮಲ್ಲಿಗೆ'ಯ ಪ್ರಸ್ತಾವನೆಯಲ್ಲಿ ಎಚ್. ಡುಂಡಿರಾಜ ಅವರು ಹೇಳಿರುವ ಮಾತುಗಳಿಗೂ ನನ್ನ ಅನಿಸಿಕೆಗೂ ಹೆಚ್ಚು ವ್ಯತ್ಯಾಸವಿಲ್ಲವೆಂದೇ ಹೇಳಬಹುದು: "ಇಂದು ಪ್ರಕಟವಾಗುತ್ತಿರುವ ಚುಟುಕು,

ಹನಿಗವನಗಳಲ್ಲಿ ಕಾಳಿಗಿಂತ ಜೊಳ್ಳೇ ಹೆಚ್ಚು ಎಂಬ ಆಪಾದನೆಯೂ ಸುಳ್ಳಲ್ಲ. ಹನಿಗವನದಲ್ಲಿ 'ಕವನ' ಇರಬೇಕು ಎಂಬ ಮೂಲಭೂತ ಸಂಗತಿಯನ್ನೇ ಮರೆತವರಂತೆ ಅನೇಕರು ಬರೆಯುತ್ತಾರೆ. ಕಾವ್ಯಾಂಶವಿಲ್ಲದ ಹೇಳಿಕೆಗಳು, ಈಗಾಗಲೆ ಬಳಕೆಯಾಗಿರುವ ಶ್ಲೇಷೆಗಳು, ಎಲ್ಲರಿಗೂ ತಿಳಿದಿರುವ ನಗೆಹನಿಗಳು 'ಹನಿಗವನ'ದ ಹೆಸರಿನಲ್ಲಿ ಪ್ರಕಟವಾಗುತ್ತಿವೆ. ಸಂಖ್ಯೆಯಲ್ಲಿ ಹೆಚ್ಚಳವಾದಾಗ ಗುಣಮಟ್ಟ ಕುಸಿಯುವುದು ಸಹಜ. ಈ ಮಾತು ಇತರ ಸಾಹಿತ್ಯ ಪ್ರಕಾರಗಳಿಗೂ ಅನ್ವಯಿಸುತ್ತದೆ. ಸಹೃದಯರು ಒಳ್ಳೆಯದನ್ನು ಮಾತ್ರ ಗುರುತಿಸಿ ಸ್ವೀಕರಿಸುತ್ತಾರಾದ್ದರಿಂದ ಕಾಲದ ಹೊಳೆಯಲ್ಲಿ ಜೊಳ್ಳು ತೇಲಿಹೋಗಿ ಕಾವ್ಯಾಂಶವುಳ್ಳ ಕಿರುಗವನಗಳು ಮಾತ್ರ ಉಳಿಯುತ್ತವೆ ಎಂದು ಸಮಾಧಾನಪಟ್ಟುಕೊಳ್ಳಬಹುದು."

ಈ ಸಂದರ್ಭದಲ್ಲಿ ನಾವು ನೆನಪಿಡಬೇಕಾದ ಮುಖ್ಯ ಮಾತೆಂದರೆ ಇತರ ಕವಿತಾ ಪ್ರಕಾರಗಳಂತೆ ಹನಿಗವನ ಕೂಡ ಪ್ರತಿಭಾಮೂಲವಾದದ್ದು. ದೀರ್ಘ ಕವನಗಳನ್ನು ಬರೆಯಬಲ್ಲ ಕವಿಗಳೆ ಹನಿಗವನಗಳನ್ನು ಬರೆಯಬಲ್ಲರು. (ಇದಕ್ಕೆ ಅಪವಾದಗಳಿರಬಹುದು.) ನಾನು ಮೇಲೆ ಉದಾಹರಿಸಿದ ಕವಿಗಳೇ ಇದಕ್ಕೆ ನಿದರ್ಶನ. ಹಾಸ್ಯ, ವಿಡಂಬನೆಯೇ ಇವುಗಳ ಪ್ರಧಾನ ಅಂಶವಾಗಿದ್ದರೂ ಗಹನವಾದ, ಗಂಭೀರವಾದ ಅನುಭವಗಳ ಅಭಿವ್ಯಕ್ತಿಮಾಧ್ಯಮವನ್ನಾಗಿ ಮಾಡಿಕೊಳ್ಳುವದು ಸಾಧ್ಯವೆಂಬುದನ್ನು ಮರೆಯಬಾರದು. ಇಂಥವನ್ನು ಇಡಿಯಾಗಿ ಧ್ಯಾನಿಸುವದು ನಮಗೆ ಸಾಧ್ಯವಾಗಬೇಕು. ಲಂಕೇಶರ 'ನೀಲೂಪದ್ಯ'ಗಳೂ ಇಂಥದೇ ಸವಾಲನ್ನು ಒಡ್ಡುತ್ತವೆ. ರವೀಂದ್ರನಾಥ ಠಾಕೂರರ `Stray Birds' ಹಾಗೂ `Fire Flies' ಸಂಕಲನಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.

ಈಚೆಗೆ ಡಾ. ಜಿ.ಎಸ್. ಶಿವರುದ್ರಪ್ಪನವರು 'ಚುಟುಕು ಕವಿಗಳಿಗೊಂದು ಮಾತು' ಹೇಳಿದ್ದಾರೆ. ಅದು ಹೀಗಿದೆ:

ಪ್ರವಾಸಕ್ಕೆ ಹೊರಟಾಗ
ತಂಗಲು
ಟೆಂಟುಗಳೇ ಸಾಕು;
ಆದರೆ ನಿವಾಸಕ್ಕೆ
ಮನೆಗಳೇ ಬೇಕು.
ಇಂಥ ಹನಿಗವಿತೆಗಳಲ್ಲಿ
ಕವಿ ಆಗಾಗ ರಮಿಸಬಹುದು
ಆದರೆ ಅವುಗಳಲ್ಲೇ
ವಿರಮಿಸಬಾರದು.

(೨೦೧೩)

'ಸಮಾಜಕಾರ್ಯಕ್ಕೆ' ಭದ್ರ ಬುನಾದಿ

'ಸಮಾಜ ಕಾರ್ಯದ ಕಣಸುಗಾರ ಪ್ರೊ. ಎಚ್.ಎಂ. ಮರುಳಸಿದ್ಧಯ್ಯ' ಎಂಬ ಅಪರೂಪದ ಈ ಆತ್ಮಕಥಾ ನಿರೂಪಣೆಯ ಗ್ರಂಥವನ್ನು ಓದಿದ ಮೇಲೆ ಈ ಲೇಖನದ ಶೀರ್ಷಿಕೆಯನ್ನು 'ಸಮಾಜ ಕಾರ್ಯದ ಸಮುದಾಯ ಭವನದ ಹೊನ್ನ ಕಳಸ' ಎಂದು ಇಡಬೇಕೆಂದಿದ್ದೆ. ಬದುಕು–ಬರೆಹ–ಕಾಯಕ ಮುಪ್ಪುರಿಗೊಂಡ ಅವರ ವ್ಯಕ್ತಿತ್ವ ಸಾಧಿಸಿದ ಶ್ರೇಯಸ್ಸಿಗೆ ಅದು ಸಮರ್ಪಕವಾದ ಸಂಕೇತವಾಗಬಹುದಾಗಿತ್ತು. ಆದರೆ ಬಸವಣ್ಣನವರ ಧಾರ್ಮಿಕ–ಸಾಮಾಜಿಕ–ಸಾಂಸ್ಕೃತಿಕ ಸಮಾನತೆಯ ಸರ್ವೋದಯದಲ್ಲಿ ನಂಬಿಕೆಯಿಟ್ಟು ಆ ದಾರಿಯಲ್ಲಿ ನಡೆಯಲು ಪ್ರಯತ್ನಿಸಿದವರು ನಮ್ಮ ಮರುಳಸಿದ್ಧಯ್ಯನವರು. 'ಕಾಗೆ ವಿಷ್ಟಿಸುವ ಹೊನ್ನಕಳಸಕ್ಕಿಂತ ನಿಮ್ಮೊಡೆಯರು ಜೋಗೈಸುವ ಚೆಮ್ಮಾವುಗೆಯ ಮಾಡಯ್ಯ' ಎಂಬ ಅಣ್ಣನ ವಚನ ನೆನಪಾಗಿ ಶೀರ್ಷಿಕೆಯನ್ನು ಬದಲಿಸಿದೆ. ಸದಾ ಸಮುದಾಯ ಸಂಘಟನೆ, ಅದರ ಹಿತಚಿಂತನೆ ಹಾಗೂ ಏಳ್ಗೆಯನ್ನೇ ತಮ್ಮ 'ಸಮಾಜಕಾರ್ಯ' ಕಲ್ಪನೆಯ ಧ್ಯೇಯವಾಗಿಟ್ಟುಕೊಂಡು ಜನಸಾಮಾನ್ಯರೊಡನೆ ಬೆರೆಯುವದರಲ್ಲಿಯೇ ಹೆಚ್ಚಿನ ಸಂತೋಷ ಕಾಣುತ್ತಿರುವ ಈ ವ್ಯಕ್ತಿಗೆ ಈ ಶೀರ್ಷಿಕೆಯೇ ಸರಿ ಎನಿಸಿತು. ಸಮಾಜಕಾರ್ಯಕ್ಕೆ ಸಂದರ್ಭೋಚಿತ ಸಂಚಲನವನ್ನೊದಗಿಸಿ ಅದಕ್ಕೊಂದು ಶಿಸ್ತು, ಸಂಘಟನೆ ಹಾಗೂ ಸಿಲೇಬಸ್‌ನ್ನು ಒದಗಿಸಿದವರು. ಪ್ರೊ. ಎಚ್.ಎಂ. ಮರುಳಸಿದ್ಧಯ್ಯನವರು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ (ಮೂಲತಃ ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ), ವಿಶ್ವವಿದ್ಯಾಲಯ ಹಾಗೂ ಸಾಮಾನ್ಯ ಜನತೆಯ ನಡುವೆ ಸಂಪರ್ಕ ಏರ್ಪಡಿಸಿ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ

ಕೈಕೊಂಡ ಜ್ಞಾನಪ್ರಸಾರದ ಯೋಜನೆಯ ಅಂಗವಾಗಿ ವಿವಿಧ ವಿಷಯಗಳನ್ನು ಕುರಿತು ಉಪನ್ಯಾಸ ಶಿಬಿರಗಳನ್ನು ೧೯೫೨ರಿಂದಲೇ ಏರ್ಪಡಿಸುತ್ತ ಬಂದಿದೆ. ಇಂಥ ಶಿಬಿರಗಳಲ್ಲಿ ಉಳಿದ ಅಧ್ಯಾಪಕರೊಡನೆ ಭಾಗವಹಿಸಿ ಯೋಜನೆಯ ಯಶಸ್ಸಿಗೆ ಕಾರಣರಾದ ಪ್ರಮುಖರಲ್ಲಿ ಪ್ರೊ. ಮರುಳಸಿದ್ಧಯ್ಯನವರೂ ಒಬ್ಬರು. ೧೯೬೦ರಲ್ಲಿ ಅಂಕಲಗಿ (ಬೆಳಗಾವಿ ಜಿಲ್ಲೆ)ಯಲ್ಲಿ ಖ್ಯಾತ ಪ್ರಗತಿಶೀಲ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿ ಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರವೊಂದರಲ್ಲಿ ಮರುಳಸಿದ್ಧಯ್ಯ ನವರು 'ಸಮಾಜ ಕಾರ್ಯ' ಕುರಿತು ಉಪನ್ಯಾಸ ನೀಡಿ ಸಮಾಜಸೇವೆ ಹಾಗೂ ಸಮಾಜ ಕಾರ್ಯದಲ್ಲಿರುವ ಭೇದವನ್ನು ವಿವರಿಸಿ ಸಭಿಕರ ಮೆಚ್ಚುಗೆಗೆ ಪಾತ್ರವಾದದ್ದು ಇನ್ನೂ ನನ್ನ ನೆನಪಿನಲ್ಲಿದೆ. ಆ ಉಪನ್ಯಾಸವನ್ನು ೧೯೬೧ರಲ್ಲಿ ಪ್ರಸಾರಾಂಗ ಉಪನ್ಯಾಸ ಗ್ರಂಥಮಾಲೆಯಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿತು. ಕರ್ನಾಟಕದಲ್ಲಿ 'ಸಮಾಜ ಕಾರ್ಯ' ಕುರಿತು ಪುಸ್ತಿಕೆ ಪ್ರಕಟಗೊಂಡದ್ದು ಅದೇ ಪ್ರಥಮವೆಂದು ತೋರುತ್ತದೆ. ಮುಂದೆ ಅದು ಅನೇಕ ಆವೃತ್ತಿಗಳನ್ನು ಕಂಡಿತು. ನಂತರದ ಐವತ್ತು ವರ್ಷಗಳಲ್ಲಿ ಮರುಳಸಿದ್ಧಯ್ಯನವರು ಈ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. 'ದಿಗ್ಭ್ರಾಂತ ಸಮಾಜಕ್ಕೆ ಬೆಳಕಿನ ದಾರಿ' ಎಂಬ ಎರಡು ಸಂಪುಟಗಳು (ಸು. ೧೫೦೦ ಪುಟ) 'ಸಮಾಜಶಾಸ್ತ್ರ: ಕೆಲವು ಒಳನೋಟಗಳು' (ಸು. ೪೦೦ ಪುಟ) ಈ ಗ್ರಂಥಗಳೇ ಅದಕ್ಕೆ ಸಾಕ್ಷಿ. ಸಮಾಜಶಾಸ್ತ್ರಕ್ಕೆ ಮಾತ್ರವಲ್ಲ, ಕನ್ನಡ ಭಾಷೆಗೂ ಇವು ಭೂಷಣ ಪ್ರಾಯವಾದವು. ಅಲ್ಲದೆ 'ದೇಶೀಯ ಸಮಾಜಶಾಸ್ತ್ರವನ್ನು ರೂಪಿಸಿದವರಲ್ಲಿ ಒಬ್ಬರು' ಎಂಬ ಖ್ಯಾತಿ ಕೂಡ ಇವರದಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಸಂಬಂಧಪಟ್ಟಂತೆ ಇನ್ನೂ ಒಂದು ಸಂಗತಿಯನ್ನು ಈ ಸಂದರ್ಭದಲ್ಲಿ ಹೇಳಬೇಕು. ನಮ್ಮ ನಾಡಿನ ಅಗ್ರಗಣ್ಯ ವಿಚಾರವಾದಿಗಳೆನಿಸಿದ ಗೋಕರ್ಣದ ಗೌರೀಶ ಕಾಯ್ಕಿಣಿಯವರು ಸಿಂದಗಿ (ವಿಜಾಪುರ ಜಿಲ್ಲೆ)ಯಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ (೧೯೬೬ರಲ್ಲಿ) 'ವಿಚಾರವಾದ'ವನ್ನು ಕುರಿತು ಮಾತನಾಡಿದರು. ಅದು ಪುಸ್ತಕದ ರೂಪದಲ್ಲಿ ಪ್ರಕಟವಾದಾಗ ಆ ವಿಷಯದಲ್ಲಿ ಅದೇ ಪ್ರಥಮ ಪ್ರಕಟನೆಯೆನಿಸಿ ಹೊಸಹಾದಿಯನ್ನು ತೆರೆಯಿತು. ಅವರ ಗ್ರಂಥಗಳ ಹಾಗೂ ಲೇಖನಗಳ ಹತ್ತು ಸಮಗ್ರ ಸಂಪುಟಗಳು ಕೆಲ ವರ್ಷಗಳ ಹಿಂದೆ ಪ್ರಕಟ ಗೊಂಡುದನ್ನು (ಸಂಪಾದಕ: ವಿಷ್ಣು ನಾಯ್ಕ) ಇಲ್ಲಿ ಸ್ಮರಿಸಬಹುದು. ಅವರ ಜನ್ಮಶತಾಬ್ದಿಯನ್ನು ಕೂಡ (೧೨-೯-೧೧ರಂದು) ಗೋಕರ್ಣದಲ್ಲಿಯೇ ಆಚರಿಸ ಲಾಯಿತು. ಈ ಇಬ್ಬರು ಹಿರಿಕಿರಿಯರು ಹೊಸ ವಿಚಾರದ ಹರಿಕಾರರಾಗಿರುವುದರಿಂದ ಅವರ ಬರವಣಿಗೆಗಳಿಗೆ ಒಂದು ಒಳ ಸಂಬಂಧವನ್ನು ನಾನು ಇಲ್ಲಿ ಕಲ್ಪಿಸಬೇಕಾಯಿತು.

ಮರುಳಸಿದ್ಧಯ್ಯನವರು ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಮಾಜಕಾರ್ಯ (Social work)ವಿಭಾಗವನ್ನು ಮೊಟ್ಟಮೊದಲು ಸ್ಥಾಪಿಸುವಲ್ಲಿ ಪ್ರವರ್ತಕರಾಗಿಯೂ ಹತ್ತು ವರ್ಷ ಉಪನ್ಯಾಸಕ ಸ್ಥಾನ (lecturer)ದಲ್ಲಿಯೇ ಉಳಿಯಬೇಕಾಗಿ ಬಂದದ್ದು ನಮ್ಮ ವಿವೇಚನಾರಹಿತ ಶಿಕ್ಷಣ ವ್ಯವಸ್ಥೆಗೆ ಕನ್ನಡಿಯಂತಿದೆ. ಇದರಿಂದ ಮರುಳಸಿದ್ಧಯ್ಯನವರು

ತಾವು ಕಷ್ಟಪಟ್ಟು ಕಟ್ಟಿದ ಗೂಡನ್ನೇ ತೊರೆದು ಹೋಗಬೇಕಾಗಿ ಬಂದದ್ದು ಒಂದು ವಿಪರ್ಯಾಸ. ರಾಜ್ಯದ ಮತ್ತೊಂದು ವಿಶ್ವವಿದ್ಯಾಲಯಕ್ಕೆ (ಬೆಂಗಳೂರು) ಈ ತವನಿಧಿ ದೊರೆಯುವಂತಾದದ್ದು ಇದ್ದುದರಲ್ಲಿ ಸಮಾಧಾನಪಡಬೇಕಾದ ಸಂಗತಿ. ಬೋಧನೆ, ಸಂಶೋಧನೆ, ಕ್ಷೇತ್ರಾನುಭವ, ಸಂಘಟನೆಗಳ ಜೊತೆಜೊತೆಯಲ್ಲಿಯೇ ನಿರಂತರ ಬರವಣಿಗೆಯಲ್ಲಿ ತೊಡಗಿ ಹಲವಾರು ಮಹತ್ವದ ಕೃತಿಗಳ ಮೂಲಕ ಈ ದಿಸೆಯಲ್ಲಿ ಅವರು ನೀಡಿದ ಕೊಡುಗೆ ಅಮೂಲ್ಯವಾದುದು. ಅವರ ವಿದ್ಯಾರ್ಥಿಗಳಾಗಿದ್ದವರು ಇದನ್ನು ಅರ್ಥಮಾಡಿಕೊಂಡು ಈ ಮಾದರಿಯ ಗ್ರಂಥರೂಪದಲ್ಲಿ (ಸಮಾಜಕಾರ್ಯದ ಕಣಸುಗಾರ) ಅವರಿಗೆ ಗುರುದಕ್ಷಿಣೆ ಸಲ್ಲಿಸಿದ್ದಕ್ಕಾಗಿ ಅವರಿಗೆ ಅಭಿನಂದನೆಗಳೂ ಸಲ್ಲಬೇಕು.

ಎಂಬತ್ತು ವಸಂತಗಳನ್ನು ಕಂಡ ಈ ವ್ಯಕ್ತಿ ವೈಯಕ್ತಿಕ ಜೀವನದಲ್ಲಿ ಹಲವು ಬಗೆಯ ಸಂಕಷ್ಟಗಳನ್ನು ಎದುರಿಸಿಯೂ ಕುಟುಂಬ ವತ್ಸಲರಾಗಿ ಜೀವನೋತ್ಸಾಹಕ್ಕೆ ಕುಂದಿಲ್ಲದಂತೆ ವೃತ್ತಿಪರವಾಗಿ ಹೊಸ ವಿಚಾರಗಳನ್ನು ಹೊಸ ಯೋಜನೆಗಳ ಹೊಳಹುಗಳನ್ನು ಈಗಲೂ ಈ ಕ್ಷೇತ್ರದ ಆಸಕ್ತರಲ್ಲಿ ಹಂಚಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ.

"ಹಲವು ಸಾರ್ಥಕ ಸಾಧನೆಗಳನ್ನು ಮಾಡಿರುವ ಮರುಳಸಿದ್ಧಯ್ಯನವರು ನಮ್ಮ ನಡುವೆ ಇದ್ದಾರೆ ಎನ್ನುವ ಮಾತೇ ಕೆಲವರಿಗೆ ಪವಾಡವೆನಿಸಬಹುದು." ಎಂಬುದನ್ನು ಈ ಗ್ರಂಥದ ಮುನ್ನುಡಿಯಲ್ಲಿ ಹೇಳಿಕೊಂಡ ಶ್ರೀ ಎಚ್.ಎಸ್. ಗೋಪಾಲರಾವ್ ಅವರು "ದೃಢ ಸಂಕಲ್ಪವಿದ್ದರೆ ಎಂತಹ ಅಸಾಧ್ಯವೆನಿಸುವಂತಹ ಕೆಲಸವನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಎಚ್.ಎಂ.ಎಂ. ಉದಾಹರಣೆಯಾಗಿದ್ದಾರೆ" ಎಂದಿರುವುದು ನೂರಕ್ಕೆ ನೂರರಷ್ಟು ಸತ್ಯ. ಈ ಕ್ಷೇತ್ರಕ್ಕೆ ಹೊಸ ಆಯಾಮ ತಂದು ಕೊಡುವಲ್ಲಿ ತಾವು ಕಂಡ ಅನೇಕ ಕನಸುಗಳನ್ನು ನನಸನ್ನಾಗಿ ತೋರಿಸಿದ, ಇನ್ನೂ ಆ ಬಗ್ಗೆ ಹೊಂಗನಸನ್ನು ಇಟ್ಟುಕೊಂಡಿರುವ ಪ್ರೊ. ಮರುಳಸಿದ್ಧಯ್ಯನವರ ಒಡನಾಟವಿಟ್ಟುಕೊಂಡು ಮಾರ್ಗದರ್ಶನ ಪಡೆಯುತ್ತ ಕ್ರಿಯಾಶೀಲರಾಗಿರುವ ಶ್ರೀ ಎನ್.ವಿ. ವಾಸುದೇವ ಶರ್ಮ (ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ) ಹಾಗೂ ಗ್ರಂಥಕರ್ತರು ಹಾಗೂ ಶ್ರೀ ಎನ್.ಎಲ್. ಆನಂದ (ಗ್ರಾಮೀಣಾಭಿವೃದ್ಧಿಗಾಗಿ ಶ್ರಮಿಸುತ್ತಿರುವ 'ಸಮೃದ್ಧಿ ಸೇವಾ ಸಂಸ್ಥೆ'ಯ ಅಧ್ಯಕ್ಷರು ಹಾಗೂ ಸಮಾಜ ಕಾರ್ಯಪ್ರಶಿಕ್ಷಕರು) ಜೊತೆಗೂಡಿ ಪ್ರಸ್ತುತ ಗ್ರಂಥ ರಚನೆಯಿಂದ ಒಂದು ಸಮಯೋಚಿತವಾದ ಸಾರ್ಥಕ ಕೆಲಸ ಮಾಡಿದ್ದಾರೆ. ಅವರೊಡನೆ ನಡೆಸಿದ ಸಂದರ್ಶನಗಳು, ಸಂಶೋಧನೆಗಳು, ಹಲವರು ಇವರನ್ನು ಕಂಡ ಬಗೆ ಹೀಗೆ ಎಲ್ಲ ಅನುಭವಗಳನ್ನು ಅಂತರ್ಗತಗೊಳಿಸಿ ಒಂದು ಹೊಸ ಮಾದರಿಯ ಗ್ರಂಥ ನೀಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಮರುಳಸಿದ್ಧಯ್ಯನವರ ಬದುಕು, ಕ್ಷೇತ್ರಕಾರ್ಯ, ಪ್ರಯೋಗ, ಚಿಂತನೆ ಮತ್ತು ಬರೆಹಗಳನನ್ನುಲಕ್ಷಿಸಿ ಅವರ ಬಗ್ಗೆ ಇಲ್ಲಿ ಕೊಟ್ಟಿರುವ ವಿವರಗಳು ಕೇವಲ ಮಾಹಿತಿಗಳಾಗಿರದೆ ಸೃಜನಾತ್ಮಕವಾಗಿ ಜೀವಂತವಾಗಿವೆ. ಸಮಾಜಕಾರ್ಯದ ವಾಸ್ತವಾಚರಣೆಗೆ ಎಚ್.ಎಂ.ಎಂ. ಸದಾಕಾಲ ಪ್ರಸ್ತುತರಾಗುತ್ತಾರೆಂಬುದನ್ನು ಸಾಬೀತುಪಡಿಸುವಂತಿದೆ.

ಸಾಹಿತ್ಯದಿಂದ ಸಮಾಜಶಾಸ್ತ್ರಕ್ಕೆ, ಅಲ್ಲಿಂದ ಸಮಾಜ ಕಾರ್ಯಕ್ಕೆ ಬದಲಾದುದಕ್ಕೆ ನನಗೆ ಬೇಸರವಿಲ್ಲ. ಸಂತೋಷವೇ ಆಗಿದೆ ಎಂಬ ಮರುಳಸಿದ್ಧಯ್ಯನವರ ಮಾತಿನ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತೆಯೇ ಇಲ್ಲ. ಅವರ ಈ ಎಲ್ಲ ಕೆಲಸಗಳ ಹಿಂದೆ ಕನಸು ಕಾಣುವ ಕವಿಹೃದಯವೊಂದು ಮಿಡಿಯುತ್ತಿರುವುದರಿಂದಲೇ ಅವು ಸಾಹಿತ್ಯಿಕ ಸ್ಪರ್ಶದಿಂದ ಹೆಚ್ಚು ಯಶಸ್ವಿಯಾಗಿವೆ ಎಂದು ನನ್ನ ಅನಿಸಿಕೆ. ಎಚ್.ಎಂ.ಎಂ. ಅವರೇ ಹೇಳುವಂತೆ ಸಮಾಜಕಾರ್ಯವು ಎಲ್ಲ ಶಿಸ್ತುಗಳ ಸಾರವನ್ನು ಹೀರಿಕೊಂಡು ಪುಷ್ಟಿಗೊಂಡು ಹಾಗೆಯೇ ಬಲಿಷ್ಠಗೊಳ್ಳುತ್ತ ಸಾಗಿರುವ ಪ್ರಕ್ರಿಯೆಯಾಗಿದೆ.

ಹನ್ನೆರಡು ಅಧ್ಯಾಯಗಳಲ್ಲಿ ವಿವಿಧ ವಿಷಯವನ್ನು ಹಂಚಿಕೊಂಡು ಈ ಗ್ರಂಥದಲ್ಲಿ ವಿವೇಚಿಸಿರುವದು ಒಂದಕ್ಕೊಂದು ಪೂರಕವಾಗಿ ಒಟ್ಟು ವ್ಯಕ್ತಿತ್ವದರ್ಶನಕ್ಕೆ ಪೋಷಕವಾಗಿದೆ. ವ್ಯಕ್ತಿಯ ಸಾಧನೆಗಳನ್ನು ಅವನ ಕಾರ್ಯಗಳ ಪ್ರತ್ಯಕ್ಷಾನುಭವದಿಂದ, ಸರಳವಾದ ಭಾಷೆಯಲ್ಲಿ ಕಟ್ಟಿಕೊಟ್ಟಿರುವುದರಿಂದ ಕನ್ನಡಕ್ಕೆ ಇದೊಂದು ಅಪರೂಪದ ಕೊಡುಗೆಯಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಪ್ರಕಾಶಕರಾದ ಬೆಂಗಳೂರಿನ ಪ್ರಗತಿ ಗ್ರಾಫಿಕ್ಸ್‌ನ ಡಾ. ಎಂ. ಬೈರೇಗೌಡರು ಅಭಿನಂದನಾರ್ಹರು.

('ಸಮಾಜಕಾರ್ಯದ ಹೆಜ್ಜೆಗಳು' ೨೦೧೩)

ಮಕ್ಕಳ ಸಾಹಿತ್ಯಕ್ಕೆ ಕಂಚ್ಯಾಣಿ ಶರಣಪ್ಪನವರ ಕೊಡುಗೆ

ಕೇಂದ್ರ ಸಾಹಿತ್ಯ ಅಕಾಡೆಮಿಯ ೨೦೧೩ರ ಬಾಲಸಾಹಿತ್ಯ ಬಹುಮಾನ ಪುರಸ್ಕೃತ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಒಂದೆಡೆ, "ನಮ್ಮ ಬಹುಮಂದಿ ಕವಿಗಳು ಅಜ್ಜಂದಿರಾದ ಮೇಲೆ ದಂಡಿಯಾಗಿ ಮಕ್ಕಳ ಕವಿತೆ–ಕಥೆ–ನಾಟಕ ಬರೆಯಲು ಪ್ರಾರಂಭಿಸಿದರೆಂಬುದು ಐತಿಹಾಸಿಕ ಸತ್ಯ" ಎಂದಿದ್ದಾರೆ. ಆ ಸಾಹಿತ್ಯವನ್ನು ಮಕ್ಕಳ ಸಾಹಿತ್ಯ ಎನ್ನುವುದಕ್ಕಿಂತ ಮೊಮ್ಮಕ್ಕಳ ಸಾಹಿತ್ಯ ಎನ್ನಬೇಕು ಎಂದು ಅವರು ತಮಾಷೆಯಾಗಿ ಹೇಳಿದರೂ ಅದರಲ್ಲಿ ಸತ್ಯಾಂಶವಿಲ್ಲದೆಯಿಲ್ಲ. ಸಾಮಾನ್ಯವಾಗಿ ಕುಟುಂಬದ ಸದಸ್ಯರ ಮಧ್ಯದಲ್ಲಿ ಬೆಳೆಯುತ್ತಿರುವ ಮಗುವಿಗೆ ತಾಯಿಯೊಡನೆ ಉಳಿದವರಿಗಿಂತ ಭಿನ್ನವಾದ ಆತ್ಮೀಯ ಸಂಬಂಧವಿರುತ್ತದೆ. ಅದಕ್ಕಾಗಿಯೇ ಮಕ್ಕಳ ಸಾಹಿತ್ಯದಲ್ಲಿ ಬಹಳಷ್ಟು ಕವಿತೆಗಳು ಅಮ್ಮನನ್ನು ಸಂಬೋಧಿಸಿರುತ್ತವೆ. ಅಣ್ಣ–ತಮ್ಮ, ಅಕ್ಕ–ತಂಗಿ, ಅಜ್ಜ–ಅಜ್ಜಿ ಮೊದಲಾದವರೊಡನೆ ಮಗು ಮಾತನಾಡುವಾಗ ಅಥವಾ ಕಾಡಿಸಿ ಪ್ರಶ್ನೆ ಕೇಳುವಾಗ ಅದರ ವಿಷಯ ಮತ್ತು ರೀತಿ ಬೇರೆಬೇರೆ ಯಾಗಿಯೇ ಇರುವುದನ್ನು ಸೂಕ್ಷ್ಮವಾಗಿ ಕಂಡುಹಿಡಿಯಬಹುದು. ಮಗುವಿನ ಅವಸ್ಥೆಗೆ ಹಿಂತಿರುಗುತ್ತಿರುವಾಗ ಅಜ್ಜ–ಅಜ್ಜಿಯರೊಡನೆ ಮಗು ಹೆಚ್ಚಿನ ಸಲಿಗೆ ಅಥವಾ ಸ್ವಾತಂತ್ರ್ಯ ವಹಿಸುವುದನ್ನು ಕಾಣುತ್ತೇವೆ. ಈ ದೃಷ್ಟಿಯಿಂದ ತಮ್ಮ ೫೭ನೆಯ ವಯಸ್ಸಿನಲ್ಲಿ ಪ್ರಕಟವಾದ ಪ್ರಥಮ ಮಕ್ಕಳ ಕವನ ಸಂಕಲನಕ್ಕೆ ಕಂಚ್ಯಾಣಿ ಶರಣಪ್ಪನವರು 'ಅಜ್ಜನ ಹಾಡು' ಎಂದು ಹೆಸರಿಟ್ಟಿರುವುದು ಸಹಜವೇ ಆಗಿದೆ.

ಮೂರು ದಶಕಕ್ಕೂ ಮಿಕ್ಕಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಕಂಚ್ಯಾಣಿಯವರು ಮಕ್ಕಳ ಮನೋಧರ್ಮವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡವರು. ಆದ್ದರಿಂದಲೇ ಮಕ್ಕಳಿಗಾಗಿ ಬರೆದ

ಅವರ ಕವಿತೆಗಳಲ್ಲಿ ಸಹಜತೆಯಿದೆ. ಹಾಗೆ ನೋಡಿದರೆ, ಸ್ವತಃ ಶಿಕ್ಷಕರಾದ ಹಾಗೂ ಸಾಹಿತ್ಯಶಕ್ತಿಯಿಂದ ಕೂಡಿದ ಪಂಜೆ ಮಂಗೇಶರಾಯರಂಥ ನವೋದಯದ ಹಿರಿಯರಿಂದ ಕನ್ನಡದಲ್ಲಿ ಬಾಲಸಾಹಿತ್ಯಕ್ಕೆ ನಾಂದಿಯಾದದ್ದನ್ನು ಮರೆಯುವಂತಿಲ್ಲ. ಕುವೆಂಪು, ರಾಜರತ್ನಂ. ಕಾರಂತ, ಎಲ್. ಗುಂಡಪ್ಪ, ಹೊಯಿಸಳ, ಸಿದ್ದಯ್ಯ ಪುರಾಣಿಕ, ದಿನಕರ ದೇಸಾಯಿ, ಎಂ.ವಿ. ಸೀತಾರಾಮಯ್ಯ ಮೊದಲಾದವರು ತಮ್ಮ ಇತರ ಸಾಹಿತ್ಯ ಕೃತಿಗಳಿಂದ ಪ್ರಸಿದ್ಧರಾಗಿದ್ದರೂ ಮಕ್ಕಳಿಗಾಗಿ ಸಾಹಿತ್ಯ ರಚಿಸುವುದು ತಮ್ಮ ಸಾಮಾಜಿಕ ಹೊಣೆಗಾರಿಕೆ ಹಾಗೂ ಕರ್ತವ್ಯವೆಂಬುದನ್ನು ಮರೆಯಲಿಲ್ಲ. ಮುಂದೆ ನವ್ಯದ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಪೂರ್ಣ ನಿರ್ಲಕ್ಷ್ಯಕ್ಕೊಳಗಾಯಿತು. ಆಗ ಶಿಶು ಸಾಹಿತ್ಯ ಪರಂಪರೆಯನ್ನು ಹರಿಗಡಿಯದಂತೆ ನೋಡಿಕೊಂಡವರು ಪ್ರಾಥಮಿಕ ಶಾಲಾ ಶಿಕ್ಷಕರು. ಅದರಲ್ಲೂ ವಿಜಾಪುರ ಜಿಲ್ಲೆಗೆ ಇದರಲ್ಲಿ ಅಗ್ರಸ್ಥಾನವೆಂದು ಹೇಳಿದರೆ ತಪ್ಪಾಗದು. ಶಿಸು ಸಂಗಮೇಶ ಅವರು ೧೯೫೫ರಷ್ಟು ಹಿಂದೆಯೆ ಶಿಶುಸಾಹಿತ್ಯಕ್ಕೆ ಸಂಬಂಧಪಟ್ಟ ಎರಡು ಸಂಕಲನಗಳನ್ನು 'ತುಟಚೆಂಡು', 'ಹಿಗ್ಗಿನಬುಗ್ಗೆ' ಸಂಪಾದಿಸಿ ಆ ಸಾಹಿತ್ಯ ಪ್ರಕಾರದ ಬಗ್ಗೆ ತಮಗಿರುವ ಕಾಳಜಿಯನ್ನು ವ್ಯಕ್ತಪಡಿಸಿದ್ದರು. ಅಂದಿನಿಂದ ಅವರು ಮತ್ತೆ ಎಂದೂ ಹಿನ್ನಡೆಯಲಿಲ್ಲ. ತಾವೂ ಬರೆದರು, ತಮ್ಮಂತೆಯೇ ಪ್ರಾಥಮಿಕ ಶಾಲಾ ಶಿಕ್ಷಕರ ಕವಿ ಬಳಗಕ್ಕೂ ಪ್ರೋತ್ಸಾಹಿಸಿದರು. ಸ್ವತಂತ್ರವಾಗಿ 'ಭಾರತೀ ಸಾಹಿತ್ಯ ಭಂಡಾರ'ವನ್ನು ನಿರ್ಮಿಸಿ ಪ್ರಕಾಶನವನ್ನು ಪ್ರಾರಂಭಿಸಿ ವಿವಿಧ ಕವಿಶಿಕ್ಷಕರ ಮಕ್ಕಳಸಾಹಿತ್ಯಕೃತಿಗಳನ್ನು ವಿಪುಲವಾಗಿ ಬೆಳಕಿಗೆ ತಂದರು. 'ನಾವು ಎಳೆಯರು, ನಾವು ಗೆಳೆಯರು' ಪದ್ಯದಿಂದ ಖ್ಯಾತರಾದ ಶಂ.ಗು. ಬಿರಾದಾರ ಈ ಬಳಗದ ಹಿರಿಯ ಸಾಹಿತಿಗಳಲ್ಲಿ ಪ್ರಮುಖರೆನಿಸಿದ್ದರು.

ಇದೇ ಗುಂಪಿಗೆ ಸೇರಿದ ಕಂಬ್ಯಾಣಿ ಶರಣಪ್ಪನವರು ತಮ್ಮ ಪ್ರಥಮ ಮಕ್ಕಳ ಕವಿತೆಗಳ ಸಂಕಲನ 'ಅಜ್ಜನ ಹಾಡು' ಪ್ರಕಟಿಸಿದ್ದು ಸ್ವಲ್ಪ ತಡವಾಗಿಯೇ, ಅಂದರೆ ತಮ್ಮ ೫೦ನೆಯ ವಯಸ್ಸಿನಲ್ಲಿ. ನಂತರ ಅವರು 'ಜಾಗೃತಭಾರತ', 'ಮಕ್ಕಳ ಮನೆ', 'ಹುಟ್ಟುಹಬ್ಬ', 'ತಮ್ಮನ ಶಾಲೆ,' 'ತೋಟದ ಆಟ' ಮೊದಲಾದ ಸಂಕಲನಗಳನ್ನು ಹೊರತಂದರು. ಈ ಎಲ್ಲ ಸಂಗ್ರಹಗಳಿಂದ 'ಆಯ್ದ ನೂರೊಂದು ಕವಿತೆಗಳು' (೧೯೯೨) ಈಗ ನನ್ನ ಮುಂದಿದೆ. ಇದಕ್ಕೆ ಮುನ್ನುಡಿ ಬರೆದಿರುವ ಪ್ರೊ. ಎ.ಎಸ್. ಹಿಪ್ಪರಗಿಯವರು 'ಕವಿಕಂಚ್ಯಾಣಿ ಶಿಕ್ಷಕ ಕಂಚ್ಯಾಣಿ' ಇಬ್ಬರೂ ಓರಗೆಯವರೇ ಎಂದು ಗುರುತಿಸಿ, "ಕವಿ-ಶಿಕ್ಷಕರ ಯಮಳತೆ ಯಿಂದ ಇವರ ಬರಹದಲ್ಲಿ ಶಿಸ್ತು-ಸಂಯಮಗಳು, ಧೋರಣೆಯಲ್ಲಿ ಸರ್ವಾಂಗ ಸುಂದರ ಸಮಾಜ ನಿರ್ಮಾಣದ ಹೊಣೆಗಾರಿಕೆ ಸದಾ ಜಾಗೃತರಾಗಿರುವ ಕರ್ತವ್ಯ ಪ್ರಜ್ಞೆ, ಕಳೆದು ಹೋದ ಗಟ್ಟಿ ಸಂಸ್ಕೃತಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ ಎಂದು ಹೇಳಿರುವುದು ಸೂಕ್ತವಾಗಿದೆ.

'ಅಜ್ಜನ ಹಾಡು' ಸಂಗ್ರಹದ ಮೊದಲ ಕವಿತೆಯೇ 'ಬಾಲಗಣಪ' ಈ ನೆಪದಲ್ಲಿ ಕುಟುಂಬದ ಇತರ ಸದಸ್ಯರ ಜೊತೆಗಿನ ಮಗುವಿನ ವಾತ್ಸಲ್ಯ ಸಂಬಂಧ ಪಾಕಗೊಂಡಿದೆ.

ಪರಿಸರ ನಾಶದಿಂದ ಮಾನವ ಜೀವಿಗಾದ ಹಾನಿಯನ್ನು 'ಮೋಡದ ಮೊರೆ' ಕವಿತೆ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳಿಸಿದೆ:

ಎಲ್ಲಿ ಸುಳಿಯಲಿ!
ಎಲ್ಲಿ ಇಳಿಯಲಿ!!
ಎಲ್ಲಿ ಕಾಲನು ಊರಲಿ?
ಬೋಳು ಬೆಟ್ಟದ
ಮೇಲೆ ಹರುಷದಿ
ಹೇಗೆ ಮಳೆಯನು ಕರೆಯಲಿ?

ಎಂದು ತಳಮಳಿಸುವ ನಿಸರ್ಗದ ಪ್ರತೀಕವಾದ ಮೋಡ 'ಬೆಂದ ಕಾಡಿಗೆ, ನೊಂದ ನಾಡಿಗೆ ಹೇಗೆ ನೆಮ್ಮದಿ ನೀಡಲಿ' ಎಂದುಕೊಳ್ಳುವದು ಮಾರ್ಮಿಕವಾಗಿದೆ. 'ಪುಟ್ಟಿಯ ಪಾಪ'ದಲ್ಲಿ ಚಿತ್ರಿತವಾದ ಮಗುವಿನ ಮುಗ್ಧತೆ, 'ಬಟ್ಟ ಬಯಲ ಬೆಟ್ಟದಲ್ಲಿ ನಿಂತ ಗೊಮ್ಮಟ'ನನ್ನು ಕಂಡು ಮರುಗುತ್ತದೆ. 'ಹೆಸರು ಏನಿದೆ?'ಯಲ್ಲಿ ವಿಜ್ಞಾನವೂ ಹಣಿಕಿ ಹಾಕಿದೆ. ಬೋಲಬಗರಿಯ ರೂಪಕ ಭೂಮಿಗೆ ಅರ್ಥವತ್ತಾಗಿದೆ:

ತನ್ನ ಸುತ್ತ ತಾನೆ ತಿರುಗಿ
ತಿರುಗದಂತಿದೆ
ಹಗಲು–ಇರುಳು ಸುತ್ತಿ ಸುತ್ತಿ
ಬಿಡುವು ಎಲ್ಲಿದೆ?

'ಯಾರು ಬಲ್ಲರಿದರ ಸೂತ್ರ, ಎಲ್ಲಿ ಅಡಗಿದೆ?' ಎಂಬ ಪ್ರಶ್ನೆ ಮಕ್ಕಳಿಗಷ್ಟೇ ಅಲ್ಲ, ಬೆಳೆದವರನ್ನೂ ಎದುರಿಸುತ್ತದೆ.

'ಮಜ್ಜಿಗೆ ರಾಮಾಯಣ'ದ ಜಾಣತನ, 'ರುದ್ರಟ' ಕಥೆಯ ರಂಜಕತೆ, ಗಣಿತ ಚಮತ್ಕಾರದ 'ಒಂಬತ್ತರ ಗಮ್ಮತ್ತು' ಮಕ್ಕಳ ಮನಸ್ಸಿಗೆ ಮುದನೀಡಬಲ್ಲವು. 'ಕೌದಿ', 'ಊರಿಗೆ ಜೋಗೇರು ಬಂದಾರ', 'ಹೆಂಡಿಯ ಪಾಂಡವರು', 'ಕುಣಿತದ ಕುತ್ತು', 'ನನ್ನ ತೋಟ' ಮೊದಲಾದ ಕವಿತೆಗಳು ಗ್ರಾಮೀಣ ಸಂಸ್ಕೃತಿಯ ಅಪ್ಪಟ ನಿದರ್ಶನದಂತಿವೆ. 'ಗುಡುಗುಡು ಮುತ್ಯಾ ಬಂದಾನ' ಕವಿತೆ ಆಡುನುಡಿಯ ಜಾಡು ಹಿಡಿದು ಚಿತ್ರಿತ ಶಕ್ತಿಯಿಂದ ಹಾಡಿಗೂ ಕುಣಿತಕ್ಕೂ ಜೋಡಿಯಾಗುವಂತಿದೆ. ಅಜ್ಜನ ವ್ಯಕ್ತಿಚಿತ್ರ 'ಅಜ್ಜನ ಹಾಡು'ವಿನಲ್ಲಿ ವಿನೋದದ ಮೂಲಕ ಮುದ ನೀಡಿದರೆ; 'ಜಾಣಪುಟ್ಟ' 'ಕುಲುಕುಲು ನಕ್ಕಾಳ', 'ತಮ್ಮನಶಾಲೆ' ಪದ್ಯಗಳಲ್ಲಿಯ ಮಕ್ಕಳ ವ್ಯಕ್ತಿಚಿತ್ರಗಳು ಸ್ವಾಭಾವಿಕತೆಗೆ ಮೆರುಗು ನೀಡಿವೆ. 'ನಾಯಿಯ ಹಬ್ಬ'ದ ಕಲ್ಪನೆ ಮಕ್ಕಳ ಹಾಸ್ಯ ಮನೋಧರ್ಮ ಹಾಗೂ ತುಂಟತನಕ್ಕೆ ಕನ್ನಡಿ ಹಿಡಿದಿದೆ. 'ಗೊಬ್ಬರ ಗುಂಡಿ' ಸಾವಯವದ ಪಾಠದಂತಿದೆ. 'ಜಡ್ಡಿನ ಜಾತ್ರೆ' ಆರೋಗ್ಯದ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡಿದರೆ 'ಚಿಂವ್ ಚಿಂವ್ ಗುಬ್ಬಿ' ಚೊಕ್ಕತನದಿಂದ ಚೇತೋಹಾರಿಯಾಗಿದೆ. 'ಸೊಗಸು' ತಾಯಿಯ ವಾತ್ಸಲ್ಯಭಾವದೊಡನೆ

ಹರಕಾ ಮುರಕಾ
ರೊಟ್ಟಿ ತುಣುಕಾ
ಅಮ್ಮನ ಪಾಲಿಗೆ ಬಂದಿಹುದು
ಮಿಕ್ಕಿದ ಪಲ್ಲೆ
ಹೊತ್ತಿದ ಅನ್ನ
ಪಾತ್ರೆಯ ತಳದಲಿ ಉಳಿದಿಹುದು

ಎಂಬಂತಹ ವಾಸ್ತವ ಚಿತ್ರದೊಂದಿಗೆ ಪದ್ಯದ ಸೊಗಸು ಇಮ್ಮಡಿಸಿದೆ.

ಕಂಚ್ಯಾಣಿಯವರು ಪ್ರಾರಂಭದ ದೆಸೆಯಲ್ಲಿ ಬರೆದ (೧೯೫೪) 'ನರಿಯ ಗರುವಭಂಗ' ಕಥನ ಕವನ ಬೋಳುವಾರು ಸಂಪಾದಿಸಿದ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಪ್ರಾತಿನಿಧಿಕ ಮಹತ್ವದ ಸಂಕಲನಕ್ಕೆ ಆಯ್ಕೆಯಾಗಿದೆ. 'ಮಕ್ಕಳನ್ನು ಕುಬ್ಜವೃದ್ಧರೆಂದು ತಿಳಿಯದೆ, ಅವರ ಸಹಜ ವಿಕಾಸಕ್ಕೆ ಹಾತೊರೆವ ಶಿಕ್ಷಕರು ಬೇಕು' ಎಂದು ಶಿವರಾಮ ಕಾರಂತರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ 'ಮಕ್ಕಳ ಸಾಹಿತ್ಯ ಕವಿತೆಗಳು' (೧೯೯೬) ಸಂಕಲನದಲ್ಲಿ ಕಂಚ್ಯಾಣಿಯವರು ಆಮೇಲೆ ಬರೆದ 'ಅಂಯಿ ಅಂಯಿ ರಾಗ' ಮತ್ತು 'ಮುದ್ದುಮರಿ' ಎಂಬ ಎರಡು ಉತ್ತಮ ಕವಿತೆಗಳು ಸೇರ್ಪಡೆಯಾಗಿವೆ.

ಪಾಠದೊಂದಿಗೆ ಆಟ-ನೋಟ, ಹಾಡು-ಕುಣಿತಗಳಿಲ್ಲದೆ ಮಕ್ಕಳು ಬೆಳೆಯುವದು ಹೇಗೆ? ಈ ದಿಸೆಯಲ್ಲಿ ಕಂಚ್ಯಾಣಿ ಶರಣಪ್ಪನವರೂ ಇತರ ಕವಿ-ಶಿಕ್ಷಕರ ಜೊತೆಗೆ ತಮ್ಮಗೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಛಂದಸ್ಸಿನ ಏಕತಾನತೆಯನ್ನು ಹೋಗಲಾಡಿಸಿಕೊಂಡು ಆಧುನಿಕ ಸ್ಪರ್ಶವನ್ನು ಪಡೆದರೆ ಅವರ ಪದ್ಯಗಳು ಲವಲವಿಕೆಯಿಂದ ಮಕ್ಕಳಿಗೆ ಹೆಚ್ಚಿನ ಖುಷಿಯನ್ನು ಕೊಡಬಲ್ಲವು.

(ಅಭಿನಂದನ ಗ್ರಂಥ : ೨೦೧೪)

ಎಚ್ಚೆಸ್ವಿ: ಒಂದು ಮರೆಯಲಾಗದ ನೆನಪು

ಎಚ್.ಎಸ್. ವೆಂಕಟೇಶಮೂರ್ತಿಯವರ ಜೊತೆಗೆ ನನ್ನ ಸ್ನೇಹ ಬಾಂಧವ್ಯ ಮೂರು ದಶಕಕ್ಕೂ ಮಿಕ್ಕಿದ್ದು. ಅವರ 'ಎಷ್ಟೊಂದು ಮುಗಿಲು' ಸಂಕಲನದಲ್ಲಿ ಅರುವತ್ತೆಂಟು ಸುನೀತಗಳಿದ್ದರೆ ನನ್ನ ನೆನಪುಗಳು ನೂರೆಂಟು! ಸುಮಾರು ೧೪ ವರ್ಷಗಳ ಹಿಂದೆ ಬಿ.ಆರ್. ಲಕ್ಷ್ಮಣರಾವ್ ನನ್ನನ್ನೂ ಜಿ.ಎಸ್.ಎಸ್. ಅವರನ್ನೂ ಗೆಳೆಯರೊಂದಿಗೆ ತಮ್ಮ ಚಿಂತಾಮಣಿ ಕರ್ನಾಟಕ ಸಂಘಕ್ಕೆ ಕರೆದೊಯ್ದು ಸನ್ಮಾನಿಸಿದ್ದರು. ತಿರುಗಿ ಬರುವಾಗ ವೆಂಕಟೇಶಮೂರ್ತಿ ಹೊಸ್ಕೆರೆಹಳ್ಳಿಯಲ್ಲಿ ಕಟ್ಟಿಸಿದ ಸ್ವಂತ ಮನೆಗೆ ಕರೆದುಕೊಂಡು ಹೋದದ್ದು, ರಾಜಲಕ್ಷ್ಮಿಯವರು ಆತಿಥ್ಯ ನೀಡಿ ಸತ್ಕರಿಸಿದ್ದು ಎಲ್ಲ ನೆನಪಾಗುತ್ತದೆ. ಕಳೆದ ವರ್ಷ ನವಂಬರಿನಲ್ಲಿ 'ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ' ಆ ಮನೆಯ ರಾಜಲಕ್ಷ್ಮಿ ಕಲಾವೇದಿಕೆಯಲ್ಲಿ ಬಿಡುಗಡೆಗೊಂಡದ್ದು ಸಂತೋಷ ಕೊಟ್ಟಿತಾದರೂ ಬೆಂಗಳೂರು ಮೂರ್ತಿಯವರ ಹಳ್ಳಿಯನ್ನು ನುಂಗಿ ನೀರುಕುಡಿದದ್ದು ಕಳವಳವನ್ನುಂಟು ಮಾಡಿತು. 'ಹಳ್ಳಿಯ ಬದುಕು–ಭಾಷೆ–ವಾತಾವರಣ ನನ್ನ ಬದುಕಿನ ಆಧಾರಸ್ತಂಭ'ವೆಂದು ಅವರು ಹೇಳಿಕೊಂಡಂತೆ ನಾನೂ ಹೇಳಬಹುದು. ಪರಸ್ಪರ ಮೆಚ್ಚುಗೆಗೆ ಇದೂ ಒಂದು ಕಾರಣವಿರಬಹುದು. 'ಮೂವತ್ತು ಮಳೆಗಾಲ'ದ ಮುನ್ನುಡಿಯಲ್ಲಿ ಇದಕ್ಕೊಂದು ಸೊಗಸಾದ ದೃಷ್ಟಾಂತವನ್ನು ಅವರು ಕೊಟ್ಟಿದ್ದಾರೆ. "ನಮ್ಮ ಕಡೆ ಬಳೆಗಾರರಲ್ಲಿ ಒಂದು ಸಂಪ್ರದಾಯವಿದೆ. ಅವರು ಪರಸ್ಥಳಗಳಲ್ಲಿ ಬೀದಿ ಬೀದಿ ಅಲೆದು ಬಳೆಮಾರಿ ಬದುಕು ಸಾಗಿಸುತ್ತಾರೆ. ಅವರು ಬಳೆಯ ಮಲ್ಲಾರ ಮಾತ್ರ ಒಯ್ಯುವುದಿಲ್ಲ. ತಮ್ಮ ಮನೆಯಿಂದ ಒಂದು ತುಂಡು ಚಾಪೆಯನ್ನು ಒಯ್ಯುತ್ತಾರೆ. ಎಲ್ಲಿಗೆ ಹೋದರೂ ಆ ತವರ ಚಾಪೆ ಬಿಡಿಸಿ ಅದರ ಮೇಲೆ ಅವರು ಕೂರುತ್ತಾರೆ. ಸದ್ಯಕ್ಕೆ ನಾನೂ ನನ್ನೂರ ಚೂರೊಂದನ್ನು ಕಂಕುಳಲ್ಲಿ

ಇರುಕಿಕೊಂಡು ಬೆಂಗಳೂರಿನ ಬೀದಿಯಲ್ಲಿ ಅಲೆಯುತ್ತಾ ಇದ್ದೀನಿ." (ಅವರ 'ಶಂಖದೊಳಗಿನ ಮೌನ' ಸಂಗ್ರಹದಲ್ಲಿ 'ನಾನೊಬ್ಬ ಬಳೆಗಾರ' ಎಂಬ ಕವಿತೆಯೂ ಇದೆ.)

ಧಾರವಾಡಕ್ಕೆ ಬರುವ ಯಾವ ಅವಕಾಶವನ್ನೂ ತಪ್ಪಿಸಿಕೊಳ್ಳುವುದಿಲ್ಲವೆಂದು ಅವರು ಹೇಳುವುದುಂಟು ಅಂದ ಹಾಗೆ, ಇಲ್ಲಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಾಷಣ ಮಾಡಿ, ಕವಿತೆಗಳನ್ನೋದಿ ಅವಳಿ ನಗರದ ಜನಮನವನ್ನು ಅವರು ಗೆದ್ದು ಕೊಂಡಿದ್ದಾರೆ. ಶಿವರುದ್ರಪ್ಪನವರ ಜೊತೆಗೆ ನಮ್ಮ ಮನೆಗೂ ಬಂದು ಉತ್ತರ ಕರ್ನಾಟಕದ ಊಟದ ರುಚಿಯನ್ನು ಮೆಚ್ಚಿಕೊಂಡದ್ದೂ ಇದೆ. ಏನು ಬರೆದರೂ ಅವರು ಅಂತಃಕರಣ ಪೂರ್ವಕ ಬರೆಯುತ್ತಾರೆ. ಅಲ್ಲಿ ಅಧಿಕಾರದ ಅಥವಾ ಅಹಂಕಾರದ ಸುಳಿವು ಕೂಡ ಇರುವುದಿಲ್ಲ. 'ಶೂನ್ಯ ಸಿಂಹಾಸನ'ದ ಪ್ರತಿಮಾಲೋಕವೇ ಅವರಿಗೆ ಹೆಚ್ಚು ಪ್ರಿಯವಾದದ್ದು.

ಕಳೆದ ವರ್ಷ ಜನವರಿಯಲ್ಲಿ ನಡೆದ 'ಧಾರವಾಡ ಸಾಹಿತ್ಯ ಸಂಭ್ರಮ'ದ ಗೋಷ್ಠಿಯೊಂದರಲ್ಲಿ ನಾವಿಬ್ಬರೂ ಭಾಗವಹಿಸಿದ್ದು ನನಗೊಂದು ಮರೆಯಲಾಗದ ನೆನಪು. ಆ ಗೋಷ್ಠಿಯ ಹೆಸರೇ 'ಕವಿಯೊಂದಿಗೆ ಕವಿ'. ಎರಡು ಭಿನ್ನ ತಲೆಮಾರುಗಳಿಗೆ ಸೇರಿದ ಇಬ್ಬರು ಕವಿಗಳು ಪರಸ್ಪರ ನೆನಪುಗಳನ್ನೂ ವಿಚಾರಗಳನ್ನೂ ಹಂಚಿಕೊಳ್ಳಲೆಂದು ಯೋಜಕರು ಏರ್ಪಡಿಸಿದ್ದು. ಲೋಕಾಭಿರಾಮದ ದೃಷ್ಟಿಯಿಂದ ಇದು ಎಷ್ಟು ವೈಯಕ್ತಿಕವೋ ಅಷ್ಟೇ ಸಾರ್ವಜನಿಕವೂ ಕೂಡ. ಯಾಕೆಂದರೆ ಸಾಹಿತ್ಯಾಸಕ್ತರಿಂದ ತುಂಬಿ ತುಳುಕುತ್ತಿದ್ದ ವೇದಿಕೆಯಲ್ಲಿಯೇ ನಮ್ಮ ಮಾತುಕತೆ. ಇನ್ನೊಬ್ಬ ಕವಿಮಿತ್ರ ಆನಂದ ಝುಂಜರವಾಡ ಅವರ ಪ್ರಾಸ್ತಾವಿಕ ನುಡಿಗಳಿಂದ ನಮ್ಮ ಸಂಭಾಷಣೆಗೆ ಚಾಲನೆ ಒದಗಿತು. ನಮ್ಮ ಮಾತುಕತೆಯ ಆಯ್ದ ಕೆಲವು ತುಣುಕು – ಮಿಣುಕುಗಳು ಇಲ್ಲಿವೆ.

ಎಚ್ಚೆಸ್ವಿ : ಜಿ.ಎಸ್.ಎಸ್. ಪುತಿನ ಪ್ರತಿಷ್ಠಾನದ ಅಧ್ಯಕ್ಷರು. ಅವರ ಜೊತೆಗೆ ನಾನೂ ಕಣವಿಯವರೂ ಮೇಲುಕೋಟೆಗೆ ಹೋಗಿ ನವೀಕರಣಗೊಂಡ ಪುತಿನ ಮನೆಯ ಉದ್ಘಾಟನೆಯ ಸಾಂಸ್ಕೃತಿಕ ಸ್ಮರಣೆಯಲ್ಲಿ ಪಾಲ್ಗೊಂಡ ಸಂದರ್ಭ. ಹಿಂದಿನ ದಿನದ ಸಂಜೆ ಪುತಿನ ಅವರಿಗೆ ಪ್ರಿಯವಾದ ತೊಟ್ಟಿಲ ಮಡುವಿಗೆ ಹೋಗಿ ಹಾಯಾಗಿ ಕುಳಿತು, ಪುತಿನ ಅವರ ತಮ್ಮ ಕಟ್ಟಿಕೊಟ್ಟಿದ್ದ ತುಪ್ಪದಿಂದ ಘಮಘಮಿಸುತ್ತಿದ್ದ ವಿಚಿತ್ರ ತಿಂಡಿಯ ರುಚಿ ನೋಡಿದೆವು ಎಲ್ಲರೂ. ಆಗ ಕಣವಿ 'ಇವತ್ತು ನನಗೊಂದು ಹೊಸ ವಿಷಯ ಗೊತ್ತಾಯಿತು' ಎಂದರು. ನಾನು, ಜಿ.ಎಸ್.ಎಸ್. ಕುತೂಹಲದಿಂದ 'ಏನು?' ಎಂದೆವು. 'ಅಯ್ಯಂಗಾರರ ಮುಖದಲ್ಲಿ ಇಷ್ಟೊಂದು ಕಳೆ ಎಲ್ಲಿಂದ ಬಂತು ಎಂಬುದು.' 'ಇದು ಸಿಹಿಯ ಪರಾಕಾಷ್ಠೆ' ಎಂದರು ಜಿ.ಎಸ್.ಎಸ್. ಹೀಗೇ ಸಾಗಿತು ನಮ್ಮ ಕಾವ್ಯಶಾಸ್ತ್ರವಿನೋದ...

ಹೀಗೆ ಕಣವಿ ಒಬ್ಬ ಕವಿಯಾಗಿ ದೊಡ್ಡ ಮನುಷ್ಯರಾಗಿ, ಮನೆಯ ಹಿರಿಯರಾಗಿ ನನ್ನ ಅತ್ಯಂತ ಆಪ್ತವಲಯಕ್ಕೆ ಬಂದವರು. ಧಾರವಾಡಕ್ಕೆ ಹೋದಾಗ ಅವರ ಮನೆಯ ಬಿಸಿಬಿಸಿ ಜೋಳದ ರೊಟ್ಟಿ, ಎಳ್ಳು ಹೋಳಿಗೆ ಇತ್ಯಾದಿ ಎಲ್ಲ ನೆನಪಾಗುತ್ತವೆ.

"ಸರ್, ಕಾವ್ಯದ ಸಂದರ್ಭದಲ್ಲಿ ನಾನು ನಿಮ್ಮಿಂದ ಪ್ರಭಾವಿತನಾದವನಲ್ಲ. ನನ್ನ ಮೇಲೆ ಯಾರ ಪ್ರಭಾವವೂ ಇಲ್ಲ. ಇಡೀ ಕನ್ನಡ ಕಾವ್ಯದ ಪರಂಪರೆ ನನ್ನ ಹಿಂದೆ ಇದೆ. ಅನೇಕರು ಆಶೀರ್ವಾದ ಮಾಡಿದ್ದಾರೆ. ಒಳ್ಳೇ ಕಾವ್ಯ ಬರೀಲಿಕ್ಕೆ ಸ್ವಲ್ಪ ದುಡುಕುತನವೂ ಬೇಕು. ಈ ಮಾತನ್ನು ಸುಳ್ಳು ಮಾಡಿದವರು ಮಾಸ್ತಿ ಮತ್ತು ಕಣವಿಯಂಥವರು. ಸಾತ್ವಿಕರೂ ಅದ್ಭುತ ಕಾವ್ಯ ಬರೆಯಬಹುದು. ಕಣವಿ ಅದ್ಭುತವಾದ ಸಾನೆಟ್ಟುಗಳನ್ನು ಬರೆದಿದ್ದಾರೆ. ಬೇಂದ್ರೆಯಂಥವರು ಅಷ್ಟ ಷಟ್ಪದಿ ಬರೆದು ಕನ್ನಡ ಸಾನೆಟ್ ಪ್ರಪಂಚದಲ್ಲಿ ತಮ್ಮ ಬಾವುಟ ಏರಿಸಿದರು. ಅದೇ ಧಾರವಾಡದಲ್ಲಿ ಕಣವಿಯಂಥ ಕವಿ ಮತ್ತೆ ಸುಂದರವಾದ ಸಾನೆಟ್ ಬರೆದು ಕನ್ನಡದಲ್ಲಿ ಬೇರುಬಿಟ್ಟರು.

ಕಣವಿ : ಮೂರ್ತಿಯವರೆ, ನಾವಿಬ್ಬರೂ ಭಿನ್ನ ತಲೆಮಾರಿಗೆ ಸೇರಿದ್ದರೂ ಸಮಾನ ಮನಸ್ಕರು. ನವೋದಯದ ಹಿರಿಯರ ಬಗ್ಗೆ ಗೌರವ ಇಟ್ಟುಕೊಂಡವರು. ನೀವು ಪ್ರಾರಂಭದಲ್ಲಿ ಪುತಿನ ಮೇಲುಕೋಟೆ ಬಗ್ಗೆ ಹೇಳಿದಿರಲ್ಲ. ಬೇಂದ್ರೆ ಕಾರಂತರಂಥವರ ಬಗ್ಗೆ ನಮಗೆ ಸಾಕಷ್ಟು ಗೌರವವಿದ್ದರೂ ಸಲಿಗೆ ಇರಲಿಲ್ಲ. ಯಾವ ಹೊತ್ತಿಗೆ ಏನು ಅಂದು ಬಿಡುತ್ತಾರೊ ಎಂಬ ಹೆದರಿಕೆ. ಆದರೆ ಪುತಿನ ಹಾಗಲ್ಲ. ಮೊದಲು ನನ್ನನ್ನು ಅವರಿಗೆ ಪರಿಚಯಿಸಿದವರೇ ಶಿವರುದ್ರಪ್ಪನವರು. ನೋಡಿ, ಬೆಂಗಳೂರು ಎಂದೊಡನೆ ಶಿವರುದ್ರಪ್ಪನವರನ್ನು ಬಿಟ್ಟು ಮಾತನಾಡಲಿಕ್ಕೇ ಆಗುವುದಿಲ್ಲ. ಕಳೆದ ವರ್ಷವೇ ಜಿ.ಎಸ್.ಎಸ್. ಅಷ್ಟೊಂದು ಅನಾರೋಗ್ಯದಲ್ಲೂ ಮೇಲುಕೋಟೆಗೆ ಬಂದು, ಪುತಿನ ಸ್ಮಾರಕರಂಗಮಂದಿರ, ಅವರ ಪ್ರತಿಮೆಯ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಧನ್ಯತಾಭಾವ ಮುಖದಲ್ಲಿತ್ತು... ನಮ್ಮ ಸಾಹಿತಿಗಳಲ್ಲಿ ಪುತಿನ ಅವರಂಥ ಸಜ್ಜನಿಕೆಯನ್ನು ನಾನು ಯಾರಲ್ಲೂ ಕಂಡಿಲ್ಲ.

ಎಚ್ಚೆಸ್ವಿ : ಪುತಿನ ರಸಿಕರು ... ಸ್ವಲ್ಪ ಕಿಲಾಡಿತನವೂ ಇತ್ತು. ಒಮ್ಮೆ ಪುತಿನ ಜಿ.ಎಸ್.ಎಸ್. ಅವರನ್ನು ಕೇಳಿದರು. 'ಕಾಳಿದಾಸನ ಮೇಘದೂತದ ಯಕ್ಷ-ಯಕ್ಷಿ ಅಷ್ಟೊಂದು ಪ್ರೀತಿ ತೋರಿಸ್ತಾರಲ್ಲ, ಅವರು ನಿಜವಾಗಿಯೂ ಗಂಡಹೆಂಡಿರಾಗಿದ್ದರೆ?' ಅದಕ್ಕೆ ಜಿ.ಎಸ್.ಎಸ್. 'ನಿಶ್ಚಿತವಾಗಿಯೂ; ಯಾಕೆ ನಿಮಗೆ ಸಂದೇಹ?' ಅದಕ್ಕೆ ಪುತಿನ ಮುಗುಳ್ನಗುತ್ತ 'ಗಂಡ ಹೆಂಡಿರೆಂದರೆ ಅಷ್ಟೊಂದು ಪ್ರೀತಿ ಮಾಡಬಹುದಾ" ಎಂದರು.

ಕಣವಿಯವರು ಅಂಥ ಚೇಷ್ಟೆ ಮಾಡತಾರ ಅಂತ ಅನಿಸೋದಿಲ್ಲ.

ಕಣವಿ : ಅಲ್ಲ, ಸಜ್ಜನಿಕೆಗೆ ರಸಿಕತೆ ಹೊರತಾಗಿರಬೇಕೆಂತೇನೂ ಇಲ್ಲವಲ್ಲ.

(ಈಗಿನ ಪದ್ಯಗಳಲ್ಲಿ ಪ್ರಾಸವಿಲ್ಲದಿರುವುದು, ಕನ್ನಡ ಪದಗಳ ಜೊತೆಗೆ ಇಂಗ್ಲಿಷ್ ಬಳಕೆಯಾಗುತ್ತಿರುವುದರಿಂದ ಕವಿತೆಯ ಕೊಲೆಯಾಗುತ್ತದೆ ಎಂಬುದಾಗಿ ಸಭಿಕರೊಬ್ಬರು ಪ್ರಶ್ನೆ ಕಳಿಸಿದ್ದರು. ಎಚ್ಚೆಸ್ವಿ ಅದಕ್ಕೆ ಉತ್ತರಿಸುತ್ತ)

ಎಚ್ಚೆಸ್ವಿ : ಪ್ರಾಸವಿಲ್ಲದೆ ಯಾರೂ ಪದ್ಯ ಬರೆಯುವುದಿಲ್ಲ. ಆದಿ-ಅಂತ್ಯಪ್ರಾಸಗಳಿರದಿದ್ದರೂ ಒಳಪ್ರಾಸಗಳಿರುತ್ತವೆ. ಕನ್ನಡ ಪದ್ಯದಲ್ಲಿ ಔಚಿತ್ಯವರಿತು

ಇಂಗ್ಲಿಷ್ ಬೆರೆಸಿದರೆ ಸೃಷ್ಟಿಯಾಗುತ್ತದೆ, ಕೊಲೆಯಾಗುವುದಿಲ್ಲ. ಕನ್ನಡ-ಸಂಸ್ಕೃತ ಕೂಡಿದಾಗ ಭಾಷೆಗೆ ಒಂದು ಹದ ಬರುತ್ತದೆ. ಪಂಪ, ಕುಮಾರವ್ಯಾಸ, ವಚನಕಾರರು ಹೇಗೆ ಬರೆದರು? ಕನ್ನಡಕ್ಕೆ ಕಸುವು ಬರುವಂತಿದ್ದರೆ ಮಡಿವಂತಿಕೆ ಬೇಕಾಗಿಲ್ಲ.

('ಮುಕ್ತ' ಧಾರಾವಾಹಿಯ ಶೀರ್ಷಿಕೆ ಗೀತೆಯ ಸಾಲನ್ನು ಉದಾಹರಿಸಿ, ಅನುಭವ-ಕಲ್ಪನೆ, ಕವಿತೆ ಬಗ್ಗೆ ಸ್ವಲ್ಪ ಗೊಂದಲದಿಂದ ಕೂಡಿದ ಪ್ರಶ್ನೆಯೊಂದು ಮತ್ತೊಬ್ಬರಿಂದ ಬಂದಿತ್ತು. ಅದಕ್ಕೆ ಉತ್ತರಿಸುತ್ತ)

ಅನುಭವದ ಪರಿಣಾಮವಾಗಿ, ಮಾಧ್ಯಮವಾದ ಭಾಷೆಯ ಮೂಲಕ ಅಮೂರ್ತತೆಗೆ ಕವಿ ಆಕಾರ ಕೊಡುತ್ತಾನೆ. ಅಂದರೆ ಪ್ರತಿಯೊಂದು ಸಾಲು ಕೂಡ ಮೊದಲು ಹೊಳಹಾಗಿ ಕಾಣಿಸಿಕೊಂಡು ನಂತರ ದೇಹಧಾರಣೆ ಮಾಡುತ್ತದೆ. ಎಷ್ಟು ಒಳ್ಳೆಯ ಕವಿತೆ ಆಗುತ್ತದೊ ಬಿಡುತ್ತದೊ ಇದನ್ನು ಮೀರಿದ ವಿಷಯ... ಹೊಟ್ಟೆಯೊಳಗಿನ ಕೂಸು ಹ್ಯಾಗಿದೆ ಎಂಬುದು ತಾಯಿಗೇ ಗೊತ್ತಿರುವುದಿಲ್ಲ... ವೈದ್ಯರಿಗೂ ಕೂಡ.

ಹೀಗೇ ಜೀವನ-ಕಾವ್ಯ-ಘಟನೆ-ನೆನಪುಗಳು ಒಂದಕ್ಕೊಂದು ತಾಗುತ್ತ ಬಾಗುತ್ತ ನಮ್ಮ ಸಂಭಾಷಣೆ ಮುಂದುವರಿದಂತೆ ಒಂದು ಗಂಟೆ ಹೇಗೆ ಕಳೆಯಿತೊ ಇಬ್ಬರಿಗೂ ಗೊತ್ತಾಗಲಿಲ್ಲ. ಕೊನೆಯಲ್ಲಿ ಇಬ್ಬರೂ ನಮ್ಮ ನಮ್ಮ ಒಂದೆರಡು ಕವಿತೆಗಳನ್ನೋದಿದೆವು. ನಮಗಂತೂ ಸಂತೋಷ. ಸಭಿಕರು ಸಹೃದಯತೆಯಿಂದ ಸ್ಪಂದಿಸಿದ್ದು ಇನ್ನೂ ಹೆಚ್ಚಿನ ಸಂತೋಷ ನೀಡಿತು. ನಮ್ಮಿಬ್ಬರಿಗೂ ಇದೊಂದು ಮರೆಯಲಾಗದ ಅನುಭವ.

('ಅಂತಃಕರಣ' ೨೩-೬-೨೦೧೪)

'ಕನ್ನಡ ನಾಡು ಪ್ರಕಾಶನ'ದ ಪ್ರಕಟಣೆಗಳು

೨೦೦೮
೧. * ಸುರೇಖಾ ಮೇಡಂ (ನಾಟಕ) – ಚಂದ್ರಕಾಂತ ಕುಸನೂರ
೨. * ದೃಷ್ಟಿ (ಕವನ ಸಂಕಲನ) – ಡಾ. ಪ್ರಭು ಖಾನಾಪೂರೆ
೩. * ಮಾಮೂಲಿ ಗಾಂಧಿ (ಕಥಾ ಸಂಕಲನ) – ಕಲಿಗಣನಾಥ ಗುಡದೂರ
೪. * ಬೆಳಕಿನೆಡೆಗೆ (ಕಥಾ ಸಂಕಲನ) – ಕಾವ್ಯಶ್ರೀ ಮಹಾಗಾಂವಕರ

೨೦೦೯
೫. * ಅಜ್ಜಿ ಹೇಳಿದ ಕಥೆಗಳು (ಮಕ್ಕಳ ಕಥೆಗಳು) – ಇಂದಿರಾ ಮಾಸ್ವಿಕರ್
೬. * ಸಾಹಿತ್ಯ ಸಂಗಮ (ಲೇಖನಗಳ ಸಂಕಲನ) – ಡಾ. ಅಮೃತಾ ಕಟಕೆ
೭. * ಅವಲೋಕನ (ಪ್ರಬಂಧಗಳ ಸಂಕಲನ) – ಡಾ. ಕಾವ್ಯಶ್ರೀ ನಾಗಭೂಷಣ
೮. * ರಾಗದರ್ಬಾರಿ (ಕಥಾ ಸಂಕಲನ) – ಸುಬ್ರಾವ್ ಕುಲಕರ್ಣಿ
೯. * ಸಾಂಕ್ರಾಮಿಕ ರೋಗಗಳು – ಡಾ. ಪಿ.ಎಸ್. ಶಂಕರ್
೧೦. * ಚಿಗುರಿಲ್ಲದ ಮಾವಿನೊಳಗೆ (ಕವನ ಸಂಕಲನ) – ಡಾ. ಗಾಳೆಪ್ಪ ಪೂಜಾರಿ
೧೧. * ಕತಿ–ಕತಿ–ಕಾರಣ (ಮಕ್ಕಳ ಕಥೆಗಳು) – ಡಾ. ಚಂದ್ರಕಲಾ ಬಿದರಿ
೧೨. * ದಯವಿಟ್ಟು ಹೀಗೆ... ಪ್ಲೀಜ (ಹಾಸ್ಯಲೇಖನಗಳು) – ಪ್ರೊ. ಹೇಮಂತ ಕೊಲ್ಹಾಪೂರೆ

೨೦೧೦
೧೩. * ಕಾಲಗೀತೆ (ಕವನ ಸಂಕಲನ) – ಡಾ. ನಿಂಗಣ್ಣ ಪಾಟೀಲ
೧೪. * ಇದು ಎಂಥ ಲೋಕವಯ್ಯಾ (ಕಥಾ ಸಂಕಲನ) – ಗೀತಾ ನಾಗಭೂಷಣ
೧೫. * ನುಗಡೋಣಿ ಕಥೆಗಳು (ಕಥಾ ಸಂಕಲನ) – ಅಮರೇಶ ನುಗಡೋಣಿ
೧೬. * ನಮ್ಮ ಹಳ್ಳಿ ನಮಗೆ ಚೆಂದ (ಮಕ್ಕಳ ಪದ್ಯಗಳು) – ಚಂದ್ರಕಾಂತ ಕರದಳ್ಳಿ
೧೭. * ತಲ್ಲಣದ ಈ ಮಳೆ (ಕವನ ಸಂಕಲನ) – ಮಹಿಪಾಲರೆಡ್ಡಿ ಮುನ್ನೂರ್
೧೮. * ಕತ್ತಲು ಕರಗುವ ಪರಿ (ಕಥಾ ಸಂಕಲನ) – ಕೃಷ್ಣ ನಾಯಕ್
೧೯. ಜನ–ಮನ (ಸಂಶೋಧನಾ ಲೇಖನಗಳು) – ಡಾ. ಲಿಂಗಪ್ಪ ಗೋನಾಲ
೨೦. ತಿಪ್ಪೆಯನರಸಿ ಮತ್ತು ಇತರ ಕಥೆಗಳು (ಕಥಾ ಸಂಕಲನ) – ಕೆ. ನೀಲಾ
೨೧. ಮಹಾಕಾವ್ಯ : ಚಿಂತನೆ (ಲೇಖನಗಳ ಸಂಕಲನ) – ಸಂ : ಡಾ. ನಾಗಬಾಯಿ ಬುಳ್ಳಾ
೨೨. ವೈವಿಧ್ಯ (ಸಾಹಿತ್ಯಿಕ ಲೇಖನಗಳು) – ಡಾ. ಸ್ವಾಮಿರಾವ ಕುಲಕರ್ಣಿ
೨೩. ಕೊರವಂಜಿ (ಆಯ್ದ ಮಕ್ಕಳ ಪದ್ಯಗಳು) – ಎ.ಕೆ. ರಾಮೇಶ್ವರ್
೨೪. ಸೌಹಾರ್ದ ಸೌರಭ (ಲೇಖನಗಳ ಸಂಗ್ರಹ) – ರಂಜಾನ್ ದರ್ಗಾ
೨೫. ಸಾವಯವ ಕೃಷಿ ಗ್ರಾಮೀಣ ಅಭಿವೃದ್ಧಿಗೆ ದಾರಿ – ಡಾ. ಎಸ್.ಎ. ಪಾಟೀಲ
(ಎರಡನೇ ಮುದ್ರಣ) ಡಾ. ಎಚ್.ಬಿ. ಬಬಲಾದ, ಡಾ. ಆರ್.ಕೆ. ಪಾಟೀಲ

೨೦೧೧
೨೬. ಪ್ರತಿಬಿಂಬ (ಕವನ ಸಂಕಲನ) – ಮಲ್ಲಿನಾಥ ತಳವಾರ
೨೭. ಉದರದಸೊಲ್ಲು (ಕವನ ಸಂಕಲನ) – ಡಿ.ಎಂ. ನದಾಫ
೨೮. ಶ್ರೀಸಾಮಾನ್ಯರಿಗಾಗಿ ಹೋಮಿಯೋಪಥಿ – ಡಾ. ಕೃಷ್ಣಮೂರ್ತಿ ಕಿತ್ತೂರ
೨೯. ಬತ್ತಳಿಕೆ (ಲೇಖನಗಳ ಸಂಕಲನ) – ಡಾ. ಕೆ. ಷರೀಫಾ
೩೦. ವಿಶ್ವಪ್ರಸಿದ್ಧ ಬಿದರಿ ಕಲೆ (ಸಂಶೋಧನಾತ್ಮಕ ಪ್ರಬಂಧ) – ಮ.ಮಾ. ಬೋರಾಳಕರ
೩೧. ವೀರೇಶನ ವಚನಗಳು (ಆಧುನಿಕ ವಚನಗಳು) – ವೀರೇಶ ಹಿರೇಮಠ ಹಳ್ಳೂರ
೩೨. ಕೆರೆಯ ನೀರನು ಕೆರೆಗೆ ಚೆಲ್ಲಿ (ಕಾದಂಬರಿ) – ಕೊಟ್ನೆಕಲ್‌ವೆಂಕೋಬ
೩೩. ಸಾಹಿತ್ಯ ಸಂಪದ (ಲೇಖನಗಳ ಸಂಕಲನ) – ಪ್ರೊ. ಕಲ್ಯಾಣರಾವ ಜಿ. ಪಾಟೀಲ
೩೪. ಗಂಗಮ್ಮನ ಬೋರ್ ಪ್ರಕರಣ (ಲಲಿತ ಪ್ರಬಂಧಗಳು) – ಡಾ. ಬಾಬು ಪೂಜಾರಿ
೩೫. ಶಬ್ದಚಿತ್ರ (ಲೇಖನಗಳ ಸಂಕಲನ) – ಡಾ. ನಾಗೇಂದ್ರ ಮಸೂತಿ

೨೦೧೨
೩೬. ಸಾಹಿತ್ಯ ವಲಯ (ಲೇಖನಗಳ ಸಂಕಲನ) – ಡಾ. ಬಿ.ಎ. ಸನದಿ
೩೭. ಮಾಧ್ಯಮದ ತಳಮಳ (ಲೇಖನಗಳ ಸಂಕಲನ) – ಶ್ರೀನಿವಾಸ ಸಿರನೂರಕರ್
೩೮. ಸಾಹಿತ್ಯ ಸಂಚಯ (ವಿಮರ್ಶಾ ಲೇಖನಗಳು) – ವೀರೇಂದ್ರ ಸಿಂಪಿ
೩೯. ನನ್ನ ಹಾಡು (ಕವನ ಸಂಕಲನ) – ಎಸ್.ಪಿ. ಸುಳ್ಳದ
೪೦. ನೆಲೆಗಟ್ಟು (ವಿಮರ್ಶಾ ಲೇಖನಗಳು) – ಶ್ಯಾಮಸುಂದರ ಬಿದರಕುಂದಿ
೪೧. ನೀನ್ಯಾಕೋ... ನಿನ್ನ ಹಂಗ್ಯಾಕೊ.... (ಕಥಾ ಸಂಕಲನ) – ಪ್ರೊ. ಸೂಗಯ್ಯ ಹಿರೇಮಠ
೪೨. ಬಿರೇ ಬೆಲ್ಲೆ ವೆಂಕಟಸಾಮಿ ಮತ್ತು ಇತರ ಕಥೆಗಳು (ಕಥಾ ಸಂಕಲನ) – ಸ. ರಘುನಾಥ
೪೩. ದೋಣಿ ನಡೆಸೋ ಹುಟ್ಟು (ಕಾದಂಬರಿ) – ಸುನಂದಾ ಪ್ರಕಾಶ ಕಡಮೆ
೪೪. ಹಾರಲಾಗದ ನೊಣ (ಕಥಾ ಸಂಕಲನ) – ಸಂಧ್ಯಾ ಹೊನಗುಂಟಿಕರ್
೪೫. ಮೊಗ್ಗು ಅರಳುವಾಗ (ಆರೋಗ್ಯ) – ಡಾ. ವಸುಂಧರಾ ಭೂಪತಿ
೪೬. ಅಂಧೇರ ನಗರಿ (ಅನುವಾದಿತ ನಾಟಕಗಳು) – ಡಾ. ಕಾಶೀನಾಥ ಅಂಬಲಗಿ
೪೭. ನನ್ನೊಡಲ ಹಾಡು ಪಾಡು (ಸಂಶೋಧನಾ ಪ್ರಬಂಧ) – ಡಾ. ಶಾಂತಾಮಠ
೪೮. ನೂರಾರು ಹನಿಗಳು (ಹನಿಗವನಗಳು) – ಸಿದ್ರಾಮ ಹೊನ್ಕಲ್
೪೯. ಪುಟಾಣಿ ಪ್ರಾಸಗಳು (ಮಕ್ಕಳಿಗಾಗಿ) – ರಾಜಶೇಖರ ಕುಕ್ಕುಂದಾ
೫೦. ಬೇರು–ಕಾಂಡ (ಲೇಖನ ಸಂಗ್ರಹ) – ಡಿ.ಬಿ. ನಾಯಕ

೨೦೧೩
೫೧. ಹೀಂಗ ಒಂದೂರಾಗ (ಕಥಾ ಸಂಕಲನ) – ಶಂಕರಯ್ಯ ಆರ್. ಘಂಟಿ
೫೨. ತನಿರಸ (ಚಿಂತನಗಳ ಸಂಕಲನ) – ಡಾ. ಎಸ್.ಎಸ್. ಪಾಟೀಲ
೫೩. ಮಾಧ್ಯಮ ಮೌಢ್ಯ (ಲೇಖನಗಳ ಸಂಕಲನ) – ಡಾ. ಶಿವರಾಮ ಅಸುಂಡಿ
೫೪. ಶಿಕ್ಷಣ ಮತ್ತು ರಾಷ್ಟ್ರೀಯತೆ (ವೈಚಾರಿಕ ಲೇಖನಗಳು) – ಡಾ. ಎಂ.ಜಿ. ಬಿರಾದಾರ
೫೫. ಹೇಳೆ ಸಖೀ (ಗಝಲ್‌ಗಳ ಸಂಕಲನ) – ಡಾ. ಬಸವರಾಜ ಸಬರದ
೫೬. ಮುರಿದ ಮುಳ್ಳು (ಕವನ ಸಂಕಲನ) – ಬಾಲಕೃಷ್ಣ ಉದ್ದಾರ
೫೭. ಬದುಕಿನ ವಚನಗಳು (ವಚನಗಳ ಸಂಗ್ರಹ) – ಡಾ. ಮಹಾದೇವ ಬಡಿಗೇರ
೫೮. ಬೆತ್ತಲಾದ ಚಂದ್ರ (ಕಥಾ ಸಂಕಲನ) – ಡಾ. ಎಚ್.ಟಿ. ಪೋತೆ
೫೯. ಮರುಭೂಮಿ ಮಾಡದಿರಿ (ಕವನ ಸಂಕಲನ) – ಡಾ. ಜಯದೇವಿ ಗಾಯಕವಾಡ
೬೦. ಬಹುರೂಪಿ – ಎಚ್ಚೆಮ್ಮ ನಾಯಕ (ನಾಟಕಗಳು) – ಬಿ.ಆರ್. ಪೋಲೀಸ್ ಪಾಟೀಲ
* ಪ್ರತಿಗಳು ಮುಗಿದಿವೆ



ಹಿರಿಯರಾದ ಶ್ರೀ ಚೆನ್ನವೀರ ಕಣವಿಯವರು ಸೌಮ್ಯ ಸ್ವಭಾವದ ವ್ಯಕ್ತಿ, ಸೌಜನ್ಯದ ಕವಿ ಎಂದೇ ಹೆಸರಾದವರು. ಬದುಕು ಮತ್ತು ಸಾಹಿತ್ಯಗಳ ನಡುವೆ ಅವರು ಭೇದವನ್ನು ಕಂಡವರಲ್ಲ. ಬದುಕಿದ್ದು ಬರೆದದ್ದು ಎರಡೂ ಒಂದೇ ಸಮತೋಲನದಲ್ಲಿ. ಕಾವ್ಯದಲ್ಲಿ ಹೇಗೋ ಗದ್ಯದಲ್ಲಿಯೂ ಅವರದು ಅದೇ ನಿಲುವು. 'ಅವಿನಾಭಾವ' ಎಂಬ ಪುಸ್ತಕದ ತಲೆಬರೆಹ ಅದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಈ ಪುಸ್ತಕದಲ್ಲಿ ೨೧ ವ್ಯಕ್ತಿಚಿತ್ರಗಳಿವೆ; ಸಾಹಿತ್ಯವನ್ನು ಕುರಿತು ೧೯ ಲೇಖನಗಳಿವೆ. ವಿವಿಧ ಸಂದರ್ಭಗಳಿಗಾಗಿ, ವಿವಿಧ ಉದ್ದೇಶಗಳಿಗಾಗಿ ಬರೆದ ಲೇಖನಗಳಾಗಿದ್ದರೂ, ಅವುಗಳ ಹಿಂದೆ ಆತ್ಮೀಯವಾಗಿ ಕೆಲಸ ಮಾಡುತ್ತಿರುವ ಅವರ ವ್ಯಕ್ತಿತ್ವದ ಪಾರದರ್ಶಕತೆ ಇದೆ.

ವ್ಯಕ್ತಿಗಳಲ್ಲಾಗಲಿ, ಸಾಹಿತ್ಯದಲ್ಲಾಗಲಿ ಅವರ ದೃಷ್ಟಿ ಇರುವದು ಸದಾ ಒಳ್ಳೆಯದರ ಕಡೆಗೆ. ಹಾಗೆಂದು ಕೆಟ್ಟದನ್ನು ಪೂರ್ತಿಯಾಗಿ ಅಲಕ್ಷಿಸುವದೂ ಇಲ್ಲ. ಹೇಳಬೇಕಾದುದನ್ನು ಸೂಚ್ಯವಾಗಿ, ನಯವಾಗಿ ಹೇಳುವ ಸದಭಿರುಚಿ ಅವರದು.

ಹಲವಾರು ನೆನಪುಗಳನ್ನು, ಮಾನವೀಯ ಸಂಬಂಧಗಳನ್ನು ಅವರಿಲ್ಲಿ ಬಿಚ್ಚಿಟ್ಟಿದ್ದಾರೆ. ಹಾಗೆಯೇ ನಿಖರವಾದ ವಿವರಗಳನ್ನು ದಾಖಲಿಸಿದ್ದಾರೆ. ಸಾಹಿತಿಗಳ ಬಗ್ಗೆ, ಸಾಹಿತ್ಯಕೃತಿಗಳ ಬಗ್ಗೆ ಇನ್ನಷ್ಟು ಪ್ರೀತಿ, ಇನ್ನಷ್ಟು ಅರಿವು ಹೆಚ್ಚುವಂತೆ ಮಾಡುವ ಇಲ್ಲಿಯ ಬರಹಗಳ ಹಿಂದೆ ಮಾಗಿದ ವ್ಯಕ್ತಿತ್ವವೊಂದು ಕೆಲಸ ಮಾಡುತ್ತಿರುವದು ಎಲ್ಲ ಕಡೆ ಕಾಣುತ್ತದೆ.

ಅಂತೆಯೇ ಇವು ಆಕರ್ಷಕ ಬರಹಗಳಾಗಿವೆ.

–ಗಿರಡ್ಡಿ ಗೋವಿಂದರಾಜ

ಪ್ರಕಾಶಕರು

ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ

ಜಿ–೨, ವಿ.ವಿ. ಹಾಸ್ಟೆಲ್ ಕಾಂಪ್ಲೆಕ್ಸ್, ಸೇಡಂ ರಸ್ತೆ, ಗುಲಬರ್ಗಾ–೫೮೫ ೧೦೫

ಕನ್ನಡನಾಡು ಪ್ರಕಾಶನ